ಗುರುವಾರ, ನವೆಂಬರ್ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 322 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಲೋಕ ಕಂಡ ಮೇರು ದಾರ್ಶನಿಕ ಬುದ್ಧ



ಕರ್ನಾಟಕ ಚಿನ್ನದ ಹೊಳಪು

ಸರ್ಕಾರ ವಿಸರ್ಜಿಸದು, ಕಠಿಣ ಕ್ರಮ ಖಚಿತ: ಬಿರೇನ್ ಸಿಂಗ್ 11

ಮತದಾನ ಬಹುತೇಕ ಶಾಂತಿಯುತ 9

ಚಿನ್ನ (Std. 10g) ₹79,970 (ಬೆಂಗಳೂರು)

ಶುದ್ಧ ಬೆಳ್ಳಿ (kg) ₹96,400 (ಬೆಂಗಳೂರು)

ಎಚ್‌ಎಸ್‌ಆರ್‌ಪಿ: ಮಧ್ಯಂತರ ಆದೇಶ ಡಿ.4ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸದೇ ಇರುವ ವಾಹನ ಸವಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂಬ ಮಧ್ಯಂತರ ಆದೇಶವನ್ನು ಹೈಕೋರ್ಟ್ ಡಿ. 4ರವರೆಗೆ ವಿಸ್ತರಿಸಿದೆ.

ಈ ಸಂಬಂಧದ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಮೇಲ್ಮನವಿದಾರರ ಪರ ಹಿರಿಯ ವಕೀಲ ಆದಿತ್ಯ ಸೋಂಧಿ ಅವರು, 'ರಾಜ್ಯ ಸರ್ಕಾರ ಮಧ್ಯಂತರ ಆದೇಶವನ್ನು ಚಾಲ್ತಿಯಲ್ಲಿ ಇರಿಸಿ, ಏಕಸದಸ್ಯ ನ್ಯಾಯಪೀಠವೇ ಪ್ರಕರಣ ನಿರ್ಧರಿಸಬಹುದು ಎಂಬ ಅಡ್ವೊಕೇಟ್ ಜನರಲ್ ಸಲಹೆಯ ಬಗ್ಗೆ ಪರಿಶೀಲಿಸಬೇಕಿದೆ' ಎಂದರು.

8ನೇ ಪುಟ ನೋಡಿ

ಮಹಾಯುತಿಗೆ 'ಮಹಾ' ಕಿರೀಟ, ಎನ್‌ಡಿಎ ತೆಕ್ಕೆಗೆ ಜಾರ್ಖಂಡ್: ಮತಗಟ್ಟೆ ಸಮೀಕ್ಷೆಗಳ ಭವಿಷ್ಯ

'ಬಿಜೆಪಿ ಮೈತ್ರಿಗೆ ಅಧಿಕಾರ ಗದ್ದುಗೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರದಲ್ಲಿ 'ಮಹಾಯುತಿ' ಮೈತ್ರಿಕೂಟ ಸ್ಪಷ್ಟ ಬಹುಮತದೊಂದಿಗೆ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಅಂದಾಜಿಸಿವೆ. ಮಹಾವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟವು ಗದ್ದುಗೆ ಏರಲಿದೆ ಎಂದು ಎರಡು ಸಮೀಕ್ಷೆಗಳು ತಿಳಿಸಿವೆ. ಜಾರ್ಖಂಡ್‌ನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸ್ಪಷ್ಟ ಬಹುಮತ ಗಳಿಸಲಿದೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳಿವೆ.

ಮಹಾರಾಷ್ಟ್ರ ವಿಧಾನಸಭೆಯ 288 ಸ್ಥಾನಗಳಿಗೆ ಹಾಗೂ ಜಾರ್ಖಂಡ್‌ನ ಎರಡನೇ ಹಂತದ 38 ಕ್ಷೇತ್ರಗಳಿಗೆ ಬುಧವಾರ ಮತದಾನ ನಡೆಯಿತು. ಜಾರ್ಖಂಡ್‌ನ ಮೊದಲ ಹಂತದ ಮತದಾನ ನ. 13ರಂದು ನಡೆದಿತ್ತು. ಮತದಾನ ಮುಗಿದ ಬೆನ್ನಲ್ಲೇ, ಮತಗಟ್ಟೆ ಸಮೀಕ್ಷೆಗಳು ಹೊರಬಿದ್ದವು. ಮತ ಎಣಿಕೆ ನವೆಂಬರ್ 23ರಂದು ನಡೆಯಲಿದೆ.

ಉತ್ತರ ಪ್ರದೇಶದ ಒಂಬತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿ 5-7 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಕೆಲವು ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಜಮ್ಮು ಮತ್ತು ಕಾಶ್ಮೀರ, ಹರಿಯಾಣ ವಿಧಾನಸಭೆಗಳ ಚುನಾವಣೆಯಲ್ಲಿ ಬಹುತೇಕ ಮತಗಟ್ಟೆ ಸಮೀಕ್ಷೆಗಳ ಭವಿಷ್ಯ ಸುಳ್ಳಾಗಿತ್ತು. ಈ ಸಮೀಕ್ಷೆಗಳನ್ನು ಭಾರತೀಯ ಚುನಾವಣಾ ಆಯೋಗ ಕಟುವಾಗಿ ಟೀಕಿಸಿತ್ತು.

'81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯಲ್ಲಿ ಕಾಂಗ್ರೆಸ್–ಜೆಎಂಎಂ ಮೈತ್ರಿಕೂಟಕ್ಕೆ ಅಂದಾಜು 53 ಸ್ಥಾನಗಳು ಸಿಗಲಿವೆ. ಎನ್‌ಡಿಎ ಮೈತ್ರಿಕೂಟ ಕೇವಲ 25 ಸ್ಥಾನಗಳನ್ನು ಗಳಿಸಲಿದೆ. ಉಳಿದ ಪಕ್ಷಗಳು 3 ಕ್ಷೇತ್ರಗಳಲ್ಲಿ ಜಯ ಗಳಿಸಲಿವೆ' ಎಂದು 'ಆ್ಯಕ್ಸಿಸ್ ಮೈ ಇಂಡಿಯಾ' ಭವಿಷ್ಯ ನುಡಿದಿದೆ. ಆದರೆ, ಎನ್‌ಡಿಎ ಜಯ ಗಳಿಸಲಿದೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳಿವೆ.

ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನಾ (ಶಿಂದೆ ಬಣ)-ಎನ್‌ಸಿಪಿ (ಅಜಿತ್ ಪವಾರ್ ಬಣ) ಮೈತ್ರಿಕೂಟ (ಮಹಾಯುತಿ) ಅಧಿಕಾರದಲ್ಲಿದ್ದರೆ, ಜಾರ್ಖಂಡ್‌ನಲ್ಲಿ ಜೆಎಂಎಂ-ಕಾಂಗ್ರೆಸ್ ಮೈತ್ರಿಕೂಟ ಆಡಳಿತ ನಡೆಸುತ್ತಿದೆ.

ಹಲವಾರು ಸುದ್ದಿ ಸಂಸ್ಥೆಗಳೊಂದಿಗೆ ನಡೆಸಲಾದ ಮ್ಯಾಟ್ರಿಜ್ ಸಮೀಕ್ಷೆಯು ಮಹಾರಾಷ್ಟ್ರದಲ್ಲಿ ಬಿಜೆಪಿ ಹಾಗೂ ಮಿತ್ರ ಪಕ್ಷಗಳು ಶೇ 48 ಮತಗಳೊಂದಿಗೆ 150–170 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಲಿವೆ ಎಂದು ಅಂದಾಜಿಸಿದೆ.

ಮಹಾರಾಷ್ಟ್ರ — ಒಟ್ಟು ಸ್ಥಾನಗಳು 288 — ಸರಳ ಬಹುಮತ 145

ಸಮೀಕ್ಷೆ ಕೈಗೊಂಡ ಸಂಸ್ಥೆ	ಮಹಾಯುತಿ	ಎಂವಿಎ ಮೈತ್ರಿಕೂಟ	ಇತರರು
ಪಿ-ಮಾರ್ಕ್	137-157	126-146	02-08
ಪೀಪಲ್ಸ್ ಪಲ್ಸ್	175-195	85-112	7-12
ಮ್ಯಾಟ್ರಿಜ್	150-170	110-130	8-10
ಲೋಕ್‌ಶಾಹಿ-ಮರಾಠಿ ರುದ್ರ	128-142	125-140	18-23
ಚಾಣಕ್ಯ	152-160	130-138	6-8
ದೈನಿಕ್ ಭಾಸ್ಕರ್	125-140	135-150	20-25
ಎಲೆಕ್ಟೋರಲ್ ಎಡ್ಜ್	118	150	20

ಜಾರ್ಖಂಡ್ — ಒಟ್ಟು ಸ್ಥಾನಗಳು 81 — ಸರಳ ಬಹುಮತ 41

ಸಮೀಕ್ಷೆ ಕೈಗೊಂಡ ಸಂಸ್ಥೆ	ಎನ್‌ಡಿಎ	ಜೆಎಂಎಂ ಮೈತ್ರಿಕೂಟ	ಇತರರು
ಮ್ಯಾಟ್ರಿಜ್	42-47	25-30	1-4
ಆ್ಯಕ್ಸಿಸ್ ಮೈ ಇಂಡಿಯಾ	17-27	49-59	1-6
ಪೀಪಲ್ಸ್ ಪಲ್ಸ್	44-53	25-37	5-9
ಚಾಣಕ್ಯ	45-50	35-38	3-5
ದೈನಿಕ್ ಭಾಸ್ಕರ್	37-40	36-39	0-2
ಟೈಮ್ಸ್ ನೌ-ಜೆವಿಸಿ	40-44	30-40	1-1
ಪಿ-ಮಾರ್ಕ್	31-40	37-47	1-6

ಮಂಡ್ಯ ಸಾಹಿತ್ಯ ಸಮ್ಮೇಳನ ಗೊ.ರು. ಚನ್ನಬಸಪ್ಪ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಗೊ.ರು. ಚನ್ನಬಸಪ್ಪ

ಬೆಂಗಳೂರು: ಮಂಡ್ಯದಲ್ಲಿ ಡಿಸೆಂಬರ್ 20, 21 ಮತ್ತು 22ರಂದು ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಬುಧವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಹೆಸರನ್ನು ಅಂತಿಮಗೊಳಿಸಲಾಯಿತು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಹಂಪ ನಾಗರಾಜಯ್ಯ, ಸಿದ್ಧಲಿಂಗ ಪಟ್ಟಣಶೆಟ್ಟಿ, ಸುಧಾಮೂರ್ತಿ, ಲತಾ ರಾಜಶೇಖರ್, ನಾ ಮೊಗಸಾಲೆ ಸೇರಿದಂತೆ ಸಾರ್ವಜನಿಕವಾಗಿ ಚರ್ಚೆಯಾದಂತೆ ಹಲವರ ಹೆಸರುಗಳ ಬಗ್ಗೆ ಸಭೆಯಲ್ಲಿ ಚರ್ಚೆಯಾಯಿತು. ಎಲ್ಲ ನೆಲೆಗಳಿಂದಲೂ ಕೂಲಂಕಷವಾಗಿ ಚರ್ಚಿಸಿ, 60 ಸದಸ್ಯರಲ್ಲಿ ಹಾಜರಿದ್ದ 53 ಸದಸ್ಯರು ಸರ್ವಾನುಮತದಿಂದ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡಿದರು' ಎಂದು ಹೇಳಿದರು.

'ಸಮ್ಮೇಳನಕ್ಕೆ ಮಹಿಳೆಯರನ್ನು ಅಧ್ಯಕ್ಷರನ್ನಾಗಿಸಬೇಕೆಂಬ ಪ್ರಯತ್ನ ನಮ್ಮದೂ ಇದೆ. ಆದರೆ, ಎಲ್ಲರ ಅಭಿಪ್ರಾಯ ಹಾಗೂ ಹಿರಿತನಕ್ಕೆ ಪ್ರಾಧಾನ್ಯ ನೀಡಲಾಯಿತು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರಾಜ್ಯ ಸರ್ಕಾರದಿಂದ ಸಮ್ಮೇಳನಕ್ಕೆ ₹25 ಕೋಟಿ ಬಿಡುಗಡೆಯಾಗಿದೆ. ಮಂಡ್ಯದಲ್ಲಿ ನಡೆಯುವ ಸಮ್ಮೇಳನಕ್ಕೆ ಅಲ್ಲಿನ ಸರ್ಕಾರಿ ನೌಕರರು ಒಂದು ದಿನದ ವೇತನವನ್ನು ಕೊಡುಗೆಯಾಗಿ ನೀಡಿದ್ದು, ಇದು ಸುಮಾರು ₹6 ಕೋಟಿಯಾಗಲಿದೆ. ನಾವು ಕೇಳಿದ್ದ ₹30 ಕೋಟಿಗಿಂತ ಹೆಚ್ಚೇ ಹಣ ಲಭ್ಯವಾಗಲಿದೆ. ಈ ಬಾರಿ ಸಮ್ಮೇಳನದಲ್ಲಿ ಹೊರದೇಶದವರೂ ಭಾಗಿಯಾಗಲಿದ್ದಾರೆ' ಎಂದು ಮಹೇಶ ಜೋಶಿ ತಿಳಿಸಿದರು.

ಸಂದರ್ಶನ 07

ಚಿನಕುರುಳಿ

ಪ್ರಕಾಶ್ ಶೆಟ್ಟಿ

5.8 ಕೋಟಿ ಪಡಿತರ ಚೀಟಿ ರದ್ದು

ನವದೆಹಲಿ (ಪಿಟಿಐ): ದೇಶದಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆಯ (ಪಿಡಿಎಸ್) ಡಿಜಿಟಲೀಕರಣಕ್ಕೆ ಚಾಲನೆ ನೀಡಲಾಗಿದ್ದು, 5.8 ಕೋಟಿ ನಕಲಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ ಎಂದು ಕೇಂದ್ರ ಆಹಾರ ಸಚಿವಾಲಯವು ಬುಧವಾರ ತಿಳಿಸಿದೆ.

ಒಟ್ಟು 80.6 ಕೋಟಿ ಫಲಾನುಭವಿಗಳಿಗೆ ಪಿಡಿಎಸ್‌ನಡಿ ಸೌಲಭ್ಯ ಕಲ್ಪಿಸಲಾಗಿದೆ. ಆಧಾರ್ ಸಂಖ್ಯೆ ಆಧರಿತ ದೃಢೀಕರಣ ಹಾಗೂ ಇ-ಕೆವೈಸಿ (ಆಧಾರ್ ಆಧರಿತ ಹೆಬ್ಬೆಟ್ಟಿನ ದೃಢೀಕರಣ) ಪರಿಶೀಲನೆ ಪ್ರಕ್ರಿಯೆ ಮೂಲಕ ಈ ನಕಲಿ ಚೀಟಿಗಳನ್ನು ಪತ್ತೆಹಚ್ಚಲಾಗಿದೆ. ಇದರಿಂದ ಪಡಿತರ ವಿತರಣೆಯಲ್ಲಿನ ಸೋರಿಕೆಯನ್ನು ತಡೆಗಟ್ಟಲಾಗಿದೆ.

12ನೇ ಪುಟ ನೋಡಿ

ಕೇಂದ್ರ ಮಾನದಂಡದಂತೆ ಕಾರ್ಡ್ ಪರಿಶೀಲನೆ–ಡಿಕೆಶಿ

ಶಿವಕುಮಾರ್

ಬೆಂಗಳೂರು: 'ಬಿಪಿಎಲ್ ಕಾರ್ಡ್ ವಿತರಣೆಗೆ ಕೇಂದ್ರ ಸರ್ಕಾರ ಕೆಲವು ಮಾನದಂಡಗಳನ್ನು ನಿಗದಿಪಡಿಸಿದೆ. ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಅರ್ಹರ ಕಾರ್ಡ್ ರದ್ದಾಗಿದ್ದರೆ ಅವರಿಂದ ಮತ್ತೆ ಅರ್ಜಿ ಪಡೆದು ಬಿಪಿಎಲ್ ಕಾರ್ಡ್ ನೀಡಲಾಗುವುದು. ಅರ್ಹರು ಯಾವುದೇ ಆತಂಕ ಪಡುವ ಅಗತ್ಯ ಇಲ್ಲ' ಎಂದೂ ಅವರು ಹೇಳಿದರು. 'ಸರ್ಕಾರಿ ನೌಕರರು, ಸಹಕಾರಿ ಸಂಘಗಳ ಅಧಿಕಾರಿಗಳು, ಆದಾಯ ತೆರಿಗೆ ಪಾವತಿದಾರರು ಬಿಪಿಎಲ್ ಕಾರ್ಡ್ ಹೊಂದಿರುವ ಕಾರಣ ಪರಿಷ್ಕರಣೆ ಮಾಡಲಾಗುತ್ತಿದೆ. ಹೀಗೆ ಪರಿಷ್ಕರಿಸುವ ವೇಳೆ ಕೆಲವು ಕಡೆ ಹೆಚ್ಚುಕಮ್ಮಿಯಾಗಿದೆ. ಅದನ್ನು ಬಗೆಹರಿಸುತ್ತೇವೆ' ಎಂದರು.

ಬಡವರ ಪಡಿತರ ಚೀಟಿ ರದ್ದಾದರೆ ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರು ಮತ್ತು ಆದಾಯ ತೆರಿಗೆ ಪಾವತಿದಾರರನ್ನು ಹೊರತುಪಡಿಸಿ ಉಳಿದ ಯಾವುದೇ ಕುಟುಂಬದವರ ಪಡಿತರ ಚೀಟಿ ರದ್ದಾಗಿದ್ದರೆ ತಕ್ಷಣ ವಾಪಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಬಡ ಕುಟುಂಬಗಳ ಪಡಿತರ ಚೀಟಿಗಳನ್ನು ವಿನಾಕಾರಣ ರದ್ದು ಮಾಡಿದರೆ ಆಹಾರ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

'ನಕ್ಸಲ್ ನಿಗ್ರಹಕ್ಕಾಗಿ ಎನ್‌ಕೌಂಟರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಲವು ನಕ್ಸಲ್ ಪ್ರಕರಣಗಳಲ್ಲಿ ವಿಕ್ರಂ ಗೌಡ ಪೊಲೀಸರಿಗೆ ಬೇಕಾದವನಾಗಿದ್ದ. ನಕ್ಸಲ್ ಚಟುವಟಿಕೆ ನಿಗ್ರಹಿಸಲು ಆತನನ್ನು ಎನ್‌ಕೌಂಟರ್ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಕ್ರಂ ಗೌಡ ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆಯಾಗಿರಬಹುದು ಎಂದು ಪ್ರಗತಿಪರ ಚಿಂತಕರು ಅನುಮಾನ ವ್ಯಕ್ತಪಡಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಶರಣಾಗುವಂತೆ ವಿಕ್ರಂ ಗೌಡನಿಗೆ ಆದೇಶ ನೀಡಲಾಗಿತ್ತಾದರೂ ಶರಣಾಗಿರಲಿಲ್ಲ. 'ವಿಕ್ರಂ ಗೌಡನನ್ನು ಹಿಡಿದವರಿಗೆ ಕೇರಳ ಸರ್ಕಾರ ₹25 ಲಕ್ಷ, ಕರ್ನಾಟಕ ಸರ್ಕಾರ ₹5ಲಕ್ಷ ಬಹುಮಾನ ಘೋಷಿಸಿತ್ತು' ಎಂದರು.

'ಅವನೇ ದಾಳಿ ಮಾಡುತ್ತಿದ್ದ'

'ನಕ್ಸಲ್ ವಿಕ್ರಂ ಗೌಡ ಅಪಾಯಕಾರಿ ಶಸ್ತ್ರಾಸ್ತ್ರ ಇಟ್ಟುಕೊಂಡಿದ್ದ. ಪೊಲೀಸರು ಎನ್‌ಕೌಂಟರ್ ಮಾಡದೇ ಇರುತ್ತಿದ್ದರೆ, ಅವನೇ ದಾಳಿ ನಡೆಸುತ್ತಿದ್ದ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿಕ್ರಂ ಗೌಡನ ಮೇಲೆ ಕೊಲೆ ಸೇರಿದಂತೆ 60ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಿವೆ. ಆತ ಸ್ವಯಂಚಾಲಿತ ಮಷಿನ್ ಗನ್ ಇಟ್ಟುಕೊಂಡಿದ್ದ' ಎಂದರು.

'ಈ ಹಿಂದೆ ಆತನ ಶರಣಾಗತಿಗಾಗಿ ಪ್ರಯತ್ನಗಳು ನಡೆದಿದ್ದವು. ಅವನ ಸಂಬಂಧಿಕರು ಕೂಡಾ ಶರಣಾಗುವಂತೆ ಹೇಳಿದ್ದರು. ಆದರೆ, ವಿಕ್ರಂ ಗೌಡ ಒಪ್ಪಿರಲಿಲ್ಲ' ಎಂದು ಹೇಳಿದರು. 'ನಕ್ಸಲ್ ವಿಚಾರದಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ. ಜನರ ಸುರಕ್ಷತೆ ಮುಖ್ಯ' ಎಂದು ಹೇಳಿದರು.

ನಿಮ್ಮ ಜಮೀನನ್ನು ಒಂದು ಲ್ಯಾಂಡ್ ಮಾರ್ಕ್ ಆಗಿ ಬದಲಿಸಿರಿ

Jio bp You deserve more

ಭಾರತದ ಖಾಸಗಿ ರಂಗದ ನಂಬರ್ 1 ಕಂಪೆನಿಯಾದ Reliance Industries Ltd., ಮತ್ತು ಜಗತ್ತಿನ ಎನರ್ಜಿ ಪವರ್‌ಹೌಸ್ bp ಯ, ನಡುವಿನ ಒಂದು ಸಂಯುಕ್ತ ಉಪಕ್ರಮವಾದ Jio-bp ಯ ಚನಲ್ ಪಾರ್ಟ್‌ನರರಾಗುವ ಒಂದು ಸುವರ್ಣಾವಕಾಶ.

Jio-bp ಇವರಿಗೆ ಹೈವೇಗಳು ಮತ್ತು ನಗರಗಳಲ್ಲಿ ಸ್ವಂತ ಜಮೀನು ಹೊಂದಿರುವ ಪ್ರಗತಿಶೀಲ ವ್ಯಾಪಾರಿಗಳ ಅವಶ್ಯಕತೆ ಇದೆ.

*ಚನಲ್ ಪಾರ್ಟ್‌ನರರಾಗುವ ಮುಖ್ಯ ಅವಶ್ಯಕತೆಗಳು:

ಜಮೀನಿನ ಅವಶ್ಯಕತೆ:
ಹೈವೇಗಳಲ್ಲಿ 3000 ಚ.ಮೀ., ನಗರ 1200 ಚ.ಮೀ.
ಅನ್ಯ ರಸ್ತೆಗಳಲ್ಲಿ 2000 ಚ.ಮೀ.

ಹೂಡಿಕೆ: ₹2+ ಕೋಟಿ

ಇತರ ವಿವರಗಳಿಗಾಗಿ ಭೇಟಿ ನೀಡಿರಿ: jiobp.com

QR ಸ್ಕ್ಯಾನ್ ಮಾಡಿರಿ:

ಅರ್ಜಿ ಸಲ್ಲಿಸಲು - ಭೇಟಿ ನೀಡಿರಿ: partners.jiobp.in | ಈ ಮೈಲ್: jiobp.dealership@jiobp.com | ಇಲ್ಲಿಗೆ ಕಳುಹಿಸಿರಿ: 'Hi' ಅನ್ನು 70217 22222

ನಮ್ಮ ಆಫರಿಂಗ್ಸ್

Fuels with International ACTIVE technology | Trans-Connect | Fuel4U | CleanNGreen | pulse | wildbean cafe | Refresh | RewardMeter | 4ever | Nitrofill | Flexipay | Castrol | Freight4U

ಪ್ರಾಮುಖ್ಯವಾದ ಸೂಚನೆ: Reliance BP Mobility limited (RBML) ಡೀಲರ್‌ಶಿಪ್‌ನ ಹಂಚಿಕೆಯಲ್ಲಿ ಹಣವನ್ನು ಕೇಳಿ ಮೋಸ ಮಾಡುತ್ತಿರುವ ಮತ್ತು ವಂಚನೆ ಮಾಡುವ ಉದ್ದೇಶದಿಂದ ಅಪ್ರಾಮಾಣಿಕ ಮೂಲಗಳಿಂದ ಮಾಡಲಾಗುತ್ತಿರುವ ಕಪಟದ ವ್ಯವಹಾರಗಳ ವ್ಯಾಪಕತೆಯ ಬಗ್ಗೆ ಜನರ ಗಮನ ಹರಿಸುತ್ತಿದ್ದಾರೆ. RBML ಇವರು ತಾವು RBML ಅಥವಾ ಅವರ ಯಾವುದೇ ಸಹಯೋಗಿ, ಹೋಲ್ಡಿಂಗ್ ಅಥವಾ ಸಮೂಹ ಕಂಪೆನಿಗಳನ್ನು ಪ್ರತಿನಿಧೀಕರಿಸುತ್ತಿದ್ದೇವೆ ಎಂದು ಹೇಳುವ ಇಂತಹ ಅನಧಿಕೃತ ವ್ಯಕ್ತಿಗಳು/ಸಂಸ್ಥೆಗಳ ವಿರುದ್ಧ ಎಚ್ಚರಿಕೆ ವಹಿಸಲು ಸಾರ್ವಜನಿಕರಿಗೆ ಸಲಹೆ ನೀಡುತ್ತಾರೆ. ಇಂತಹ ಯಾವುದೇ ಪ್ರಸಂಗಗಳು ಗಮನಕ್ಕೆ ಬಂದರೆ ದಯವಿಟ್ಟು ನಮಗೆ CustomerCare.Petroleum@jiobp.com ಇಲ್ಲಿಗೆ ಬರೆಯಿರಿ. RBML ಅಥವಾ ಅವರ ಸಹಯೋಗಿಗಳು ಅಥವಾ ಹೋಲ್ಡಿಂಗ್ ಅಥವಾ ಸಮೂಹ ಕಂಪೆನಿಗಳು, RBML ನಿಂದ ಅಧಿಕೃತ ಪಡೆಯದೆ ಸಂವಹನದ ಯಾವುದೇ ಮಾಧ್ಯಮದಿಂದ, ಇಂತಹ ಮೋಸದ ವ್ಯವಹಾರಕ್ಕೆ ಒಳಗಾಗುವ ಯಾವನೇ ವ್ಯಕ್ತಿಯ ನಷ್ಟ/ಹಾನಿಗೆ ಯಾವುದೇ ರೀತಿಯಲ್ಲಿ ಬಾಧ್ಯರಾಗುವುದಿಲ್ಲ. ವಾಸ್ತವಿಕ ಸೈಟ್ ಇಲ್ಲಿ ದರ್ಶಿಸಲಾದ ಚಿತ್ರಕ್ಕಿಂತ ಭಿನ್ನವಾಗಿರಬಹುದು.

ಸಾಂಸ್ಕೃತಿಕ ಸ್ಪರ್ಧೆ ಇದೇ 23ಕ್ಕೆ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೆನರಾ ಬ್ಯಾಂಕ್ ಕನ್ನಡ ಸಂಘದಿಂದ ಅಂತರ್ ಬ್ಯಾಂಕ್ ಸಿಬ್ಬಂದಿಗಳಿಗೆ ನವೆಂಬರ್ 23ರಂದು ಕೆನರಾ ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ 'ಸಾಂಸ್ಕೃತಿಕ ಸ್ಪರ್ಧೆಗಳನ್ನು' ಆಯೋಜಿಸಲಾಗಿದೆ.

ಭಾವಗೀತೆ, ಜನಪದಗೀತೆ, ಚಿತ್ರಗೀತೆ, ಅಂತ್ಯಾಕ್ಷರಿ ಮತ್ತು ರಸಪ್ರಶ್ನೆ ಸ್ಪರ್ಧೆಗಳು ನಡೆಯಲಿವೆ. ಯಾವುದೇ ಬ್ಯಾಂಕ್‌ಗಳ ಆಸಕ್ತ ನೌಕರರು ಭಾಗವಹಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಮಾಹಿತಿಗೆ: 97420 83386, 99001 35366, 9060596939

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು೩ಂ(ವಿ)/ಪ್ರವ/ಸ/ಅ(ಕೆ)/ಸಕಇಎ-3/24-25/5551-53 ದಿನಾಂಕ:19.11.2024

ಟೆಂಡರ್ ಅಧಿಸೂಚನೆ (ಕೆಪಿಪಿ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಬಿಡ್ ವಿಚಾರಣೆ ಸಂಖ್ಯೆ: ಕೆಪಿಟಿಸಿಎಲ್/ಮು೩ಂ/ಪ್ರವ/ಸಿಇ-249/ದಿ.19.11.2024ರ ಮೂಲಕ ತುಮಕೂರು ವೃತ್ತ, ತುಮಕೂರು ಪ್ರಸರಣ ವಲಯ, ಕ.ವಿ.ಪ್ರ.ನಿ.ನಿ ನಲ್ಲಿ ವಿವಿಧ ವಿದ್ಯುತ್ ಉಪ-ಕೇಂದ್ರಗಳಿಗೆ ಅಗತ್ಯವಿರುವ ವಿವಿಧ ಗಾತ್ರದ ಸ ಮಾದರಿಯ ವಿದ್ಯುತ್ ಕನ್ವರ್ಟರ್‌ಗಳ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆಗಾಗಿ ಮತ್ತು ಸಾಗಾಣಿಕೆ ಒಳಗೊಂಡಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್‌ಗಳನ್ನು "ಕೆಪಿಪಿ" ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸ ಲಾಗುವುದು. ಈ ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https:kptcl.karnataka.gov.in** ನ ಹೈಪರ್‌ಲಿಂಕ್ **'E Procurement KPTCL'** ಅಥವಾ **https://kppp.karnataka.gov.in** ನಲ್ಲಿ ದಿನಾಂಕ**26.11.2024** ಅಥವಾ ತದನಂತರ ಲಾಗಿನ್ ಆಗಿ ಪಡೆಯಬಹುದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಾಗಿ ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಮುಖ್ಯ ಇಂಜಿನಿಯರ್ (ವಿ)., ಪ್ರಸರಣ ವಲಯ, ಕವಿಪ್ರನಿನಿ, ಪ್ರಸರಣ ಭವನ, 1ನೇ ಮಹಡಿ, 66ಕೆವಿ, ತುಮಕೂರು ಉಪಕೇಂದ್ರದ ಆವರಣ, ಕೋತಿತೋಪು ರಸ್ತೆ, ತುಮಕೂರು–03

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: +91 80 6774 8000, ಫ್ಯಾಕ್ಸ್: +91 80 6774 8557

ಸದಸ್ಯರಿಗೆ ಸೂಚನೆ

ನವಂಬರ್ 13, 2024ರ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳು ಮತ್ತು ಅದಕ್ಕೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಗಳ ಬಗ್ಗೆ ತನ್ನ ಸದಸ್ಯರ ಅನುಮೋದನೆಯನ್ನು ಅಂಚೆ ಮತದಾನ ಸೂಚನೆಯ (ಕೇವಲ ರಿಮೋಟ್ ಇ–ಮತದಾನದ ಮೂಲಕ ಮಾತ್ರವೇ) ಮೂಲಕ ಕೋರುತ್ತ ಕಂಪನಿಯು, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿಯ, 2014 ('ನಿಯಮಾವಳಿ') ಜೊತೆಗೆ ಓದಿಕೊಂಡಂತೆ ಕಂಪನಿಗಳ ಕಾಯಿದೆ, 2013 ('ಕಾಯಿದೆ') ರ 108, 110 ಕಲಮುಗಳು ಮತ್ತು ಅನ್ವಯವಾಗುವಂತಹ ಇತರ ನಿಬಂಧನೆಗಳ, ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೇಟೇರಿಯಲ್ ಮಾನದಂಡ (SS-2) ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') [ಇದರಲ್ಲಿ, ಸದ್ಯ ಜಾರಿಯಲ್ಲಿ ಇರುವಂತಹ, ಅದರ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಪುನಃ–ವಿಧಿಸಿರುವ ಕಾನೂನು(ಗಳು) ಸೇರುತ್ತವೆ], ಸಾಮಾನ್ಯ ಸುತ್ತೋಲೆ ಸಂ. 14/2020 ದಿನಾಂಕ ಏಪ್ರಿಲ್ 8, 2020 ಮತ್ತು ಸಾಮಾನ್ಯ ಸುತ್ತೋಲೆ ಸಂ. 17/2020 ದಿನಾಂಕ ಏಪ್ರಿಲ್ 13, 2020 ('ಎಂಸಿಎ ಸುತ್ತೋಲೆಗಳು'), ಮತ್ತು ಮುಂದುವರಿದು ಇದಕ್ಕೆ ಸಂಬಂಧಿಸಿದಂತೆ 09/2024 ದಿನಾಂಕದ 19ನೇ ಸೆಪ್ಟೆಂಬರ್, 2024ಕ್ಕೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಇತ್ತೀಚಿಗೆ ಹೊರಡಿಸಿರುವ ಸತ್ತೋಲೆಗಳು (ಎಮ್‌ಸಿಎ ಸುತ್ತೋಲೆಗಳು) ಸೇರಿದಂತೆ ಸಂಬಂಧಪಟ್ಟ ಇತರ ಯಾವುದೇ ಸುತ್ತೋಲೆಗಳು, ಕಾನೂನುಗಳು ಮತ್ತು ನಿಬಂಧನೆಗಳ ಅನುಸಾರ ಕಂಪನಿಯು ಈ ಕೆಳಗಿನಂತೆ ಸೂಚನೆಯನ್ನು ನೀಡುತ್ತಿದೆ:

ಸುತ್ತೋಲೆಗಳು:

1. ಶ್ರೀಮತಿ ಮೋನಿಕಾ ವಿಧಾನಿ (DIN: 07674403) ವಿಶೇಷ ನಿರ್ಣಯದಂತೆ ಇವರನ್ನು ಕಂಪನಿಯ ನಿರ್ದೇಶಕರಾಗಿ (ಕಾರ್ಯನಿರ್ವಾಹಕರಲ್ಲದ ಮತ್ತು ಸ್ವತಂತ್ರ) ನೇಮಕಾತಿಯ ಅನುಮೋದನೆ
2. ಶ್ರೀ ಜೀಸಸ್ ಜೇವಿಯರ್ ಡಯಾಜ್ ರೋಪೆರೊ ಎಸ್ಟೆಸೊ (DIN: 10835384) ಸಾಮಾನ್ಯ ನಿರ್ಣಯದಂತೆ ಇವರನ್ನು ಕಂಪನಿಯ ನಿರ್ದೇಶಕರಾಗಿ (ಕಾರ್ಯನಿರ್ವಾಹಕರಲ್ಲದ) ನೇಮಕಾತಿಯ ಅನುಮೋದನೆ

ಕಾಯಿದೆಯ 108 ಮತ್ತು 110 ಕಲಮುಗಳನ್ನು ಅದರ ಅಡಿಯಲ್ಲಿ ರಚಿಸಲಾದ ನಿಯಮಾವಳಿ ಮತ್ತು ಲಿಸ್ಟಿಂಗ್ ನಿಬಂಧನೆಯ ನಿಬಂಧನೆ 44 ರ ಜೊತೆ ಓದಿಕೊಂಡ ಪ್ರಕಾರ ಕಂಪನಿಯು ತನ್ನ ಸದಸ್ಯರಿಗೆ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಒದಗಿಸಿರುವ ಇ–ಮತದಾನ ಸೌಲಭ್ಯದ ಮೂಲಕ ವಿದ್ಯುನ್ಮಾನ ವಿಧಾನದಲ್ಲಿ ತಮ್ಮ ಮತವನ್ನು ಚಲಾಯಿಸುವ ಸೌಲಭ್ಯವನ್ನು ಒದಗಿಸಲು ಹರ್ಷಿಸುತ್ತಿದೆ.

ಶುಕ್ರವಾರ, ನವಂಬರ್ 15, 2024 ರ (ಕೊನೆಯ ದಿನಾಂಕದ) ವೇಳೆಗೆ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಅಥವಾ ಅವರಿಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಅವರವರ ಇಮೇಲ್‌ಗಳಿಗೆ ಮಾತ್ರವೇ ಕಂಪನಿಯು **ಶುಕ್ರವಾರ, ನವಂಬರ್ 22, 2024**ರಂದು ಅಂಚೆ ಮತದಾನದ ಸೂಚನೆಯನ್ನು ಕಳುಹಿಸಿಕೊಡಲಾಗುತ್ತದೆ. ಎಂಸಿಎ ಸುತ್ತೋಲೆಗಳ ಅಗತ್ಯತೆಗಳ ಅನುಸಾರ ಅಂಚೆ ಮತದಾನ ಸೂಚನೆಯ ಮುದ್ರಿತ ಪ್ರತಿ ಮತ್ತು ಅಂಚೆ ಮತದಾನದ ನಮೂನೆಗಳು ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆಗಳನ್ನು ಸದಸ್ಯರಿಗೆ ಕಳುಹಿಸುವುದಿಲ್ಲ, ಮತ್ತು ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಯ ಮೂಲಕವೇ ಕಳುಹಿಸಬೇಕಾಗುತ್ತದೆ.

ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಎಲ್ಲ ಸದಸ್ಯರಿಗೂ ರಿಮೋಟ್ ಇ–ವೋಟಿಂಗ್‌ನ ಪ್ರಕ್ರಿಯೆ ಮತ್ತು ವಿಧಾನಗಳ ವಿವರಗಳನ್ನು, ಮತ್ತು ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು, ಇಮೇಲ್ ಮೂಲಕ ಕಳುಹಿಸಲಾಗಿದೆ.

ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದಿರುವ ಆದರೆ ಅವರ ಮೊಬೈಲ್ ಸಂಖ್ಯೆಗಳು ನಮ್ಮಲ್ಲಿ ಲಭ್ಯವಿರುವಂತಹ ಸದಸ್ಯರಿಗೆ ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮೂಲಕ ಎಸ್ಸೆಮೆಸ್ ಗಳನ್ನು ಕಳುಹಿಸಲಾಗುತ್ತಿದೆ, ಮತ್ತು ಸೂಚನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅದರಲ್ಲಿ ವೆಬ್‌ಲಿಂಕ್ ಕೂಡ ಇದೆ. ಪ್ರಸ್ತಾವಿತ ರಿಮೋಟ್ ಇವೋಟಿಂಗ್‌ನಲ್ಲಿ ಭಾಗವಹಿಸುವ ಉದ್ದೇಶವನ್ನು ಹೊಂದಿರುವಂತಹ ಸದಸ್ಯರಲ್ಲಿ ಕೆಲವರಿಗೆ ಈ ವಿಷಯದ ಕುರಿತಾಗಿ ನೀಡಿರುವಂತಹ ಇತರ ಸಂವಹನವು ತಪ್ಪಿಹೋಗಿರುವಂತಹ/ತಲುಪಿಲ್ಲದಿರುವಂತಹ ಸಂದರ್ಭಗಳಿರಬಹುದು. ಆದ್ದರಿಂದ ಎಲ್ಲ ಸದಸ್ಯರಿಗೂ ವಿಷಯ ತಿಳಿಯಲಿ ಎಂಬ ಉದ್ದೇಶದಿಂದಲೇ ಈ ಸೂಚನೆಯನ್ನು ನೀಡುತ್ತಿದ್ದೇವೆ ಎಂಬುದನ್ನು ದಯವಿಟ್ಟು ತಿಳಿಯಿರಿ.

ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿರದ, ಮತ್ತು ಆ ಕಾರಣವಾಗಿ ಸದರಿ ಸೂಚನೆಯನ್ನು ಸ್ವೀಕರಿಸಲಾಗದಿರುವ ಸದಸ್ಯರು https://www.integratedregistry.in/KYCRegister.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು RTA ನೊಂದಿಗೆ ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸದ ನೋಂದಾವಣಿ ಯಶಸ್ವಿಯಾದ ನಂತರ ಸದಸ್ಯರಿಗೆ ಸೂಚನೆಯ ವಿದ್ಯುನ್ಮಾನ ಪ್ರತಿ ಮತ್ತು ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನ, ಜೊತೆಗೆ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳು ದೊರೆಯುತ್ತವೆ, ಮತ್ತು ಇವುಗಳ ನೆರವಿನಿಂದ ಸದಸ್ಯರು ಈ ಸೂಚನೆಯ ಮೇಲೆ ರಿಮೋಟ್ ಇ–ವೋಟಿಂಗ್ ಮಾಡಬಹುದು. ಏನಾದರೂ ಸಂದೇಹಗಳಿದ್ದರೆ ದಯವಿಟ್ಟು ಸಂಪರ್ಕಿಸಿ: **giri@integratedindia.in.**

ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರೀಸ್/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೂ, ಕಾಗದದ ರೂಪದಲ್ಲಿ ಷೇರುಗಳನ್ನು ಹೊಂದಿರುವವರು RTAನೊಂದಿಗೂ ನೋಂದಾಯಿಸಿಕೊಳ್ಳಬೇಕಾಗಿ ಕೋರುತ್ತೇವೆ.

RTA ನೊಂದಿಗೆ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವ ಸಂಬಂಧವಾಗಿ ಸದಸ್ಯರು https://www.integratedregistry.in/KYCRegister.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು RTA ನೊಂದಿಗೆ ನೋಂದಾಯಿಸಿಕೊಳ್ಳಬಹುದು. ಹಾಗಿಲ್ಲವಾದರೆ ಸದಸ್ಯರು, ಮತದಾನದ ಅವಧಿ ಮುಕ್ತಾಯವಾಗುವುದಕ್ಕೆ 48 ತಾಸುಗಳಿಗೆ ಮುಂಚಿನ ಎಲ್ಲ ಕೆಲಸದ ದಿನಗಳಂದು (ಶನಿವಾರ ಮತ್ತು ಭಾನುವಾರ ಹೊರತುಪಡಿಸಿ) ಬೆಳಗ್ಗೆ 09.00 ರಿಂದ ಸಂಜೆ 05.00 ರ ನಡುವೆ ಇಲ್ಲಿ ಮುಂದೆ ತಿಳಿಸಿರುವ, ಕಂಪನಿಯ ಅಥವಾ RTAನ ಇಮೇಲ್ ವಿಳಾಸಕ್ಕೆ ಮನವಿ/ಸಂವಹನ ಕಳುಹಿಸಬಹುದು. ಅದರಲ್ಲಿ ಪುಟ ಸಂಖ್ಯೆ/ಡೀಮ್ಯಾಟ್ ಖಾತೆ ಸಂಖ್ಯೆಗಳನ್ನು ತಿಳಿಸಿರಬೇಕು. ಕಂಪನಿಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: comp.secy@astrazeneca.com/ 080 67748000 ಮತ್ತು RTA ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: giri@integratedindia.in / 080 23460815-18.

ಇ–ವೋಟಿಂಗ್ ಅವಧಿಯು **ಶನಿವಾರ, ನವಂಬರ್ 23, 2024** ರಂದು ಬೆಳಗ್ಗೆ 09.00 ರಿಂದ (ಭಾ.ಕಾ.) ಆರಂಭವಾಗಿ **ಭಾನುವಾರ, ಡಿಸೆಂಬರ್ 22, 2024** ರಂದು ಸಂಜೆ 05.00 ಕ್ಕೆ (ಭಾ.ಕಾ.) ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ, **ಶುಕ್ರವಾರ, ನವಂಬರ್ 15, 2024** ರಂದು (ಕೊನೆಯ ದಿನಾಂಕ) ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತಗಳನ್ನು ಇಲೆಕ್ಟ್ರಾನಿಕ್ ವಿಧಾನದಲ್ಲಿ ಚಲಾಯಿಸಬಹುದು. ಮೇಲೆ ಹೇಳಿದ ದಿನಾಂಕ ಮತ್ತು ಸಮಯ ಕಳೆದ ನಂತರ NSDL, ಇ–ವೋಟಿಂಗ್ ಮಾಡ್ಯೂಲನ್ನು ನಿಷ್ಕ್ರಿಯಗೊಳಿಸುವುದರಿಂದ ಮತದಾನ ಸಾಧ್ಯವಾಗುವುದಿಲ್ಲ. ಒಮ್ಮೆ ಸದಸ್ಯರು ನಿರ್ಣಯಗಳ ಮೇಲೆ ಮತವನ್ನು ಚಲಾಯಿಸಿ ದೃಢಪಡಿಸಿದ ನಂತರ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಅಂಚೆ ಮತದಾನದ ಸೂಚನೆಯನ್ನು ಸ್ವೀಕರಿಸಿರುವ ಯಾರೇ ಆಗಲಿ, ಕೊನೆಯ ದಿನಾಂಕದಂದು ಕಂಪನಿಯ ಸದಸ್ಯರಾಗಿರದಿದ್ದರೆ ಅಂತಹವರು ಸದರಿ ಅಂಚೆ ಮತದಾನದ ಸೂಚನೆಯನ್ನು ಸುಮ್ಮನೆ ಮಾಹಿತಿಗಾಗಿ ಎಂದು ಭಾವಿಸಬೇಕು. ಸದಸ್ಯರ ಮತದಾನದ ಹಕ್ಕುಗಳು ಕೊನೆಯ ದಿನಾಂಕದಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಷೇರುಗಳ ಪ್ರಮಾಣಕ್ಕೆ ಅನುಬದ್ಧವಾಗಿರುತ್ತದೆ.

ಅಂಚೆ ಮತದಾನದ ಸೂಚನೆ ಮತ್ತು ಇ–ವೋಟಿಂಗ್ ಪ್ರಕ್ರಿಯೆಯ ವಿಧಾನವನ್ನು www.evoting.nsdl.com ಅಥವಾ www.astrazeca.com/india ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅಂಚೆ ಮತದಾನ ಪ್ರಕ್ರಿಯೆಯು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕೆಂದು ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಬೆಂಗಳೂರು, ಸಿ.ಪಿ. ಸಂ.980, ಸದಸ್ಯತ್ವ ಸಂಖ್ಯೆ FCS:1788, ಇವರನ್ನು ಅಂಚೆ ಮತದಾನ ಪ್ರಕ್ರಿಯೆಯ ಸೂಕ್ಷ್ಮ ಪರಿಶೀಲಕರೆಂದು ನೇಮಕ ಮಾಡಿದೆ.

ಅಂಚೆ ಮತದಾನದ (ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ) ಮೂಲಕ ನಡೆಸುವ ಮತದಾನದ ಫಲಿತಾಂಶವನ್ನು **ಮಂಗಳವಾರ, ಡಿಸೆಂಬರ್ 24, 2024** ರಂದು ಅಥವಾ ಅದರೊಳಗಾಗಿ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು. ಫಲಿತಾಂಶವನ್ನು ಮತ್ತು ಸೂಕ್ಷ್ಮ ಪರಿಶೀಲಕರ ವರದಿಯನ್ನು ಕಂಪನಿಯ **www.astrazeneca.com/india** ವೆಬ್‌ಸೈಟ್‌ನಲ್ಲಿ ಹಾಕಲಾಗುವುದು, ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಲಿಸ್ಟ್ ಮಾಡಿರುವ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಬಿಎಸ್‌ಇ ಲಿಮಿಟೆಡ್ ಗಳಿಗೂ ಕಳುಹಿಸಲಾಗುವುದು.

ನಿರ್ಣಯದ ಪರವಾಗಿ ಅಗತ್ಯ ಬಹುಮತ ದೊರೆತರೆ ರಿಮೋಟ್ ಇ–ವೋಟಿಂಗ್‌ಗಾಗಿ ಕಂಪನಿಯು ನಿಗದಿಪಡಿಸಿರುವ ಕೊನೆಯ ದಿನಾಂಕದಿಂದಲೇ ನಿರ್ಣಯವು ಜಾರಿಗೊಂಡಿದೆ ಎಂದು ಪರಿಗಣಿಸಲಾಗುವುದು.

ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದರೆ: www.evoting.nsdl.com ನ ಡೌನ್‌ಲೋಡ್ ವಿಭಾಗಗಳಲ್ಲಿರುವ **'ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು (FAQs)'** ಮತ್ತು **'ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿ'** ಗಳನ್ನು ಪರಾಮರ್ಶಿಸಬಹುದು ಅಥವಾ ವಿನಂತಿ ಇಮೇಲ್ ಅನ್ನು evoting@nsdl.com ಗೆ ಕಳುಹಿಸಬಹುದು. ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ದೂರುಗಳೇನಾದರೂ ಇದ್ದರೆ ದಯವಿಟ್ಟು ಸಂಪರ್ಕಿಸಿ: ಶ್ರೀ ಸೋನಿ ಸಿಂಗ್, ಅಸಿಸ್ಟೆಂಟ್ ಮ್ಯಾನೇಜರ್ ಅಥವಾ ಶ್ರೀಮತಿ ಸರಿತಾ ಮೋಟೆ, ಅಸಿಸ್ಟೆಂಟ್ ಮ್ಯಾನೇಜರ್ NSDL 4ನೇ ಮಹಡಿ, 'ಎ' ಶಾಖೆ, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬೈ–400 013, ದೂರವಾಣಿ: 022 – 4886 7000/022 – 2499 7000.

ಅಸ್ಟ್ರಾಜೆನಿಕ ಫಾರ್ಮ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: **ಬೆಂಗಳೂರು**
ದಿನಾಂಕ: **ನವಂಬರ್ 20, 2024**

ಮಾನಸ. ಆರ್
ಕಂಪನಿ ಸೆಕ್ರೆಟರಿ

ಬಂಜಾರ ಸಮಾವೇಶದಲ್ಲಿ ಸಮುದಾಯದ ಮುಖಂಡರ ಆಗ್ರಹ

ತರಾತುರಿಯಲ್ಲಿ ಒಳ ಮೀಸಲಾತಿ ಜಾರಿ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಖರ ದತ್ತಾಂಶ ಸಂಗ್ರಹವಾಗುವವರೆಗೆ ತರಾತುರಿಯಲ್ಲಿ ಒಳ ಮೀಸಲಾತಿ ಜಾರಿ ಮಾಡಬಾರದು' ಎಂದು ಬಂಜಾರ ಜನಜಾಗೃತಿ ರಾಜ್ಯ ಸಮಾವೇಶದಲ್ಲಿ ಒಕ್ಕೊರಲಿನಿಂದ ಹಕ್ಕೊತ್ತಾಯ ಮಂಡಿಸಲಾಯಿತು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ನಡೆದ ಸಮಾವೇಶದಲ್ಲಿ ಬಂಜಾರ ಸಮುದಾಯದ ವಿವಿಧ ಪಕ್ಷಗಳ ರಾಜಕೀಯ ನಾಯಕರು, ಸ್ವಾಮೀಜಿಗಳು, ವಕೀಲರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿರುವ ಮುಖಂಡರು ಹಕ್ಕೊತ್ತಾಯವನ್ನು ಮಂಡಿಸಿದರು.

ಮಾಜಿ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಮಾತನಾಡಿ, 'ಸಮುದಾಯದಿಂದ ನನಗೆ ಅಧಿಕಾರ ಸಿಕ್ಕಿದೆ. ನನಗೆ ಸರ್ಕಾರಕ್ಕಿಂತ ಸಮುದಾಯದ ಹಿತ ಮುಖ್ಯ. ನಿಮ್ಮೆಲ್ಲರ ಹಿತ ಕಾಪಾಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಮಾಜಿ ಶಾಸಕ ಬಸವರಾಜ ನಾಯ್ಕ ಮಾತನಾಡಿ, 'ಎರಡು ತಿಂಗಳಲ್ಲಿ ಎಲ್ಲ ತಾಂಡಾಗಳಲ್ಲಿ ದತ್ತಾಂಶಗಳ ಚಳವಳಿ ನಡೆಸಬೇಕಿದೆ. ಸಮುದಾಯದ ವಾಸ್ತವ ದತ್ತಾಂಶಗಳನ್ನು ಸಂಗ್ರಹಿಸಿ, ಆಯೋಗಕ್ಕೆ ಸಲ್ಲಿಸಬೇಕಿದೆ' ಎಂದರು.

ಶಾಸಕಿ ಶಾರದಾ ಪೂರ್ಯಾನಾಯ್ಕ್ ಮಾತನಾಡಿ, 'ಒಳ ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಬೆಳಗಾವಿ ಅಧಿವೇಶನದಲ್ಲಿ ಏನು ಮಾಡಬೇಕೆಂಬುದರ ಕುರಿತು ಸಮುದಾಯದ ಮುಖಂಡರ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳೋಣ' ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಾವೇಶದ ರಾಜ್ಯ ಸಮಿತಿ ಸಂಚಾಲಕ ಅನಂತ ನಾಯ್ಕ, 'ಪರಿಶಿಷ್ಟ ಸಮುದಾಯಗಳ ಅಂತರ್ ಹಿಂದುಳಿದಿರುವಿಕೆ ಮತ್ತು ಪ್ರಾತಿನಿಧ್ಯದ ಕೊರತೆಯನ್ನು ವಾಸ್ತವ ದತ್ತಾಂಶಗಳ ಮೂಲಕ ನಿರೂಪಿಸಿ ಸಾಬೀತು ಪಡಿಸಲು ರಾಜ್ಯ ಸರ್ಕಾರದ ಬಳಿ ಸದ್ಯ ಯಾವುದೇ ವೈಜ್ಞಾನಿಕ ಅಧ್ಯಯನ, ಸಮೀಕ್ಷೆ, ಪರಾಮರ್ಶೆ ಮಾಡಿರುವ ವರದಿಗಳು ಇಲ್ಲ' ಎಂದು ಹೇಳಿದರು.

ವಿಧಾನಸಭೆಯ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕ ಡಾ.ಚಂದ್ರು ಲಮಾಣಿ, ಮಾಜಿ ಸಚಿವ ರೇವುನಾಯ್ಕ ಬೆಳಮಗಿ, ವಿಧಾನ ಪರಿಷತ್ತಿನ ಸದಸ್ಯ ಪ್ರಕಾಶ್ ರಾಥೋಡ್, ನಿವೃತ್ತ ನ್ಯಾಯಮೂರ್ತಿ ಗಣೇಶ ನಾಯ್ಕ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ ಮತ್ತು ಸಮುದಾಯದ ಸ್ವಾಮೀಜಿಗಳು, ಮುಖಂಡರು ಸಮಾವೇಶದಲ್ಲಿ ಭಾಗವಹಿಸಿದ್ದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಬಂಜಾರ ಜನಜಾಗೃತಿ ರಾಜ್ಯ ಸಮಾವೇಶದಲ್ಲಿ ಮಾಜಿ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ, ಶಾಸಕ ಚಂದ್ರು ಲಮಾಣಿ, ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ವಿಧಾನ ಪರಿಷತ್ತಿನ ಸದಸ್ಯ ಪ್ರಕಾಶ್ ರಾಥೋಡ್, ಮಾಜಿ ಸಚಿವ ಬಾಬುರಾವ್ ಚವ್ಹಾಣ್, ಕೆಪಿಸಿಸಿ ಕಾರ್ಯದರ್ಶಿ ಬಾಲರಾಜ್ ನಾಯ್ಕ, ಬಂಜಾರ ಧರ್ಮ ಗುರುಗಳಾದ ಸೈನಾ ಭಗತ್, ದೇನಾ ಭಗತ್ ಮತ್ತು ಶಿವಪ್ರಕಾಶ್ ಮಹಾರಾಜ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಸಿಬಿಎಸ್‌ಇ 10, 12ನೇ ತರಗತಿ ಪರೀಕ್ಷೆ ಫೆ.15ಕ್ಕೆ ಶುರು

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳ ವೇಳಾಪಟ್ಟಿಯನ್ನು ಬುಧವಾರ ಪ್ರಕಟಿಸಿದ್ದು, 2025ರ ಫೆಬ್ರುವರಿ 15ರಿಂದ ಪರೀಕ್ಷೆ ಪ್ರಾರಂಭವಾಗಲಿದೆ.

10ನೇ ತರಗತಿ ಪರೀಕ್ಷೆ 2025ರ ಮಾರ್ಚ್ 18 ರಂದು ಮತ್ತು 12ನೇ ತರಗತಿ ಪರೀಕ್ಷೆ ಏಪ್ರಿಲ್ 4ರಂದು ಕೊನೆ ಗೊಳ್ಳಲಿದೆ ಎಂದು ತಿಳಿಸಿದೆ. ಪರೀಕ್ಷಾ ವೇಳಾಪಟ್ಟಿಯನ್ನು ಇದೇ ಮೊದಲ ಬಾರಿಗೆ 86 ದಿನಗಳ ಮುಂಚಿತವಾಗಿ ಮಂಡಳಿಯು ಪ್ರಕಟಿಸಿದೆ.

'ಎರಡು ವಿಷಯಗಳ ನಡುವೆ ಸಾಕಷ್ಟು ಅಂತರ ನೀಡಲಾಗಿದೆ. ವಿದ್ಯಾರ್ಥಿಯು ಆಯ್ಕೆ ಮಾಡಿದ ಯಾವುದೇ ಎರಡು ವಿಷಯಗಳು ಒಂದೇ ದಿನಾಂಕದಂದು ಬರದಂತೆ ಪರೀಕ್ಷಾ ವೇಳಾಪಟ್ಟಿ ಸಿದ್ಧಪಡಿಸಲಾಗಿದೆ' ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಹೇಳಿದ್ದಾರೆ.

ಫಲಕಗಳಲ್ಲಿ 'ಕನ್ನಡ ಮಾಯ' ಕ್ರಮಕ್ಕೆ ಕನ್ನಡ ಸಂಘಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಪೊಲೀಸ್ ಇಲಾಖೆಯ ಫಲಕಗಳಲ್ಲಿ ಇಂಗ್ಲಿಷ್ ಬಳಕೆ ಹೆಚ್ಚಾಗಿದ್ದು, ಕನ್ನಡವನ್ನು ಸಂಪೂರ್ಣ ನಿರ್ಲಕ್ಷ್ಯಿಸಲಾಗಿದೆ' ಎಂದು ಕನ್ನಡ ಗೆಳೆಯರ ಬಳಗ, ಕನ್ನಡ ಕ್ರಿಯಾ ಸಮಿತಿ ಮತ್ತು ಕರ್ನಾಟಕ ಕ್ರಾಂತಿರಂಗ ಸಂಸ್ಥೆಗಳು ಆರೋಪಿಸಿವೆ

'80ರ ದಶಕದಲ್ಲಿ ವಿಧಾನಸೌಧಕ್ಕಿಂತ ಪೊಲೀಸ್ ಇಲಾಖೆಯಲ್ಲಿ ಹೆಚ್ಚು ಕನ್ನಡ ಬಳಕೆಯಾಗುತ್ತಿತ್ತು. ದಶಕದ ಹಿಂದೆ ಬೆಂಗಳೂರಿನಾದ್ಯಂತ ಕನ್ನಡದಲ್ಲಿ ಮಾತ್ರ ಸೂಚನಾ ಫಲಕಗಳು ಇರುತ್ತಿದ್ದವು. ಕರ್ನಾಟಕ ನಾಮಕರಣದ ಸುವರ್ಣ-ಮಹೋತ್ಸವ ವರ್ಷದಲ್ಲಿ ನಡೆದಿರುವ ಈ ಅಪಚಾರಕ್ಕೆ ಕಾರಣರಾದ ಪೊಲೀಸ್ ಅಧಿಕಾರಿಗಳ ವಿರುದ್ಧ ಗೃಹ ಸಚಿವರು ಕ್ರಮ ಕೈಗೊಳ್ಳಬೇಕು' ಎಂದು ಈ ಸಂಘಟನೆಗಳ ಮುಖಂಡರು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

'ರಾಜ್ಯದ ಬೇರೆ ಬೇರೆ ನಗರಗಳಲ್ಲೂ ಇದೇ ಪರಿಸ್ಥಿತಿ ಇದೆ. ಹೀಗಾಗಿ ರಾಜ್ಯದಾದ್ಯಂತ ಪೊಲೀಸ್ ಇಲಾಖೆಯಲ್ಲಿರುವ ಇಂಥ ಇಂಗ್ಲಿಷ್ ಫಲಕಗಳನ್ನು ಬದಲಿಸಿ, ರಾಜ್ಯ ಭಾಷಾ ಅಧಿನಿಯಮದ ಪ್ರಕಾರ ಶೇ 60ರಷ್ಟು ಮೊದಲು ಕನ್ನಡ ಬಳಸಿ, ನಂತರ ಇಂಗ್ಲಿಷ್ ಬಳಸಿದ ಫಲಕಗಳನ್ನು ಹಾಕುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರಿನ ಕನ್ನಡ ಗೆಳೆಯರ ಬಳಗದ ಪ್ರಧಾನ ಕಾರ್ಯದರ್ಶಿ ರಾ.ನಂ.ಚಂದ್ರಶೇಖರ್, ಮೈಸೂರಿನ ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಮತ್ತು ಬೆಂಗಳೂರಿನ ಕರ್ನಾಟಕ ಕ್ರಾಂತಿರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಒತ್ತಾಯಿಸಿದ್ದಾರೆ.

ಜಲಮಂಡಳಿ ಅಧ್ಯಕ್ಷರ ಫೋನ್ ಇನ್ ನಾಳೆ

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅವರು ನವೆಂಬರ್ 22ರಂದು(ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸಾರ್ವಜನಿಕರು ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ಮಾತನಾಡಿ ಪರಿಹಾರ ಪಡೆದುಕೊಳ್ಳಬಹುದು.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.
ದೂರವಾಣಿ ಸಂಖ್ಯೆ: 080-22945119 ಮತ್ತು 080-22229639.

ಸಿರಿ ಕನ್ನಡ ಬಂಗಾರದ ಜೋಡಿ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮದಲ್ಲಿ ಲಕ್ಷ್ಮೀ, ಶ್ರೀನಿವಾಸ್ ಗುರೂಜಿ, ಮಿಮಿಕ್ರಿ ದಯಾನಂದ್, ಸಂಜಯ್ ಶಿಂಧೆ, ಚಂದನಾ, ಮುರಳಿ, ಮಧುಸೂಧನ್, ರಾಜೇಶ್ ರಾಜಘಟ್ಟ ಭಾಗವಹಿಸಿದ್ದರು

ರಸದೌತಣ ನೀಡಲಿರುವ 'ಬಂಗಾರದ ಜೋಡಿ'

'ಸಿರಿ ಕನ್ನಡ'ದಿಂದ ಅತಿ ದೊಡ್ಡ ರಿಯಾಲಿಟಿ ಶೋ: ದಂಪತಿಗಳ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿನ ಅತಿ ದೊಡ್ಡ ರಿಯಾಲಿಟಿ ಶೋ 'ಬಂಗಾರದ ಜೋಡಿ' ಡಿಸೆಂಬರ್ 14ರಂದು ದಾವಣಗೆರೆಯಲ್ಲಿ ಆರಂಭವಾಗಲಿದ್ದು, ಹಂತ ಹಂತವಾಗಿ ರಾಜ್ಯದ 12 ಕೇಂದ್ರಗಳಲ್ಲಿ ಮನರಂಜನೆಯ ರಸದೌತಣ ನೀಡಲಿದೆ.

ಸಿರಿ ಕನ್ನಡ ವಾಹಿನಿ ಮತ್ತು ಐಎಎಂ ಪ್ರೈವೇಟ್ ಲಿಮಿಟೆಡ್ ಜಂಟಿಯಾಗಿ ಕೈಗೊಳ್ಳುತ್ತಿರುವ ವಿನೂತನ ಕಾರ್ಯಕ್ರಮ ಇದಾಗಿದೆ ಎಂದು ಕನ್ನಡದ ಐದು ಮನರಂಜನಾ ವಾಹಿನಿಗಳಲ್ಲಿ ಒಂದಾಗಿರುವ ಸಿರಿ ಕನ್ನಡ ವಾಹಿನಿಯ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಶಿಂಧೆ ತಿಳಿಸಿದ್ದಾರೆ.

24 ದಿನಗಳಲ್ಲಿ 28 ಕಾರ್ಯಕ್ರಮಗಳು, 12 ಮೆಗಾ ಈವೆಂಟ್‌ಗಳು, 26 ಲಕ್ಷ ಜನರನ್ನು ಕನಿಷ್ಠ 10 ಬಾರಿ ಸಂಪರ್ಕಿಸುವ ಮಹಾ ಅಭಿಯಾನ ಇದಾಗಿದೆ ಎಂದರು.

ಬಂಗಾರದ ಜೋಡಿ ದೇಶದಲ್ಲಿಯೇ ಅತಿ ದೊಡ್ಡ ರಿಯಾಲಿಟಿ ಶೋ ಆಗಿದೆ. ಗ್ರಾಹಕರಿಗೆ ಮನರಂಜನೆ ಜತೆಗೆ ಬಹುಮಾನಗಳನ್ನೂ ನೀಡುವ ವಿಶಿಷ್ಟ ಹಾಗೂ ಅಪರೂಪದ ಕಾರ್ಯಕ್ರಮ ಇದಾಗಿದೆ ಎಂದು ಐಎಎಂ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮಧುಸೂದನ್ ಮಾಹಿತಿ ನೀಡಿದರು.

ಒಗ್ಗರಣೆ ಡಬ್ಬಿ ಖ್ಯಾತಿಯ ಮುರಳಿ ಹಾಗೂ ಕಿರುತೆರೆ ನಟಿ ಚಂದನಾ ಕಾರ್ಯಕ್ರಮ ನಿರೂಪಿಸಲಿದ್ದಾರೆ. ಬಂಗಾರದ ಜೋಡಿ ಕಾರ್ಯಕ್ರಮವು ರಾಜ್ಯದ ಎಲ್ಲ ಜನರಿಗೆ ಅವಕಾಶ ಒದಗಿಸಲಿದೆ. ಆಯಾ ಜಿಲ್ಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಆಯಾ ಜಿಲ್ಲೆಯವರಿಗೆ ಭಾಗವಹಿಸಲು ಅವಕಾಶ ನೀಡಲಾಗುವುದು. ಈ ಕಾರ್ಯಕ್ರಮವನ್ನು ಹಂತ ಹಂತವಾಗಿ ಎಲ್ಲ ಜಿಲ್ಲೆಗಳಲ್ಲಿ ಆರಂಭಿಸಲಾಗುವುದು ಎಂದರು.

ಪ್ರತಿ ಸ್ಪರ್ಧಿಗೂ ಬಹುಮಾನ: ಭಾಗವಹಿಸುವ ಪ್ರತಿ ಸ್ಪರ್ಧಿಗೂ ಬಹುಮಾನಗಳಿವೆ. ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸುವ 50 ಸಾವಿರ ಮಂದಿಗೆ ₹1 ಕೋಟಿವರೆಗೆ ವಿಶೇಷ ಬಹುಮಾನಗಳು ದೊರೆಯಲಿವೆ. ಪ್ರತಿ ಶನಿವಾರ ಮತ್ತು ಭಾನುವಾರ ಸಿರಿಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಈ ಕಾರ್ಯಕ್ರಮವನ್ನು ವೀಕ್ಷಿಸುವವರಿಗೂ ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮ ವೀಕ್ಷಿಸುವ ಮೂಲಕ ರಾಜ್ಯದಾದ್ಯಂತ ಸಕ್ರಿಯವಾಗಿ ಪಾಲ್ಗೊಳ್ಳುವ ಮೂರು ಲಕ್ಷ ವೀಕ್ಷಕರಿಗೆ ಕಾರು, ರೇಷ್ಮೆ ಸೀರೆ, ಚಿನ್ನದ ನಾಣ್ಯ, ಬೆಳ್ಳಿ ನಾಣ್ಯ, ಹೋಮ್ ಅಪ್ಲೈಯನ್ಸ್, ಮೊಬೈಲ್ ಫೋನ್, ಶಾಪಿಂಗ್ ವೋಚರ್ ಒಳಗೊಂಡಂತೆ ₹10 ಕೋಟಿಯ ಬಹುಮಾನಗಳಿರುತ್ತವೆ ಎಂದು ಸಿರಿ ಕನ್ನಡದ ಮುಖ್ಯಸ್ಥ ರಾಜೇಶ್ ರಾಜಘಟ್ಟ ತಿಳಿಸಿದರು.

ನೋಂದಣಿ: 'ಬಂಗಾರದ ಜೋಡಿ' ಕಾರ್ಯಕ್ರಮದಲ್ಲಿ ಭಾಗವಹಿಸುವ ನಾನಾ ವಯಸ್ಸಿನ ದಂಪತಿಗಳಿಗೆ ಬೇರೆ ಬೇರೆ ವಿಭಾಗವಾರು ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಆಸಕ್ತ ದಂಪತಿಗಳು 9035026824ಗೆ ವಾಟ್ಸ್‌ಆ್ಯಪ್ ಮಾಡಬಹುದು. www.bangaradajodi.comನಲ್ಲಿಯೂ ಹೆಸರು ನೋಂದಾಯಿಸಿಕೊಳ್ಳಬಹುದು. ಜೋಡಿಗಳು ವೆಬ್‌ಸೈಟ್‌ಗೆ ಲಾಗಿನ್ ಆದ ನಂತರ ಸಣ್ಣ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುತ್ತದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉನಿ/05/2024–25 ದಿನಾಂಕ: 20–11–2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಉದ್ಯಾನವನ ಮತ್ತು ಬಯಲು ಜಾಗದ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಉದ್ಯಾನವನ ಮತ್ತು ಬಯಲು ಜಾಗದ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ನಿಗದಿಪಡಿಸಲು** ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ನಿಗದಿ ಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
	ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಲ್ಲೂರು ಗ್ರಾಮದ		
1	ಶ್ರೀಮತಿ ಜಲಜಾಕ್ಷಿ ಕೋಂ ಲೇಟ್ ಲಕ್ಷ್ಮಣ ಮೂರ್ತಿ	13/3 ರ ಪೈಕಿ	00-32 1/2
2	ಶ್ರೀ ಸಿ. ಮಂಜುನಾಥ ಬಿನ್ ಚಿಕ್ಕಪ್ಪಯ್ಯ	14 ರ ಪೈಕಿ	01-04 1/2
3	ಶ್ರೀ ಕೆ. ಜನಾರ್ಧನ್ ಬಿನ್ ಕೃಷ್ಣಪ್ಪ	16/1 ರ ಪೈಕಿ	00-13
4		16/3 ರ ಪೈಕಿ	00-11
5		16/4 ರ ಪೈಕಿ	00-10
6	ಶ್ರೀ ಶಾಮಣ್ಣ ಬಿನ್ ಮುನಿಶಾಮೇಗೌಡ ॥ಉ॥ ಚಿಕ್ಕತಾಯಪ್ಪ	16/5 ರ ಪೈಕಿ	00-08
7	ಶ್ರೀಮತಿ ದೊಡ್ಡಮ್ಮ ಕೋಂ ಕದಿರಪ್ಪ	16/6ಎ ರ ಪೈಕಿ	00-03
8	ಶ್ರೀ ಹುಲ್ಲೂರಪ್ಪ (ನಾಗೇಹಳ್ಳಿ)	16/9 ರ ಪೈಕಿ	00-02
9	ಶ್ರೀ ಮರಿಯಪ್ಪ ಬಿನ್ ಲೇಟ್ ಡಿ.ಎಂ. ಜುಂಜಪ್ಪ	16/10 ರ ಪೈಕಿ	00-01
10	ಶ್ರೀ ರವಿಕುಮಾರ್ ಎಂ. ಬಿನ್ ಲೇಟ್ ಮುನಿವೆಂಕಟಪ್ಪ	16/15 ರ ಪೈಕಿ	00-03
11	ಶ್ರೀ ಮುನಿಯಪ್ಪ ಬಿನ್ ಬೈರಪ್ಪ	17/1ಎ ರ ಪೈಕಿ	00-21 1/2
12	ಶ್ರೀ ಎಂ. ಲೋಕೇಶ್ ಬಿನ್ ಚಿಕ್ಕಮರಿಯಪ್ಪ	17/1ಬಿ ರ ಪೈಕಿ	00-11
13	ಶ್ರೀಮತಿ ಶಾಂತಮ್ಮ ಕೋಂ ಲೇಟ್ ನಂಜುಂಡಮೂರ್ತಿ	17/2 ರ ಪೈಕಿ	00-23
14	ಮೆ॥ ಎ.ಆರ್.ಕೆ. ಗ್ಲೋಬಲ್ ಎಸ್ಟೇಟ್ಸ್	17/3 ರ ಪೈಕಿ	01-04
15	ಶ್ರೀ ಎಂ. ನಾರಾಯಣಸ್ವಾಮಿ ಬಿನ್ ಲೇಟ್ ದೊಡ್ಡಮರಿಯಪ್ಪ	17/4 ರ ಪೈಕಿ	00-11
16	ಶ್ರೀ ಮುನೇಗೌಡ ಬಿನ್ ಲೇಟ್ ಪಿಳ್ಳಪ್ಪ	17/5 ರ ಪೈಕಿ	00-11
17	ಶ್ರೀ ಕೆಂಪೇಗೌಡ ಬಿನ್ ಲೇಟ್ ಪಿಳ್ಳಪ್ಪ	17/6 ರ ಪೈಕಿ	00-11
	ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹುಲ್ಲೂರು ಅಮಾನಿಕೆರೆ ಗ್ರಾಮದ		
18	ಶ್ರೀ ಎಂ. ದೇವೇಂದ್ರ ಬಿನ್ ಲೇಟ್ ಮುನಿರೆಡ್ಡಿ	138 ರ ಪೈಕಿ	00-34 1/4

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3322/ಅಡ್ವರ್ಟೋರ್/2024–25

'ವಾಸಯೋಗ್ಯ ನಗರಗಳು' ಸಮಾವೇಶ 23ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ, ತಂತ್ರಜ್ಞಾನ, ಸಾರ್ವಜನಿಕ ಆರೋಗ್ಯ, ನೆರೆಹೊರೆ ಸಮುದಾಯದ ವಿಷಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು 'ವಾಸಯೋಗ್ಯ ನಗರಗಳು – ನಿಧಾನ, ಆರೋಗ್ಯಕರ, ಸುಸ್ಥಿರ' ಎಂಬ ಸಮಾವೇಶವನ್ನು ಆಯೋಜಿಸಲಾಗಿದೆ.

ಬೆಳ್ಳಂದೂರಿನಲ್ಲಿ ನವೆಂಬರ್ 23ರಿಂದ ಎರಡು ದಿನ ನಡೆಯುವ ಸಮಾವೇಶದಲ್ಲಿ ದೇಶ-ವಿದೇಶದ ತಜ್ಞರು, ದೂರದೃಷ್ಟಿಯುಳ್ಳ ನಾಯಕರು, ತಂತ್ರಜ್ಞರು, ಹೂಡಿಕೆದಾರರು, ಆಸ್ತಿ ಡೆವಲಪರ್‌ಗಳು ಮತ್ತು ಸಮುದಾಯದ ಮುಖಂಡರು ಭಾಗವಹಿಸಲಿದ್ದಾರೆ ಎಂದು ಮೈ ಲಿವೆಬಲ್ ಸಿಟಿಯ ಸಹ-ನಿರ್ದೇಶಕ ವಿನಾಯಕ್ ಭರ್ನೆ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಿಶ್ವದ ನಗರಗಳು ಹವಾಮಾನ ವೈಪರೀತ್ಯಗಳು, ಅಭಿವೃದ್ಧಿಯ ಒತ್ತಡಗಳು, ನೈಸರ್ಗಿಕ ಪರಿಸರದ ಅವನತಿ ಮತ್ತು ಸಾರ್ವಜನಿಕ ಆರೋಗ್ಯ ಸಮಸ್ಯೆಗಳೊಂದಿಗೆ ಹೋರಾಡುತ್ತಿವೆ. ಮಿತಿಮೀರಿದ ಸಂಪನ್ಮೂಲ ಬಳಕೆ, ಅತಿಯಾದ ತ್ಯಾಜ್ಯ ಉತ್ಪಾದನೆ ಮತ್ತು ವಿವೇಚನಾರಹಿತ ಅಭಿವೃದ್ಧಿಯ ಪರಿಣಾಮದಿಂದ ಹೀಗಾಗುತ್ತಿದೆ. ಸಮಸ್ಯೆಗಳನ್ನು ನಿಭಾಯಿಸಲು ಮನಃಸ್ಥಿತಿ ಬದಲಾವಣೆ ಅಗತ್ಯದ ಜೊತೆಗೆ ನಗರ ಯೋಜನೆ ಮತ್ತು ವಿನ್ಯಾಸದ ವಿಧಾನಗಳ ಪುನರ್‌ವಿಮರ್ಶೆ, ಮೂಲಸೌಕರ್ಯ ಮತ್ತು ಹಣಕಾಸು ಕ್ಷೇತ್ರಗಳಲ್ಲಿ ತಂತ್ರಜ್ಞಾನ ಅಳವಡಿಕೆಯ ವ್ಯಾಖ್ಯಾನಗಳ ವಿಸ್ತರಣೆಯಾಗಬೇಕು. ಈ ಎಲ್ಲ ವಿಚಾರಗಳು ಸಮಾವೇಶದಲ್ಲಿ ಚರ್ಚೆಯಾಗಿ, ಹಲವು ಪರಿಹಾರಗಳೂ ಲಭ್ಯವಾಗಲಿವೆ' ಎಂದರು.

ಯಲಹಂಕ: ಇಂದಿನಿಂದ ಸಾಂಸ್ಕೃತಿಕ ಮಹೋತ್ಸವ

ಯಲಹಂಕ: ಸ್ನೇಹಿತರ ಕೂಟ ಹಾಗೂ ಲಕ್ಷ-ದೀಪೋತ್ಸವ ಸಮಿತಿಯಿಂದ ನಟ ಪುನೀತ್ ರಾಜಕುಮಾರ್ ಸ್ಮರಣಾರ್ಥ ಇಂದಿನಿಂದ (21) 25ರವರೆಗೆ ಸಾಂಸ್ಕೃತಿಕ ಮಹೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸ್ನೇಹಿತರ ಕೂಟದ ಅಧ್ಯಕ್ಷ ವೈ.ಎನ್.ಅಶ್ವಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 'ಗುರುವಾರ ಬೆಳಿಗ್ಗೆ 10ಕ್ಕೆ ಮಹಿಳೆಯರಿಗೆ ಕೋಲಾಟ ಸ್ಪರ್ಧೆ, ಶುಕ್ರವಾರ ಮತ್ತು ಶನಿವಾರ ಬೆಳಿಗ್ಗೆ 10ಕ್ಕೆ ಭಜನಾಸ್ಪರ್ಧೆ, ಭಾನುವಾರ ಮಧ್ಯಾಹ್ನ 3ಕ್ಕೆ ರಂಗೋಲಿ ಸ್ಪರ್ಧೆ, ಸಂಜೆ 5ಕ್ಕೆ ಬಾಲಗೋಪಾಲ ಸ್ಪರ್ಧೆ ನಡೆಯಲಿದೆ. ಬಳಿಕ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಸ್ಪರ್ಧೆಯಲ್ಲಿ ವಿಜೇತರಾಗುವ ತಂಡಗಳಿಗೆ ನಗದು ಬಹುಮಾನ ನೀಡಲಾಗುವುದು' ಎಂದರು.

ನವೆಂಬರ್ 25 ರಂದು ಸಂಜೆ 6.30ಕ್ಕೆ ವೇಣುಗೋಪಾಲಸ್ವಾಮಿ, ವಿಶ್ವನಾಥೇಶ್ವರ-ಸ್ವಾಮಿ ಹಾಗೂ ಯಲಹಂಕದ ನವದುರ್ಗೆ ದೇವರುಗಳಿಗೆ ಲಕ್ಷ ದೀಪೋತ್ಸವ ಏರ್ಪಡಿಸಲಾಗಿದೆ ಎಂದು ಅವರು ವಿವರಿಸಿದರು.

ನಗರದಲ್ಲಿ ಇಂದು

ಪ್ರಶಸ್ತಿ ಪುರಸ್ಕೃತ ಪತ್ರಕರ್ತೆರಿಗೆ ಗೌರವಾರ್ಪಣೆ: ಅತಿಥಿಗಳು: ಕೆ.ವಿ. ಪ್ರಭಾಕರ್, ಆರ್. ಪೂರ್ಣಿಮಾ, ಉಪನ್ಯಾಸ: ಕೆ.ಪಿ. ಅಶ್ವಿನಿ, ಉಪಸ್ಥಿತಿ: ನಾಗಮಣಿ ಎಸ್. ರಾವ್, ಅಧ್ಯಕ್ಷತೆ: ಪದ್ಮಾ ಶಿವಮೊಗ್ಗ, ಆಯೋಜನೆ: ಕರ್ನಾಟಕ ಪತ್ರಕರ್ತೆಯರ ಸಂಘ, ಸ್ಥಳ: ಬೆಂಗಳೂರು ಪ್ರೆಸ್ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

'ಕನ್ನಡ ಸಾಹಿತ್ಯ ಸಮ್ಮೇಳನ' ವಿಜಯನಗರ ವಿಧಾನಸಭಾ ಕ್ಷೇತ್ರ: ಬೆಳಿಗ್ಗೆ 8ಕ್ಕೆ ಧ್ವಜಾರೋಹಣ: ಶಿವಣ್ಣ, ಎಂ. ತಿಮ್ಮಯ್ಯ, ಎಸ್.ಬಿ. ಉಮೇಶ್ ಚಂದ್ರ, ಸಮ್ಮೇಳನಾಧ್ಯಕ್ಷತೆ: ಮಧುರಾ ಅಶೋಕ್‌ಕುಮಾರ್, ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿಗಳು: ಪ್ರಿಯಕೃಷ್ಣ, ಪ್ರದೀಪ್ ಕೃಷ್ಣ, ಧರಣಿದೇವಿ ಮಾಲಗತ್ತಿ, 'ವಿಜಯನಗರ ವೈಭವ' ಸ್ಮರಣ ಸಂಚಿಕೆ ಬಿಡುಗಡೆ: ಕೆ.ವಿ. ತ್ರಿಲೋಕಚಂದ್ರ, ಪುಸ್ತಕ ಮಳಿಗೆಗೆ ಚಾಲನೆ: ಜಯಕರ ಎಸ್.ಎಂ., ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ವಿಜಯನಗರ ವಿಧಾನಸಭಾ ಕ್ಷೇತ್ರ, ಸ್ಥಳ: ಬಂಟರ ಸಂಘದ ಸಭಾಂಗಣ, ವಿಜಯನಗರ, ಉದ್ಘಾಟನಾ ಸಮಾರಂಭ ಬೆಳಿಗ್ಗೆ 11.15ಕ್ಕೆ

'ವಿದ್ಯಾಶಂಕರ ಪ್ರಶಸ್ತಿ' ಹಾಗೂ 'ಪುರಸ್ಕಾರ' ಪ್ರದಾನ ಸಮಾರಂಭ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಸಭಾಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್.ಕೆ., ಪ್ರಶಸ್ತಿ ಪ್ರದಾನ: ಸಿ. ವೀರಣ್ಣ, ಜಿ.ಎಸ್. ಸಿದ್ಧಲಿಂಗಯ್ಯ, ಪ್ರಶಸ್ತಿ ಪುರಸ್ಕೃತರು: ಬಿ.ಎಸ್. ಸ್ವಾಮಿ, ಅಶೋಕ್ ದೊಮ್ಮಲೂರು, ಸನ್ಮಾನಿತರು: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಬಳಗದ 41ನೇ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಸಮಾರಂಭ: ಅತಿಥಿಗಳು: ಎಸ್.ಎನ್. ಸೇತುರಾಂ, ಅಧ್ಯಕ್ಷತೆ: ಉಮೇಶ್ ಕುಮಾರ್ ಸಿಂಗ್, ಆಯೋಜನೆ: ಐ.ಓ.ಬಿ. ಕನ್ನಡ ಬಳಗ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

'ಪ್ರವೃದ್ಧಿ' ಪರಿಚಯ: ಉಪಸ್ಥಿತಿ: ಬಿ. ಗುರುಮೂರ್ತಿ, ಯೋಗೇಶ್ ಪಂಡಿತ್, ಸ್ಥಳ: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಮಧ್ಯಾಹ್ನ 12

ಪಿ. ಶೇಷಾದ್ರಿ ಸಿನಿಮಾವಲೋಕನ: 'ಮುನ್ನುಡಿ' ಚಿತ್ರ ಪ್ರದರ್ಶನ: ಆಶಯ ನುಡಿ: ಎಚ್.ಎನ್. ನರಹರಿರಾವ್, ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 4ರಿಂದ

ಹರಿದಾಸ ನಮನ: ಪ್ರಸ್ತುತಿ: ಇಂಪು ಸಂಗೀತ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ರಕ್ಷಿತಾ ಶರ್ಮಾ, ಪಿಟೀಲು: ಅರ್ಚನಾ ಮರಾಠೆ, ಮೃದಂಗ: ಶ್ರೀಧರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 5.30

'ಆರೋಗ್ಯ ಮತ್ತು ಪರಿಸರ' ಉಪನ್ಯಾಸ: ರಶ್ಮಿ ಗಿರೀಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಡಿ.10ಕ್ಕೆ ಸುವರ್ಣ ಸೌಧಕ್ಕೆ ಮುತ್ತಿಗೆ

ಬೆಂಗಳೂರು: 'ಪಂಚಮಸಾಲಿ ಸಮಾಜಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿಗೆ ಆಗ್ರಹಿಸಿ ಹಾಗೂ ಲಿಂಗಾಯತ ಉಪ ಜಾತಿಗಳಿಗೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಒತ್ತಾಯಿಸಿ ಡಿಸೆಂಬರ್ 10ರಂದು ಟ್ರ್ಯಾಕ್ಟರ್‌ಗಳೊಂದಿಗೆ ಬೆಳಗಾವಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಂಚಮಸಾಲಿಗಳ ನಡಿಗೆ ಬೆಳಗಾವಿ ವಿಧಾನಸೌಧದ ಒಳಗಡೆಗೆ' ಘೋಷವಾಕ್ಯದ ಅಡಿಯಲ್ಲಿ ಈ ಚಳವಳಿ ನಡೆಯಲಿದೆ. 5 ಸಾವಿರ ಟ್ಯಾಕ್ಟರ್‌ಗಳೊಂದಿಗೆ 10 ಸಾವಿರ ವಕೀಲರೂ ಸೇರಿ ಸಮುದಾಯದ ಲಕ್ಷಾಂತರ ಮಂದಿ ಪಾಲ್ಗೊಳ್ಳಲಿದ್ದಾರೆ' ಎಂದರು.

ಹೂಡಿಕೆದಾರರ ಮನವೊಲಿಕೆಗೆ ಆದ್ಯತೆ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಫೆಬ್ರುವರಿ 11ರಿಂದ 14ರವರೆಗೆ ನಡೆಯುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕರ್ನಾಟಕ ಹೂಡಿಕೆಗೆ ಅತ್ಯುತ್ತಮ ತಾಣವೆನ್ನುವುದನ್ನು ಹೂಡಿಕೆದಾರರಿಗೆ ಮನದಟ್ಟು ಮಾಡಿಕೊಡಲು ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ನಡೆದ 'ಇನ್ವೆಸ್ಟ್ ಕರ್ನಾಟಕ– 2025'ರ ಮೊದಲ ಜಾಗತಿಕ ಹೂಡಿಕೆದಾರರ ಸಮಾವೇಶದ ಸಮನ್ವಯ ಸಭೆಯಲ್ಲಿ ವಿವಿಧ ಇಲಾಖೆಗಳ ಉನ್ನತಾಧಿಕಾರಿಗಳು, ಕೈಗಾರಿಕಾ ಸಂಘಟನೆಗಳ ಮುಖ್ಯಸ್ಥರು ಮತ್ತು ಪ್ರತಿನಿಧಿಗಳ ಜತೆ ಮಾತನಾಡಿದರು.

ಎಂ.ಬಿ.ಪಾಟೀಲ

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಜಾಗತಿಕ ಹೂಡಿಕೆದಾರರ ಸಮಾವೇಶವು ಬಂಡವಾಳ ಹೂಡಿಕೆ, ಕೈಗಾರಿಕಾ ಮತ್ತು ಬೆಳವಣಿಗೆ, ಆರ್ಥಿಕ ಅಭಿವೃದ್ಧಿ ಹೀಗೆ ಹಲವು ದೃಷ್ಟಿಗಳಿಂದ ಮಹತ್ವದ್ದಾಗಿದೆ. ಈ ಸಮಾವೇಶದಲ್ಲಿ ದೇಶ– ವಿದೇಶಗಳ 5 ಸಾವಿರ ಪ್ರತಿನಿಧಿಗಳು ಮತ್ತು ತಾಂತ್ರಿಕ ಪರಿಣಿತರು ಭಾಗವಹಿಸಲಿದ್ದಾರೆ. ಇದೇ ಮೊದಲ ಬಾರಿಗೆ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳಿಗೆ ಆದ್ಯತೆ ನೀಡುತ್ತಿದ್ದು, ಮಹಿಳಾ ಉದ್ಯಮಿಗಳಿಗೂ ಸೂಕ್ತ ಪ್ರಾತಿನಿಧ್ಯ ಕಲ್ಪಿಸಲಾಗುತ್ತಿದೆ ಎಂದರು.

ಫೆಬ್ರುವರಿ 11ರ ಸಂಜೆ ಸಮಾವೇಶದ ಉದ್ಘಾಟನಾ ಸಮಾರಂಭ ನಡೆಯಲಿದೆ. ಫೆ.12 ಮತ್ತು 13ರಂದು ಸಂಪೂರ್ಣವಾಗಿ ಎರಡು ದಿನ ಗಂಭೀರ ಚರ್ಚೆಗಳು ನಡೆಯಲಿವೆ. ಫೆ. 14ರಂದು ಸಮಾವೇಶದ ಸಮಾರೋಪ ನಿಗದಿಯಾಗಿದೆ. ಸಮಾವೇಶವನ್ನು ಯಶಸ್ವಿಗೊಳಿಸಲೆಂದು ಈಗಾಗಲೇ ಅಮೆರಿಕ ಮತ್ತು ಜಪಾನಿನಲ್ಲಿ ರೋಡ್ ಶೋ ನಡೆಸಲಾಗಿದೆ. ಸದ್ಯದಲ್ಲೇ ಯೂರೋಪ್‌ನಲ್ಲೂ ರೋಡ್ ಶೋ ನಡೆಯಲಿದೆ. ಗಣ್ಯ ಸಾಧಕರೊಬ್ಬರನ್ನು ಸಮಾವೇಶದ ಉದ್ಘಾಟಕರನ್ನಾಗಿ ಆಹ್ವಾನಿಸಲಾಗುವುದು ಎಂದು ಪಾಟೀಲ ಅವರು ತಿಳಿಸಿದರು.

ಅನಧಿಕೃತ ಕಟ್ಟಡ ತೆರವು

ದಾಸರಹಳ್ಳಿ ವಲಯದ ಚೊಕ್ಕಸಂದ್ರ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ಅನಧಿಕೃತವಾಗಿ ನಿರ್ಮಿಸಿದ ಆರು ಅಂತಸ್ತುಗಳ ಕಟ್ಟಡ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಬುಧವಾರ ಆರಂಭಿಸಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ ವಲಯದ ಚೊಕ್ಕಸಂದ್ರ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ಅನಧಿಕೃತವಾಗಿ ನಿರ್ಮಿಸಿದ ಆರು ಅಂತಸ್ತುಗಳ ಕಟ್ಟಡ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಬುಧವಾರ ಆರಂಭಿಸಿದೆ.

ಚೊಕ್ಕಸಂದ್ರ ವಾರ್ಡ್-39ರ ವ್ಯಾಪ್ತಿಯ ನಾಗಸಂದ್ರದ ರುಕ್ಮಿಣಿನಗರದಲ್ಲಿ ಸ್ವತ್ತಿನ ಸಂಖ್ಯೆ 1 ಮತ್ತು 2ರಲ್ಲಿ ಕಟ್ಟಡ ಮಾಲೀಕರಾದ ಜೋಜಿ ಜಾಕೋಬ್ ಅವರು 40 X 70 ಅಡಿ ವಿಸ್ತೀರ್ಣದ ನಿವೇಶನದಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನೆಲಮಹಡಿ ಹಾಗೂ ಐದು ಅಂತಸ್ತಿನ ಕಟ್ಟಡ ನಿರ್ಮಾಣ ಮಾಡುತ್ತಿದ್ದರು. ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದರೂ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಪಾಲಿಕೆಗೆ ಯಾವುದೇ ಮಾಹಿತಿ ಸಲ್ಲಿಸಿರುವುದಿಲ್ಲ. ಆದ್ದರಿಂದ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ವಲಯ ಆಯುಕ್ತ ಎಚ್.ಸಿ.ಗಿರೀಶ್ ತಿಳಿಸಿದ್ದಾರೆ.

ಎ.ಸಿ.ಸಿ ಶೀಟ್ ಪೆಂಟ್ ಹೌಸ್, ಪ್ಯಾರಾಪೀಟ್ ಗೋಡೆಗಳನ್ನು ಸುಮಾರು 20 ಸಿಬ್ಬಂದಿ ಮೂಲಕ ತೆರವುಗೊಳಿಸಲಾಗುತ್ತಿದೆ. ಕಾರ್ಯಾಚರಣೆ ಪೂರ್ಣಗೊಂಡ ಬಳಿಕ ತೆರವಿನ ವೆಚ್ಚವನ್ನು ಕಟ್ಟಡ ಮಾಲೀಕರಿಂದ ವಸೂಲಿ ಮಾಡಲಾಗುವುದು ಎಂದರು.

ದಾಸರಹಳ್ಳಿ ವಲಯದ ಮುಖ್ಯ ಎಂಜಿನಿಯರ್ ರವಿ, ಕಾರ್ಯಪಾಲಕ ಎಂಜಿನಿಯರ್ ಯಧುಕೃಷ್ಣಾ ಅವರು ಉಪಸ್ಥಿತರಿದ್ದರು.

B.M. PUBLIC SCHOOL
Malavalli Town, Mandya Dist
ADVERTISEMENT FOR THE POST OF PRINCIPAL
Online application are Invited for the post of Principal for CBSE School which is newly opening now next academic year 2025-26 preference for Experienced Candidate
Apply : Email : ramakrishnam915@gmail.com
Mob.: 7411764640
Last Date : 30-11-2024
Sd/- Secretory, B M. Educational Trust (R)

‘ಜೈಲಲ್ಲೂ ಜಾತಿ ತಾರತಮ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಲು ಶಿಕ್ಷೆಗೆ ಒಳಗಾದವರಿಗೆ ಅಲ್ಲಿ ನೀಡುವ ಕೆಲಸಗಳೂ ಜಾತಿ ಆಧಾರಿತವಾಗಿರುತ್ತವೆ. ಶಿಕ್ಷೆ ಮತ್ತು ಮನಪರಿವರ್ತನೆ ಎರಡನ್ನೂ ಮಾಡಬೇಕಾದ ಜೈಲುಗಳು ಸುಧಾರಣೆಗೆ ಒತ್ತು ನೀಡದೇ ಶಿಕ್ಷೆಗಷ್ಟೇ ಒತ್ತು ನೀಡುತ್ತಿವೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ತಿಳಿಸಿದರು.

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನ್ಯಾಯ ಪ್ರತಿಪಾದನೆ ಪತ್ರಿಕೆ ‘ನ್ಯಾಯ ಸಂಕಲ್ಪ’ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಜೈಲುಗಳಲ್ಲಿ ತಳಸ್ತರದ ಜಾತಿಯವರಿಗೆ ಕಸಗುಡಿಸುವ, ಚರಂಡಿ ತೊಳೆಯುವ ಕೆಲಸಗಳನ್ನು ನೀಡಲಾಗುತ್ತದೆ. ಪ್ರಬಲ ಜಾತಿಯವರಿಗೆ ಪಾತ್ರೆ ತೊಳೆಯುವುದು, ಅಡುಗೆ ಕೆಲಸ, ಅಕೌಂಟೆಂಟ್ ಮತ್ತಿತರ ಬರವಣಿಗೆ ಕೆಲಸ ನೀಡಲಾಗುತ್ತದೆ. ಪ್ರಭಾವಿ ಕೈದಿಗಳಿಗೆ ಊಟ, ಮದ್ಯ ಸಹಿತ ಎಲ್ಲವೂ ಹೊರಗಿನಿಂದ ಬರುತ್ತಿದೆ. ಇಂಥ ವ್ಯವಸ್ಥೆ ಬದಲಾಗಬೇಕಿದೆ. ‘ನ್ಯಾಯ ಸಂಕಲ್ಪ’ ಧ್ವನಿ ಎತ್ತಬೇಕು ಎಂದು ಸಲಹೆ ನೀಡಿದರು.

ಜೈಲಲ್ಲಿ ಇರುವವರಲ್ಲಿ ಮೂರನೇ ಒಂದರಷ್ಟು ಮಂದಿ ಮಾತ್ರ ಶಿಕ್ಷೆಗೆ ಒಳಗಾದವರು. ಉಳಿದವರು ವಿಚಾರಣಾಧೀನ ಕೈದಿಗಳು. ಅವರಿಗೂ ಕುಟುಂಬಗಳಿವೆ. ಅದರ ಬಗ್ಗೆ ಇಲ್ಲಿಯವರೆಗೆ ಈ ವ್ಯವಸ್ಥೆ ಯೋಚನೆಯೇ ಮಾಡಿಲ್ಲ. ಸದ್ಯ 1,400 ಮಹಿಳೆಯರು ಕೈದಿಗಳಾಗಿ ಜೈಲಲ್ಲಿದ್ದಾರೆ. ಆದರೆ, ಅವರ ಪುಟ್ಟ ಮಕ್ಕಳೂ ಜೈಲಲ್ಲಿದ್ದಾರೆ. ಅಂಥ ಮಕ್ಕಳ ಸಂಖ್ಯೆ 1,700 ಆಗಿದೆ. ಶಾಲೆಯಲ್ಲಿ ಓದಬೇಕಿದ್ದ, ಹೊರಗೆ ಆಡಬೇಕಿದ್ದ ಈ ಮಕ್ಕಳು ಯಾಕೆ ಶಿಕ್ಷೆ ಅನುಭವಿಸಬೇಕು ಎಂದು ಅವರು ಪ್ರಶ್ನಿಸಿದರು.

ಪಿಯುಸಿಎಲ್ ರಾಷ್ಟ್ರೀಯ ಕಾರ್ಯದರ್ಶಿ ವೈ.ಜೆ. ರಾಜೇಂದ್ರ, ನ್ಯಾಯ ಸಂಕಲ್ಪ ಸಂಪಾದಕ ನೆಲ್ಸನ್ ಪಿ.ರಾಜ್, ಸೇಂಟ್ ಜೋಸೆಫ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಪೌಲಿನ್, ನ್ಯಾಯಕ್ಕಾಗಿ ಸೆರೆವಾಸಿ ಕುಟುಂಬಸ್ಥರ ಸಂಘದ ಸಂಚಾಲಕಿ ಚಂದ್ರಶ್ರೀ, ವಕೀಲೆ ವಂದನಾ ಉಪಸ್ಥಿತರಿದ್ದರು.

ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ವಿರುದ್ಧ ಬ್ಯಾನರ್ ಅಳವಡಿಕೆ, ಅವಹೇಳನಕಾರಿ ಕರಪತ್ರ ಮುದ್ರಿಸಿ ಹಂಚಿಕೆ ಪ್ರಕರಣ

ಮ್ಯಾಜಿಸ್ಟ್ರೇಟ್ ಆದೇಶಕ್ಕೆ ಹೈಕೋರ್ಟ್ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇವಲ ಪುಟಗಳನ್ನು ತುಂಬಿಸುವ ಸಲುವಾಗಿ ಉದ್ದುದ್ದದ ಆದೇಶಗಳನ್ನು ಬರೆಸುವುದು ಸಲ್ಲ’ ಎಂದು ಕ್ರಿಮಿನಲ್ ಪ್ರಕರಣವೊಂದರಲ್ಲಿ ಮ್ಯಾಜಿಸ್ಟ್ರೇಟ್ ಆದೇಶಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ‘ಯಾವುದೇ ಆದೇಶವನ್ನು ಬರೆಸುವ ಮೊದಲಿಗೆ ನಿಮ್ಮ ಮನಸ್ಸು ಮತ್ತು ಬುದ್ಧಿಗೆ ಅನುಗುಣವಾಗಿ ಸಮತೋಲನ ಕಾಪಾಡಿಕೊಳ್ಳಿ. ಸುಮ್ಮನೆ ಕಾಗದದ ಮೇಲೆ ಮಸಿಯನ್ನು ವ್ಯರ್ಥವಾಗಿ ಹರಿಸುವ ಪ್ರಯತ್ನ ಮಾಡಬೇಡಿ’ ಎಂದು ಚಾಟಿ ಬೀಸಿದೆ.

‘ನಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ತುರುವೇಕೆರೆಯ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ಮತ್ತು ಜೆಡಿಎಸ್‌ನ ಸ್ಥಳೀಯ ಘಟಕದ ಮುಖ್ಯಸ್ಥ ಸ್ವಾಮಿ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಾದ ಆದೇಶದಲ್ಲಿ ವಿವರಿಸಿದೆ.

‘ಯಾವುದೇ ದೂರಿನ ಅಪರಾಧಿಕ ಕಲಂಗಳನ್ನು ವಿಚಾರಣೆಗೆ ಪರಿಗಣಿಸುವಾಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಸಾಕಷ್ಟು ಆಸ್ಥೆ ವಹಿಸಬೇಕು. ಅನವಶ್ಯಕ ಆದೇಶಗಳನ್ನು ಹೊರಡಿಸಬಾರದು ಎಂದು ಹೈಕೋರ್ಟ್, ಮ್ಯಾಜಿಸ್ಟ್ರೇಟ್‌ಗಳಿಗೆ ಪದೇ ಪದೇ ನಿರ್ದೇಶಿಸುತ್ತಲೇ ಬಂದಿದೆ. ಆದರೂ, ಇದನ್ನು ಗಮನಿಸದೇ ಇರುವುದು ಸರಿಯಲ್ಲ’ ಎಂದು ನ್ಯಾಯಪೀಠ ಅತೃಪ್ತಿ ಹೊರಹಾಕಿದೆ.

ಪ್ರಕರಣವೇನು?: ಎಂ.ಟಿ.ಕೃಷ್ಣಪ್ಪ ಮತ್ತು ಸ್ವಾಮಿ ವಿರುದ್ಧ ತುರುವೇಕೆರೆ ತಾಲ್ಲೂಕು ಘಟಕದ ಬಿಜೆಪಿ ಅಧ್ಯಕ್ಷ ಎಚ್.ಎಸ್. ವಿಶ್ವನಾಥ್ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

‘ತುರುವೇಕೆರೆ ತಾಲ್ಲೂಕು ಕಚೇರಿ ಮುಂಭಾಗ, ನಗರದ ಎಲ್ಲಾ ವಾರ್ಡು ಮತ್ತು ಹೋಬಳಿಗಳಲ್ಲಿ ಮಸಾಲೆ ಜಯರಾಮ್ (ಅಂದಿನ ಸ್ಥಳೀಯ ಶಾಸಕ) ಅವರ ಮಾನ ಮರ್ಯಾದೆ ಹಾಳು ಮಾಡುವಂತಹ ಬ್ಯಾನರ್‌ಗಳನ್ನು ಅಳವಡಿಸಿ, ಅವಹೇಳನಕಾರಿ ಕರಪತ್ರಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ಹಂಚಲಾಗಿದೆ. ಬ್ಯಾನರ್ ಮತ್ತು ಕರಪತ್ರಗಳಲ್ಲಿ ಮಸಾಲೆ ಜಯರಾಮ್ ವಿರುದ್ಧದ ಮಾಡಿರುವ ಆರೋಪಗಳೆಲ್ಲಾ ಸುಳ್ಳು. ಆದ್ದರಿಂದ, ಇದಕ್ಕೆ ಕಾರಣವಾಗಿರುವ ಕೃಷ್ಣಪ್ಪ ಮತ್ತು ಸ್ವಾಮಿ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಬೇಕು’ ಎಂದು ದೂರಿನಲ್ಲಿ ವಿವರಿಸಿದ್ದರು.

ಇದರನ್ವಯ ಸ್ಥಳೀಯ ಪೊಲೀಸರು ಭಾರತೀಯ ದಂಡ ಸಂಹಿತೆ–1860ರ ಕಲಂ 504 ಮತ್ತು 34ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಕುರಿತಾದ ದೂರನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರು ವಿಚಾರಣೆಗೆ ಪರಿಗಣಿಸಿದ್ದರು. ಈ ಪ್ರಕರಣ ರದ್ದುಗೊಳಿಸುವಂತೆ ಕೋರಿ ಎಂ.ಟಿ.ಕೃಷ್ಣಪ್ಪ ಮತ್ತು ಸ್ವಾಮಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಾವಿತ್ರಿ ವಿರುದ್ಧದ ಅರ್ಜಿ ಮರು ಪರಿಶೀಲನೆಗೆ ಆದೇಶ

ಬೆಂಗಳೂರು: ‘ನಕ್ಸಲ್ ಚಟುವಟಿಕೆಯಲ್ಲಿ ಭಾಗಿಯಾದ ಆರೋಪದಡಿ ಕೇರಳ ಪೊಲೀಸರಿಂದ ಬಂಧನಕ್ಕೆ ಒಳಗಾಗಿರುವ ಸಾವಿತ್ರಿ ವಿರುದ್ಧ ಬಾಡಿ ವಾರಂಟ್ ಜಾರಿಗೊಳಿಸಬೇಕು ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಮನವಿಯನ್ನು ಮರು ಪರಿಶೀಲಿಸಿ’ ಎಂದು ಬೆಳ್ತಂಗಡಿಯ ಜೆಎಂಎಫ್‌ಸಿ ವಿಚಾರಣಾ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಬೆಳ್ತಂಗಡಿಯ ವೇಣೂರು ಠಾಣಾ ಪೊಲೀಸರು ಸಲ್ಲಿಸಿದ್ದ ಎರಡು ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, ‘ನಕ್ಸಲ್ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಆರೋಪದಡಿ ಮೂಡಿಗೆರೆ ತಾಲ್ಲೂಕಿನ ಜಾರಿಮನೆಯ ಸಾವಿತ್ರಿ ಅಲಿಯಾಸ್ ಉಷಾ ಬಂಧನಕ್ಕೆ ಒಳಗಾಗಿದ್ದಾರೆ. ಸದ್ಯ ಆಕೆ ಕೇರಳದ ತ್ರಿಶ್ಯೂರ್ ಜೈಲಿನಲ್ಲಿ ದ್ದಾರೆ. ಆದರೆ, 2012ರಲ್ಲಿ ಬೆಳ್ತಂಗಡಿಯ ವೇಣೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರನ್ನು ವಿಚಾರಣೆಗೆ ಒಳಪಡಿಸುವ ಅಗತ್ಯವಿದೆ. ಸಾವಿತ್ರಿ ವಿರುದ್ಧ ಬಾಡಿ ವಾರಂಟ್ ಜಾರಿಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ಬೆಳ್ತಂಗಡಿ ವಿಚಾರಣಾ ನ್ಯಾಯಾಲಯ 2022ರ ಜೂನ್‌ನಲ್ಲಿ ವಜಾಗೊಳಿಸಿದೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಪುರಸ್ಕರಿಸಿದ ನ್ಯಾಯಪೀಠ, ‘ಪೊಲೀಸರ ಮನವಿಯನ್ನು ಮರು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಿ’ ಎಂದು ಪ್ರಕರಣವನ್ನು ಬೆಳ್ತಂಗಡಿಯ ಎಸಿಜೆ ಮತ್ತು ಜೆಎಂಎಫ್‌ಸಿ ಕೋರ್ಟ್‌ಗೆ ಹಿಂದಿರುಗಿಸಿತು. ಅಂತೆಯೇ ಎರಡೂ ಅರ್ಜಿಗಳನ್ನು ವಿಲೇವಾರಿ ಮಾಡಿತು.

‘ಯತ್ನಾಳ್ ಅಭಿಯಾನಕ್ಕೆ ಕಡಿವಾಣ ಹಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ನೋಟಿಸ್ ವಿರುದ್ಧ ಪ್ರತ್ಯೇಕ ಹೋರಾಟ ನಡೆಸುವುದಾಗಿ ಪ್ರಕಟಿಸಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣಕ್ಕೆ ಬಿ.ವೈ.ವಿಜಯೇಂದ್ರ ನಿಷ್ಠರ ಬಣ ಸಡ್ಡು ಹೊಡೆದಿದೆ. ಯತ್ನಾಳ ಬಣದ ಜನ ಜಾಗೃತಿ ಅಭಿಯಾನಕ್ಕೆ ಕಡಿವಾಣ ಹಾಕಬೇಕು ಎಂದು ಪಕ್ಷದ ವರಿಷ್ಠರನ್ನು ಆಗ್ರಹಿಸಿದೆ.

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರ ನಿವಾಸದಲ್ಲಿ ಬುಧವಾರ ವಿಜಯೇಂದ್ರ ನಿಷ್ಠರ ಸಭೆ ನಡೆಯಿತು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ‘ಅಗತ್ಯ ಬಿದ್ದರೆ ದೆಹಲಿಗೆ ಹೋಗಿ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಭೇಟಿ ಮಾಡಿ ರಾಜ್ಯದ ಬೆಳವಣಿಗೆ ಕುರಿತು ಚರ್ಚೆ ನಡೆಸುತ್ತೇವೆ’ ಎಂದರು.

‘ವಕ್ಫ್ ಮಂಡಳಿ ವಿರುದ್ಧ ಯತ್ನಾಳ್ ನೇತೃತ್ವದ ಭಿನ್ನಮತೀಯರು ನಡೆಸಲು ಉದ್ದೇಶಿಸಿರುವ ಜನಜಾಗೃತಿ ಅಭಿಯಾನ ತಡೆಯಲು ತಕ್ಷಣವೇ ಮಧ್ಯಪ್ರವೇಶಿಸಬೇಕು. ಪಕ್ಷದ ಅಧ್ಯಕ್ಷ ವಿಜಯೇಂದ್ರ ಅವರ ನೇತೃತ್ವದಲ್ಲಿ ವಿವಿಧ ತಂಡಗಳಲ್ಲಿ ನಡೆಯುವ ‘ನಮ್ಮ ಭೂಮಿ ನಮ್ಮ ಹಕ್ಕು’ ಹೋರಾಟದಲ್ಲಿ ಅವರು ಭಾಗಿಯಾಗಬೇಕೆಂದು ವರಿಷ್ಠರಿಗೆ ಮನವಿ ಮಾಡಲು ತೀರ್ಮಾನಿಸಲಾಯಿತು’ ಎಂದು ಅವರು ತಿಳಿಸಿದರು.

‘ಪಕ್ಷದ ಅಧ್ಯಕ್ಷರೇ ಹೋರಾಟ ಮತ್ತು ಪ್ರತಿಭಟನೆಗಳಿಗೆ ಸಾರಥ್ಯ ವಹಿಸುವುದು ಸಂಪ್ರದಾಯ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಯತ್ನಾಳ, ರಮೇಶ ಜಾರಕಿಹೊಳಿ, ಕುಮಾರ್ ಬಂಗಾರಪ್ಪ, ಅರವಿಂದ ಲಿಂಬಾವಳಿ ಮತ್ತಿತರರು ಅಭಿಯಾನ ನಡೆಸಲು ಹೊರಟಿದ್ದು, ಕಾರ್ಯಕರ್ತರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು’ ಎಂದರು.

‘ಬಿ.ಎಸ್.ಯಡಿಯೂರಪ್ಪ ಮತ್ತು ವಿಜಯೇಂದ್ರ ನಾಯಕತ್ವದ ವಿರುದ್ಧ ಅಪಸ್ವರ ಎತ್ತುತ್ತಿರುವ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ ರೇಣುಕಾಚಾರ್ಯ, ‘ವಕ್ಫ್ ವಿರುದ್ಧ ಹೋರಾಟ ನಡೆಸಲು ತಂಡ ರಚನೆ ಮಾಡುತ್ತಾರೆ ಎಂಬ ಮಾಹಿತಿ ಗೊತ್ತಾಗುತ್ತಿದ್ದಂತೆ, ಅದಕ್ಕೆ ಪರ್ಯಾಯವಾಗಿ ಅಭಿಯಾನ ನಡೆಸಲು ಮುಂದಾಗಿದ್ದಾರೆ. ವಾಸ್ತವವಾಗಿ ಇದನ್ನು ಹೈಜಾಕ್ ಮಾಡಿದವರೇ ಯತ್ನಾಳ್ ಮತ್ತು ಅವರ ತಂಡ’ ಎಂದರು.

ಸಭೆಯಲ್ಲಿ ಮಾಜಿ ಸಚಿವ ಬಿ.ಸಿ.ಪಾಟೀಲ, ಎಸ್.ಕೆ.ಬೆಳ್ಳುಬ್ಬಿ, ಮಾಡಾಳ್ ವಿರೂಪಾಕ್ಷಪ್ಪ, ರೂಪಾಲಿನಾಯ್ಕ್, ಸುನಿಲ್ ವಲ್ಯಾಪುರೆ, ಸುನಿಲ್ ನಾಯ್ಕ, ನಾಗೇಂದ್ರ, ವೈ.ಸಂಪಂಗಿ, ನಿರಂಜನಕುಮಾರ್, ವೆಂಕಟಮುನಿಯಪ್ಪ ಸೇರಿ ಹಲವು ಮಾಜಿ ಶಾಸಕರು ಭಾಗವಹಿಸಿದ್ದರು.

‘ಸರ್ಕಾರದ ಕಚೇರಿಗಳಿಗೆ ಬೀಗ ಹಾಕಿ ಪ್ರತಿಭಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಬಡವರಿಗೆ ಬಿಪಿಎಲ್ ಪಡಿತರ ಚೀಟಿ ಮರಳಿ ನೀಡಬೇಕು. ಪಡಿತರ ಚೀಟಿ ರದ್ದು ಪ್ರಕ್ರಿಯೆ ತಕ್ಷಣವೇ ನಿಲ್ಲಿಸದಿದ್ದರೆ ರಾಜ್ಯದಾದ್ಯಂತ ಸರ್ಕಾರಿ ಕಚೇರಿಗಳಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಎಚ್ಚರಿಕೆ ನೀಡಿದರು.

ಮಹಾಲಕ್ಷ್ಮಿ ವಿಧಾನಸಭಾ ಕ್ಷೇತ್ರದ ವೃಷಭಾವತಿ ನಗರ, ನಂದಿನಿ ಬಡಾವಣೆಗಳಲ್ಲಿ ಬಿಪಿಎಲ್ ಪಡಿತರ ಚೀಟಿ ರದ್ದುಗೊಂಡ ಕುಟುಂಬದವರನ್ನು ಭೇಟಿ ಮಾಡಿ ಸಮಸ್ಯೆಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಕೆ.ಗೋಪಾಲಯ್ಯ ಇದ್ದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, ‘ಜನರಿಗೆ ಅನ್ನ ಕೊಡಬೇಕಿದ್ದ ಸರ್ಕಾರ ಅನ್ನಕ್ಕೇ ಕನ್ನ ಹಾಕುವ ಕೆಲಸ ಮಾಡಿದೆ. ಯಾರೂ ಹಸಿವಿನಿಂದ ಸಾಯಬಾರದು ಎಂಬ ಪ್ರಜ್ಞೆ ಸರ್ಕಾರಕ್ಕೆ ಇರಬೇಕು. ಬಿಪಿಎಲ್ ಕಾರ್ಡ್ ಕಳೆದುಕೊಂಡವರು ಯಾರೂ ಶ್ರೀಮಂತರಲ್ಲ, ಕಾರಿನಲ್ಲಿ ಓಡಾಡುವುದಿಲ್ಲ. ಎರಡು ವರ್ಷದ ಮಗು ಇರುವ ಮಹಿಳೆ ಗಾರ್ಮೆಂಟ್ ಕೆಲಸಕ್ಕೆ ಹೋಗಲು ಆಗುತ್ತಿಲ್ಲ. ಅಂಗವಿಕಲ ವ್ಯಕ್ತಿಯೊಬ್ಬರು ರಸ್ತೆ ಬದಿಯಲ್ಲಿ ಬಜ್ಜಿ ಮಾರಾಟ ಮಾಡುತ್ತಿದ್ದು, ಅನಾರೋಗ್ಯದಿಂದಾಗಿ ಕೆಲಸಕ್ಕೆ ಹೋಗುತ್ತಿಲ್ಲ. ಇಂತಹ ಬಡ ಕುಟುಂಬದ ಜನರ ಮನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನ ಹಾಕಿದ್ದಾರೆ’ ಎಂದು ಹೇಳಿದರು.

14 ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಅವರಿಗೆ ಸಾಮಾನ್ಯ ಪ್ರಜ್ಞೆಯೂ ಇಲ್ಲ. ಬ್ಯಾಂಕಿನಲ್ಲಿ ಸಾಲ ಪಡೆಯಲು ಕೂಡ ಆದಾಯ ತೆರಿಗೆ ವಿವರ ಸಲ್ಲಿಸಬೇಕಾಗುತ್ತದೆ. ಇದನ್ನು ಅರಿಯದೇ ಕಾಂಗ್ರೆಸ್ ಸರ್ಕಾರ ಪಡಿತರ ಚೀಟಿಗಳನ್ನು ರದ್ದುಪಡಿಸಿದೆ. ಈಗ 11 ಲಕ್ಷ ಕಾರ್ಡ್ ರದ್ದುಪಡಿಸಿದ್ದು, ಇನ್ನೂ 14 ಲಕ್ಷ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತದೆ ಎಂಬ ಮಾಹಿತಿ ಇದೆ. ಪಡಿತರ ಚೀಟಿ ರದ್ದು ಮಾಡುವುದಕ್ಕೂ ಮೊದಲು ನೋಟಿಸ್ ನೀಡಬೇಕಿತ್ತು. ಎಲ್ಲರೂ ಆದಾಯ ತೆರಿಗೆ ಪಾವತಿಸುತ್ತಿದ್ದಾರೆ ಎಂದು ಕಣ್ಣಿಲ್ಲದ ಸರ್ಕಾರ ಹೇಳಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ADMISSION CORNER ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

THIS IS TO NOTIFY the General Public that our client proposes to purchase the below mentioned Schedule property from Smt. Narayanamma, wife of Chandrappa.M C, Aged about 53 years residing at: Maliyappanahalli, Doddakadathur, Malur Taluk, Kolar District, Karnataka - 563130, who has represented that she acquired ownership and possession to the Schedule Property pursuant to the Judgment and Decree passed in O.S No.359/2008 on the file of Civil Judge Junior Division, at Malur. Persons objecting for the proposed purchase or having any right in the Schedule property may lodge their objections and/or claims with the undersigned along with supporting documentary evidence within Fifteen days from the date of this publication and objections and/or claims received thereafter will not be binding on our client and our client will proceed to purchase the Schedule property as if there are no claims/objections.

:SCHEDULE PROPERTY:

All the Agricultural land measuring 1 Acre 20 Guntas in Sy.No.30/7, (Old Sy.No. 30/1A), situated at Maliyappanahalli Village, Kasaba Hobli, Malur Taluk, Kolar district and bounded by:-

East : Land in Sy.No165/3 & Sy.No31 of Achappa;
West : Land in Sy.No.25/1 of Prakash;
North : Land in Sy.No.30/6 of Narayanamma w/o Venkataraya;
South : Land in Sy.No.30/3 of S. Shivaraja.

YASEEN BABU,
ABDUL AMEEN.M,
K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001.
Ph : +91 9845855933
email: kmlegaladvocates@gmail.com
Place: Bangalore **Date:** 21/11/2024

PUBLIC NOTICE

I, **D M Renuka,** W/o D T Muthappa, residing at No. 75/2, 5th Cross, Ramaiah Layout, Kodipalya, Kengeri, Bengaluru-560060, affirm that my original **Sale Deed bearing Reg. No. BNG(U)-KNGR/30272/ 2004-2005. Page 10-10 dated 18-11-2004** has been lost during shifting the house. If found Contact: **9845559969, 9036450099**

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

MSME LOANS:WE arrange msme business loans against your existing or new businesses also.Contact: 7204995189

JOB OPPORTUNITIES

Marketing & Sales

RAJSHEKAR DEVELOPERS hiring Tele-Callers and Field SalesExecutive with good communication in Kannada and English (Read, Write and Speak)Should have experience in real estate field with deal closing skills. LocationRajarajeshwari nagar Bangalore. Call 8951920083

ST. JOHN'S HIGH SCHOOL
132, St. John's Church Road, Bangalore – 560 005
(MANAGED BY CHURCH OF SOUTH INDIA - KARNATAKA CENTRAL DIOCESE)
NURSERY & L.K.G.ADMISSION NOTICE 2025-2026
Nursery & L.K.G Application Forms for the Academic Year 2025-2026 will be available online at the school website: www.johnshighedu.com, from 20th November 2024 to 6th December 2024.
Applications must be submitted online through the website mentioned above. The submission of applications will close on Friday, 6th December 2024 at 5.00 p.m.
NURSERY: Minimum age : 3 years, Maximum age: 4 years } as on 1st June 2025
L.K.G: Minimum age : 4 years, Maximum age: 5 years } as on 1st June 2025
PRINCIPAL

BISHOP COTTON GIRLS' SCHOOL
St. Mark's Road, Bengaluru - 560001
(Managed by Church of South India - Karnataka Central Diocese)
L.K.G. application forms for the academic year 2025-2026 will be available online at the school website: https://bishopcottongirls.com from 20th November, 2024
Applications must be submitted online. The Submission of applications will close on 4th December 2024 at 5:00 p.m.
Minimum age: 4 years, Maximum age: 5 years } as on 1st June 2025
PRINCIPAL
ROUNAQH

HEALTH SPECIAL ಕ್ಲಾಸಿಫೈಡ್ಸ್

BISHOP COTTON BOYS' SCHOOL
Residency Road, Bengaluru-560 025
(Managed by Church of South India - Karnataka Central Diocese)
L.K.G. ADMISSION NOTICE 2025-2026
L.K.G. application forms for the Academic Year 2025-2026 will be available online at the school website: www.bishopcottonboysschool.edu.in from 20th November, 2024
Applications must be submitted online. The submission of applications will close on 4th December 2024 at 5.00 p.m.
Minimum age: 4 years, Maximum age: 5 years } as on 1st June 2025
PRINCIPAL
ROUNAQH

केन्द्रीय... ಕೇಂದ್ರೀಯ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ
केन्द्रीय विनिर्माणकारी प्रौद्योगिकी संस्थान
Central Manufacturing Technology Institute cmti
(An Autonomous R&D Institute, Under Ministry of Heavy Industries, Govt. of India)
Tumkur Road, Bengaluru - 560022
Advt. No. CMTI/Gen Admn/01/2024

TENDER NOTICE- PROVIDING CANTEEN SERVICES AT CMTI

Sealed Tenders are invited from the reputed Canteen Contractors who have experience in the relevant field of not less than Three Years and who possess Valid Licenses & Valid Registration Numbers under the E.P.F. & E.S.I Act for Providing Canteen Services at CMTI for a period of **Three Years.**

Tender forms containing complete details may be obtained from the Senior Administrative Officer, on payment of Rs.1,770/- inclusive of G.S.T. (nonrefundable) by cash or DD drawn in favour of CMTI, on all working days between **10.00 Hrs. to 15:00 Hrs. from 21.11.2024 onwards. The application can also be downloaded from the website and submit their Tender Forms along with DD on or before 14:00 Hrs. on 12.12.2024** in a sealed envelope super-scribing **"Tender for Providing Canteen Services at CMTI".**

For further details, please visit our website: **www.cmti.res.in**

PERSONAL

Change of Name

CHANGE OF NAME
I, **BALACHANDRAN** S/o M. Nathan Residing at Flat No. 307, Santosh-S.R. Residency, 10th Cross, Sanjeevappa Layout, Nagavarapalya, C.V. Raman Nagar, Bengaluru-560093 have changed my name to **N. BALACHANDRAN** vide affidavit dated 19.11.2024 before Notary Gangaraju B.N, Bangalore. Henceforth I shall be known as **N. BALACHANDRAN** only.

CHANGE OF NAME
I, **Pooja Borkar Amit Gulati,** residing at # 6112, Embassy Pristine, Iblur, Bellandur, Bangalore-560102 , have changed my name to **POOJA BORKAR** vide affidavit dated 19/11/2024 before Notary S.I. Balaguru, Bengaluru. Henceforth I shall be called as **POOJA BORKAR** only

I, MENDOLE ANITA SADANAND, R/a B-407 4th floor, Sky Gold Aeroview Apartment, Chikkasanne Doddasanne Post, Devanahalli- 562110 have changed my name to ANITA vide affidavit dated 18.11.2024 before Notary K.H. Venkatappa, Chickballapur.

CHANGE OF NAME
I, **Prema Handatta Shankara Narayana @ Prema H S @ Prema V.M. Holla,** R/at No.21/3, Savithri Nilaya, Gurusarwabouma Nagar, Bangalore-560039, have changed my name to **PREMA HOLLA,** vide affidavit dated 13.11.2024, before notary S.R. Thulasikrishna. Bangalore

I, SANDHYA NAIDU BABU NAIDU, R/a 1201, Ward No. 8, M.G. Road, near Maralsideshwara Temple, Chickballapur- 562101 have changed my name to SANDHYA NAIDU vide affidavit dated 18.11.2024 before Notary K.H. Venkatappa, Chickballapur.

I, SWETHA PRASANNA KUMAR, R/a 2034, Prabha Nilaya, Ward No. 25, OMB Road, Chickballapur- 562101 have changed my name to SWETHA DONTHI PRASANNA KUMAR vide affidavit dated 18.11.2024 before Notary K.H. Venkatappa, Chickballapur.

I ABDUL saleem Mohamed badeb sab I have changed my name Abdul Saleem S/o Mohamed bade sab R/o Qureshi mohalla Shorapur Dist Yadgir Karnataka 585224 For all purposes

CHANGE OF NAME
I, **Mohanakumar.K.N. Alias Mohan Kumar.K.N ,** R/at No.88, Kodihalli, doddakunche, Hassan-573211, declare that the above names pertain to me and henceforth I shall be known as **MOHAN KUMAR K.N.,** vide affidavit dated 15.11.2024, before notary Devaraja E, Bangalore

Lost

DOCUMENT LOST
I, Albert Mascarenhas Residing at Flat No.D1, Shalom Apartment, Father Muller Road, Mangalore-575002, have lost my Original GPA Document executed on 29.5.2007 **Documet No. 113096, 113097, 113098, 113099, 113100 While in transit. Finder Please Contact: 9740457973**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ಶಾದಿ ಡಾಟ್‌ಕಾಂನಲ್ಲಿ ಕಲಾವಿದೆಗೆ ವಂಚಿಸಿದ ಸೈಬರ್ ಖದೀಮರು

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚಕರು ಹಣ ಸುಲಿಗೆಗೆ ದಿನಕ್ಕೊಂದು ತಂತ್ರ ಹೂಡುತ್ತಿದ್ದಾರೆ. 'ಶಾದಿ ಡಾಟ್‌ಕಾಂ'ನಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದ ಅವಿವಾಹಿತೆಯೊಬ್ಬರಿಗೆ ವಂಚಿಸಿ ಲಕ್ಷಾಂತರ ರೂಪಾಯಿ ದೋಚಿದ್ದಾರೆ.

43 ವರ್ಷ ವಯಸ್ಸಿನ ಕಲಾವಿದೆ 'ಸೈಬರ್ ವಂಚಕರ ತಂತ್ರ'ಕ್ಕೆ ಸಿಲುಕಿ ಹಂತ ಹಂತವಾಗಿ ₹8.21 ಲಕ್ಷ ಕಳೆದುಕೊಂಡಿದ್ದಾರೆ.

ಈ ದೂರುದಾರೆಯು ಕೆಂಗೇರಿಯ ಮೈಲಸಂದ್ರ ಎನ್‌ಕ್ಲೇವ್‌ನಲ್ಲಿ ಕುಟುಂಬದ ಸದಸ್ಯರ ಜತೆಗೆ ನೆಲಸಿದ್ದಾರೆ. ಹಣ ಕಳೆದುಕೊಂಡಿರುವ ಸಂಬಂಧ ಪಶ್ಚಿಮ ವಿಭಾಗದ ಸೈಬರ್ ಅಪರಾಧ ಠಾಣೆಗೆ ಅವರು ದೂರು ಸಲ್ಲಿಸಿದ್ದು, ವಂಚಕರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318 (ಮೋಸ) ಹಾಗೂ 319ರ (ವಂಚನೆ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಮರ್ರೈನ್ ಎಂಜಿನಿಯರ್ ಸೋಗಿನಲ್ಲಿ ವಂಚಿಸಿದ್ದ ಸೈಬರ್ ಕಳ್ಳನಿಗಾಗಿ ಪೊಲೀಸರು ಶೋಧ ಆರಂಭಿಸಿದ್ದಾರೆ.

'ಮದುವೆ ಮಾಡಿಕೊಳ್ಳಲು ಯುವಕನನ್ನು ಕಲಾವಿದೆ ಹುಡುಕಾಡುತ್ತಿದ್ದರು. ಏಪ್ರಿಲ್ 2ರಂದು 'ಶಾದಿ ಡಾಟ್ ಕಾಂ'ನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದರು. ಹತ್ತು ದಿನಗಳ (ಏಪ್ರಿಲ್ 12ರಂದು) ಬಳಿಕ ಅಜಯ್ ಅಗರ್‌ವಾಲ್ ಎಂಬ ಹೆಸರಿನಲ್ಲಿ ವಂಚಕ ಮದುವೆಯ ಕೋರಿಕೆ ಕಳುಹಿಸಿದ್ದ. ಆತನ ಮದುವೆ ಕೋರಿಕೆಯನ್ನು ಕಲಾವಿದೆ ಸ್ವೀಕರಿಸಿದ್ದರು. ಇಬ್ಬರೂ ವಾಟ್ಸ್‌ಆ್ಯಪ್ ಸಂಖ್ಯೆಯನ್ನು ಬದಲಾವಣೆ ಮಾಡಿಕೊಂಡಿದ್ದರು. ಅದೇ ವೇಳೆ ಮರ್ರೈನ್ ಎಂಜನಿಯರ್ ಆಗಿ ಕೆಲಸ ಮಾಡುತ್ತಿರುವುದಾಗಿ ಆರೋಪಿ ತನ್ನನ್ನು ಪರಿಚಯ ಮಾಡಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

ದಾಳಿ ತಂತ್ರ: 'ಇಬ್ಬರೂ ವಾಟ್ಸ್‌ಆ್ಯಪ್‌ನಲ್ಲಿ ಪ್ರತಿನಿತ್ಯ ಚರ್ಚೆ ನಡೆಸುತ್ತಿದ್ದರು. ಈ ಮಧ್ಯೆ, ಮೇ ಅಂತ್ಯದಲ್ಲಿ ಮುಂಬೈಗೆ ಬರುವುದಾಗಿ ವಂಚಕ ಸಂದೇಶ ಕಳುಹಿಸಿದ್ದ. ಕಲಾವಿದೆ ಅದನ್ನೇ ನಂಬಿ, ಕಾದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅಮೆರಿಕದಿಂದ ಮುಂಬೈಗೆ ಬರುತ್ತಿದ್ದ ಹಡಗಿನ ಮೇಲೆ ಕಳ್ಳರು ದಾಳಿ ನಡೆಸಿದ್ದಾರೆ ಎಂದು ಮೇ 22ರಂದು ಅಜಯ್ ಅಗರ್‌ವಾಲ್ ಸಂದೇಶ ಕಳುಹಿಸಿದ್ದ. ಹಡಗಿನ ಕ್ಯಾಪ್ಟನ್ ಸಮೀಪದ ಬಂದರಿಗೆ ತಲುಪಿದ್ದಾರೆ. ತಮ್ಮಲ್ಲಿರುವ ವಸ್ತುಗಳು ಹಾಗೂ ದಾಖಲಾತಿಗಳನ್ನು ನಿಮ್ಮ ಮನೆಯವರಿಗೆ ಲಾಜಿಸ್ಟಿಕ್ ಕಂಪನಿಯ ಮೂಲಕ ಕಳುಹಿಸುವಂತೆ ಕೋರಿದ್ದಾರೆ. ಭಾರತದಲ್ಲಿ ನಮ್ಮ ಕಡೆಯವರು ಯಾರೂ ಇಲ್ಲ ಎಂದು ಹೇಳಿ, ಕಲಾವಿದೆಯ ವಿಳಾಸ ಕೇಳಿದ್ದ. ಆ ಮಾತು ನಂಬಿದ್ದ ಕಲಾವಿದೆ, ವಾಟ್ಸ್‌ಆ್ಯಪ್‌ನಲ್ಲಿ ವಿಳಾಸ ಕಳುಹಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಹಣ ಪಾವತಿಸಿದ್ದ ಕಲಾವಿದೆ: 'ವಿಳಾಸ ಕಳುಹಿಸಿ ಕೆಲವೇ ಹೊತ್ತಿನಲ್ಲಿ ಕಲಾವಿದೆಗೆ ಕರೆ ಮಾಡಿದ್ದ ಮತ್ತೊಬ್ಬ ವ್ಯಕ್ತಿ, ಲಾಜಿಸ್ಟಿಕ್ ಕಂಪನಿಯ ಪ್ರತಿನಿಧಿ ಎಂಬುದಾಗಿ ಪರಿಚಯಿಸಿಕೊಂಡಿದ್ದ. ನಿಮ್ಮ ಪತಿ ಅಜಯ್ ಅಗರ್‌ವಾಲ್ ವಿಳಾಸ ಕಳುಹಿಸಿದ್ದಾರೆ ಎಂದು ನಂಬಿಕೆ ಬರುವಂತೆ ಮಾತನಾಡಿದ್ದ. ದಾಖಲಾತಿಗಳನ್ನು ನಿಮ್ಮ ಮನೆಗೆ ತಲುಪಿಸುವುದಕ್ಕೆ ₹63,300 ಆಡಳಿತಾತ್ಮಕ, ನೋಂದಣಿ ಶುಲ್ಕ ಆಗಲಿದ್ದು, ಹಣ ನೀಡುವಂತೆ ಕೋರಿದ್ದ. ಬಳಿಕ, ಅಗರ್‌ವಾಲ್‌ಗೆ ಕರೆ ಮಾಡಿದ್ದ ಆಕೆ, ಶುಲ್ಕದ ಬಗ್ಗೆ ವಿಚಾರಿಸಿದ್ದರು. ನಾನು ತುರ್ತು ಕೆಲಸದಲ್ಲಿದ್ದೇನೆ. ಸದ್ಯಕ್ಕೆ ಹಣ ಪಾವತಿಸಿದ್ದರೆ ಬೆಂಗಳೂರಿಗೆ ಬಂದಾಗ ಹಣ ವಾಪಸ್ ನೀಡುತ್ತೇನೆಂದು ಹೇಳಿದ್ದ. ಅದರಂತೆ ಕಲಾವಿದೆ ಹಣ ಪಾವತಿಸಿದ್ದರು. ನಂತರ, ಕಸ್ಟಮ್ಸ್ ಶುಲ್ಕದ ಹೆಸರಿನಲ್ಲಿ ಮತ್ತೆ ₹1.29 ಲಕ್ಷ ಪಡೆದುಕೊಳ್ಳಲಾಗಿತ್ತು' ಎಂದು ಸೈಬರ್ ವಿಭಾಗದ ಪೊಲೀಸರು ಹೇಳಿದರು.

ಆರು ಖಾತೆಯಿಂದ ಹಣ ಸಂದಾಯ

'ಮದುವೆ ಆಗುತ್ತೇನೆಂದು ನಂಬಿಸಿ ದಾಖಲಾತಿ ಕಳುಹಿಸುವ ನೆಪದಲ್ಲಿ ಹಣ ಪಡೆದು ವಂಚಿಸಿದ್ದಾನೆಂದು ನ.8ರಂದು ಆಕೆ ದೂರು ನೀಡಿದ್ದಾರೆ. ಇಬ್ಬರ ಮಧ್ಯೆ ನಡೆದ ವಾಟ್ಸ್‌ಆ್ಯಪ್ ಚಾಟಿಂಗ್‌ನ ಸ್ಕ್ರೀನ್‌ಶಾಟ್ ಹಾಗೂ ಪ್ರಕರಣದ ಮಾಹಿತಿ ಪಡೆಯಲಾಗಿದೆ. ಮೇ 22ರಿಂದ ಸೆಪ್ಟೆಂಬರ್ 29ರ ತನಕ ದೂರುದಾರೆ, ಹಂತ ಹಂತವಾಗಿ ತಮ್ಮ ಹಾಗೂ ಕುಟುಂಬಸ್ಥರ ಹೆಸರಿನ ಆರು ಖಾತೆಗಳಿಂದ ₹8.21 ಲಕ್ಷ ಹಣ ವರ್ಗಾಯಿಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಇ.ವಿ ಶೋರೂಂನಲ್ಲಿ ಬೆಂಕಿ ಅವಘಡ: ಸ್ಥಳಕ್ಕೆ ಎಫ್‌ಎಸ್‌ಎಲ್ ತಜ್ಞರ ಭೇಟಿ

ಮಾಲೀಕ, ಮ್ಯಾನೇಜರ್ ಸೆರೆ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಮೈ ಇ.ವಿ(ಎಲೆಕ್ಟ್ರಿಕ್) ಸ್ಕೂಟರ್ ಶೋರೂಂನಲ್ಲಿ ಸಂಭವಿಸಿದ ಬೆಂಕಿ ಅವಘಡ ಪ್ರಕರಣದಲ್ಲಿ ನಿರ್ಲಕ್ಷ್ಯ ವಹಿಸಿದ ಆರೋಪದಡಿ ಶೋರೂಂ ಮಾಲೀಕ ಹಾಗೂ ವ್ಯವಸ್ಥಾಪಕರನ್ನು ರಾಜಾಜಿನಗರ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದರು. ನಂತರ, ಷರತ್ತುಬದ್ಧ ಜಾಮೀನಿನ ಮೇಲೆ ಇಬ್ಬರೂ ಬಿಡುಗಡೆ ಆಗಿದ್ದಾರೆ.

ಯಶವಂತಪುರದ ನಿವಾಸಿ, ಶೋರೂಂ ಮಾಲೀಕ ಪುನೀತ್‌ಗೌಡ ಅಲಿಯಾಸ್ ಎಚ್.ಜಿ.ಪುನೀತ್(36) ಹಾಗೂ ರಾಜಾಜಿನಗರದ ಆರನೇ ಬ್ಲಾಕ್, ನಾಲ್ಕನೇ ಕ್ರಾಸ್‌ನ ಅಡ್ಡರಸ್ತೆಯ ನಿವಾಸಿಯಾಗಿರುವ ಮಳಿಗೆ ವ್ಯವಸ್ಥಾಪಕ ಜಿ.ಯುವರಾಜ್ ಬಂಧಿತರು.

'ಮಂಗಳವಾರ ಸಂಜೆ ಘಟನೆ ನಡೆದಿತ್ತು. ಅದಾದ ಮೇಲೆ ಇಬ್ಬರೂ ತಲೆಮರೆಸಿ ಕೊಂಡಿದ್ದರು. ನಿರ್ಲಕ್ಷ್ಯ ವಹಿಸಿದ ಆರೋಪದ ಅಡಿ ಇಬ್ಬರನ್ನೂ ಬುಧವಾರ ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಈ ಪ್ರಕರಣದಲ್ಲಿ ವಿಧಿಸಬಹುದಾದ ಶಿಕ್ಷೆ ಪ್ರಮಾಣ ಏಳು ವರ್ಷಕ್ಕಿಂತ ಕಡಿಮೆಯಿದ್ದು, ಇಬ್ಬರಿಗೂ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ' ಎಂದು ಪೊಲೀಸರು ತಿಳಿಸಿದರು.

ಹಾಸನ ತಾಲ್ಲೂಕಿನ ದುದ್ದ ಹೋಬಳಿಯ ಉಲ್ಲೇನಹಳ್ಳಿ ಗ್ರಾಮದ ಪುನೀತ್‌ಗೌಡ ಅವರು ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿ ಇ.ವಿ ಸ್ಕೂಟರ್ ಶೋರೂಂ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಶೋರೂಂನಲ್ಲಿ ಮಂಗಳವಾರ ಸಂಜೆ ಸಂಭವಿಸಿದ ಬೆಂಕಿ ಅನಾಹುತದಲ್ಲಿ ಓಕಳಿಪುರದ ನಿವಾಸಿ, ಹಣಕಾಸು ವಿಭಾಗದಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಪ್ರಿಯಾ(27) ಅವರು ಸಜೀವ ದಹನ ಆಗಿದ್ದರು. ಘಟನೆಯಲ್ಲಿ ದಿಲೀಪ್ ಸೇರಿದಂತೆ ಮೂವರು ಗಾಯಗೊಂಡಿದ್ದರು. ಘಟನೆಯಲ್ಲಿ 25ಕ್ಕೂ ಹೆಚ್ಚು ಇ.ವಿ ಸ್ಕೂಟರ್‌ಗಳು ಬೆಂಕಿಗೆ ಆಹುತಿ ಆಗಿವೆ.

ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿ ಮಂಗಳವಾರ ಸಂಜೆ ಸಂಭವಿಸಿದ ಬೆಂಕಿ ಅವಘಡದಿಂದ ಸುಟ್ಟು ಹೋದ ಇ.ವಿ ಶೋರೂಂ ಅನ್ನು ಜನರು ಬುಧವಾರ ಕುತೂಹಲದಿಂದ ವೀಕ್ಷಿಸುತ್ತಿರುವುದು

ಪ್ರಜಾವಾಣಿ ಚಿತ್ರ

ಕೊಠಡಿಯತ್ತ ಓಡಿದ್ದರೇ ಯುವತಿ?: ಘಟನೆ ನಡೆದಾಗ ಶೋರೂಂನಲ್ಲಿ ಏಳು ಮಂದಿ ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಬ್ಯಾಟರಿಗಳ ಸ್ಫೋಟದಿಂದ ಉಂಟಾದ ಶಬ್ದಕ್ಕೆ ಹೆದರಿದ ಆರು ಮಂದಿ ಹೊರಕ್ಕೆ ಓಡಿಬಂದು ಪ್ರಾಣ ಉಳಿಸಿಕೊಂಡಿದ್ದರು. ಪ್ರಿಯಾ ಅವರು ಶೋರೂಂ ಒಳಗಿದ್ದ ಕೊಠಡಿಯತ್ತ ತೆರಳಿದ್ದರು. ಅಲ್ಲಿಂದ ವಾಪಸ್ ಬರಲು ಅವರಿಗೆ ಸಾಧ್ಯವಾಗಿರಲಿಲ್ಲ ಎಂದು ಮೂಲಗಳು ಹೇಳಿವೆ.

ಘಟನೆಗೆ ಕಾರಣ ಪತ್ತೆಹಚ್ಚಲು ಅಗ್ನಿಶಾಮಕ ದಳ, ಪೊಲೀಸ್ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಬುಧವಾರ ಬೆಳಿಗ್ಗೆ ಎಫ್‌ಎಸ್‌ಎಲ್ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕೆಲವು ಮಾದರಿಗಳನ್ನು ಸಂಗ್ರಹಿಸಿ, ವೈಜ್ಞಾನಿಕ ಪರಿಶೀಲನೆಗೆ ಕೊಂಡೊಯ್ದರು ಎಂದು ಗೊತ್ತಾಗಿದೆ.

'ವಿದ್ಯುತ್ ಮಾರ್ಗದಲ್ಲಿ ಉಂಟಾದ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿತೇ ಅಥವಾ ಎಲೆಕ್ಟ್ರಿಕ್ ಸ್ಕೂಟರ್‌ಗಳ ಬ್ಯಾಟರಿ ಸ್ಫೋಟ ಸಂಭವಿಸಿದೆಯೆ? ಎಂಬುದು ತನಿಖೆಯಿಂದ ಗೊತ್ತಾಗಲಿದೆ' ಎಂದು ಪೊಲೀಸರು ತಿಳಿಸಿದರು.

ಬ್ಯಾಟರಿ ಸ್ಫೋಟ?

ಚಾರ್ಜ್‌ಗೆ ಹಾಕಿದ್ದ ಬ್ಯಾಟರಿಯೊಂದು ಸ್ಫೋಟಗೊಂಡಿದ್ದರಿಂದ ಅಗ್ನಿ ಅವಘಡ ಸಂಭವಿಸಿದೆ ಎಂಬ ಶಂಕೆ ವ್ಯಕ್ತವಾಗಿದೆ.

ಶಬ್ದದ ನಂತರ ಹೊರಕ್ಕೆ ಬಂದು ವೀಕ್ಷಿಸಿದೆವು. ಆ ವೇಳೆ ಶೋರೂಂ ಹೊತ್ತಿ ಉರಿಯುತ್ತಿತ್ತು. ಕೆಲವರು ಕಿರುಚಿಕೊಂಡು ಹೊರಕ್ಕೆ ಬರುತ್ತಿದ್ದರು. ಅದಾದ ಮೇಲೆ ಬ್ಯಾಟರಿಗಳು ಸ್ಫೋಟವಾಗುವ ಶಬ್ದ ಕೇಳಿಸುತ್ತಲೇ ಇತ್ತು ಎಂದು ಘಟನೆಯ ಪ್ರತ್ಯಕ್ಷದರ್ಶಿಯಾಗಿದ್ದ ಸ್ಥಳೀಯರೊಬ್ಬರು ತಿಳಿಸಿದರು.

ಪ್ರಿಯಾ ಕುಟುಂಬಸ್ಥರ ಆಕ್ರಂದನ

ಪ್ರಿಯಾ ಅವರ ಮೃತದೇಹದ ಮರಣೋತ್ತರ ಪರೀಕ್ಷೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆಯಿತು. ಬಳಿಕ, ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು.

'ಮಗಳು ಲೆಕ್ಕ ಪರಿಶೋಧಕ(ಸಿ.ಎ) ಪರೀಕ್ಷೆ ತೆಗೆದುಕೊಂಡಿದ್ದಳು. ಮನೆಯ ಜವಾಬ್ದಾರಿ ಹೊತ್ತುಕೊಂಡಿದ್ದಳು. ಅವಳೇ ಇಲ್ಲ' ಎಂದು ಪ್ರಿಯಾ ಕುಟುಂಬಸ್ಥರು ಕಣ್ಣೀರು ಸುರಿಸಿದರು.

ಗಾಂಜಾ ಮಾರಾಟಕ್ಕೆ ಸಿದ್ಧತೆ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ವೇಳೆ ಗಾಂಜಾ ಮಾರಾಟಕ್ಕೆ ಸಿದ್ದತೆ ನಡೆಸಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ವರು ಆರೋಪಿಗಳನ್ನು ಮಡಿವಾಳ ಹಾಗೂ ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದಿಂದ ಗಾಂಜಾ ತರಿಸಿಕೊಂಡು ನಗರದಲ್ಲಿ ಮಾರಾಟಕ್ಕೆ ಮುಂದಾಗಿದ್ದ ಅಸ್ಸಾಂನ ಮೊಹಿಸಿನ್ ಬರಬುಯಾ(25), ಒಡಿಶಾದ ಅಭಯ್ ಕುಮಾರ್ (26), ಚಿರೋನ್ ನಾಯಕ್(26) ಅವರನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ₹4.20 ಲಕ್ಷ ಮೌಲ್ಯದ 7 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಅಭಯ್

ಚಿರೋನ್

ಮೊಹಿಸೀನ್

ಮಡಿವಾಳ ಸಮೀಪದ ಪಬ್‌ವೊಂದರಲ್ಲಿ ಆರೋಪಿಗಳಾದ ಮೊಹಿಸಿನ್ ಮತ್ತು ಅಭಯ್ ಕೆಲಸ ಮಾಡುತ್ತಿದ್ದರು. ಕ್ರಿಸ್‌ಮಸ್, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಗಾಂಜಾಕ್ಕೆ ಬಾರಿ ಬೇಡಿಕೆ ಇರುತ್ತದೆ. ಪಬ್‌ಗಳಲ್ಲಿ ಗಾಂಜಾ ಮಾರಾಟ ನಡೆಸಬಹುದು ಎಂದು ಅವರಿಬ್ಬರು ಯೋಜಿಸಿದ್ದರು. ಗಾಂಜಾ ತಂದುಕೊಡುವಂತೆ ಮತ್ತೊಬ್ಬ ಆರೋಪಿ ಚಿರೋನ್‌ಗೆ ಸೂಚಿಸಿದ್ದರು. ಆತ ಕೆಲವು ದಿನಗಳ ಹಿಂದಷ್ಟೇ ಗಾಂಜಾ ತಂದಿದ್ದ. ಖಚಿತ ಮಾಹಿತಿ ಆಧರಿಸಿ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮಡಿವಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬನ್ನಪ್ಪ ರಸ್ತೆ ಬಳಿ ಗಾಂಜಾ ಇಟ್ಟುಕೊಂಡು ಮಾರಾಟಕ್ಕೆ ಸಿದ್ದತೆ ನಡೆಸಿದ್ದ ಆರೋಪಿಯನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋರಮಂಗಲದ ಪ್ರವೀಣ್(30) ಬಂಧಿತ. ಆರೋಪಿಯಿಂದ ₹4 ಲಕ್ಷ ಮೌಲ್ಯದ 12 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ಆರೋಪಿ ಮಹಾರಾಷ್ಟ್ರದಿಂದ ಗಾಂಜಾವನ್ನು ಕಡಿಮೆ ಬೆಲೆಗೆ ತರಿಸಿ, ನಗರದಲ್ಲಿ ಮಾರಾಟಕ್ಕೆ ಮುಂದಾಗಿದ್ದ ಎಂದು ಪೊಲೀಸರು ಹೇಳಿದರು. ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದ್ಯದ ಅಮಲಿನಲ್ಲಿ ಗಲಾಟೆ: ವ್ಯಕ್ತಿ ಕೊಲೆ

ಬೆಂಗಳೂರು: ಉಪ್ಪಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ತ್ರಿವೇಣಿ ಚಿತ್ರಮಂದಿರದ ಬಳಿ ಮಂಗಳವಾರ ರಾತ್ರಿ ಎರಡು ಗುಂಪುಗಳ ಮಧ್ಯೆ ನಡೆದ ಗಲಾಟೆಯಲ್ಲಿ ವ್ಯಕ್ತಿಯೊಬ್ಬರನ್ನು ಥಳಿಸಿ ಕೊಲೆ ಮಾಡಲಾಗಿದೆ.

ಕೊಲೆಯಾದ ವ್ಯಕ್ತಿ ನಾಗೇಶ್ ಎಂದು ಹೇಳಲಾಗಿದ್ದು, ನಿಖರವಾದ ವಿಳಾಸ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದರು. ಮೃತ ವ್ಯಕ್ತಿ ಕೂಲಿ ಕೆಲಸ ಮಾಡುತ್ತಿದ್ದರು. ಅವರ ಜೇಬಿನಲ್ಲಿ ಯಾವುದೇ ಗುರುತಿನ ಚೀಟಿಗಳು ಸಿಕ್ಕಿಲ್ಲ ಎಂದು ಪೊಲೀಸರು ತಿಳಿಸಿದರು.

'ಚಿತ್ರಮಂದಿರದ ಬಳಿ ಏಳು ಮಂದಿ ಮಧ್ಯೆ ಗಲಾಟೆ ನಡೆದಿದೆ. ಆಗ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ ಆರೋಪಿಗಳು ಪರಾರಿ ಆಗಿದ್ದಾರೆ. ಆರೋಪಿಗಳ ಪತ್ತೆಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು. ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿತ್ರಾವಳಿ

ರಾಜರಾಜೇಶ್ವರಿ ನಗರದ ಬಿಎಚ್‌ಇಎಲ್ ಬಡಾವಣೆಯಲ್ಲಿ ನಡೆದ 45ನೇ ವರ್ಷದ ಕಾರ್ತಿಕ ಮಾಸದ ದೀಪೋತ್ಸವದಲ್ಲಿ ನಾಟ್ಯ ಕಲಾ ತರಂಗ, ನಾಟ್ಯ ಶಾಸ್ತ್ರ ಡಾನ್ಸ್ ಅಕಾಡೆಮಿಯ ವಿದ್ಯಾರ್ಥಿಗಳು ಶಿವ ತಾಂಡವ ನೃತ್ಯ ಪ್ರದರ್ಶಿಸಿದರು

ಚನ್ನೇನಹಳ್ಳಿ ಬಳಿ ಇರುವ ವಿಶ್ವಪ್ರಜ್ಞಾ ಅಕಾಡೆಮಿ ಶಾಲೆಯಲ್ಲಿ ನಡೆದ ಮಕ್ಕಳ ಜಾನಪದ ಜಾತ್ರೆ'ಗೆ ಶಾಸಕ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು. ಬಿಬಿಎಂಪಿ ಮಾಜಿ ಸದಸ್ಯ ಎಂ. ಶಿವರಾಜು, ಕರ್ನಾಟಕ ಜಾನಪದ ಅಕಾಡೆಮಿ ನಿರ್ದೇಶಕ ಗೊಲ್ಲಹಳ್ಳಿ ಶಿವಪ್ರಸಾದ್, ಶಾಲೆಯ ಪ್ರಾಂಶುಪಾಲರಾದ ಕಾತ್ಯಾಯಿನಿ ಭಟ್ಟ, ಶಾಲಾ ಆಡಳಿತ ಮಂಡಳಿ ಸದಸ್ಯರಾದ ಲಕ್ಷ್ಮಿ ಕೇಶವ, ವಾಸುದೇವ ಭಟ್, ಉಷಾ ನಾಥನ್, ಕುಣಿಗಲ್ ರಾಮಚಂದ್ರ ಉಪಸ್ಥಿತರಿದ್ದರು

ಕೆ.ಆರ್‌.ಪುರ ಬಳಿ ಗೆದ್ದಲಹಳ್ಳಿಯ ಬಿಡಿಎಸ್ ಗಾರ್ಡನ್ ವೆಲ್‌ಫೇರ್ ಅಸೋಸಿಯೇಷನ್‌ನಿಂದ ಕನ್ನಡ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿತ್ತು. ರಾಜ್ಯೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆದವು. ಅಸೋಸಿಯೇಷನ್ ಅಧ್ಯಕ್ಷ ಕೆ.ರಮೇಶ್ ಕುಮಾರ್, ಅಂಜಿನಪ್ಪ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು

ನೆಲಮಂಗಲ ಸಮೀಪದ ನಗರೂರಿನ ಬಿಜಿಎಸ್ ಆಸ್ಪತ್ರೆಯವರು ಮಧುಮೇಹ ನಿಯಂತ್ರಣ ಸಪ್ತಾಹದ ಅಂಗವಾಗಿ ಆಯೋಜಿಸಿದ್ದ ವಾಕಥಾನ್‌ನಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದ ಆಸ್ಪತ್ರೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು

ಬಾಹ್ಯಾಕಾಶ ಕರಡು ನೀತಿ ಬಿಡುಗಡೆ

ರಾಜ್ಯದಲ್ಲಿ ಬಾಹ್ಯಾಕಾಶ ಸಂಶೋಧನೆ ಮತ್ತು ಉದ್ಯಮವನ್ನು ಉತ್ತೇಜಿಸುವ 'ಕರ್ನಾಟಕ ಬಾಹ್ಯಾಕಾಶ ನೀತಿ: 2024–29' ಕರಡನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಬಿಡುಗಡೆ ಮಾಡಿದೆ. ಈಗಾಗಲೇ ಜಾರಿಯಲ್ಲಿರುವ ಬಾಹ್ಯಾಕಾಶ ನೀತಿ: 2022–27ರ ಅಂಶಗಳ ಜತೆಗೆ ಹೊಸ ಅಂಶಗಳನ್ನೂ ಇದು ಒಳಗೊಂಡಿದೆ

ಕೌಶಲ ಅಭಿವೃದ್ಧಿ

- ಈ ನೀತಿ ಜಾರಿಯಲ್ಲಿರುವ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಪ್ರಾಯೋಗಿಕ ತರಬೇತಿ
- ಎಂಜಿನಿಯರಿಂಗ್ ಮತ್ತು ವಿಜ್ಞಾನ ಪದವಿ ಹಂತದಲ್ಲೇ ಬಾಹ್ಯಾಕಾಶ ಸಂಶೋಧನೆಗೆ ಪ್ರತ್ಯೇಕ ಕೋರ್ಸ್
- ಇಸ್ರೊ ಸಹಯೋಗದಲ್ಲಿ ಕೌಶಲ ತರಬೇತಿ ಕೋರ್ಸ್ ರೂಪಿಸಲು ಅವಕಾಶ

5,000
ಈ ನೀತಿಯ ಅವಧಿಯಲ್ಲಿ ತರಬೇತಿ ಪಡೆಯಲಿರುವವರ ಸಂಖ್ಯೆ

1,500
ಈ ನೀತಿಯ ಅವಧಿಯಲ್ಲಿ ತರಬೇತಿ ಪಡೆಯುವವರಲ್ಲಿ ಯುವತಿಯರ ಸಂಖ್ಯೆ

ಹೂಡಿಕೆ ಉತ್ತೇಜನ

- ಬಾಹ್ಯಾಕಾಶ ಉದ್ಯಮ ಸ್ಥಾಪನೆಗೆ ₹100 ಕೋಟಿ ಹೂಡಿಕೆ ಮಾಡುವವರಿಗೆ ವಿಶೇಷ ಪ್ಯಾಕೇಜ್
- ನವೋದ್ಯಮಗಳಿಗೆ ಶೇ 20ರಿಂದ ಶೇ 25ರವರೆಗೆ ಬಂಡವಾಳ ಸಹಾಯಧನ
- ಮುದ್ರಾಂಕ ಶುಲ್ಕ ವಿನಾಯತಿ, ಭೂ ಪರಿವರ್ತನೆ ಶುಲ್ಕ ವಾಪಸಾತಿ
- ರಿಯಾಯತಿ ದರದಲ್ಲಿ ವಿದ್ಯುತ್ ಮತ್ತು ನೀರು ಪೂರೈಕೆ

ಮೂಲಸೌಕರ್ಯ

- ಬಾಹ್ಯಾಕಾಶ ನೌಕೆಗಳು, ಎಂಜಿನ್‌ಗಳು, ಉಪಗ್ರಹಗಳ ಅಭಿವೃದ್ಧಿಗೆ ಅಗತ್ಯವಾದ ಮೌಲಸೌಕರ್ಯ ಸ್ಥಾಪನೆ. ಪರೀಕ್ಷಾ ಕೇಂದ್ರಗಳ ಸ್ಥಾಪನೆ
- ರಾಜ್ಯದಲ್ಲಿ ಬಾಹ್ಯಾಕಾಶ ನೌಕೆ ಉಡ್ಡಯನ ಕೇಂದ್ರ ಸ್ಥಾಪನೆಯ ಕಾರ್ಯಸಾಧ್ಯತೆ ಪರಿಶೀಲನೆ
- ಭಾರತದ್ದೇ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಗೆ ಅಗತ್ಯ ಸಂಶೋಧನೆ ಕೈಗೊಳ್ಳಲು ಸಹಯೋಗ ಮತ್ತು ಸಂಶೋಧನೆ
- ಬಾಹ್ಯಾಕಾಶ ಸಂಶೋಧನಾ ಪಾರ್ಕ್ ಸ್ಥಾಪನೆ

ಜಲ ಸಂರಕ್ಷಣೆ: ನೆದರ್‌ಲೆಂಡ್‌ನ ಟೆಕ್ನಿಮ್ಯಾಕ್ಸ್ ಎಂ.ಡಿ ಜೋ ಚೆರಿಯನ್ ಸಲಹೆ

'ಸೋರಿಕೆ ತಡೆಯೇ ಪರಿಹಾರ'

● ಜಯಸಿಂಹ ಆರ್.

ಬೆಂಗಳೂರು: 'ನಿಮ್ಮ ಮನೆಯ ನಲ್ಲಿಗಳಲ್ಲಿ ರಾತ್ರಿ ವೇಳೆ ನೀರು ಸೋರುವುದನ್ನು ನಿಲ್ಲಿಸಿದರೆ, ಶೇ 8ರಿಂದ ಶೇ 10ರಷ್ಟು ನೀರನ್ನು ಉಳಿಸಬಹುದು' ಎಂದು ನೆದರ್‌ಲೆಂಡ್‌ನ ಟೆಕ್ನಿಮ್ಯಾಕ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜೋ ಚೆರಿಯನ್ ಹೇಳಿದರು.

ತಂತ್ರಜ್ಞಾನ ಶೃಂಗದಲ್ಲಿ 'ನೀರಿನ ಪ್ರತಿ ಹನಿಯೂ ಮುಖ್ಯ' ವಿಷಯ ಕುರಿತ ಸಂವಾದದಲ್ಲಿ ಅವರು ಮಾಡಿದ ಈ ಪ್ರತಿಪಾದನೆ ಮೇಲೆ ಚರ್ಚೆ ನಡೆಯಿತು. ಸಭಿಕರೊಬ್ಬರು, 'ರಾತ್ರಿ ವೇಳೆಯೇ ನೀರು ಹೆಚ್ಚು ಸೋರಿಕೆ ಆಗುವುದು ಏಕೆ' ಎಂದು ಪ್ರಶ್ನಿಸಿದರು.

ಅದಕ್ಕೆ ಜೋ, 'ರಾತ್ರಿಯ ವೇಳೆ ಎಲ್ಲ ನಲ್ಲಿಗಳ ಬಳಕೆ ನಿಲ್ಲುತ್ತದೆ. ಆದರೆ ಓವರ್ ಹೆಡ್ ಟ್ಯಾಂಕ್‌ನಿಂದ ಕೆಳಗಿಳಿಯುವ ನೀರಿನ ಒತ್ತಡ ಕಡಿಮೆ ಆಗಿರುವುದಿಲ್ಲ. ಹೀಗಾಗಿ ನಲ್ಲಿಗಳು ಸೋರಲಾರಂಭಿಸುತ್ತವೆ. ನೀರಿನ ಒತ್ತಡವನ್ನು ಕಡಿಮೆ ಮಾಡಲು, ವಾಲ್ವ್ ತಿರುಗಿಸಿ' ಎಂದರು.

ಮತ್ತೊಬ್ಬ ಸಭಿಕರು, 'ಪ್ರತಿದಿನವೂ ವಾಲ್ವ್ ಅನ್ನು ತಿರುಗಿಸುವುದು ಕಾರ್ಯಸಾಧುವೇ' ಎಂದು ಪ್ರಶ್ನಿಸಿದರು.

'ರಾತ್ರಿ ವೇಳೆ ಈ ಕೆಲಸವನ್ನು ಸ್ವಯಂಚಾಲಿತವಾಗಿ ಮಾಡುವ ಸಾಧನಗಳನ್ನು ನೆದರ್‌ಲೆಂಡ್‌ನಲ್ಲಿ ಅಭಿವೃದ್ಧಿ ಪಡಿಸಲಾಯಿತು. ಇದರಿಂದ ನೀರಿನ ಸೋರಿಕೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಯಿತು' ಎಂದರು.

ನೆದರ್‌ಲೆಂಡ್‌ನ ಹೈಡ್ರೊಲೂಪ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಲೆಕ್ಸಾಂಡರ್ ಎಲ್ಯೂರ್, 'ಭಾರತದ ಮೆಟ್ರೊ ನಗರಗಳಲ್ಲಿ ಬಳಕೆಯಾಗುವ ನೀರಿನಲ್ಲಿ ಶೇ 40ರಷ್ಟು, ಶೌಚಾಲಯದ ಫ್ಲಶ್, ಕಾರು, ಮನೆ ಅಂಗಳ, ಪಾತ್ರೆ ಮತ್ತು ಬಟ್ಟೆ ಸ್ವಚ್ಛತೆಗೇ ಬಳಕೆಯಾಗುತ್ತದೆ. ಇದರಲ್ಲಿ ಬಹುತೇಕ ನೀರನ್ನು ಮರುಬಳಕೆ ಮಾಡಬಹುದು. ಇದರಿಂದ ನಗರಗಳಲ್ಲಿನ ನೀರಿನ ಬೇಡಿಕೆಯನ್ನು ಶೇ 30ರಿಂದ 35ರವರೆಗೂ ಕಡಿಮೆ ಮಾಡಬಹುದು' ಎಂದರು.

ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಮಳಿಗೆಯಲ್ಲಿ ಇರಿಸಲಾಗಿದ್ದ ಸೇನಾ ವಿಮಾನಗಳು, ಕಾವೇರಿ ಎಂಜಿನ್‌ನ ಮಾದರಿಗಳನ್ನು ನೋಡಲು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಪ್ರದರ್ಶನದಲ್ಲಿ ಇರಿಸಿದ್ದ ಮಾದರಿಗಳ ವಿಶೇಷ ಮತ್ತು ಮಹತ್ವವನ್ನು ಸಂಸ್ಥೆಯ ಸಿಬ್ಬಂದಿ ವಿದ್ಯಾರ್ಥಿಗಳಿಗೆ ವಿವರಿಸಿದರು. ವಿವಿಧ ಸೇನಾ ವಿಮಾನಗಳ, ಅರ್ಜುನ ಟ್ಯಾಂಕ್‌ನ ಎಂಜಿನ್‌ಗಾಗಿ ಅಭಿವೃದ್ಧಿ ಪಡಿಸಲಾದ ಟರ್ಬೊ ಚಾರ್ಜರ್, ನೆಲಬಾಂಬ್ ಶೋಧಕ, ಕ್ಷಿಪಣಿ ದಾಳಿ ತಡೆ ವ್ಯವಸ್ಥೆಗಳ ಮಾದರಿಗಳು ಪ್ರದರ್ಶನದಲ್ಲಿ ಇದ್ದವು –ಪ್ರಜಾವಾಣಿ ಚಿತ್ರ: ರಂಜು ಪಿ

ಇನ್ಫೊಸಿಸ್‌ಗೆ 'ಕರ್ನಾಟಕದ ಐ.ಟಿ ರತ್ನ' ಪ್ರಶಸ್ತಿ

2023–24ನೇ ಆರ್ಥಿಕ ವರ್ಷದಲ್ಲಿ ₹15,000 ಕೋಟಿಗೂ ಹೆಚ್ಚು ಮೌಲ್ಯದ ಮಾಹಿತಿ ತಂತ್ರಜ್ಞಾನ ಸೇವೆ ರಫ್ತು ಮಾಡಿದ ಇನ್ಫೊಸಿಸ್‌ಗೆ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾವು 'ಕರ್ನಾಟಕದ ಐ.ಟಿ ರತ್ನ' ಪ್ರಶಸ್ತಿ ನೀಡಿದೆ.

ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಒಟ್ಟು 26 ಕಂಪನಿಗಳಿಗೆ ವಿವಿಧ 'ಐ.ಟಿ ರಫ್ತು ಪ್ರಶಸ್ತಿ'ಗಳನ್ನು ಪ್ರದಾನ ಮಾಡಲಾಯಿತು.

₹15,000 ಕೋಟಿಗಿಂತಲೂ ಕಡಿಮೆ ಮೊತ್ತದ ಮಾಹಿತಿ ತಂತ್ರಜ್ಞಾನ ಸೇವೆ ರಫ್ತು ಮಾಡಿದ 11 ಕಂಪನಿಗಳಿಗೆ, 'ಕರ್ನಾಟಕದ ಐ.ಟಿ ಹೆಮ್ಮೆ' ಪ್ರಶಸ್ತಿ ಪ್ರದಾನ ಮಾಡಲಾಯಿತು.

'ನಗರದಲ್ಲಿ ಶೇ 30ರಷ್ಟು ಜಿಸಿಸಿ'

● ಗಂಜಿ ಆದಿಶೇಷ

ಬೆಂಗಳೂರು: ದೇಶದಲ್ಲಿ ಒಟ್ಟು 2,975 ಜಾಗತಿಕ ಸಾಮರ್ಥ್ಯ ಕೇಂದ್ರಗಳಿವೆ (ಜಿಸಿಸಿ). ಈ ಪೈಕಿ ಬೆಂಗಳೂರಿನಲ್ಲಿ 875ಕ್ಕೂ ಹೆಚ್ಚು ಜಿಸಿಸಿಗಳಿವೆ. ಒಟ್ಟಾರೆ ಶೇ 30ಕ್ಕೂ ಹೆಚ್ಚು ಪಾಲನ್ನು ಹೊಂದಿದ್ದು, ಶೇ 35ರಷ್ಟು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ನಾಸ್ಕಾಂನ ಪ್ರಾದೇಶಿಕ ನಿರ್ದೇಶಕ ಭಾಸ್ಕರ್ ವರ್ಮಾ ಹೇಳಿದರು.

'ಮೇಕಿಂಗ್ ಬೆಂಗಳೂರು ದಿ ಜಿಸಿಸಿ ಹೆಡ್ ಕ್ವಾರ್ಟರ್ ಆಫ್ ದ ವರ್ಲ್ಡ್' ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, '500 ಹೊಸ ಜಿಸಿಸಿಗಳನ್ನು ರಾಜ್ಯವು ಆಕರ್ಷಿಸುವ ಗುರಿ ಹೊಂದಿದೆ' ಎಂದರು.

'ಐ.ಟಿ ವ್ಯವಸ್ಥೆ, ವ್ಯಾಪಾರ ಚಟುವಟಿಕೆ, ಉದ್ಯೋಗಿಗಳು, ಮೂಲಸೌಕರ್ಯ ಸೇರಿ ಹಲವಾರು ಅಂಶಗಳು ರಾಜ್ಯದಲ್ಲಿ ಜಿಸಿಸಿ ಸ್ಥಾಪನೆಗೆ ಪೂರಕವಾದ ಪರಿಸರವನ್ನು ಸೃಷ್ಟಿಸಿವೆ. ಇದು ಜಿಸಿಸಿ ಕೇಂದ್ರಗಳನ್ನು ತನ್ನತ್ತ ಆಕರ್ಷಿಸುತ್ತಿದೆ' ಎಂದು ಎಚ್‌ಎಸ್‌ಬಿಸಿ ಟೆಕ್ನಾಲಜಿ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಪ್ರದೀಪ್ ಮೆನನ್ ಹೇಳಿದರು.

'ಭವಿಷ್ಯಕ್ಕೆ ಬೇಕಾದ ತಂತ್ರಜ್ಞಾನದ ಅಗತ್ಯವಿದೆ. ಯುಪಿಐ ವಹಿವಾಟಿನಿಂದ ನಗದು ಚಲಾವಣೆ ಕಡಿಮೆಯಾಗಿದೆ. ಇದು ದೇಶದ ಆರ್ಥಿಕ ಪ್ರಗತಿಗೆ ಸಹಕಾರಿಯಾಗಿದೆ' ಎಂದು ಫಿಡೆಲಿಟಿ ವೆಲ್ತ್ ಆ್ಯಂಡ್ ಬ್ರೋಕರೇಜ್‌ನ ಮುಖ್ಯಸ್ಥ ವಿಜಯ್ ಕಿಶನ್ ಅಭಿಪ್ರಾಯಪಟ್ಟರು.

ಎಸ್‌ವಿಪಿ ಆ್ಯಂಡ್ ಟಾರ್ಗೆಟ್ ಇನ್ ಇಂಡಿಯಾದ ಅಧ್ಯಕ್ಷೆ ಆಂಡ್ರಿಯಾ ಝಿಮ್ಮರ್‌ಮ್ಯಾನ್ ಅವರು ಅಭಿಪ್ರಾಯ ಹಂಚಿಕೊಂಡರು.

ಬೆಂಗಳೂರಿಗೆ ಬೇಕು ಅದರದ್ದೇ ಪರಿಹಾರ...

'ಮಳೆ ಮತ್ತು ವಾತಾವರಣದ ದತ್ತಾಂಶಗಳನ್ನು ಬಳಸಿಕೊಂಡು ಪ್ರವಾಹವನ್ನು ಮೊದಲೇ ಅಂದಾಜಿಸುವ ಹಾಗೂ ಅದರ ಪರಿಣಾಮಗಳನ್ನು ತಡೆಗಟ್ಟುವ ಕ್ರಮಗಳನ್ನು ನೆದರ್‌ಲೆಂಡ್ ಕೈಗೊಂಡಿದೆ. ಬೆಂಗಳೂರಿನಲ್ಲೂ ಇಂತಹ ಕೆಲಸ ಮಾಡಬಹುದು'ಎಂದು ಭಾರತದಲ್ಲಿನ ನೆದರ್‌ಲೆಂಡ್ ಹೈಕಮಿಷನರ್ ಮರಿಸಾ ಗೆರಾರ್ಡ್ಸ್ ಸಂವಾದದಲ್ಲಿ ಹೇಳಿದರು.

ಅದನ್ನು ಪ್ರಶ್ನಿಸಿದ ಸಭಿಕರೊಬ್ಬರು, 'ಈಚೆಗೆ ಸ್ಪೇನ್‌ನಲ್ಲಿ ಬಾರಿ ಪ್ರವಾಹ ಉಂಟಾಗಿತ್ತು. ಅಷ್ಟು ಮುಂದುವರಿದ ದೇಶಗಳಲ್ಲೇ ಪ್ರವಾಹ ಸ್ಥಿತಿ ಎದುರಿಸಲು ಸಾಧ್ಯವಾಗದೇ ಇದ್ದರೆ, ಬೆಂಗಳೂರಿನಲ್ಲಿ ಹೇಗೆ ಸಾಧ್ಯ' ಎಂದರು. ಸಭಿಕರ ಮಧ್ಯೆಯೇ ಇದ್ದ ಸ್ಪೇನ್‌ನ ತಂತ್ರಜ್ಞರೊಬ್ಬರು, 'ದತ್ತಾಂಶಗಳಲ್ಲಿ ಲೆಕ್ಕಾಚಾರದಲ್ಲಿನ ಲೋಪದಿಂದ ಪ್ರವಾಹ ಅಂದಾಜಿಸುವಲ್ಲಿ ಸಮಸ್ಯೆ ಆಗಿತ್ತು. ಎಲ್ಲ ನಗರಗಳಿಗೂ ಒಂದೇ ಪರಿಹಾರ ಅನ್ವಯವಾಗುವುದಿಲ್ಲ. ಬೆಂಗಳೂರಿಗೆ ಅದರದ್ದೇ ಆದ ಪರಿಹಾರವನ್ನು ರೂಪಿಸಬೇಕಾಗುತ್ತದೆ' ಎಂದರು.

'ಬೆಂಗಳೂರು ತಂತ್ರಜ್ಞಾನದ ಕೇಂದ್ರ'

ರಾಹುಲ್ ಚಾರಿ

ಬೆಂಗಳೂರು ತಂತ್ರಜ್ಞಾನದ ಕೇಂದ್ರವಾಗಿದ್ದು, ಭಾರತದ ಯಾವುದೇ ನಗರವು ಬೆಂಗಳೂರಿನಷ್ಟು ಅಭಿವೃದ್ಧಿಯಾಗಿಲ್ಲ ಎಂದು ಫೋನ್ ಪೇ ಸಹ–ಸಂಸ್ಥಾಪಕ ಮತ್ತು ಸಿಟಿಒ ರಾಹುಲ್ ಚಾರಿ ಅಭಿಪ್ರಾಯಪಟ್ಟರು.

'ಬೆಂಗಳೂರು ಲೀಡಿಂಗ್ ಇನ್ನೋವೇಶನ್ ಇನ್ ಫಿನ್‌ಟೆಕ್ ಆ್ಯಂಡ್ ಬಿಯಾಂಡ್' ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ಡಿಜಿಟಲ್ ವಹಿವಾಟು ಆರಂಭವಾದಾಗಿನಿಂದ ವಂಚನೆ ಪ್ರಕರಣಗಳು ಸಹ ದಾಖಲಾಗುತ್ತಿವೆ. ಇದರ ತಡೆಗೆ ತಂತ್ರಜ್ಞಾನವನ್ನು ರೂಪಿಸಲಾಗಿದೆ. ಗ್ರಾಹಕರು ಸಹ ವಂಚನೆಗೆ ಒಳಗಾಗದಂತೆ ಎಚ್ಚರವಹಿಸಬೇಕು. ಇಂತಹ ಪ್ರಕರಣವು ಗಮನಕ್ಕೆ ಬಂದರೆ ಪೊಲೀಸ್ ಇಲಾಖೆ, ಸೈಬರ್ ಕ್ರೈಂ ಸಹಾಯ ಪಡೆದುಕೊಳ್ಳಬೇಕಿದೆ ಎಂದು ಚರ್ಚೆಯಲ್ಲಿ ಭಾಗವಹಿಸಿದ್ದ ಸಭಿಕರ ಪ್ರಶ್ನೆಯೊಂದಕ್ಕೆ ರಾಹುಲ್ ಚಾರಿ ಉತ್ತರಿಸಿದರು.

ಮಣ್ಣಿನ ಪರೀಕ್ಷೆಗೆ 'ಅಗ್ರಿಸೆನ್ಸ್'

ರೈತರು ಮಣ್ಣಿನ ಪರೀಕ್ಷೆ ಮಾಡಿಸಲು ಪರೀಕ್ಷಾ ಕೇಂದ್ರಗಳಿಗೆ ಹೋಗುವ ಅವಶ್ಯಕತೆ ಇಲ್ಲ. ಸ್ವತಃ ರೈತರೇ ಮಣ್ಣಿನ ಪರೀಕ್ಷೆ ಮಾಡಬಹುದಾದ 'ಅಗ್ರಿಸೆನ್ಸ್' ಎಂಬ ಸಾಧನವನ್ನು ಐಐಐಟಿಬಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ.

'ಅಗ್ರಿಸೆನ್ಸ್ ಮೂಲಕ ರೈತರು ತಮ್ಮ ಜಮೀನಿನ ಮಣ್ಣನ್ನು ಒಂದು ಕುಂಡದಲ್ಲಿ ಸಂಗ್ರಹಿಸಿ ಈ ಸಾಧನವನ್ನು ಅದರಲ್ಲಿ ಅಳವಡಿಸಬೇಕು. ನಂತರ ಮಣ್ಣಿನ ಗುಣಮಟ್ಟವನ್ನು ಅಧ್ಯಯನ ಮಾಡಿ ದತ್ತಾಂಶ ಸಂಗ್ರಹಿಸಿ ರೈತರ ಮೊಬೈಲ್ ಸಂಖ್ಯೆಗೆ ಸಂದೇಶದ ಮೂಲಕ ರವಾನಿಸಲಿದೆ. ಈ ದತ್ತಾಂಶಗಳನ್ನು ಅಧ್ಯಯನ ಮಾಡಿ ಮಣ್ಣಿಗೆ ಬೇಕಾಗುವ ಪೋಷಕಾಂಶಗಳನ್ನು ನೀಡಬಹುದು. ಇದರ ಬೆಲೆ ₹800 ಇರಲಿದೆ' ಎಂದು ವಿದ್ಯಾರ್ಥಿಗಳಾದ ಕುಶಾಗ್ರಹ ಮತ್ತು ಕಫೀಲ್ ಅಬ್ಬಾಸ್ ಮೋಮಿನ್ ವಿವರಿಸಿದರು.

ವಿದ್ಯಾರ್ಥಿಗಳಿಂದ ಅಭಿವೃದ್ಧಿ: ತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ಬುಟ್ಟಿ

'ರಿಮೋಟ್ ನಿಯಂತ್ರಿತ ಕಸದ ಬುಟ್ಟಿ'

● ಖಲೀಲಅಹ್ಮದ ಶೇಖ

ಬೆಂಗಳೂರು: ನಗರ ಪ್ರದೇಶಗಳಲ್ಲಿ ತ್ಯಾಜ್ಯ ವಿಲೇವಾರಿಯೇ ದೊಡ್ಡ ಸಮಸ್ಯೆ. ಇದಕ್ಕೆ ಪರಿಹಾರ ನೀಡಲು ಬೆಂಗಳೂರು ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ (ಐಐಐಟಿಬಿ) ವಿದ್ಯಾರ್ಥಿಗಳು ಮನೆಗಳಲ್ಲಿ ಉತ್ಪತ್ತಿಯಾಗುವ ಹಸಿ ಮತ್ತು ಒಣ ಕಸವನ್ನು ಒಂದು ತಿಂಗಳೊಳಗೆ ಗೊಬ್ಬರವನ್ನಾಗಿ ಪರಿವರ್ತಿಸುವ 'ರಿಮೋಟ್ ನಿಯಂತ್ರಿತ ಕಸದ ಬುಟ್ಟಿ'ಯನ್ನು ಅಭಿವೃದ್ಧಿಪಡಿಸಿದ್ದಾರೆ.

ಬೆಂಗಳೂರು ಅರಮನೆ ಆವರಣದಲ್ಲಿ ನಡೆಯುತ್ತಿರುವ 'ಬೆಂಗಳೂರು ಟೆಕ್ ಶೃಂಗ'ದಲ್ಲಿ ಈ ಕಸದ ಬುಟ್ಟಿಯನ್ನು ಪ್ರದರ್ಶನಕ್ಕೆ ಇರಿಸಲಾಗಿದೆ.

ಇದಕ್ಕೆ 'ರಿಮೋಟ್ ಕಂಪೋಸ್ಟ್ ಮಾನಿಟರಿಂಗ್ ಫಾರ್ ಸಸ್ಟೆನೇಬಲ್ ಅಗ್ರಿಕಲ್ಚರ್' ಎಂದು ಹೆಸರಿಸಲಾಗಿದೆ. ಐಐಐಟಿಬಿಯ ಪ್ರಾಧ್ಯಾಪಕರಾದ ಜ್ಯೋತ್ಸ್ನಾ ಬಾಪಟ್, ಶಶಿರೇಖಾ ಜಿವಿಕೆ ಅವರ ನೇತೃತ್ವದಲ್ಲಿ ಈ ಸಾಧನವನ್ನು ಅಭಿವೃದ್ಧಿಪಡಿಸಲಾಗಿದೆ.

ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಗ್ರಹಿಸಿ, ಅದನ್ನು ಒಂದೆಡೆ ರಾಶಿ ಹಾಕಲಾಗುತ್ತದೆ. ಇದರಿಂದ ಮೀಥೇನ್, ಇಂಗಾಲದ ಡೈ ಆಕ್ಸೈಡ್ ಸೇರಿದಂತೆ ವಿಷಕಾರಿ ಅನಿಲಗಳು ಹೊರಹೊಮ್ಮುತ್ತವೆ. ಇದು ನಗರದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಈ ಸಮಸ್ಯೆಗೆ ಮನೆಗಳಲ್ಲೇ ಪರಿಹಾರ ಕಂಡುಕೊಳ್ಳಲು ಈ ಕಸದ ಬುಟ್ಟಿಗಳು ಸಹಾಯಕವಾಗಲಿವೆ.

'ನಗರ ಪ್ರದೇಶಗಳಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ, ಬಿಬಿಎಂಪಿ ಕಸ ನಿರ್ವಹಣಾ ಕೇಂದ್ರಗಳಲ್ಲಿ, ರೈತರ ಜಮೀನುಗಳಲ್ಲಿ, ಸಾರ್ವಜನಿಕರು ತಮ್ಮ ಮನೆಗಳಲ್ಲಿ ಈ ಬುಟ್ಟಿಗಳನ್ನು ಅಳವಡಿಸಿಕೊಳ್ಳಬಹುದು. ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸಿ, ಅದನ್ನು ರೈತರಿಗೆ ಮಾರಾಟ ಮಾಡಿ ಆದಾಯ ಪಡೆಯಬಹುದು' ಎಂದು ಐಐಐಟಿಬಿ ವಿದ್ಯಾರ್ಥಿಗಳಾದ ಅನ್ನಪೂರ್ಣ ಜಿ.ಎಚ್. ಮತ್ತು ಅರುಣ್ ಅವರು 'ಪ್ರಜಾವಾಣಿ'ಗೆ ವಿವರಿಸಿದರು.

'ಈ ಕಸದ ಬುಟ್ಟಿ ಸ್ಮಾರ್ಟ್ ಸೆನ್ಸಾರ್ ಹಬ್ ಎಂಬ ತಂತ್ರಜ್ಞಾನದ ಮೂಲಕ ಕಾರ್ಯನಿರ್ವಹಸುತ್ತದೆ. ಇದು ಕಸವನ್ನು ಗೊಬ್ಬರವನ್ನಾಗಿ ಮಾರ್ಪಡಿಸುವ ಪ್ರಕ್ರಿಯೆಯ ಮೇಲೆ ನಿಗಾವಹಿಸಿ, ದತ್ತಾಂಶವನ್ನು ಸಂಗ್ರಹಿಸಿ ರಿಮೋಟ್ ಮೂಲಕ ಸಂದೇಶ ರವಾನಿಸಲಿದೆ. ಹಸಿ ತ್ಯಾಜ್ಯ ಹೆಚ್ಚಾಗಿದ್ದು, ಅದಕ್ಕೆ ಒಣಕಸ ಹಾಕುವಂತೆ ಸಂದೇಶ ನೀಡಲಿದೆ. ಇದು ಬಿಬಿಎಂಪಿಗೆ ಅನುಕೂಲವಾಗಲಿದೆ' ಎಂದು ವಿವರಿಸಿದರು.

'ಐಐಐಟಿಬಿಯಲ್ಲಿ 800 ಕೆ.ಜಿ ಕಸ ಸಂಗ್ರಹಿಸುವ ಸಾಮರ್ಥ್ಯದ 10 ಕಸದ ಬುಟ್ಟಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದರಿಂದ ಉತ್ಪತ್ತಿಯಾದ ಗೊಬ್ಬರವನ್ನು ಉದ್ಯಾನಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇದರ ಪೇಟೆಂಟ್ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ. ಪೇಟೆಂಟ್ ಪಡೆದ ನಂತರ 800 ಕೆ.ಜಿ. ಸಾಮರ್ಥ್ಯದ ಒಂದು ಕಸದ ಬುಟ್ಟಿಗೆ ಅಂದಾಜು ₹12 ಸಾವಿರ ದರ ನಿಗದಿಪಡಿಸಲಾಗುತ್ತದೆ' ಎಂದರು.

'ರಿಮೋಟ್ ನಿಯಂತ್ರಿತ ಕಸದ ಬುಟ್ಟಿ'ಗಳ ಪ್ರಾತ್ಯಕ್ಷಿಕೆಯ ಕುರಿತು ವಿದ್ಯಾರ್ಥಿಗಳು ಸಂಶೋಧಕರಿಂದ ಮಾಹಿತಿ ಪಡೆದರು – ಪ್ರಜಾವಾಣಿ ಚಿತ್ರ

ಹೆದ್ದಾರಿ ಮೇಲೆ ಮೊಸಳೆ ಸಂಚಾರ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಕೌಠಾ (ಬಿ) ಬಳಿ ಮಾಂಜ್ರಾ ನದಿ ದಂಡೆ ಮೇಲಿನ ಬೀದರ್-ಔರಾದ್ ಹೆದ್ದಾರಿಯಲ್ಲಿ ದೊಡ್ಡ ಮೊಸಳೆ ಪತ್ತೆಯಾಗಿದೆ.

ಎರಡು ದಿನಗಳ ಹಿಂದೆ ಮಧ್ಯರಾತ್ರಿ ಬೀದರ್-ಔರಾದ್ ಹೆದ್ದಾರಿ ಮೇಲೆ ಈ ಮೊಸಳೆ ಕಾಣಿಸಿಕೊಂಡಿದ್ದು, ಪ್ರಯಾಣಿಕರು ಗ್ರಾಮಸ್ಥರು ಹಾಗೂ ಅರಣ್ಯಾಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ್ದಾರೆ. 'ಬೀದರ್-ಔರಾದ್ ರಸ್ತೆ ಮೇಲೆ ಮೊಸಳೆ ಬಂದಿರುವುದು ನಮಗೂ ತಿಳಿದಿದೆ. ಇದು ಐದರಿಂದ ಆರು ಅಡಿ ಉದ್ದದ ದೊಡ್ಡ ಮೊಸಳೆ. ನಮ್ಮಲ್ಲಿ ಸಾಮಾನ್ಯವಾಗಿ ಕಪ್ಪು ಬಣ್ಣದ ಮೊಸಳೆ ಇರುತ್ತವೆ. ಆದರೆ, ಇದು ಹಳದಿ ಬಣ್ಣದ್ದಾಗಿದೆ. ಇದು ಮಾಂಜ್ರಾ ನದಿ ಮೂಲಕ ಬಂದಿರುವ ಸಾಧ್ಯತೆ ಇದೆ' ಎಂದು ವಲಯ ಅರಣ್ಯಾಧಿಕಾರಿ ಅಲಿಯೋದ್ದಿನ್ ತಿಳಿಸಿದ್ದಾರೆ.

ದೊಡ್ಡ ಮೊಸಳೆ ಊರು ಪಕ್ಕದಲ್ಲೇ ಬಂದಿದ್ದು, ಇದನ್ನು ಹಿಡಿದು ಬೇರೆ ಕಡೆ ಸಾಗಿಸಬೇಕು ಎಂದು ಕೌಠಾ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಬಿಪಿಎಲ್‌ಗೆ ಅರ್ಹರಲ್ಲದವರು ಎಪಿಎಲ್‌ಗೆ ಸೇರ್ಪಡೆ: ಆಹಾರ ಸಚಿವ

ಯಾವುದೇ ಪಡಿತರ ಚೀಟಿ ರದ್ದತಿ ಇಲ್ಲ

ಪ್ರಜಾವಾಣಿ ವಾರ್ತೆ

ಅನರ್ಹರನ್ನು ಗುರುತಿಸಿ ಬಿಪಿಎಲ್‌ನಿಂದ ಎಪಿಎಲ್‌ಗೆ ಇಡಲಾಗುತ್ತದೆಯೇ ಹೊರತು ರದ್ದು ಮಾಡಲ್ಲ. ಗುರುವಾರ ಅಂಕಿಅಂಶ ಸಮೇತ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡುತ್ತೇನೆ

ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಕೋಲಾರ: 'ಬಿಪಿಎಲ್ ಪಡಿತರ ಚೀಟಿಗೆ ಯಾರು ಅರ್ಹರಲ್ಲವೋ ಅಂಥವರನ್ನು ಎಪಿಎಲ್‌ಗೆ ಬದಲಾಯಿಸಲಾಗುತ್ತದೆಯೇ ಹೊರತು ಯಾವುದೇ ಕಾರಣಕ್ಕೂ ರದ್ದು ಮಾಡುವುದಿಲ್ಲ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಪಿಎಲ್, ಎಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡಲಾಗುತ್ತದೆ ಎಂಬುದಾಗಿ ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ ಅಷ್ಟೆ. ಸರ್ಕಾರ ಎಲ್ಲೂ ಹೇಳಿಲ್ಲ. ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿ ರದ್ದಾಗುವುದಿಲ್ಲ' ಎಂದು ಹೇಳಿದರು

'ದಕ್ಷಿಣ ಭಾರತದ ಯಾವುದೇ ರಾಜ್ಯಗಳಲ್ಲಿ ಶೇ 50ರಷ್ಟು ಬಿಪಿಎಲ್ ಪಡಿತರ ಚೀಟಿಗಳು ಇಲ್ಲ. ಕರ್ನಾಟಕವು ಆರ್ಥಿಕವಾಗಿ ಸುಭದ್ರವಾಗಿ ಇರುವ ರಾಜ್ಯವಾಗಿದ್ದು, ತೆರಿಗೆ ಪಾವತಿಸುವುದರಲ್ಲಿ ಮಹಾರಾಷ್ಟ್ರದ ನಂತರದ ಸ್ಥಾನದಲ್ಲಿದೆ. ಹೀಗಿದ್ದರೂ ಶೇ 75ರಿಂದ 80ರಷ್ಟು ಬಿಪಿಎಲ್ ಚೀಟಿಗಳು ಇರಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಿದೆ. ಇದು ಈ ಸರ್ಕಾರದಲ್ಲಿ ಮಾತ್ರವಲ್ಲ; ಸುಮಾರು 10 ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಕಾಂಗ್ರೆಸ್ ಅಲ್ಲದೇ, ಬಿಜೆಪಿ ಹಾಗೂ ಮೈತ್ರಿ ಸರ್ಕಾರದಲ್ಲಿಯೂ ಚರ್ಚೆಗಳಾಗಿವೆ. ಹೀಗಾಗಿ, ಬಿಪಿಎಲ್‌ಗೆ ಅರ್ಹರಲ್ಲದವರನ್ನು ಎಪಿಎಲ್‌ಗೆ ಬದಲಾಯಿಸಲಾಗುತ್ತದೆ' ಹೇಳಿದರು.

ಮುಖ್ಯಾಂಶಗಳು

- ಅಭಿವೃದ್ಧಿ ಕೆಲಸ-ಕಳೆದ ವರ್ಷ ತೊಂದರೆ, ಈ ವರ್ಷ ಸಮಸ್ಯೆ ಇಲ್ಲ
- ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ನಿರಾಪರಾಧಿ-ಸಚಿವ
- ಪಡಿತರ ಚೀಟಿ ವಿಚಾರ: ಬಿಜೆಪಿಯಿಂದ ಸುಳ್ಳುಸುದ್ದಿ

'ಆದಾಯ ತೆರಿಗೆ ಪಾವತಿಸುವವರು, ಸರ್ಕಾರಿ ಕೆಲಸದಲ್ಲಿ ಇರುವವರು, ವಾರ್ಷಿಕ ಆದಾಯ ₹1.20 ಲಕ್ಷ ಮೇಲಿರುವಂಥವರನ್ನು ಗುರುತಿಸಿ ಎಪಿಎಲ್ ಪಟ್ಟಿಯಲ್ಲಿ ಇಡಲಾಗುವುದು' ಎಂದರು.

'ಗ್ಯಾರಂಟಿ ಯೋಜನೆಗಳ ಹೊರೆ ತಪ್ಪಿಸಲು ಬಿಪಿಎಲ್ ಪಡಿತರ ಚೀಟಿ ರದ್ದುಪಡಿಸಲಾಗುತ್ತಿದೆ ಎಂಬುದು ಬಿಜೆಪಿಯವರ ಆರೋಪವಾಗಿದೆ. ಸರ್ಕಾರಕ್ಕೆ ಆರ್ಥಿಕವಾಗಿ ಯಾವುದೇ ತೊಂದರೆಯಿಲ್ಲ. ಈಗಾಗಲೇ ₹8 ಸಾವಿರ ಕೋಟಿ ಇಲಾಖೆಗೆ ಬಂದಿದೆ, ಫಲಾನುಭವಿಗಳಿಗೆ ಡಿಬಿಟಿ ಮೂಲಕ ಸಕಾಲಕ್ಕೆ ಹಣ ಪಾವತಿಸಲಾಗುತ್ತಿದೆ. ರಾಜ್ಯ ಸರ್ಕಾರ ಯಾವುದೇ ಸಾಲ ಮಾಡಿಲ್ಲ, ಹಿಂದಿನ ಸರ್ಕಾರದ ಸಾಲ ತೀರಿಸುವ ಕೆಲಸ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

'ಒಂದು ವೇಳೆ ಬಿಪಿಎಲ್ ಕಾರ್ಡ್ ವಿಚಾರದಲ್ಲಿ ಬಡವರಿಗೆ ತೊಂದರೆಯಾದಲ್ಲಿ ತಹಶೀಲ್ದಾರ್‌ಗೆ ಗಮನಕ್ಕೆ ತಂದರೆ ಒಂದು ವಾರದೊಳಗಾಗಿ ಸಮಸ್ಯೆ ಬಗೆಹರಿಸಲಾಗುವುದು. ಅರ್ಹರಿಗೆ ಬಿಪಿಎಲ್ ಕಾರ್ಡ್ ತಪ್ಪಿ ಹೋಗಬಾರದು. ಅಕಸ್ಮಾತ್ ತಪ್ಪಿ ಹೋಗಿದ್ದರೆ ವಾಪಸ್ ಕೊಡಲಾಗುವುದು. ಹಾಗೆಯೇ ಚೀಟಿ ಇಲ್ಲವೆಂದು ಆರೋಗ್ಯ ಸೌಲಭ್ಯ ವಿಚಾರದಲ್ಲಿ ತೊಂದರೆ ಆಗಲು ಬಿಡಲ್ಲ' ಎಂದು ಕೆ.ಎಚ್.ಮುನಿಯಪ್ಪ ತಿಳಿಸಿದರು.

ವ್ಯಕ್ತಿ ಸಾವು: ಕಲುಷಿತ ನೀರು ಶಂಕೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ನಿಪ್ಪಾಣಿ ತಾಲ್ಲೂಕಿನ ಕಸನಾಳ ಗ್ರಾಮದಲ್ಲಿ ಕಲುಷಿತ ನೀರು ಕುಡಿದು 50 ಜನ ಮಂಗಳವಾರ ತಡರಾತ್ರಿ ಅಸ್ವಸ್ಥಗೊಂಡಿದ್ದಾರೆ. ಪಾಂಡುರಂಗ ಬಚ್ಚಾರಾಮ ಪಾಟೀಲ (51) ಎಂಬುವರು ಮಹಾರಾಷ್ಟ್ರದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಇದಕ್ಕೆ ವಾಂತಿಭೇದಿಯೇ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ.

ಗ್ರಾಮದಲ್ಲಿ ಮೂರು ದಿನಗಳಿಂದ ಸಣ್ಣಪುಟ್ಟ ವಾಂತಿಭೇದಿ ಪ್ರಕರಣಗಳು ವರದಿಯಾಗಿದ್ದವು. ಆದರೆ, ಮಂಗಳವಾರ ಏಕಾಏಕಿ 50ಕ್ಕೂ ಹೆಚ್ಚು ಜನ ಅಸ್ವಸ್ಥರಾದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ(ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಉತ್ತರ-2	ಬೆಂಜಮಂ/ಇಎನ್‌ಟಿಇ/ಸಅ-1/1943/2024-25 ದಿನಾಂಕ: 19.11.2024 (3ನೇ ಕರೆ)	ರೂ. 23,08,356/- / ರೂ. 50,000/-	29.11.2024ರ ಮಧ್ಯಾಹ್ನ 3:00 ಗಂಟೆಯವರೆಗೆ	30.11.2024ರ ಸಂಜೆ 4:00 ಗಂಟೆಯ ನಂತರ
2	ಉತ್ತರ-2	ಬೆಂಜಮಂ/ಇಎನ್‌ಟಿಇ/ಸಅ-1/1944/2024-25 ದಿನಾಂಕ: 19.11.2024 (3ನೇ ಕರೆ)	ರೂ. 11,94,585/- / ರೂ. 29,900/-		
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು(ಉತ್ತರ)-2.
3	ಉತ್ತರ-ಪೂರ್ವ	ಬೆಂಜಮಂ/ಕಾನಿಅ(ಉ-ಪೂ)/ತಾಂಅ/ಪಿಬಿ/2452/2024-25 ದಿನಾಂಕ: 19.11.2024	ರೂ. 17,51,267/- / ರೂ. 43,800/-	28.11.2024ರ ಸಂಜೆ 4:00 ಗಂಟೆಯವರೆಗೆ	29.11.2024ರ ಮಧ್ಯಾಹ್ನ 3:00 ಗಂಟೆಯ ನಂತರ
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು(ಉತ್ತರ-ಪೂರ್ವ).

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು **https://kppp.karnataka.gov.in**ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾ.ಪ್ರ/ರೆ.ಅ/3334/2024-25

ಜಂತಕಲ್ ಗಣಿ ಪ್ರಕರಣ: ವಿಚಾರಣೆ ಡಿ.11ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಂತಕಲ್ ಗಣಿ ಸೇರಿದಂತೆ ಗಣಿ ಗುತ್ತಿಗೆಗಳ ಅಕ್ರಮ ಮಂಜೂರಾತಿ ಪ್ರಕರಣಗಳ ಸಂಬಂಧ ಸಲ್ಲಿಕೆಯಾಗಿರುವ ವಿಶೇಷ ಮೇಲ್ಮನವಿ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಡಿಸೆಂಬರ್ 11ಕ್ಕೆ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠವು ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಿತು. ಈ ವೇಳೆ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಪರ ವಕೀಲರು ಪ್ರತಿಕ್ರಿಯೆ ಸಲ್ಲಿಸಲು ಕಾಲಾವಕಾಶ ಕೇಳಿದರು. ಇದಕ್ಕೆ ಒಪ್ಪಿದ ಪೀಠವು ವಿಚಾರಣೆಯನ್ನು ಮುಂದೂಡಿತು.

ಮೆಸರ್ಸ್ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಗಣಿ ಗುತ್ತಿಗೆ ನೀಡಿಕೆ, ಜಂತಕಲ್ ಎಂಟರ್ ಪ್ರೈಸಸ್‌ನ ಗಣಿ ಗುತ್ತಿಗೆ ನವೀಕರಣದಲ್ಲಿ ಅಕ್ರಮ ನಡೆಸಲಾಗಿದೆ ಎಂಬ ಆರೋಪ ಇದ್ದು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತನಿಖೆ ಎದುರಿಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ 11,797 ಚದರ ಕಿ.ಮೀ. ಅರಣ್ಯ ಭೂಮಿಯಲ್ಲಿ ಗಣಿಗಾರಿಕೆ ಅವಕಾಶ ನೀಡಿ ಎಚ್.ಡಿ. ಕುಮಾರಸ್ವಾಮಿ, ಎನ್. ಧರ್ಮಸಿಂಗ್ ಮತ್ತು ಅಧಿಕಾರಿಗಳು ರಾಜ್ಯದ ಬೊಕ್ಕಸಕ್ಕೆ ಭಾರೀ ನಷ್ಟ ಉಂಟು ಮಾಡಿದ್ದಾರೆಂದು ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ತಮ್ಮ ವರದಿಯಲ್ಲಿ ಹೇಳಿದ್ದರು. ಈ ವರದಿಯನ್ನು ಆಧರಿಸಿ ಟಿ.ಜೆ.ಅಬ್ರಹಾಂ ಅವರು ದೂರು ಸಲ್ಲಿಸಿದ್ದರು. ಅರಣ್ಯ ಭೂಮಿಯಲ್ಲಿ ಗಣಿಗಾರಿಕೆ ಅವಕಾಶ ನೀಡಿದ ಕುರಿತು ಎಸ್.ಎಂ.ಕೃಷ್ಣ ವಿರುದ್ಧ ತನಿಖೆಗೆ ಆದೇಶಿಸಲಾಗಿತ್ತು. ತನಿಖೆಗೆ ಸುಪ್ರೀಂ ಕೋರ್ಟ್ 2012ರಲ್ಲಿ ತಡೆಯಾಜ್ಞೆ ನೀಡಿತ್ತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

'ಬಿಜೆಪಿ ಬೆಲೆ ತೆರಲೇಬೇಕು'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕೋವಿಡ್ ಸಂದರ್ಭವನ್ನು ದುರುಪಯೋಗ ಮಾಡಿಕೊಂಡ ಬಿಜೆಪಿ ಮುಖಂಡರು ರಾಜ್ಯದ ಬೊಕ್ಕಸವನ್ನು ಲೂಟಿ ಮಾಡಿರುವುದು ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ.ಕುನ್ಹ ಆಯೋಗದ ವರದಿಯಲ್ಲಿ ಖಚಿತವಾಗಿದೆ. ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಖಚಿತವಾಗಿದ್ದು, ಭಾಗಿಯಾದವರು ಬೆಲೆ ತೆರಲೇಬೇಕಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ಇದೊಂದು ದ್ವೇಷದ ರಾಜಕಾರಣವಲ್ಲ. ಆರ್ಥಿಕ ಅಕ್ರಮಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಮಾಜಿ ಸಚಿವರಾದ ಡಾ.ಸುಧಾಕರ್ ಮತ್ತು ಬಿ.ಶ್ರೀರಾಮುಲು ವಿರುದ್ಧದ ಹಗೆತನವಿಲ್ಲ. ತಪ್ಪು ಮಾಡಿರುವವರು ಕಾನೂನು ಪ್ರಕಾರ ಶಿಕ್ಷೆಗೆ ಒಳಗಾಗಬೇಕು' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

'ನಬಾರ್ಡ್' ಸಾಲ ಸೌಲಭ್ಯವನ್ನು ಶೇ 58ರಷ್ಟು ಕಡಿಮೆ ಮಾಡಲಾಗಿದೆ. ಏಕಾಏಕಿ ಈ ಬದಲಾವಣೆ ಮಾಡಿದ್ದರಿಂದ ರಾಜ್ಯಕ್ಕೆ ಅನ್ಯಾಯ ಆಗುತ್ತಿದೆ. ರೈತರಿಗೆ ಸಾಲ ವಿತರಿಸುವುದೂ ಕಷ್ಟವಾಗುತ್ತಿದೆ. ಪಡಿತರ ಚೀಟಿಯ ಬಗ್ಗೆ ಮಾತನಾಡುತ್ತಿರುವ ಬಿಜೆಪಿ ನಾಯಕರು ರೈತರಿಗೆ ಅನುಕೂಲವಾಗುವ ಅನುದಾನವನ್ನು ಕೇಂದ್ರದಿಂದ ತರಲು ಪ್ರಯತ್ನಿಸಲಿ' ಎಂದು ಸವಾಲು ಎಸೆದರು.

'ಗುತ್ತಿಗೆ ನೌಕರರಿಗೆ ನೇರ ಪಾವತಿ'

ಆರೋಗ್ಯ ಇಲಾಖೆಯ 'ಡಿ' ಗ್ರೂಪ್ ನೌಕರರ ನೇಮಕಾತಿ ವ್ಯವಸ್ಥೆಯಲ್ಲಿ ಬದಲಾವಣೆ ತರಲಾಗುತ್ತಿದೆ. ಹೊರಗುತ್ತಿಗೆ ಬದಲು ನೇರ ವೇತನ ಪಾವತಿ ವ್ಯವಸ್ಥೆ ಅಳವಡಿಸುವ ಬಗ್ಗೆ ಕಾನೂನು ಇಲಾಖೆಯ ಸಲಹೆ ಕೇಳಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'ಹೊರಗುತ್ತಿಗೆ ವ್ಯವಸ್ಥೆಯನ್ನು ಕೈಬಿಡುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಪ್ರಯತ್ನಿಸುತ್ತಿದೆ. ಗುತ್ತಿಗೆ ನೌಕರರಿಗೆ ನೇರ ಪಾವತಿ ವ್ಯವಸ್ಥೆ ಜಾರಿಗೊಳಿಸಿದರೆ ಅನುಕೂಲವಾಗಲಿದೆ. ಕಾನೂನು ಇಲಾಖೆ ಒಪ್ಪಿಗೆ ನೀಡಿದರೆ ಇಡೀ ರಾಜ್ಯದಲ್ಲಿ ಶೀಘ್ರ ಅನುಷ್ಠಾನಕ್ಕೆ ಬರಲಿದೆ' ಎಂದು ಮಾಹಿತಿ ನೀಡಿದರು.

ನಗರಸಭಾ ಕಾರ್ಯಾಲಯ ಚಾಮರಾಜನಗರ

Email : itstaff_ulb_chamarajanagar@yahoo.co.in www.chamarajanagaracity.gov.in

ಸಂಖ್ಯೆ: ನ.ಸ.ಚಾ/ತಾಂ.ವಿ/ಕಿ.ಅ/ಪಿ.ಆರ್54/2024-25 ದಿನಾಂಕ : 16-11-2024

ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಚಾಮರಾಜನಗರ ನಗರಸಭೆಯ 2024-25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ-1 ನಿಯಮಗಳಿಗನುಸಾರ ಏಕ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು Kppp.karnataka.gov.in/kppp ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸತಕ್ಕದ್ದು. ಇ-ಪ್ರಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 03-12-2024 ಸಂಜೆ 5.30 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ : 05-12-2024 ಬೆಳಗ್ಗೆ 11.30 ಗಂಟೆಗೆ. ಈ ಕೆಳಕಂಡ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ : 90 ದಿನಗಳು

Sl.No.	Work Indent No.	Estimated Amount in Lakhs	EMD Rupees
1.	DMA/2024-25/OW/WORK_INDENT32365	65.10	130200.00

ಷರಾ : 1. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. Kppp.karnataka.gov.in

ಸಹಿ/- (ಶ್ರೀ ಸುರೇಶ್ ಎಸ್.) ಅಧ್ಯಕ್ಷರು, ನಗರಸಭೆ, ಚಾಮರಾಜನಗರ | ಸಹಿ/- (ಶ್ರೀಮತಿ ಹೆಚ್.ಎಸ್. ಮಮತ) ಉಪಾಧ್ಯಕ್ಷರು, ನಗರಸಭೆ, ಚಾಮರಾಜನಗರ | ಸಹಿ/- (ಶ್ರೀ ಎಸ್.ವಿ. ರಾಮದಾಸ್) ಪೌರಾಯುಕ್ತರು, ನಗರಸಭೆ, ಚಾಮರಾಜನಗರ

ಸಂ : ವಾಸಾಸಂಇ:ಚಾನಗರ:420:2024-25

ಭಾರತೀಯ ಸ್ಟೇಟ್ ಬ್ಯಾಂಕ್

SBI

ಪ್ರಾದೇಶಿಕ ವ್ಯಾಪಾರ ಕಛೇರಿ ಪ್ರದೇಶ - 4,AO1, NW 1
4 ನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತ ಕೆ ಜಿ ರಸ್ತೆ, ಬೆಂಗಳೂರು 560 009

ಕಛೇರಿಗಾಗಿ ಸ್ಥಳಾವಕಾಶ ಬಾಡಿಗೆಗೆ ಬೇಕಾಗಿದೆ

SBI ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, RBO-4 ಕೋರಮಂಗಲ, AO1, ಸುಮಾರು **185.80608 ಚ.ಮೀ +/- 25 %.(2000 ಚದರ ಅಡಿ +/- 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ/ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಗಳಿಗೆ ಕಟ್ಟಡದ ಮಾಲೀಕರು/ ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಮುಖ್ಯ ರಸ್ತೆಯ ನೆಲ ಮಹಡಿಯಲ್ಲಿರುವ. **ಶ್ರೀ ಅನಂತ ನಗರ, ಇಲೆಕ್ಟ್ರಾನಿಕ್ ಸಿಟಿ ,ಬೆಂಗಳೂರು ಶಾಖೆಗೆ** ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.

ತಾಂತ್ರಿಕ ಹರಾಜು ಹಾಗೂ ಸಲ್ಲಿಸಬೇಕಾದ ಅರ್ಜಿ ನಮೂನೆ, ವಿವರವಾದ ಮಾನದಂಡಗಳು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಎಸ್‌ಬಿಐ ವೆಬ್ ಸೈಟ್ **www.sbi.co.in** ನಿಂದ **SBI in th News/Procurement News** ಅಡಿಯಲ್ಲಿ **21.11.2024** ರಿಂದ **04.12.2024** ರವರೆಗೆ ಅರ್ಜಿ ಡೌನ್ ಲೋಡ್ ಮಾಡಬಹುದು.ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 04.12.2024 ಮಧ್ಯಾಹ್ನ 3.00 ಗಂಟೆಯವರೆಗೆ.** ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/- ಪ್ರಾದೇಶಿಕ ವ್ಯವಸ್ಥಾಪಕರು,
ಆರ್‌ಬಿಓ-4 ಕೋರಮಂಗಲ,ಎಓ-1,ಎನ್‌ಡಬ್ಲೂ 1

ಭಾರತೀಯ ಸ್ಟೇಟ್ ಬ್ಯಾಂಕ್

SBI

ಪ್ರಾದೇಶಿಕ ವ್ಯಾಪಾರ ಕಛೇರಿ ಪ್ರದೇಶ - 4,AO1, NW 1
4 ನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತ ಕೆ ಜಿ ರಸ್ತೆ, ಬೆಂಗಳೂರು 560 009

ಕಛೇರಿಗಾಗಿ ಸ್ಥಳಾವಕಾಶ ಬಾಡಿಗೆಗೆ ಬೇಕಾಗಿದೆ

SBI ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, **RBO-4 ಕೋರಮಂಗಲ, AO1, ಸುಮಾರು 185.806 ಚ.ಮೀ +/- 25%** (2000 ಚದರ ಅಡಿ +/- 25%) ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಗಳಿಗೆ ಕಟ್ಟಡದ ಮಾಲೀಕರು/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಮುಖ್ಯ ರಸ್ತೆಯ ನೆಲ ಮಹಡಿಯಲ್ಲಿರುವ **ನಿಯೋ ಟೌನ್, ಬೊಮ್ಮಸಂದ್ರ, ಬೆಂಗಳೂರು ಶಾಖೆಗೆ** ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.

ತಾಂತ್ರಿಕ ಹರಾಜು ಹಾಗೂ ಸಲ್ಲಿಸಬೇಕಾದ ಅರ್ಜಿ ನಮೂನೆ, ವಿವರವಾದ ಮಾನದಂಡಗಳು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಎಸ್‌ಬಿಐ ವೆಬ್ ಸೈಟ್ **www.sbi.co.in** ನಿಂದ **SBI in th News/Procurement News** ಅಡಿಯಲ್ಲಿ **21.11.2024** ರಿಂದ **04.12.2024** ರವರೆಗೆ ಅರ್ಜಿ ಡೌನ್ ಲೋಡ್ ಮಾಡಬಹುದು.ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 04.12.2024 ಮಧ್ಯಾಹ್ನ 3.00 ಗಂಟೆಯವರೆಗೆ.** ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/- ಪ್ರಾದೇಶಿಕ ವ್ಯವಸ್ಥಾಪಕರು,
ಆರ್‌ಬಿಓ-4 ಕೋರಮಂಗಲ,ಎಓ-1,ಎನ್‌ಡಬ್ಲೂ 1

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ತಿದ್ದುಪಡಿ

ಬೆವಿಕಂ ಕರ್ನಾಟಕದ ಎಲ್ಲಾ ಎಸ್ಕಾಂಗಳಿಗೆ ಮ್ಯಾನೇಜ್ಡ್ ನೆಟ್‌ವರ್ಕ್ ಸೇವೆಯನ್ನು ಒದಗಿಸಲು ಈ ದಿನಪತ್ರಿಕೆಯಲ್ಲಿ ದಿನಾಂಕ: 12.11.2024 ರಂದು ಪ್ರಕಟಿಸಲಾದ ಟೆಂಡರ್ ಸಂಖ್ಯೆ: ಬೆವಿಕಂ/2024-25/ಎಸ್‌ಇ0212 ಇದನ್ನು **ಟೆಂಡರ್ ಸಂಖ್ಯೆ: ಬೆವಿಕಂ/2024-25/ಎಸ್‌ಇ0222** ಎಂದು ಓದಿಕೊಳ್ಳಬೇಕಾಗಿ ವಿನಂತಿಸಲಾಗಿದೆ.

ಟೆಂಡರಿನ ಇತರ ಷರತ್ತುಗಳು ಮತ್ತು ನಿಯಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಪ್ರಧಾನ ವ್ಯವಸ್ಥಾಪಕರು (ಐಸಿಟಿ & ಎಂಐಎಸ್),
ಬೆವಿಕಂ, ಬೆಳಕು ಭವನ, ಕೆ.ಆರ್. ವೃತ್ತ, ಬೆಂಗಳೂರು - 560 001.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 20 /2024-25 **ದಿನಾಂಕ:20-11-2024**

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ, ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ, 3054-04-337-1-10-200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ (ಅತಿವೃಷ್ಟಿ/ನೆರೆಹಾವಳಿ), 5054-03-101-0-02-132 ಪ್ರಮುಖ ಜಿಲ್ಲಾ ಸೇತುವೆಗಳು, 3054-03-102-0-01-200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ ಅಡಿಯಲ್ಲಿನ ಒಟ್ಟು 6 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ, ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW- 1,2,3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.15.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.150.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 6 ಕಾಮಗಾರಿಗಳಿಗೆ (ಇಂ ಸಂಖ್ಯೆ: 16240 (2ನೇಕರೆ), 16673, 16467 ದಿನಾಂಕ:27.11.2024, ಇಂಸಂಖ್ಯೆ:11331 ದಿನಾಂಕ:29.11.2024, ಇಂಸಂಖ್ಯೆ:16712 ದಿನಾಂಕ:02.12.2024, ಇಂಸಂಖ್ಯೆ 16241 ದಿನಾಂಕ :07.12.2024 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಬೆವಿಕಂ ವಿಚಾರಣೆ ಸಂಖ್ಯೆ: **ಬೆ.ವಿ.ಕಂ/2024-25/ಐಎನ್‌ಡಿ0092**ರ ಮೂಲಕ **ಟ್ರಕ್ ವಾಹನಗಳನ್ನು ಖರೀದಿಸಲು** ಅರ್ಹ ಬಿಡ್ಡುದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **21.11.2024,17:00 ಗಂಟೆಯಿಂದ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **20.12.2024 ರಂದು 17:00 ಗಂಟೆಯವರೆಗೆ.** ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: **21.12.2024 ರಂದು 17:15 ಗಂಟೆಗೆ.**

ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಪಡೆಯಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಬಿಡ್ಡುದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಸಹಾಯವಾಣಿ: **+91-80460 10000, +91-80689 48777** ನಲ್ಲಿ ಅಥವಾ ಇ-ಮೇಲ್: **support@eprochelpdesk.com** ನಿಂದ ಪಡೆಯಬಹುದು.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿದ್ಯುತ್),
ಖರೀದಿ, ಬೆ.ವಿ.ಕಂ, 2ನೇ ಮಹಡಿ,
ಕೆ.ಆರ್.ವೃತ್ತ, ಬೆಂಗಳೂರು-560001.
ದೂ. ಸಂಖ್ಯೆ: 080-22354939.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು-570005

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
http://kppp.karnataka.gov.in

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ಅಧ್ಯಯನ ವಿಭಾಗಗಳು/ಕಾಲೇಜುಗಳಿಗೆ ವಾರ್ಷಿಕ ದರ ಒಪ್ಪಂದದ ಪ್ರಕಾರ ಒಂದು ವರ್ಷದ ಅವಧಿಗೆ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ e-procurement portal ಮೂಲಕ ಮಾತ್ರ ಸಲ್ಲಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಇಂಡೆಂಟ್ ಸಂಖ್ಯೆ: UOM/2024-25/IND0039 ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿ: 30.11.2024 ಸಂಜೆ 5:30ರವರೆಗೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗ, ಕ್ರಾಫರ್ಡ್ ಭವನ, ಮೈಸೂರು 570005 ಇಲ್ಲಿ ಖುದ್ದಾಗಿ ಭೇಟಿ ನೀಡಿ ಅಥವಾ 0821-2419209/512 ರಲ್ಲಿ ಸಂಪರ್ಕಿಸಬಹುದಾಗಿದೆ.

DIPR/DDMYS-815/KSMCA-557/2024-25 ಸಹಿ/- ಕುಲಸಚಿವ

ಮೈಸೂರು ಅರಮನೆ ಮಂಡಳಿ

ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು
ದೂರವಾಣಿ ಸಂ:0821-2421051 ಇಮೇಲ್: ddmysorepalace@gmail.com

ಸಂ:ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್-07/2024-25 ದಿನಾಂಕ: 20.11.2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ - ದ್ವಿ-ಲಕೋಟೆ ಪದ್ದತಿಯಲ್ಲಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ-ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಮಾನವ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಒಟ್ಟು ರೂ.300.00 ಲಕ್ಷಗಳ ಕೆಲಸಕ್ಕೆ ಸೂಕ್ಷ್ಮ ಪ್ರದೇಶಗಳಲ್ಲಿ ಸದರಿ ಕೆಲಸಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು (1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **19.12.2024 16:00 ಗಂಟೆಯುವರೆಗೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **20.12.2024 16:30 ಗಂಟೆಯ ನಂತರ.** ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಅಂತರ್‌ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/-ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/825/24-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಪತ್ರಿಕಾ ಪ್ರಕಟಣೆ

ಸಂಖ್ಯೆ: ಕವಿಪ್ರನಿನಿ/ಬಿ16/44953/2023-24 **ದಿನಾಂಕ: 20.11.2024**

ನಿಗಮದ ದಿನಾಂಕ: **14.10.2024**ರ ಉದ್ಯೋಗ ಪ್ರಕಟಣೆಗೆ ಅನುಗುಣವಾಗಿ, ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕೈಗೊಳ್ಳಲಾಗಿರುವ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಲು **20.11.2024** ಮತ್ತು ಅರ್ಜಿ ಶುಲ್ಕ ಪಾವತಿಸಲು **25.11.2024** ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿರುತ್ತದೆ. ಆನ್-ಲೈನ್ ಅರ್ಜಿಗೆ ಸಂಬಂಧಿಸಿದಂತೆ ಅಂಚೆ ಇಲಾಖೆಯ ಚಲನ್ ಅನ್ನು ಡೌನ್‌ಲೋಡ್ ಮಾಡಲು ಅಭ್ಯರ್ಥಿಗಳು e-sign ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿರುತ್ತದೆ. ಆದರೆ, e-sign ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಭ್ಯರ್ಥಿಗಳಿಗೆ ಸಾಧ್ಯವಾಗುತ್ತಿಲ್ಲದಿರುವುದನ್ನು ಗಮನಿಸಿ, e-sign ಪ್ರಕ್ರಿಯೆ/ಅಂಚೆ ಕಚೇರಿ ಚಲನ್ ಡೌನ್‌ಲೋಡ್ ಮತ್ತು ಅರ್ಜಿ ಶುಲ್ಕ ಪಾವತಿ ದಿನಾಂಕಗಳನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ:-

ವಿವರ	ಅಂತಿಮ ದಿನಾಂಕ	ಷರಾ
ಅಂಚೆ ಕಚೇರಿ ಚಲನ್ ಡೌನ್ ಲೋಡ್ ಮಾಡಲು e-sign ಪ್ರಕ್ರಿಯೆ	05.12.2024	ಆನ್-ಲೈನ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕವು 20.11.2024 ಕ್ಕೆ ಮುಕ್ತಾಯವಾಗಿದ್ದು, ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
ಅರ್ಜಿ ಶುಲ್ಕ ಪಾವತಿ	10.12.2024	

ಸಹಿ/- ನಿರ್ದೇಶಕರು (ಆಡಳಿತ ಮತ್ತು ಮಾ.ಸಂ),
ಕ.ವಿ.ಪ್ರ.ನಿ.ನಿ, ಕಾವೇರಿ ಭವನ, ಬೆಂಗಳೂರು-560009.

ಕರ್ನಾಟಕ ಸರ್ಕಾರ -ಆಯುಷ್ ಇಲಾಖೆ- ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಕೊಠಡಿ ಸಂಖ್ಯೆ:117 ಜಿಲ್ಲಾ ಆಡಳಿತ ಭವನ ನವನಗರ ಬಾಗಲಕೋಟೆ,-587103.
ದೂರವಾಣಿ:08354-295588.ಮೋ:9449847830
ಇಮೇಲ್:dao.bagalkote09@gmail.com. ಇಲಾಖೆ ವೆಬ್ ಸೈಟ್:www.karunadu.gov.in/ayush

ಸಂಖ್ಯೆ : ಜಿಆಅಕಾಬಾ/ 07/ನ್ಯಾಮ್ (ಸಿಬ್ಬಂದಿ)/ /2023-24 ದಿನಾಂಕ:19.11.2024

ನೇಮಕಾತಿ ಪ್ರಕಟಣೆ

ಗುತ್ತಿಗೆ ಆಧಾರದಲ್ಲಿ ಆಯುಷ್ ತಜ್ಞ ವೈದ್ಯರು/ಔಷಧಿ ವಿತರಕರು/ಮಸಾಜಿಸ್ಟ್/ಕ್ಷಾರಸೂತ್ರ ಅಟೆಂಡರ್/ಸ್ತ್ರೀ ರೋಗ ಅಟೆಂಡರ್/ಬಹು ಉದ್ದೇಶಿತ ಆರೋಗ್ಯ ಕಾರ್ಯಕರ್ತ ಹುದ್ದೆಗಳ ನೇಮಕಾತಿಗಾಗಿ ಪತ್ರಿಕಾ ಪ್ರಕಟಣೆ.

ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ :ಆಯುಷ್/69/ನ್ಯಾಮ್/2021-22. ದಿನಾಂಕ :17.01.2023 ರನ್ವಯ ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಆಯುಷ್ ಅಭಿಯಾನ (ಕೇಂದ್ರ ಪುರಸ್ಕೃತ ಯೋಜನೆ)ದಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಬಾಗಲಕೋಟೆ/ಬೀಳಗಿ/ಜಮಖಂಡಿ ಆಯುಷ್ ಆಸ್ಪತ್ರೆಗಳಿಗೆ ಅಗತ್ಯವಿರುವ ಆಯುಷ್ ತಜ್ಞ ವೈದ್ಯರು/ ಅರೆ ವೈದ್ಯಕೀಯ ಸಿಬ್ಬಂದಿಯ ಹುದ್ದೆಗಳನ್ನು ತಾತ್ಕಾಲಿಕವಾಗಿ ಮೆರಿಟ್ ಕಂ ರೋಸ್ಟರ್ ಮೂಲಕ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಮಾತ್ರ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:19.11.2024. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:18.12.2024 ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್:bagalkot.nic.in ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಷರತ್ತು ಹಾಗೂ ನಿಬಂಧನೆಗಳು ಅನ್ವಯಿಸುತ್ತವೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳು ಖಾಲಿ ಇರುವ ಸ್ಥಳ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಮೀಸಲಾತಿ	ಸಂಚಿತ ವೇತನ	ವಿದ್ಯಾರ್ಹತೆ
1	ತಜ್ಞ ವೈದ್ಯರು (04)	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ	01	ಸಾಮಾನ್ಯ(ಮಹಿಳಾ)-01 ಸಾಮಾನ್ಯ (ಅಂಗವಿಕಲ)-01 ಪ.ಜಾ-01 ಪ.ಪಂ(ಗ್ರಾಮೀಣ)-01	52,550/- +5000/- ಪಿ.ಜಿ ಭತ್ಯೆ	MS in Shalyatantra ಅಥವಾ MD in Panchakarma/Kaya chikitsa ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು.
		ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೀಳಗಿ	01			
		ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ	02			
2	ಔಷಧಿ ವಿತರಕರು (03)	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ	02	ಸಾಮಾನ್ಯ(ಮಹಿಳಾ)-01 ಪ.ಜಾ-01 ಪ.ಪಂ(ಗ್ರಾಮೀಣ)-01	27,550/-	Bachelor of Pharmacy (B.Pharma) ಪದವಿಯ ಜೊತೆಗೆ ಆಸ್ಪತ್ರೆ /ಚಿಕಿತ್ಸಾಲಯ/ ಫಾರ್ಮಸಿಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು, B.Pharma ಅಭ್ಯರ್ಥಿಯು ದೊರೆಯದ ಪಕ್ಷದಲ್ಲಿ ಕನಿಷ್ಠ 02 ವರ್ಷ ಅನುಭವವಿರುವ Diploma in Pharmacy (D.Pharma) ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ.
		ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ	01			
3	ಮಸಾಜಿಸ್ಟ್ (ಪುರುಷ) (01)	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ	01	ಪ.ಜಾ-01 (ಪುರುಷ)	18,500/-	ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು.
4	ಮಸಾಜಿಸ್ಟ್ (ಮಹಿಳಾ) (02)	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ	01	ಸಾಮಾನ್ಯ(ಮಹಿಳಾ)-01 ಪ.ಜಾ-01	18,500/-	ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು.
		ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ	01			
5	ಕ್ಷಾರ ಸೂತ್ರ ಅಟೆಂಡರ್ (02)	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ	01	ಸಾಮಾನ್ಯ(ಮಹಿಳಾ)-01 ಪ.ಜಾ-01	18,500/-	ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು.
		ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ	01			
6	ಬಹು ಉದ್ದೇಶಿತ ಆರೋಗ್ಯ ಕಾರ್ಯಕರ್ತ(01)	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೀಳಗಿ	01	ಸಾಮಾನ್ಯ-01	16,900/-	ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 01 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ.

ನೇಮಕಾತಿ ನಿಯಮ ಮತ್ತು ಷರತ್ತುಗಳು :- 1.ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ. 2.ಅರ್ಜಿಗಳನ್ನು ಕೇವಲ ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:19.11.2024 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:18.12.2024, 3.ಅರ್ಜಿಗಳನ್ನು ಆನ್‌ಲೈನ್ ಹೊರತು ಪಡಿಸಿ ಇತರೆ ಯಾವುದೇ ಮೂಲಗಳಿಂದ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. 4.ಕರ್ನಾಟಕ ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮಗಳನ್ವಯ ವಯೋಮಿತಿಯನ್ನು ಪರಿಗಣಿಸಲಾಗುವುದು. (ಎಲ್ಲಾ ಹುದ್ದೆಗಳಿಗೆ ಕನಿಷ್ಠ 18 ವರ್ಷ, 18.12.2024 ಅಂತ್ಯಕ್ಕೆ ಗರಿಷ್ಠ ವಯೋಮಿತಿ (ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024 ಬೆಂಗಳೂರು, ದಿನಾಂಕ: 10.09.2024) ರನ್ವಯ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I-43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ-38 ವರ್ಷ. 5.ಸದರಿ ಹುದ್ದೆಗಳಿಗೆ ತಪ್ಪು ಮಾಹಿತಿ/ದಾಖಲೆಗಳನ್ನು ಹಾಜರುಪಡಿಸಿ ನೇಮಕಾತಿ ಹೊಂದಿರುವುದು ದೃಡಪಟ್ಟಲ್ಲಿ ಯಾವುದೇ ಪೂರ್ವ ಮಾಹಿತಿ ನೀಡದೆ ನೇಮಕಾತಿ ರದ್ದು ಪಡಿಸಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲಾಗುವುದು. 6.ಮಸಾಜಿಸ್ಟ್ ಮತ್ತು ಕ್ಷಾರಸೂತ್ರ ಅಟೆಂಡರ್ ಹುದ್ದೆಗಳಿಗೆ ಪ್ರಾಯೋಗಿಕವಾಗಿ (ಪ್ರಾಕ್ಟಿಕಲ್) ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುವುದು. 7.ಒಬ್ಬನೇ ಅಭ್ಯರ್ಥಿಯು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. 8.ಜಿಲ್ಲಾ ಆಯುಷ್ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. 9.ಸದರಿ ನೇಮಕಾತಿ ಪ್ರಕಟಣೆಯ ವಿವಿರಗಳನ್ನು ಬಾಗಲಕೋಟೆ NIC Website Link: bagalkot.nic.in ನಲ್ಲಿ ವೀಕ್ಷಿಸಬಹುದಾಗಿದೆ. 10.ತಜ್ಞ ವೈದ್ಯರು ಮತ್ತು ಇತರೆ ಹುದ್ದೆಗಳ ನೇಮಕಾತಿಯನ್ನು ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯಲ್ಲಿ ಪಡೆದ ಅಂಕಗಳು, ಸಂದರ್ಶನ ಮತ್ತು ಅನುಭವದ ಆಧಾರದ ಮೇಲೆ ನಡೆಸಲಾಗುವುದು. 11.ಮಾನ್ಯ ಅಧ್ಯಕ್ಷರು, ಜಿಲ್ಲಾ ಆಯುಷ್ ಸಮಿತಿ ಬಾಗಲಕೋಟೆ ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಮೇರಿಟ್ ಕಂ ರೋಸ್ಟರ್ ಮೂಲಕ ಮೀಸಲಾತಿ ನಿಯಮಗಳನ್ವಯ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ/ಆಯುಷ್ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ. 12.ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ. ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ವಿಶೇಷ ಸೂಚನೆ:- ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜನ್ಮ ದಿನಾಂಕ ಸೂಚಿಸಿರುವ ಸರ್ಕಾರಿ ದಾಖಲೆಗಳನ್ನು ಒದಗಿಸಲು ಸೂಚಿಸಲಾಗಿದೆ.

ಸಹಿ/-ಜಿಲ್ಲಾ ಆಯುಷ್ ಅಧಿಕಾರಿಗಳು,
ಬಾಗಲಕೋಟ.

DIPR/BGK/RO-NO-343/KSMCA/2024-25

ಬುದ್ಧ ಬೋಧಿಸಿದ ಮಧ್ಯಮಮಾರ್ಗ

ಈ ಅಷ್ಟಾಂಗ ಮಾರ್ಗವನ್ನು ಮಧ್ಯಮಮಾರ್ಗಗಳೆಂದು ಕರೆಯಲಾಗಿದೆ. ಬುದ್ಧನ ಪ್ರಕಾರ ವಿಪರೀತವಾದ ಇಂದ್ರಿಯಾಸಕ್ತಿಗಳು ಹಾಗೂ ಸಂತೋಷದ ಬಯಕೆ ಮತ್ತು ವಿಪರೀತ ದೇಹ ದಂಡನೆ ಎರಡೂ ಅತಿರೇಕಗಳಾಗಿವೆ. ಮನುಷ್ಯ ಆಹಾರ, ಬಟ್ಟೆ ಮುಂತಾದ ಶಾರೀರಿಕ ಅಗತ್ಯಗಳನ್ನು ಅನುಸರಿಸಬೇಕು ಮತ್ತು ಕನಿಷ್ಠ ಸೌಕರ್ಯಗಳನ್ನು ಆನಂದಿಸಬೇಕು. ಅಂದರೆ ಮಧ್ಯಮಮಾರ್ಗವನ್ನು ಅನುಸರಿಸಬೇಕು. ಅತಿರೇಕ ಸಲ್ಲದು.

ಬುದ್ಧ ಪ್ರತಿಪಾದಿಸಿದ ತತ್ವಗಳು

- ಬುದ್ಧನು ಸಾರ್ವತ್ರಿಕ ಸಹಾನುಭೂತಿ, ಉಪಕಾರ ಮತ್ತು ದಯೆಯನ್ನು ಪ್ರತಿಪಾದಿಸಿದನು.
- ಬೌದ್ಧಧರ್ಮ ಜಾತಿ ಪದ್ಧತಿಯನ್ನು ವಿರೋಧಿಸುತ್ತದೆ. ಬೌದ್ಧಧರ್ಮವು ದೇವರು ಅಥವಾ ಆತ್ಮದ ಅಸ್ತಿತ್ವವನ್ನು ನಂಬುವುದಿಲ್ಲ ಅಥವಾ ಪ್ರಶ್ನಿಸುವುದೂ ಇಲ್ಲ.ಅದರ ಗೊಡವೆಗೆ ಬುದ್ಧ ಹೋಗಲಿಲ್ಲ.
- ಬೌದ್ಧಧರ್ಮವು ಸೈದ್ಧಾಂತಿಕ ಚಿಂತನೆಗೆ ಒಲವು ತೋರಲಿಲ್ಲ ಮತ್ತು ಅದು ಪ್ರಾಯೋಗಿಕ ಬುದ್ಧಿವಂತಿಕೆಯ ಮೇಲೆ ತನ್ನ ಚಿಂತನೆಯನ್ನು ಕೇಂದ್ರೀಕರಿಸಿತು.
- ಬುದ್ಧನು ಅಹಿಂಸೆಯನ್ನು ಬೋಧಿಸಿದನು. ಆದರೆ ತನ್ನ ತತ್ವ ಪ್ರತಿಪಾದನೆಯಲ್ಲಿ ಅತಿರೇಕಕ್ಕೆ ಹೋಗಲಿಲ್ಲ.
- ಎಲ್ಲಾ ಬೋಧನೆಗಳ ಮೂಲಕ ಬೌದ್ಧ ಧರ್ಮವು ನೀತಿ ಶಾಸ್ತ್ರಕ್ಕೆ ತನ್ನದೆಯಾದ ವಿಶೇಷ ಕೊಡುಗೆಗಳನ್ನು ನೀಡಿದೆ. ಮಾನವ ಕುಲಕ್ಕೆ ಇಂತಹಾ ಅಪೂರ್ವ ತತ್ವಗಳನ್ನು ನೀಡಿದ ಬುದ್ಧನನ್ನು ಏಷ್ಯಾದ ಬೆಳಕು ಎಂದೇ ಗುರುತಿಸಲಾಗುತ್ತದೆ.

ನೀತಿ ಶಾಸ್ತ್ರಕ್ಕೆ ಬೌದ್ಧ ಧರ್ಮದ ಕೊಡುಗೆ

- ನಾಲ್ಕು ಸತ್ಯಗಳು
- ಅಷ್ಟಾಂಗ ಮಾರ್ಗಗಳು ಮತ್ತು ಮಧ್ಯಮ ಮಾರ್ಗ
- ಅನಿತ್ಯ ಮತ್ತು ಅಶಾಶ್ವತತೆಯ ಬಗ್ಗೆ ಕಲ್ಪನೆ
- ಮರಣಾನಂತರದ ಬದುಕಿನ ಬಗ್ಗೆ ಮಾತನಾಡದೆ, ದೊರೆತ ಜೀವನವನ್ನು ಕುಶಲವಾಗಿ ಬದುಕುವ ಬಗ್ಗೆ ಮನುಕುಲಕ್ಕೆ ಸರಿಯಾದ ದಾರಿಯನ್ನು ತೋರಿಸಿದ ಬುದ್ಧ.
- ಸಮ್ಯಕ್ ಗ್ರಹಿಕೆ - ಲೋಕದ ಕುರಿತ ಸರಿಯಾದ ಚಿಂತನೆ
- ಕರುಣೆ ಮತ್ತು ಮೈತ್ರಿಯ ನಡವಳಿಕೆ
- ಭಿಕ್ಷೆ ಮತ್ತು ಬಿಕ್ಕುಗಳ ಮೂಲಕ ಸಾಂಕೇತಿಕವಾಗಿ ತೋರಿಸುವ ನಮ್ರತೆ

ಪಾಲಿಯನ್ನು ಇತ್ತೀಚೆಗೆ ಶಾಸ್ತ್ರೀಯ ಭಾಷೆಯನ್ನಾಗಿ ಭಾರತ ಸರ್ಕಾರ ಗುರುತಿಸಿದೆ. ಸಂಸ್ಕೃತಿ ಸಚಿವಾಲಯವು, ಅಂತರರಾಷ್ಟ್ರೀಯ ಬೌದ್ಧ ಒಕ್ಕೂಟದ (IBC) ಸಹಭಾಗಿತ್ವದಲ್ಲಿ, ಏಷ್ಯನ್ ಬೌದ್ಧ ಶೃಂಗಸಭೆಯ (ABS) ಉದ್ಘಾಟನಾ ಸಭೆಯನ್ನು ಈಚೆಗೆ ನವದೆಹಲಿಯಲ್ಲಿ ಆಯೋಜಿಸಿತ್ತು. ಈ ಹಿನ್ನೆಲೆಯಲ್ಲಿ ಬಲುಸಂಭವನೀಯ ವಿಷಯವಾಗಿ, ಪರೀಕ್ಷಾರ್ಥಿಗಳಿಗಾಗಿ ಬೌದ್ಧ ಧರ್ಮದ ಕುರಿತ ಲೇಖನವಿದು

ಲೋಕ ಕಂಡ ಮೇರು ದಾರ್ಶನಿಕ ಬುದ್ಧ



ಯು.ಟಿ.ಆಯಿಷಾ ಫರ್ಝಾನ

ಬೌದ್ಧಧರ್ಮವು ಗೌತಮ ಬುದ್ಧನಿಂದ ಕ್ರಿಸ್ತಪೂರ್ವ ಆರನೇ ಶತಮಾನದಲ್ಲಿ ಸ್ಥಾಪನೆಗೊಂಡಿತು. ಗೌತಮ ಬುದ್ಧನ ಮೂಲ ಹೆಸರು ಸಿದ್ಧಾರ್ಥ.

ಸಿದ್ಧಾರ್ಥ ಬುದ್ಧನಾಗಲು ಕಾರಣವೇನು?

ಕಪಿಲವಸ್ತುವಿನ ರಾಜಕುಮಾರನಾಗಿ ಜನಿಸಿದ್ದ ಸಿದ್ಧಾರ್ಥನೇ ಜೀವನದಲ್ಲಿ ನಡೆದ ಹಲವು ಘಟನೆಗಳ ನಂತರ ಮನಃಪರಿವರ್ತನೆಗೊಂಡು ಬುದ್ಧನಾದನು. ಐಷಾರಾಮಿ ಜೀವನದಲ್ಲಿ ಬೆಳೆದ ಸಿದ್ಧಾರ್ಥನಿಗೆ ಜೀವನದಲ್ಲಿ ಯಾವುದೇ ನೋವು ಮತ್ತು ಸಂಕಟಗಳಿಗೆ ಸಾಕ್ಷಿಯಾಗಲು ಅವಕಾಶವಿರಲಿಲ್ಲವಾದರೂ ನಂತರದಲ್ಲಿ ಕಂಡ ನಾಲ್ಕು ದೃಶ್ಯಗಳು ಆತನ ಜೀವನದ ದಿಕ್ಕನ್ನೇ ಬದಲಿಸಿದವು. ನಗರಸಂಚಾರಕ್ಕೆಂದು ಹೊರಬಂದ ಸಿದ್ಧಾರ್ಥನು ಕಂಡ ನಾಲ್ಕು ಘಟನೆಗಳು ಹೀಗಿವೆ.

ಅವುಗಳೆಂದರೆ, ಒಬ್ಬ ವೃದ್ಧ, ಒಬ್ಬ ರೋಗಿಷ್ಟ ವ್ಯಕ್ತಿ, ಒಂದು ಸಾವು ಮತ್ತು ಒಬ್ಬ ಸನ್ಯಾಸಿ. ಸನ್ಯಾಸಿಯು ಲೌಕಿಕ ಮೋಹಗಳನ್ನು ತ್ಯಜಿಸಿದ ನಂತರ ಪ್ರಪಂಚದ ಸಮಸ್ಯೆಗಳಿಂದ ವಿಚಲಿತನಾಗದೆ ಸಂತೋಷ ಮತ್ತು ಶಾಂತಿಯಲ್ಲಿರುವುದನ್ನು ಸಿದ್ಧಾರ್ಥನು ಕಂಡುಕೊಂಡನು.

ಈ ನಾಲ್ಕು ಘಟನೆಗಳಿಂದ ಅವನೊಳಗಿದ್ದ ತೊಳಲಾಟ ಹೆಚ್ಚಿತು. ಬದುಕಿನ ಅರ್ಥವೇನೆಂಬುದನ್ನು ಕಂಡುಕೊಳ್ಳಲು ಐಷರಾಮಿ ಬದುಕನ್ನು ತ್ಯಜಿಸಲು ನಿರ್ಧರಿಸಿದ ಸಿದ್ಧಾರ್ಥ ಅರಮನೆಯನ್ನು ತೊರೆದ.

ಬೌದ್ಧ ಧರ್ಮದ ಪ್ರಮುಖ ತತ್ವಗಳು

ಬುದ್ಧನು ನಾಲ್ಕು ಉದಾತ್ತ ಸತ್ಯಗಳನ್ನು ಪ್ರತಿಪಾದಿಸಿದನು (ಚತ್ತರಿ ಅರಿಯ ಸಚ್ಚಾನಿ)

ಅವುಗಳನ್ನು ನಾಲ್ಕು ಆರ್ಯ ಸತ್ಯಗಳು ಎನ್ನಲಾಗುತ್ತದೆ. ಅವು ಹೀಗಿವೆ

- ಜೀವನವು ಸಂಕಟಮಯವಾಗಿದೆ -ದುಃಖ
- ದುಃಖದ ಕಾರಣಗಳು ಆಸೆ ಮತ್ತು ಲೋಭ -ಸಮುದಾಯ
- ಆಸೆ ಮತ್ತು ಲೋಭಗಳನ್ನು ತೊರೆದರೆ ದುಃಖ ನಿವಾರಣೆಯಾಗುತ್ತದೆ - ನಿರೋಧ
- ಆಸೆ ಲೋಭಗಳನ್ನು ತೊರೆಯಲು ಸಾಧುಮಾರ್ಗವಿದೆ. ಅದರ ನಿರೂಪಣೆಯನ್ನು ತನ್ನ ಸುಪ್ರಸಿದ್ಧ ವಾರಾಣಾಸಿ ವಚನದಲ್ಲಿ ಬುದ್ಧನು ಈ ರೀತಿ ನಿರೂಪಿಸಿದನು.

ದುಃಖದ ವ್ಯಾಖ್ಯಾನ: 'ಹುಟ್ಟುವುದು ದುಃಖ , ವೃದ್ಧಾಪ್ಯದ ದುಃಖ, ಅಸ್ವಸ್ಥತೆ ದುಃಖ, ಮರಣ ದುಃಖ, ಪ್ರಿಯವಲ್ಲದುದರೊಂದಿಗೆ ಐಕ್ಯವಾಗುವುದು ದುಃಖ, ಪ್ರಿಯವಾದುದುದರಿಂದ ಪ್ರತ್ಯೇಕಗೊಳ್ಳುವುದು ದುಃಖ'

'ಓ ಬಿಕ್ಕುಗಳೇ ದುಃಖವನ್ನು ಇಲ್ಲವಾಗಿಸುವ ಮಾರ್ಗವನ್ನಾಗಿ ಅಷ್ಟಾಂಗ ಮಾರ್ಗಗಳನ್ನು ಅನುಸರಿಸಿರಿ'

ದುಃಖದ ಮೂರು ಬಗೆಗಳನ್ನು ಈ ಬಗೆಯಾಗಿ ವರ್ಗೀಕರಿಸಲಾಗಿದೆ

1) ದುಃಖ ಎಂದರೆ

ದೈಹಿಕ ಸಂಕಟಗಳು - ಹೆರಿಗೆ, ಅನಾರೋಗ್ಯ, ವೃದ್ಧಾಪ್ಯ, ಸಾವು ಇತ್ಯಾದಿ

2) ವಿಪರಿನಾಮ ದುಃಖ ಎಂದರೆ ಬದಲಾವಣೆಯು ತರುವ ದುಃಖ - ನಿರಂತರವಾಗಿ ಬದಲಾಗುತ್ತಿರುವ ವಿಷಯಗಳನ್ನು ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸುವಾಗ ಆಗುವ ಆತಂಕ ಅಥವಾ ಒತ್ತಡದ ದುಃಖ

3) ಸಂಹಾರ ದುಃಖ

ನಿಯಮಾಧೀನ ಮನಸ್ಸಿನ ಸಂಕಟ - ಜಗತ್ತು ನಮ್ಮ ಆದರ್ಶಗಳನ್ನು ಎಂದಿಗೂ ಅಳೆಯುವುದಿಲ್ಲ ಎಂಬ ನೋವು.

ಸಂಕಟದ ವಿವಿಧ ರೂಪಗಳು: ದುಃಖವು ಈ ಕೆಳಗಿನ ಮೂರು ರೂಪಗಳಲ್ಲಿ ಬರುತ್ತದೆ. ಗೌತಮ ಬುದ್ಧನು ಅವುಗಳನ್ನು ದುಷ್ಟತನದ ಮೂರು ಬೇರುಗಳು ಅಥವಾ ಮೂರು ಬೆಂಕಿ ಅಥವಾ ಮೂರು ವಿಷಗಳು ಎಂದು ವಿವರಿಸಿದ್ದಾನೆ.

- ದುರಾಸೆ ಮತ್ತು ಬಯಕೆ (ಹುಂಜ)
- ದ್ವೇಷ/ವಿನಾಶಕಾರಿ ಪ್ರಚೋದನೆಗಳು (ಹಾವು)
- ಅಜ್ಞಾನ/ಭ್ರಮೆ (ಹಂದಿ)

ಇವುಗಳಲ್ಲಿ ಪ್ರತಿಯೊಂದೂ ಪರಸ್ಪರ ಒಂದಕ್ಕೊಂದು ಒತ್ತಾಸೆಯಾಗುತ್ತವೆ.

ದುಃಖದ ನಿವಾರಣೆ ಹೇಗೆ?:

- ಅಪೇಕ್ಷೆಗಳನ್ನು ಸಂಪೂರ್ಣವಾಗಿ ಬಿಡುವ ಮೂಲಕ ದುಃಖಗಳನ್ನು ನಿವಾರಿಸಬಹುದು
- ಆಸೆಗಳನ್ನು ತೊಡೆದು ಹಾಕಿ ನಿರ್ವಾಣ ಅಥವಾ ಜ್ಞಾನೋದಯಕ್ಕೆ ಕಾರಣವಾಗುತ್ತದೆ.
- ನಿರ್ವಾಣವು ಲೋಭ, ಭ್ರಮೆ ಮತ್ತು ದ್ವೇಷ ಎಂಬ ಮೂರು ಅಗ್ನಿಗಳನ್ನು ನಂದಿಸುತ್ತದೆ.
- ನಿರ್ವಾಣವು ನಕಾರಾತ್ಮಕ ಭಾವನೆಗಳು ಮತ್ತು ಭಯರಹಿತವಾದ ಆಳವಾದ ಆಧ್ಯಾತ್ಮಿಕ ಸಂತೋಷವನ್ನು ತರುವ ಮನಸ್ಸಿನ ಸ್ಥಿತಿಯಾಗಿದೆ.
- ಜ್ಞಾನೋದಯವನ್ನು ಪಡೆದ ಯಾವುದಾದರೂ ವ್ಯಕ್ತಿ ಎಲ್ಲಾ ಜೀವಿಗಳ ಬಗ್ಗೆ ಸಹಾನುಭೂತಿಯಿಂದ ತುಂಬಿರುತ್ತಾನೆ .

ದುಃಖದ ನಿಲುಗಡೆಯ ಹಾದಿ: ಅಷ್ಟಾಂಗ ಮಾರ್ಗಗಳನ್ನು ಅನುಸರಿಸುವ ಮೂಲಕ ದುಃಖವನ್ನು ನಿವಾರಿಸಬಹುದು.

1. ಸೂಕ್ತವಾದ ನಂಬಿಕೆ **2.** ಸೂಕ್ತವಾದ ಯೋಚನೆ
3. ಸೂಕ್ತವಾದ ಮಾತು **4.** ಸೂಕ್ತವಾದ ನಡತೆ
5. ಸೂಕ್ತವಾದ ಜೀವನ **6.** ಸೂಕ್ತವಾದ ಪ್ರಯತ್ನ
7. ಸೂಕ್ತ ವಿಚಾರಗಳ ಗ್ರಹಿಕೆ
8. ಸೂಕ್ತ ರೀತಿಯ ಧ್ಯಾನ

ಬದುಕಿನ ಜಂಜಾಟಗಳಲ್ಲಿ ಕಳೆದುಹೋದವರಿಗೆ ಮನೋಚಿಕಿತ್ಸಕನ ರೂಪದಲ್ಲಿ ತನ್ನ ಧರ್ಮದ ತತ್ವಗಳನ್ನು ಬೋಧಿಸಿದ ಬುದ್ಧ, ಲೋಕ ಕಂಡ ಮೇರು ದಾರ್ಶನಿಕ. ಮನುಷ್ಯನ ಬದುಕಿನ ಅಂತಃಸತ್ವವನ್ನೇ ಕೇಂದ್ರವಾಗಿಟ್ಟುಕೊಂಡಿರುವ ಬುದ್ಧನ ತತ್ವಗಳು, ನೀತಿಶಾಸ್ತ್ರಕ್ಕೆ ಅಪರೂಪದ ಕೊಡುಗೆ ಎನಿಸಿವೆ.

ಬಹು ಆಯ್ಕೆಯ ಪ್ರಶ್ನೆಗಳು

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2023-24ರ ಕೇಂದ್ರ ಬಜೆಟ್‌ನಲ್ಲಿ ಭಾರತೀಯ ರೈಲ್ವೆಗೆ, ಒಟ್ಟು ₹ 2.40 ಲಕ್ಷ ಕೋಟಿಗಳನ್ನು ಮೀಸಲಿಡಲಾಗಿದೆ.
ಬಿ. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ 4ನೇ ಹಂತದ ಪ್ರಾರಂಭ ಮಾಡಲಾಗುವುದು ಎಂದು 2024-25ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿದೆ.
ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಬಾಹ್ಯಾಕಾಶ ಆರ್ಥಿಕತೆಯ ಉದ್ದೇಶಕ್ಕಾಗಿ ₹1,000 ಕೋಟಿ ಮೊತ್ತದ ವೆಂಚರ್ ಕ್ಯಾಪಿಟಲ್ ನಿಧಿಯನ್ನು ಸ್ಥಾಪಿಸಲಾಗುವುದು ಎಂದು 2024-25ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿದೆ.
ಬಿ. ಮೂಲ ಸಂಶೋಧನೆ ಮತ್ತು ಮೂಲ ಮಾದರಿಯ ಅಭಿವೃದ್ಧಿಗಾಗಿ ಅನುಸಂಧಾನ್ ರಾಷ್ಟ್ರೀಯ ಸಂಶೋಧನಾ ನಿಧಿಯನ್ನು ಕಾರ್ಯಗತಗೊಳಿಸಲಾಗುವುದು ಎಂದು 2024-25ರ ಕೇಂದ್ರ ಬಜೆಟ್ ನಲ್ಲಿ ಘೋಷಿಸಲಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಆಯುಷ್ಮಾನ್ ಭಾರತ್ -ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY) ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಂಚಿಯಲ್ಲಿ ಸೆಪ್ಟೆಂಬರ್ 23, 2018ರಂದು ಪ್ರಾರಂಭಿಸಿದರು.
ಬಿ. ಆಯುಷ್ಮಾನ್ ಭಾರತ್ ಯೋಜನೆಯ ಅಡಿ ಬಡ ಕುಟುಂಬಗಳಿಗೆ ವರ್ಷಕ್ಕೆ ₹10 ಲಕ್ಷದವರೆಗೆ ವಿಮಾ ಸೌಲಭ್ಯ ಕಲ್ಪಿಸಲಾಗುತ್ತದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಎ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಯುನಿವರ್ಸಲ್ ಹೆಲ್ತ್ ಕವರೇಜ್ (UHC) ದೃಷ್ಟಿಯನ್ನು ಸಾಧಿಸಲು ರಾಷ್ಟ್ರೀಯ ಆರೋಗ್ಯ ನೀತಿ 2017ರ ಶಿಫಾರಸಿನಂತೆ ಭಾರತ ಸರ್ಕಾರ ಆಯುಷ್ಮಾನ್ ಭಾರತ್ ಯೋಜನೆಯನ್ನು ಪ್ರಾರಂಭಿಸಿದೆ.
ಬಿ. 2024ರ ಪರಿಷ್ಕೃತ ಯೋಜನೆಯಲ್ಲಿ ಬಡ ಕುಟುಂಬಗಳಿಗೆ ₹5 ಲಕ್ಷದವರೆಗಿನ ವಿಮಾ ಸೌಲಭ್ಯದ ಜೊತೆಗೆ ಹೆಚ್ಚುವರಿಯಾಗಿ ಆದಾಯದ ಇತಿ ಮಿತಿಗಳಿಲ್ಲದೆ, 70 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಿಗೆ ವಾರ್ಷಿಕ ₹5 ಲಕ್ಷದವರೆಗೆ ವಿಮಾ ಸೌಲಭ್ಯ ಸಿಗಲಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2024ರಲ್ಲಿ ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯನ್ನು ಜಾರಿಗೊಳಿಸಲಾಗಿದೆ.
ಬಿ. 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯಡಿ ಸಾಮಾನ್ಯ ವರ್ಗದ 19 ಲಕ್ಷ ಕುಟುಂಬಗಳಿಗೆ ರಾಜ್ಯ ಸರ್ಕಾರವೇ ಶೇ 100ರಷ್ಟು ವೆಚ್ಚ ಭರಿಸುತ್ತದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Prose The Concert

9.Can you say that the concert was entertaining to Smita? Justify your answer

Ans: Yes, it was more than entertaining for Smita because when she listened to the music, it was as if the gates of enchantment and wonder were opening. She had listened to music in a spellbound state. However, we cannot forget the fact that one part of her kept remembering the wish of her brother and the anxiety of not knowing whether the maestro would agree to come and play for the boy must have been agonising for Smita.

10.Smita was nervous as she stood before the wizard. Which sentence suggests this?

Ans: Smita was nervous as she stood before the wizard. This suggests in the following sentences.

i) her heart beating loudly.
ii) her knees felt weak.
iii) her tongue dry

11.Did Pandit Ravi Shankar and Ustad Allah Rakha perform in the boy's house? Do you think this was an unusual incident? If yes, give reasons.

Ans: Yes, it was certainly an unusual incident. We do not expect such distinguished artistes to give private performances. In fact, getting their dates even for public performances is an uphill task. Moreover, Smita's family is not an influential or wealthy family. Aunt Sushila's apartment was a small one. All these reasons make the incident extraordinary.

Think About The Text

1.Do you like the story? Why?

I like/don't like, because.....(One reason . is given. You maygive as many other reasons as you like)

Ans: I like this story because

a) This is a story about music.
b) This is a real story.
c) This story has a good feel.
d) This is a story about a great person.
e) This story emphasizes the humanity and kindness.
f) This story shows compassion.

2. In your opinion, which words in the list below describe Anant's character or state? Write Yes/No in the space given.

[Refer to a dictionary for the words that you are not sure of]

The boy is ....
a. energetic ....
b. robust ....
c. aesthetic ....
d. imaginative ....
e. confident ....

Ans:-

a. energetic - No
b. robust - No
c. aesthetic - Yes
d. imaginative- No
e. confident - Yes

3.Look at the following phrases in the lesson. They are description Categorise them columns'A' and 'B' appropriately, {spellbound; unfolding the gates of enchantment; plaintive notes; fast twinkling ones first notes; wonder; dream; unfolding ragas}.

A	B
Descriptive of music	Descriptive of Smita's feelings

Ans:

A	B
Descriptive of music	Descrptive of Smita's feelings
first notes	spellbound
unfolding ragas	wonder
plaintive notes	dream
fast twinkling ones	unfolding the gates of enchantment

4. Ustad Sahib and Pandit Ravi Shankar agreed to perform for the boy. What made them agree to do so? What would have you done if you were the musician?

Ans: Ustad Sahib and Pandit Ravi Shankar agreed to perform for the boy. The boy was in the last stage of his life. His last desire was this. And he was not able to come and attend the concert. Because of his pitiable condition, they agreed to do so. Whoever may be in that situation not only I, everyone should do the same.

5.What arrangement would you make if Pandit Ravi Shankar and Allah Rakha were coming toyour house? [You may include in your answer such arrangements. one example is given. Think of others and write them in the bubbles].

Note: Answer need not be the same for all.



Ans: (Contd......)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

Coordination Compound

15. Discuss the nature of bonding in the following coordination entities on the basis of valence bond theory:

(i) $[Fe(CN)_6]^{4-}$ (ii) $[FeF_6]^{3-}$
(iii) $[Co(C_2O_4)_3]^{3-}$ (iv) $[CoF_6]^{3-}$

Ans: **(.........Contd)**

Thus, the geometry of the complex is octahedral, and it is a diamagnetic complex (since all the electrons are paired).

(ii) $[FeF_6]^{3-}$ In this coordinate entity, the oxidation state of iron is +3 Orbitals of Fe^{+3} ion



There are 6 F^- ions. Hence, it will go through d^2sp^3 or sp^3d^2 hybridisation.

Since F^- is a weak field ligand, it does not cause the pairing of the electrons in the 3d orbital. Thus, the most practical hybridisation is sp^3d^2. sp^3d^2 hybridised orbitals of Fe are :



6 pairs of electrons from F^- ions

Thus, the geometry of this coordination entity is octahedral.

(iii) $[Co(C_2O_4)_3]^{3-}$

In this complex, the oxidation state of cobalt is +3. Orbitals of Co^{3+} ion :



Oxalate is a weak field ligand. Thus, it will not cause the pairing of the 3d orbital electrons. As there are 6 ligands, hybridisation has to be either sp^3d^2 or d^2sp^3 hybridisation. sp^3d^2 hybridisation of Co^{3+} :



The 6 electron pairs from the 3 oxalate ions (oxalate anion is a bidentate ligand) occupy these sp^3d^2 orbitals :



6 pairs of electrons from 3 oxalate ions

Thus, the complex shows octahedral geometry.

(iv)) $[CoF_6]^{3-}$

In this complex, Cobalt has an oxidation state of +3. Orbitals of Co^{3+} ion:



As fluoride ion is a weak field ligand, it will not cause the 3d electrons to pair. Hence, the Co^{3+} ion will go through sp^3d^2 hybridisation.

sp^3d^2 hybridised orbitals of Co^{3+} ion are :



6 pairs of electrons from F^- ions

Thus, the complex has a geometric configuration of an octahedral, and it is paramagnetic.

17. What is the spectrochemical series? Explain the difference between a weak field ligand and a strong field ligand.

Ans: A series of common ligands in ascending order of their crystal-field splitting energy (CFSE) is termed as the Spectrochemical series. Strong field ligands have larger values of CFSE. Whereas weak field ligands have smaller values of CFSE.

18. What is crystal field splitting energy? How does the magnitude of Δo decide the actual configuration of d orbitals in a coordination entity?

Ans: Crystal-field splitting energy is the difference in the energy between the two levels (i.e., t_{2g} and e_g) that have split from a degenerated d orbital because of the presence of a ligand. It is symbolised as Δo.

Once the orbitals split up, electrons start filling the vacant spaces. An electron each goes into the three t_{2g} orbitals, the fourth electron, however, can enter either of the two orbitals:

(1) It can go to the e_g orbital (producing $t_{2g}^3e_g^1$ like electronic configuration), or

(2) it can go to the t_{2g} orbitals (producing $t_{2g}^4e_g^0$ like electronic configuration).

This filling of the fourth electron is based on the energy level of Δo. If a ligand has an Δo value smaller than the pairing energy, then the fourth electron enters the e_g orbital. However, if the value of Δo is greater than the value of pairing energy, the electron enters t_{2g}orbital.

ವಲಸಿಗರಿಗೆ ಕನ್ನಡ ಕಲಿಯಲು ಕಾಲಮಿತಿ ಅಗತ್ಯ: ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊರುಚ ಅಭಿಮತ

‘ಬಹುಸಂಸ್ಕೃತಿ ಒಪ್ಪಿಕೊಳ್ಳುವಂತೆ ಮಾಡಬೇಕು’

• ಆರ್.ಮಂಜುನಾಥ್

ಬೆಂಗಳೂರು: ಬಹುಮುಖ್ಯವಾಗಿ ಜನರಲ್ಲಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಒಂದಾಗಿರುವ, ಸಮುದಾಯದಲ್ಲಿ ಸೌಹಾರ್ದ ಮೂಡಿಸುವ ವಾತಾವರಣ ನಿರ್ಮಾಣವಾಗಬೇಕಾದ ಅಗತ್ಯವಿದೆ. ಬಹು ಸಂಸ್ಕೃತಿಯನ್ನು ಜನರು ಒಪ್ಪಿಕೊಳ್ಳುವಂತಹ ಕೆಲಸವಾಗಬೇಕು. ಅದುವೇ ನಿಜವಾದಂತಹ ಪ್ರಜಾಪ್ರಭುತ್ವದ ಲಕ್ಷಣ ಎಂದು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅಭಿಪ್ರಾಯಪಟ್ಟರು.

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾಗಿರುವ ಅವರು, ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದರು.

‘ನುಡಿಹಬ್ಬದಲ್ಲಿ ಚರ್ಚೆಯಾಗಬೇಕಾದ ವಿಷಯಗಳೇನು’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದ ಹಲವು ಭಾಗದ ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರು ಕನ್ನಡ ಸಾಹಿತ್ಯ ಸಮ್ಮೇಳನ ದಲ್ಲಿ ಭಾಗವಹಿಸುತ್ತಾರೆ. ಸಾಹಿತ್ಯಿಕ ವಿಷಯಗಳ ಜೊತೆಗೆ ಜನರ ಬದುಕಿಗೆ ಸಂಬಂಧಿಸಿದ ವಿಷಯಗಳ ಬಗ್ಗೆಯೂ ಚರ್ಚೆ ಮಾಡಬೇಕಾದ ಅಗತ್ಯವಿದೆ’ ಎಂದರು.

‘ಅದರಲ್ಲೂ ಸಮಕಾಲೀನ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡಿ, ಆ ವೇದಿಕೆ ಮೂಲಕ ಸಾರ್ವತ್ರಿಕ ಸಂದೇಶ ನೀಡಬೇಕು. ಎಲ್ಲ ವಿಷಯಗಳ ಬಗ್ಗೆ ಚರ್ಚೆ ಮಾಡಲು ಸಾಧ್ಯವಿಲ್ಲದಿದ್ದರೂ ತುರ್ತು ವಿಚಾರಗಳಿಗೆ ಆದ್ಯತೆ ಕೊಡಬೇಕು’ ಎಂದು ಸಲಹೆ ನೀಡಿದರು.

• ಕನ್ನಡದ ಆತಂಕಗಳನ್ನು ದಾಟಲು ಆಗಬೇಕಾಗಿರುವುದೇನು?

ರಾಜ್ಯದಲ್ಲಿ ನೆಲಸಿರುವಂತಹ ಹೊರ ರಾಜ್ಯದವರಿಗೆ ಕನ್ನಡ ಕಲಿಸಲೇಬೇಕು. ಅವರು ಗರಿಷ್ಠ ಐದು ವರ್ಷದಲ್ಲಿ ಕನ್ನಡ ಕಲಿಯಲು ಕಾಲಮಿತಿ ನಿಗದಿ ಮಾಡಬೇಕು. ಈ

ಪ್ರಜಾವಾಣಿ ಸಂದರ್ಶನ

ಇದಕ್ಕಾಗಿ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಕನ್ನಡ ಮಾತನಾಡಲೇಬೇಕೆಂಬ ಅನಿವಾರ್ಯ ಸ್ಥಿತಿ ರಾಜ್ಯದಲ್ಲಿ ಸೃಷ್ಟಿಯಾಗಬೇಕು. ಕನ್ನಡದ ಸತ್ವ, ಸೊಗಸು, ಕನ್ನಡ ಬಳಕೆಯಿಂದಾಗುವಂತಹ ಲಾಭದ ಬಗ್ಗೆ ಕನ್ನಡೇತರರಿಗೆ ಮನದಟ್ಟು ಮಾಡಿಕೊಡಬೇಕು. ಇದರ ಜೊತೆಗೆ, ಸಾಹಿತ್ಯದ ಮೂಲಕ ಎಲ್ಲ ಮಾಧ್ಯಮಗಳಲ್ಲಿ ಕನ್ನಡಿಗರಲ್ಲೂ ಭಾಷೆ ಬಗ್ಗೆ ಅಭಿಮಾನ ಮೂಡಿಸಬೇಕು.

‘ನಮ್ಮ ಮುಖ್ಯಮಂತ್ರಿಯವರು ಇತ್ತೀಚೆಗೆ ಎಲ್ಲರೂ ಕನ್ನಡ ಕಲಿಯಬೇಕು ಎಂದು ಘೋಷಿಸಿದ್ದಾರೆ. ಅದು ದೊಡ್ಡ ಪ್ರಮಾಣದಲ್ಲಾಗಬೇಕು. ಕಾಲಮಿತಿ ಹಾಕದಿದ್ದರೆ ಯಾವುದೂ ಸಾಧ್ಯವಾಗುವುದಿಲ್ಲ.

• ಕನ್ನಡದ ಹಿತಕ್ಕೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳೇನು?

ಜನರಲ್ಲಿ ಭಾಷೆ ಬಗ್ಗೆ ಅಭಿಮಾನ ಉಂಟು ಮಾಡಬೇಕಾದ ಕೆಲಸವನ್ನು ಸರ್ಕಾರ ಮಾತ್ರ ಮಾಡಿದರೆ ಸಾಲದು. ಶಿಕ್ಷಣ ಸಂಸ್ಥೆಗಳು, ಸಾಹಿತ್ಯ ಪರಿಷತ್ತು ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಭಾಷೆಯನ್ನು ಉತ್ತೇಜಿಸುವಂತಹ ಕಾರ್ಯಕ್ರಮಗಳಿಗೆ ಆದ್ಯತೆ ನೀಡಬೇಕು. ಪೋಷಕರೊಂದಿಗೆ ಹೆಚ್ಚು ನಿಕಟ ಸಂಪರ್ಕ ಹೊಂದಿರುವ ಶಿಕ್ಷಕರು, ಭಾಷೆ ಕಲಿಯುವ ಬಗ್ಗೆ ಅರಿವು ಮೂಡಿಸಬೇಕು. ಸಾಮಾನ್ಯ ಜನರೊಂದಿಗೆ ಸಂಪರ್ಕ ಹೊಂದುವ ಮೂಲಕ ಸಾಹಿತಿಗಳೂ ಕನ್ನಡ ಭಾಷೆ ಬೆಳವಣಿಗೆಗೆ ಸಹಕಾರಿಯಾಗಬೇಕು. ಇದಕ್ಕೆಲ್ಲ ಸರ್ಕಾರ ಉತ್ತೇಜನ ನೀಡಬೇಕು. ಅದಕ್ಕೆ ಅಗತ್ಯವಾದ ನೀತಿಗಳನ್ನು ರೂಪಿಸಿ ಅವು ಅನುಷ್ಠಾನವಾಗುವಂತೆ ನೋಡಿಕೊಳ್ಳಬೇಕು.

• ಕನ್ನಡ, ಕರ್ನಾಟಕಕ್ಕೆ ಎದುರಾಗಿರುವ ಆತಂಕಗಳನ್ನು ದಾಟಲು ಸರ್ಕಾರ ಮತ್ತು ಕನ್ನಡಿಗರು ತುರ್ತಾಗಿ ಮಾಡಬೇಕಾದುದೇನು?

ಭಾಷೆ, ಗಡಿ, ಜಲ, ವಲಸಿಗರ ಸಮಸ್ಯೆ ಗಳಲ್ಲಿ ಕೆಲವನ್ನು ರಾಜ್ಯ ಸರ್ಕಾರವೇ ನಿರ್ಣಯ ಮಾಡಿ ಪರಿಹರಿಸಲು ಸಾಧ್ಯವಿದೆ. ಅದಕ್ಕೆ ಬೇಕಾದ ಒತ್ತಡ ನಮ್ಮ ಜನಸಮುದಾಯ ಹಾಗೂ ಸಾಹಿತಿಗಳಿಂದಲೇ ಬರಬೇಕು. ಸಮಸ್ಯೆಯನ್ನು ಪರಿಹರಿಸುವುದು ಅಗತ್ಯ ಎಂಬುದನ್ನು ಸರ್ಕಾರಕ್ಕೆ ಅರ್ಥ ಮಾಡಿಸಬೇಕು. ಪ್ರಜಾಪ್ರಭುತ್ವದಲ್ಲಿ ಜನರ ಒತ್ತಾಯವೇ ಅತಿಮುಖ್ಯ. ಅಂತರ ರಾಜ್ಯ ಸಮಸ್ಯೆಗಳಿಗೆ ಕೇಂದ್ರ ಸರ್ಕಾರವೇ ಹೊಣೆ ಹೊರಬೇಕು. ಕೇಂದ್ರ ಸರ್ಕಾರ ಎರಡೂ ರಾಜ್ಯಗಳ ಮುಖ್ಯಸ್ಥರನ್ನು ಅಂತರ ರಾಜ್ಯ ಸಮಸ್ಯೆಗಳನ್ನು ಬಗೆಹರಿಸಬೇಕು. ಹಾಗೆ ಮಾಡಿ ಎಂದು ಒತ್ತಡ ಹಾಕುವುದು ಜನರ ಜವಾಬ್ದಾರಿ.

• ಪರಿಷತ್‌ಗೆ ಅನುದಾನದ ಅಗತ್ಯವಿದೆಯೇ?

ಸರ್ಕಾರದ ಹಂಗಿಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ಆರ್ಥಿಕವಾಗಿ ಸ್ವಾವಲಂಬಿಯಾಗಿರಬೇಕು ಎಂಬುದು ನನ್ನ ಆಸೆಯಾಗಿತ್ತು. ಅದಕ್ಕಾಗಿಯೇ ‘ಒಬ್ಬ ಕನ್ನಡಿಗ ಒಂದು ರೂಪಾಯಿ’ ಎಂಬ ಹಣ ಸಂಗ್ರಹ ಕಾರ್ಯಕ್ರಮ ಆರಂಭಿಸಿದ್ದೆ. ಆದರೆ ಅದು ಮುಂದುವರಿಯಲಿಲ್ಲ. ಸರ್ಕಾರದ ಅನುದಾನ ಬೇಡ ಎಂದು ಹೇಳುವ ಅಗತ್ಯ ಇಲ್ಲ. ಅನುದಾನ ನೀಡುವುದು ಸರ್ಕಾರದ ಕರ್ತವ್ಯ. ಆದರೆ ಆ ಅನುದಾನ ಸದುಪಯೋಗವಾಗಬೇಕು ಎಂಬುದು ನನ್ನ ನಿರೀಕ್ಷೆ.

ಗೊರುಚ ಹೇಳಿದ್ದೇನು?

- ಯಾವುದೇ ಸಂಸ್ಕೃತಿಯನ್ನು ಹತ್ತಿಕ್ಕುವ ಅಥವಾ ಉಪೇಕ್ಷೆ ಮಾಡುವುದು ಒಳ್ಳೆಯದಲ್ಲ. ಎಲ್ಲರೂ ಬದುಕುವಂತಹ ಸೌಹಾರ್ದಯುತ ವಾತಾವರಣಕ್ಕೆ ಪೂರಕವಾಗುವ ಸಾಹಿತ್ಯವೂ ಸೃಷ್ಟಿಯಾಗಬೇಕು. ಸರ್ಕಾರವೂ ಅದಕ್ಕೆ ಮನ್ನಣೆ ಕೊಡಬೇಕು.
- ಹಲವು ಸಂದರ್ಭದಲ್ಲಿ ರಾಜಕೀಯ ಕಾರಣಗಳಿಂದ ಕೆಲವು ಸಮಸ್ಯೆಗಳನ್ನು ಜೀವಂತವಾಗಿಡುವಂತಹ ಹುನ್ನಾರವೂ ಇದೆ. ಅದು ಒಳ್ಳೆಯದಲ್ಲ, ಅದು ರಾಷ್ಟ್ರದ ಪ್ರಗತಿಗೆ ಭಂಗ ತರುವಂತಹದ್ದು.
- ಸಾಹಿತ್ಯದಲ್ಲಿ ಬಿಕ್ಕಟ್ಟಿಲ್ಲ, ಸಾಹಿತಿಗಳಲ್ಲಿ ಇರಬಹುದು. ಒಬ್ಬೊಬ್ಬರ ವಿಚಾರಧಾರೆ ಒಂದೊಂದು ರೀತಿ ಇರುತ್ತದೆ. ಅದು ಚರ್ಚೆಯ ವಸ್ತುವಾದರೆ ಅದರಿಂದ ಹೊಸ ವಿಚಾರಗಳು ಹೊಮ್ಮುತ್ತದೆ.
- ಬೆಂಗಳೂರಿನಲ್ಲಿ ಕನ್ನಡ ಮಲಿನಗೊಂಡಿದೆ. ಇಲ್ಲಿ ಭಾಷೆ ಬಳಸುವಾಗ ಯಾವ ಮಾನದಂಡವೂ ಇಲ್ಲದಂತಾಗಿದೆ. ಕನ್ನಡಿಗರಲ್ಲಿ ಮೊದಲು ಭಾಷೆ ಬಗ್ಗೆ ಅಭಿಮಾನ ಇರಬೇಕು. ಆ ಅಭಿಮಾನವನ್ನು ಕನ್ನಡೇತರರಲ್ಲೂ ಬೆಳೆಸಬೇಕು.



ಜಾನಪದ ವಿದ್ವಾಂಸರು ಗೊ.ರು. ಚನ್ನಬಸಪ್ಪ

‘ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಲಿ’

‘ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೇ ಇರಬೇಕು. ಇದನ್ನು ಜಗತ್ತಿನ ಎಲ್ಲ ಶಿಕ್ಷಣ ತಜ್ಞರು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರ ಶಿಕ್ಷಣ ನೀತಿಯನ್ನು ರೂಪಿಸಲು ದಿಟ್ಟ ಕ್ರಮ ಕೈಗೊಳ್ಳಬೇಕು. ಒಂದು ಬಾರಿ ಕಡ್ಡಾಯವಾದರೆ ಜನರೂ ಅದಕ್ಕೆ ಒಗ್ಗಿಕೊಂಡು, ಒಪ್ಪಿಕೊಂಡುಬಿಡುತ್ತಾರೆ’ ಎಂದು ಗೊ.ರು. ಚನ್ನಬಸಪ್ಪ ಅಭಿಪ್ರಾಯಪಟ್ಟರು.

‘ಕನ್ನಡಕ್ಕೆ ಈಗಿನ ತೊಂದರೆ ಎಂದರೆ ಇಂಗ್ಲಿಷ್. ಪೋಷಕರಿಗೆ ನಮ್ಮ ಮಕ್ಕಳ ಭವಿಷ್ಯ ಭದ್ರವಾಗಬೇಕೆಂಬ ಉದ್ದೇಶದಿಂದ ಜಗತ್ತಿನಲ್ಲಿ ಹೆಚ್ಚು ವ್ಯಾವಹಾರಿಕ ಭಾಷೆಯಾಗಿರುವ ಇಂಗ್ಲಿಷ್‌ಗೆ ಪ್ರಾಮುಖ್ಯ ನೀಡುತ್ತಿದ್ದಾರೆ. ನಾವು ಇಂಗ್ಲಿಷ್ ಕಲಿಯುವುದನ್ನು ಬೇಡ ಎನ್ನುವ ಅಗತ್ಯವಿಲ್ಲ. ಆದರೆ, ಕನ್ನಡ ಮೊದಲಾಗಬೇಕು. ಬೇರೆಬೇರೆ ವಿಷಯಗಳಿಗೆ ನೀಡಲಾಗುತ್ತಿರುವ ತರಬೇತಿಯನ್ನು ಇಂಗ್ಲಿಷ್ ಕಲಿಕೆಗೂ ನೀಡಬೇಕು. ಇಂತಹ ತರಬೇತಿ ಪ್ರಾಥಮಿಕ ಶಿಕ್ಷಣದಲ್ಲೇ ಸಿಗುತ್ತದೆ ಎಂಬ ಭರವಸೆ ಪೋಷಕರಲ್ಲಿ ಬಂದು, ಅದು ಮನದಟ್ಟಾದರೆ ಯಾರೂ ವಿರೋಧ ಮಾಡುವುದಿಲ್ಲ’ ಎಂದರು.

ಕನ್ನಡದ ಕಟ್ಟಾಳು

1930ರ ಮೇ 18ರಂದು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಗೊಂಡೇದಹಳ್ಳಿಯಲ್ಲಿ ಜನಿಸಿದ ಗೊಂಡೇದಹಳ್ಳಿ ರುದ್ರಪ್ಪ ಚನ್ನಬಸಪ್ಪ ಅವರು ಹಡಗಲು ತಿಮ್ಮಾಪುರದಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದರು. 1944-48ರಲ್ಲಿ ಅಜ್ಜಂಪುರ, ಬೀರೂರು, ಕಡೂರು, ಮಾಯಕೊಂಡದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸಿದ್ದರು. 1948ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದ ಗೊರುಚ, ಗಾಂಧಿಗ್ರಾಮದಲ್ಲಿ ಸಮಾಜ ಶಿಕ್ಷಣ ತರಬೇತಿ ಪಡೆದು, ಭೂದಾನ ಚಳವಳಿ, ವಯಸ್ಕರ ಶಿಕ್ಷಣ, ಸೇವಾದಳಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಧಾನ ಕಮಿಷನರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದರು.

ಮಹಾದೇವಿ, ಸದಾಶಿವ ಶಿವಾಚಾರ್ಯ, ಕರ್ನಾಟಕ ಪ್ರಗತಿಪಥ, ಚೆಲುವಾಂಬಿಕೆ, ಕುನಾಲ, ಸಾಕ್ಷಿ ಕಲ್ಲು, ಬೆಳ್ಳಕ್ಕಿ ಹಿಂಡು ಬೆದರ್‍ಯಾವೊ, ಬಾಗೂರು ನಾಗಮ್ಮ, ಗ್ರಾಮಗೀತೆಗಳು, ವಿಭೂತಿ, ಕರ್ನಾಟಕ ಜನಪದ ಕಲೆಗಳು ಸೇರಿದಂತೆ 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ 1975-77ರಲ್ಲಿ ಜಾನಪದ ವಿಭಾಗದ ಸಂಚಾಲಕರಾಗಿದ್ದರು. 1987-88ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂಪಾದಕರಾಗಿದ್ದರು. 1989-92ರಲ್ಲಿ ಪರಿಷತ್ ಗೌರವ ಕಾರ್ಯದರ್ಶಿಯಾಗಿ ಮೂರು ಸಮ್ಮೇಳನಗಳ ನಿರ್ವಹಣೆ ಮಾಡಿದ್ದರು. 1990ರಲ್ಲಿ ಪರಿಷತ್‌ನಲ್ಲಿ ಪ್ರಥಮ ಬಾರಿಗೆ ಬಂಡಾಯ ಸಾಹಿತ್ಯ ಸಮಾವೇಶ ಆಯೋಜಿಸಿದ್ದರು. 1992-95ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಮೂರು ಸಮ್ಮೇಳನಗಳನ್ನು ನಡೆಸಿ, ‘ಒಬ್ಬ ಕನ್ನಡಿಗ ಒಂದು ರೂಪಾಯಿ’ ಎಂಬ ಘೋಷಣೆಯೊಂದಿಗೆ ದೇಣಿಗೆ ಸಂಗ್ರಹಿಸುವ ಮೂಲಕ ಪರಿಷತ್ ಅನ್ನು ಆರ್ಥಿಕವಾಗಿ ಸ್ವಾವಲಂಬಿ ಮಾಡಲು ಶ್ರಮಿಸಿದ್ದರು.

ಭೂ–ವಿದ್ಯಾದಾನ ಶಾಲಾ ಜಮೀನುಗಳ ಗೇಣಿ ರೈತರ ಹೋರಾಟ ಸಮಿತಿ ನಿರ್ಧಾರ

ಗೇಣಿ ಸಮಸ್ಯೆ: ಸರಿಪಡಿಸದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ–ವಿದ್ಯಾದಾನ ಶಾಲಾ ಜಮೀನುಗಳ ಗೇಣಿದಾರರಿಗೆ ಡಿಸೆಂಬರ್ 31ರ ಒಳಗೆ ಭೂ ಒಡೆತನದ ಹಕ್ಕುಪತ್ರ ನೀಡದೇ ಇದ್ದರೆ ಹೊಸವರ್ಷದ ಮೊದಲ ದಿನ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಭೂ–ವಿದ್ಯಾದಾನ ಶಾಲಾ ಜಮೀನುಗಳ ಗೇಣಿದಾರರು ನಿರ್ಧರಿಸಿದ್ದಾರೆ.

45 ವರ್ಷಗಳ ಹಿಂದಿನ ಕನ್ನಡಪರ ಹೋರಾಟದ ಯಶಸ್ಸಿನ ಬಗ್ಗೆ ಹಾಗೂ ಶಾಲಾ ಜಮೀನು ಗೇಣಿ ರೈತರ ಸಮಸ್ಯೆಯ ಬಗ್ಗೆ ಚರ್ಚಿಸಲು ಬುಧವಾರ ನಗರದಲ್ಲಿ ನಡೆದ ಗೇಣಿ ರೈತರ ಹೋರಾಟ ಸಮಿತಿಯ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

‘ಭೂಸುಧಾರಣಾ ಕಾಯ್ದೆ ಅನುಷ್ಠಾನಗೊಂಡಿದ್ದರೂ ಕೆಲವೆಡೆ ಶಾಲಾ ಜಮೀನು ಗೇಣಿ ಪದ್ಧತಿ ಮುಂದುವರಿದಿದೆ. ಈ ಪದ್ಧತಿಯನ್ನು ರದ್ದು ಮಾಡಿ, ಉಳುಮೆ ಮಾಡುತ್ತಿರುವವರಿಗೆ ಜಮೀನು ಮಂಜೂರು ಮಾಡಬೇಕು’ ಎಂದು ಸಮಿತಿಯ ಅಧ್ಯಕ್ಷ ಕಲ್ಲೂರು ಮೇಘರಾಜ ಆಗ್ರಹಿಸಿದರು.

ಭೂದಾನ ಚಳವಳಿಯ ಭಾಗವಾಗಿ ಶಿವಮೊಗ್ಗ ಸೇರಿದಂತೆ ರಾಜ್ಯದ ಅನೇಕ ಕಡೆಗಳಲ್ಲಿ ಸರ್ಕಾರಿ ಶಾಲೆಗಳಿಗೆ ಜಮೀನು ನೀಡಲಾಗಿತ್ತು. ಆದರೆ, ಅದನ್ನು ಶಾಲೆಗೆ ಬಳಸಿಕೊಳ್ಳುವ ಬದಲು ಗೇಣಿಗೆ ನೀಡಲಾಗಿದೆ. ಹಾಗಾಗಿ ರೈತರಿಗೆ ಮಾಲೀಕತ್ವದ ಹಕ್ಕು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್, ‘ಶಾಲೆಗಳಿಗೆ ಯಾವುದೇ ತೊಂದರೆಯಾಗದಂತೆ ಗೇಣಿ ವ್ಯವಸ್ಥೆಯನ್ನು ಸರಿಪಡಿಸಬೇಕು’ ಎಂದು ಸಲಹೆ ನೀಡಿದರು.

ಜೆಡಿಯು ರಾಜ್ಯ ಘಟಕದ ಅಧ್ಯಕ್ಷ ಮಹಿಮ ಪಟೇಲ್ ಮಾತನಾಡಿ, ‘ಇತಿಹಾಸದ ಜೊತೆಗೆ ಭವಿಷ್ಯವನ್ನು ರೂಪಿಸಲು ಸರ್ಕಾರ ಚಿಂತನೆ ನಡೆಸಬೇಕು. ಭಾಷಾ ನೀತಿಯಿಂದಾಗಿ ಮಕ್ಕಳು ಗೊಂದಲದಲ್ಲಿದ್ದಾರೆ. ರಾಜಕಾರಣದಲ್ಲಿ ಕೆಟ್ಟ ಭಾಷೆ ಬಳಕೆಯಾಗುತ್ತಿರುವುದು ಖಂಡನೀಯ’ ಎಂದರು.

ಸಮಾಜವಾದಿ ಮುಖಂಡ ಬಿ.ಆರ್. ಜಯಂತ್, ಸಮಿತಿಯ ಗೌರವ ಅಧ್ಯಕ್ಷ ಬಿ. ಸ್ವಾಮಿರಾವ್, ಕಲ್ಲನ್, ಪಾಣಿರಾಜಪ್ಪ, ಇ.ವಿ. ಸತ್ಯನಾರಾಯಣ ಭಾಗವಹಿಸಿದ್ದರು.

ದೇ.ಜವರೇಗೌಡ ಮತ್ತು ಸಿದ್ದಯ್ಯ ಪುರಾಣಿಕ ಅವರ ಭಾವಚಿತ್ರಕ್ಕೆ ಕಲ್ಲೂರು ಮೇಘರಾಜ, ಸಿ. ಸೋಮಶೇಖರ್, ಬಿ. ಸ್ವಾಮಿರಾವ್, ಮಹಿಮ ಪಟೇಲ್, ಕಲ್ಲನ್, ಬಿ. ಆರ್. ಜಯಂತ್ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

‘ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ತರಬೇತಿಗೆ ಚಿಂತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ವರ್ಷದಿಂದ ಸರ್ಕಾರಿ ಪದವಿಪೂರ್ವ ಕಾಲೇಜುಗಳು ಮತ್ತು ಆದರ್ಶ ವಿದ್ಯಾಲಯಗಳಲ್ಲಿ ವಿಜ್ಞಾನ ವಿಷಯ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ನೀಟ್, ಜೆಇಇ, ಸಿಇಟಿಗೆ ಉಚಿತ ತರಬೇತಿ ವಿಸ್ತರಿಸುವ ಚಿಂತನೆಯಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಪೇಸ್ ಸಂಸ್ಥೆಯಿಂದ ಈ ವರ್ಷ ಒಟ್ಟು 25 ಸಾವಿರ ವಿದ್ಯಾರ್ಥಿ ಗಳಿಗೆ ನೀಟ್, ಜೆಇಇ, ಸಿಇಟಿ ಉಚಿತ ತರಬೇತಿಗೆ ಬುಧವಾರ ಚಾಲನೆ ನೀಡಿ, ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರ ಜೊತೆ ಸಂವಾದ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ವೈದ್ಯರು, ಎಂಜಿನಿಯರ್ ಆಗಬೇಕೆಂಬ ಬಡವರ ಮಕ್ಕಳ ಕನಸು ನನಸಾಗಿಸಲು, ಪಾಲಕರಿಗೆ ತರಬೇತಿ ವೆಚ್ಚದ ಹೊರೆ ಆಗದಂತೆ ನೋಡಿಕೊಳ್ಳಲು ಸರ್ಕಾರ ಈ ವ್ಯವಸ್ಥೆ ಮಾಡಿದೆ. ಈ ವರ್ಷ ಪಿಯು ವಿಜ್ಞಾನ ಮೊದಲ ಮತ್ತು ಎರಡನೇ ವರ್ಷದ ಒಟ್ಟು 10 ಸಾವಿರ ಮತ್ತು ಆದರ್ಶ ವಿದ್ಯಾಲಯದ ಐದು ಸಾವಿರ ಸೇರಿ ಒಟ್ಟು 25 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿಗೆ ಪ್ರತ್ಯೇಕ ಲಾಗಿನ್ ಐಡಿ, ಪುಸ್ತಕಗಳನ್ನು ವಿತರಿಸಲಾಗುವುದು. ಪ್ರತಿದಿನದ ತರಗತಿಗೆ ಮೊದಲು ಮತ್ತು ನಂತರ ತಲಾ ಒಂದು ಗಂಟೆ ಆನ್‌ಲೈನ್‌ನಲ್ಲೇ ತರಬೇತಿ ನೀಡಿ ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಗೊಳಿಸಲಾಗುವುದು’ ಎಂದರು.

‘ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಯೋಜನೆ ಪ್ರಕಟಿಸಿ ₹12.50 ಕೋಟಿಯನ್ನು ಮುಖ್ಯಮಂತ್ರಿ ಮೀಸಲಿರಿಸಿದ್ದಾರೆ. ಟೆಂಡರ್‌ನಲ್ಲಿ ಭಾಗವಹಿಸಿದ್ದ ಪೇಸ್ ಸಂಸ್ಥೆ ₹7 ಕೋಟಿಗೆ ಒಪ್ಪಂದ ಮಾಡಿಕೊಂಡಿದೆ. ಪ್ರಸಕ್ತ ಸಾಲಿನ ಮತ್ತು ಮುಂದಿನ ವರ್ಷದ ತರಬೇತಿಯನ್ನು ಇದೇ ಸಂಸ್ಥೆ ನಿರ್ವಹಿಸಲಿದೆ’ ಎಂದರು.

ಪೇಸ್ ಸಂಸ್ಥೆ ನಿರ್ದೇಶಕ ಪ್ರವೀಣ್ ತ್ಯಾಗಿ ಮಾತನಾಡಿ, ‘ಬಡ ಮಕ್ಕಳಿಗೆ ನೀಟ್, ಜೆಇಇ, ಸಿಇಟಿ ಎದುರಿಸಲು ಉಚಿತ ತರಬೇತಿ ನೀಡುವ ಅವಕಾಶ ನಮ್ಮ ಸಂಸ್ಥೆಗೆ ಲಭಿಸಿರುವುದು ಖುಷಿ ತಂದಿದೆ’ ಎಂದರು.

ಸಂವಾದದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು, ‘ರಾಜ್ಯದ ಸರ್ಕಾರಿ ಪಿಯು ಕಾಲೇಜಿನ ಎಲ್ಲ ವಿಜ್ಞಾನ ವಿದ್ಯಾರ್ಥಿಗಳಿಗೆ ಈ ತರಬೇತಿಯನ್ನು ವಿಸ್ತರಿಸಬೇಕು’ ಎಂದು ಸಚಿವರ ಬಳಿ ಮನವಿ ಮಾಡಿದರು. ಆನ್‌ಲೈನ್ ಸಂವಾದದಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಉಪನ್ಯಾಸಕರು ಭಾಗವಹಿಸಿದ್ದರು.

‘ಸುಪ್ರೀಂ’ಗೆ ಮನವಿ: ‘ಸುಪ್ರೀಂ ಕೋರ್ಟ್ ಆದೇಶದಂತೆ ಐದು, ಎಂಟು, ಒಂಬತ್ತನೇ ತರಗತಿಗೆ ಮಂಡಳಿ ಪರೀಕ್ಷೆಯನ್ನು ಕೈಬಿಡಲಾಗಿದೆ. ಆದರೆ, ಈ ಮೂರು ತರಗತಿಗಳ ಅರ್ಧ ವಾರ್ಷಿಕ ಪರೀಕ್ಷೆ ಫಲಿತಾಂಶ ಪ್ರಕಟಿಸುವುದಕ್ಕೆ ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಲಾಗಿದೆ. ಕೋರ್ಟ್ ಒಪ್ಪಿಗೆ ನೀಡಿದ ತಕ್ಷಣ ಫಲಿತಾಂಶ ಪ್ರಕಟಿಸಲಾಗುವುದು’ ಎಂದೂ ಹೇಳಿದರು. ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ನಿರ್ದೇಶಕಿ ಸಿಂಧೂ ಬಿ. ರೂಪೇಶ್ ಇದ್ದರು.

‘15 ಸಾವಿರ ಹುದ್ದೆ ಭರ್ತಿಗೆ ಪ್ರಸ್ತಾವ’

ಮಧು ಬಂಗಾರಪ್ಪ

‘ಪಿಯು ವಿಜ್ಞಾನ ಉಪನ್ಯಾಸಕರ 800 ಹುದ್ದೆಗಳು ಸೇರಿ ಶಾಲಾ ಶಿಕ್ಷಕರ 15 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರವೇ ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ಮಧು ಬಂಗಾರಪ್ಪ ತಿಳಿಸಿದರು.

‘ಕಲ್ಯಾಣ ಕರ್ನಾಟಕ ಐದು ಸಾವಿರ ಹುದ್ದೆಗಳ ಭರ್ತಿಗೆ ಈಗಾಗಲೇ ಮಂಜೂರಾತಿ ದೊರೆತಿದೆ. ಅದನ್ನು ಹೊರತುಪಡಿಸಿ ಇನ್ನೂ 15 ಸಾವಿರ ಶಿಕ್ಷಕರ ಹುದ್ದೆಗಳನ್ನು ತುಂಬುವ ಅಗತ್ಯವಿದೆ. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲು ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರ ಕ್ರಮ ತೆಗೆದುಕೊಂಡ ಬಳಿಕ ಕಲ್ಯಾಣ ಕರ್ನಾಟಕದ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು’ ಎಂದರು.

ಮುಖ್ಯಾಂಶಗಳು

- 25 ಸಾವಿರ ವಿದ್ಯಾರ್ಥಿಗಳಿಗೆ ನೀಟ್, ಜೆಇಇ, ಸಿಇಟಿ ಉಚಿತ ತರಬೇತಿಗೆ ಚಾಲನೆ
- ಒಂದು ಗಂಟೆ ಆನ್‌ಲೈನ್‌ನಲ್ಲೇ ತರಬೇತಿ
- ವಿದ್ಯಾರ್ಥಿಗಳು, ಉಪನ್ಯಾಸಕರ ಜೊತೆ ಸಚಿವರ ಸಂವಾದ

ಚುನಾವಣಾ ಬಾಂಡ್ ದೇಣಿಗೆ

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ‘ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಂಡ ಆರೋಪದಡಿ ದಾಖಲಿಸಿರುವ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್, ತೀರ್ಪು ಕಾಯ್ದಿರಿಸಿದೆ.

ಈ ಸಂಬಂಧ ನಳಿನ್ ಕುಮಾರ್ ಕಟೀಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ವಿಚಾರಣೆ ಪೂರ್ಣಗೊಳಿಸಿ ಆದೇಶ ಕಾಯ್ದಿರಿಸಿರುವುದಾಗಿ ತಿಳಿಸಿದರು. ಅಂತೆಯೇ, ‘ತನಿಖೆಗೆ ಈಗಾಗಲೇ ನೀಡಲಾಗಿರುವ ಮಧ್ಯಂತರ ತಡೆ, ಅಂತಿಮ ತೀರ್ಪು ಪ್ರಕಟಿಸುವವರೆಗೆ ಚಾಲ್ತಿಯಲ್ಲಿರಲಿದೆ’ ಎಂದು ಆದೇಶಿಸಿದರು. ಕಟೀಲ್ ಪರ ಹಿರಿಯ ವಕೀಲ ಕೆ.ಜಿ. ರಾಘವನ್ ಮತ್ತು ಫಿರ್ಯಾದುದಾರ ಅಯ್ಯರ್ ಪರ ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿದ್ದರು.

‘ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಬಿಜೆಪಿಯ ರಾಷ್ಟ್ರ ಮತ್ತು ರಾಜ್ಯ ಘಟಕಗಳು ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಂಡಿವೆ’ ಎಂದು ಆರೋಪಿಸಿ, ‘ಜನಾಧಿಕಾರ ಸಂಘರ್ಷ ಪರಿಷತ್’ ಸಹ ಅಧ್ಯಕ್ಷ ಆದರ್ಶ್ ಆರ್. ಐಯ್ಯರ್ ಖಾಸಗಿ ದೂರು ದಾಖಲಿಸಿದ್ದರು.

ಇದಕ್ಕೆ ಸಂಬಂಧಿಸಿದಂತೆ, ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಎಫ್‌ಐಆರ್ ದಾಖಲಿಸಲು ನಿರ್ದೇಶಿಸಿದ್ದರು.

ದೂರಿನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಂಸದ ಹಾಗೂ ರಾಜ್ಯ ಘಟಕದ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರುದ್ಧ ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಬಾಲಕಿ ಮೇಲೆ ಅತ್ಯಾಚಾರ: ಸೆರೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಗೋಗಿ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ 15 ವರ್ಷದ ಪಾರ್ಶ್ವವಾಯು ಪೀಡಿತ ಬಾಲಕಿಯ ಮೇಲೆ ಮಂಗಳವಾರ ಯುವಕನೊಬ್ಬ ಅತ್ಯಾಚಾರ ಎಸಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಗೋಗಿ (ಕೆ) ಗ್ರಾಮದ ಸಂತೋಷ ಶರಣಪ್ಪ ಇಮನ್ (29) ಬಂಧಿತ ಆರೋಪಿ.

ಬಾಲ್ಯದಲ್ಲೇ ಬಾಲಕಿಗೆ ಪಾರ್ಶ್ವವಾಯು (ಫಾರ್ಸಿ) ಆಗಿದ್ದು, ಮನೆಯಲ್ಲಿ ಇರುತ್ತಿದ್ದಳು. ಮಂಗಳವಾರ ಬಾಲಕಿಯ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಸಂತೋಷ ಅತ್ಯಾಚಾರ ಎಸಗಿದ್ದಾನೆ ಎಂದು ಸಂತ್ರಸ್ತೆಯ ತಾಯಿ ದೂರಿನಲ್ಲಿ ತಿಳಿಸಿದ್ದಾರೆ.

ಗೋಗಿ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಜೇನ್ನೊಣ ಕಚ್ಚಿ ವೃದ್ಧೆ ಸಾವು

ಹಾವೇರಿ: ಜೇನ್ನೊಣ ಕಡಿತದಿಂದ ತೀವ್ರ ಗಾಯಗೊಂಡಿದ್ದ ಶಿಗ್ಗಾವಿ ತಾಲ್ಲೂಕಿನ ಸಿಂಗಾಪೂರ ಗ್ರಾಮದ ನಿಂಗವ್ವ ಯಲ್ಲವ್ವ ಶಿರಬಡಗಿ (65) ಅವರು ಹುಬ್ಬಳ್ಳಿಯ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ಮೃತಪಟ್ಟಿದ್ದಾರೆ.

‘ನವೆಂಬರ್ 13ರಂದು ಚೆಂಡು ಹೂವು ಬಿಡಿಸಲು ಹೊಲಕ್ಕೆ ಹೋದಾಗ, ಅವರಿಗೆ ಜೇನು ನೊಣಗಳು ಕಡಿದಿದ್ದವು. ಅವರಿಗೆ ತಕ್ಷಣವೇ ಶಿಗ್ಗಾವಿ ತಾಲ್ಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಹುಬ್ಬಳ್ಳಿಗೆ ಕರೆದೊಯ್ಯಲಾಗಿತ್ತು’ ಎಂದು ಬಂಕಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪತ್ರಕರ್ತ ವಿ.ಟಿ ರಾಜಶೇಖರ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಾನವ ಹಕ್ಕುಗಳ ಮೇಲೆ ಕಣ್ಗಾವಲಿಡುವ ‘ದಲಿತ ವಾಯ್ಸ್’ ನಿಯತಕಾಲಿಕೆಯ ಸಂಸ್ಥಾಪಕ ಸಂಪಾದಕ, ಲೇಖಕ ವೋಂತಿಬೆಟ್ಟು ತಿಮ್ಮಪ್ಪ ರಾಜಶೇಖರ ಶೆಟ್ಟಿ (ವಿ.ಟಿ.ರಾಜಶೇಖರ್) (92 ವರ್ಷ) ಅವರು ಇಲ್ಲಿ ಬುಧವಾರ ನಿಧನರಾದರು.

ಇಲ್ಲಿನ ಶಿವಭಾಗ್‌ನಲ್ಲಿ ವಾಸಿಸುತ್ತಿದ್ದ ರಾಜಶೇಖರ್ ಅವರು ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಸೇರಿದಂತೆ ಪ್ರಮುಖ ಇಂಗ್ಲಿಷ್ ಪತ್ರಿಕೆಗಳಲ್ಲಿ ಎರಡೂವರೆ ದಶಕಗಳ ಕಾಲ ಪತ್ರಕರ್ತರಾಗಿ ದುಡಿದಿದ್ದರು. ದಲಿತ ಪರ ಧ್ವನಿಯಾಗಲು ‘ದಲಿತ್ ವಾಯ್ಸ್’ ಸಂಘಟನೆಯನ್ನು ಕಟ್ಟಿದ್ದರು. ಅದರ ಮೂಲಕ ‘ದಲಿತ ವಾಯ್ಸ್’ ನಿಯತಕಾಲಿಕೆಯನ್ನು ಪ್ರಾರಂಭಿಸಿದ್ದರು.

ವಿ.ಟಿ ರಾಜಶೇಖರ್

ದೇಶದ ಸಾಮಾಜಿಕ ವ್ಯವಸ್ಥೆ, ಅದರಲ್ಲಿರುವ ಜಾತಿ ಮತ್ತು ಜನಾಂಗೀಯ ಅಸಮಾನತೆಗಳ ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಸದಾ ಶ್ರಮಿಸುತ್ತಿದ್ದರು. ಅಂಬೇಡ್ಕರ್ ವಾದ ಹಾಗೂ ಮಾರ್ಕ್ಸ್ ವಾದವನ್ನು ಆಳವಾಗಿ ಅಧ್ಯಯನ ಮಾಡಿದ್ದರು.

'ದಲಿತ್- ದಿ ಬ್ಲ್ಯಾಕ್ ಅನ್‌ಟಚಬಿಲಿಟಿ ಆಫ್ ಇಂಡಿಯಾ', 'ಬ್ರಾಹ್ಮಿಣಿಸಂ- ವೆಪನ್ಸ್ ಟು ಫೈಟ್ ಕೌಂಟರ್ ರೆವಲ್ಯೂಷನ್', 'ವೈ ಗೋಡ್ಸೆ ಕಿಲ್ಡ್ ಗಾಂಧಿ', 'ಕಾಸ್ಟ್ - ಎ ನೇಷನ್ ವಿದಿನ್ ದ ನೇಷನ್', 'ನೊ ದ ಹಿಂದೂ ಮೈಂಡ್' , 'ಹೌ ಮಾರ್ಕ್ಸ್ ಫೈಲ್ಡ್', 'ಹಿಂದು ಇಂಡಿಯಾ', 'ರೆಡಿ ರೆಫರೆನ್ಸ್ ಟು ರೆವೊಲ್ಯೂಷನ್', 'ಇಂಡಿಯಾ ಇಂಟೆಲೆಕ್ಚುವಲ್ ಡಸರ್ಟ್' ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದರು. ಅವುಗಳಲ್ಲಿ ಹಲವು ಕೃತಿಗಳು ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ.

ಅವರು ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿ, ಗೌರವಗಳಿಗೆ ಪಾತ್ರರಾಗಿದ್ದಾರೆ. ಲಂಡನ್ ಇನ್‌ಸ್ಟಿಟ್ಯೂಟ್ ಆಫ್ ಸೌತ್ ಏಷ್ಯಾ (ಲಿಸಾ) ಪ್ರಶಸ್ತಿಯನ್ನು 2005ರಲ್ಲಿ ಹಾಗೂ ನ್ಯಾಷನಲ್‌ಕಾನ್ಫೆಡರೇಷನ್ ಆಫ್ ಹ್ಯೂಮನ್ ಆರ್ಗನೈಸೇಷನ್‌ನಿಂದ ಮುಕುಂದನ್ ಸಿ ಮೆನನ್ ಪ್ರಶಸ್ತಿಯನ್ನು 2018ರಲ್ಲಿ ಪಡೆದಿದ್ದರು.

ಉಡುಪಿ ಜಿಲ್ಲೆಯ ವೋಂತಿಬೆಟ್ಟು ಬೀಡು ಮನೆತನದವರಾಗಿದ್ದ ಅವರ ತಂದೆ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಅವರು ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಯಾಗಿ ನಿವೃತ್ತರಾಗಿದ್ದರು.

ರಾಜಶೇಖರ್ ಅವರ ಪುತ್ರ ಸಾಹಿಲ್ ಶೆಟ್ಟಿ ಲಂಡನ್‌ನಲ್ಲಿ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರಾಜಶೇಖರ್ ಅವರ ಅಂತಿಮ ಸಂಸ್ಕಾರ ಉಡುಪಿ ಜಿಲ್ಲೆಯ ಓಂತಿಬೆಟ್ಟುವಿನಲ್ಲಿ ಗುರುವಾರ ನಡೆಯಲಿದೆ ಎಂದು ಆಪ್ತ ಮೂಲಗಳು ತಿಳಿಸಿವೆ.

ಸಾಹಿತ್ಯದ ಹೆಸರಿನಲ್ಲಿ ‘ಅತ್ಯಾಚಾರ’ ಮಾಡಬೇಡಿ: ನರಹಳ್ಳಿ ಬಾಲಸುಬ್ರಹ್ಮಣ್ಯ

ಸಾಹಿತ್ಯ ಸಮ್ಮೇಳನದ ಸ್ವರೂಪ ಬದಲಾಗಲಿ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಮರಾಠಿ ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ಸಾಹಿತಿಗಳಷ್ಟೇ ಇರುತ್ತಾರೆ. ಅಲ್ಲಿನ ಮುಖ್ಯಮಂತ್ರಿಯೂ ಸಭಿಕರ ಸಾಲಿನಲ್ಲಿ ಕುಳಿತಿರುತ್ತಾರೆ. ನಮ್ಮ ಸಾಹಿತ್ಯ ಸಮ್ಮೇಳನದ ವೇದಿಕೆಗಳಲ್ಲಿ ಸಾಹಿತಿಗಳಿಗಿಂತ ರಾಜಕಾರಣಿಗಳೇ ವಿಜೃಂಭಿಸುತ್ತಾರೆ. ಸಾಹಿತ್ಯದ ಹೆಸರಿನಲ್ಲಿ ಏಕೆ ಅತ್ಯಾಚಾರ ಮಾಡುತ್ತಿದ್ದೀರಿ? ಸಾಹಿತ್ಯದ ಪಾವಿತ್ರ್ಯವನ್ನು ಕಾಪಾಡಿ’ ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಪ್ರತಿಪಾದಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ‘ವಾರದ ಅತಿಥಿಯೊಂದಿಗೆ ಸಂವಾದ’ದಲ್ಲಿ ಮಾತನಾಡಿ, ‘ಸಾಹಿತ್ಯ ಸಮ್ಮೇಳನಕ್ಕೆ ನಾಡಿನ ಹೆಸರಾಂತ 100 ಲೇಖಕರನ್ನು ವಿಶೇಷ ಅತಿಥಿಗಳಾಗಿ ಆಹ್ವಾನಿಸಿ ಗೌರವದಿಂದ ಕಾಣಬೇಕು. ಲೇಖಕರೇ ಪಾಲ್ಗೊಳ್ಳುವುದಿಲ್ಲವೆಂದರೆ ಸಮ್ಮೇಳನದ ಔಚಿತ್ಯವೇನು? ಹೀಗಾಗಿ ಸಮ್ಮೇಳನದ ಸ್ವರೂಪ ಬದಲಾಗಬೇಕು’ ಎಂದು ಅಭಿಪ್ರಾಯಪಟ್ಟರು.

‘ವಿದೇಶದಲ್ಲಿರುವ 500 ಅನಿವಾಸಿ ಭಾರತೀಯರನ್ನು ಸಮ್ಮೇಳನಕ್ಕೆ ಆಹ್ವಾನಿಸುವುದಾಗಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ. ಆದರೆ, ನಮ್ಮಲ್ಲಿರುವ ಪ್ರಮುಖ ಸಾಹಿತಿಗಳಿಗೇ ಆಹ್ವಾನವಿರುವುದಿಲ್ಲ. ದೇವನೂರ ಮಹಾದೇವ, ಎಸ್. ಎಲ್. ಭೈರಪ್ಪ, ಹಂ.ಪ. ನಾಗರಾಜಯ್ಯ, ಚಂದ್ರಶೇಖರ ಕಂಬಾರರಂಥವರ ಸಲಹೆ ಪಡೆದು ಸಮ್ಮೇಳನದ ಸ್ವರೂಪದ ಕುರಿತು ತಿಳಿದುಕೊಳ್ಳಲಿ. ಪ್ರಾಥಮಿಕ ಹಂತದಲ್ಲಿ ಕನ್ನಡ ಭಾಷಾ ಮಾಧ್ಯಮ ಕಡ್ಡಾಯವಾಗಿ ಅನುಷ್ಠಾನಗೊಳ್ಳುವವರೆಗೆ ಸಮ್ಮೇಳನಾಧ್ಯಕ್ಷ ಸ್ಥಾನ ವಹಿಸಿಕೊಳ್ಳುವುದಿಲ್ಲ ಎಂಬ ದೇವನೂರು ಅವರ ನಿಲುವನ್ನು ಗೌರವಿಸಿ, ಅನುಷ್ಠಾನಕ್ಕೆ ತರಬೇಕಲ್ಲವೇ’ ಎಂದರು.

‘ಸಮ್ಮೇಳನಗಳಲ್ಲಿ ಸಾಹಿತ್ಯ ಬಿಟ್ಟು ಉಳಿದೆಲ್ಲ ವಿಚಾರ ಚರ್ಚೆಯಾಗುತ್ತದೆ. ಗೋಷ್ಠಿಗಿಂತ ಊಟಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಇದು ಆಹಾರ ಸಮ್ಮೇಳನವಲ್ಲ. ಬಂದವರಿಗೆ ಸರಳವಾಗಿ ಬಿಸಿಬೇಳೆಬಾತ್–ಮೊಸರನ್ನ ಕೊಟ್ಟರೂ ಸಾಕು. 3 ವರ್ಷಗಳಿಂದ ಗ್ರಂಥಾಲಯಗಳಿಗೆ ಸರ್ಕಾರ ಕನ್ನಡ ಪುಸ್ತಕಗಳನ್ನೇ ಖರೀದಿಸಿಲ್ಲ, ಆದರೆ, ಶಾಸಕರ ಖರೀದಿ ಕೋಟಿಗಳ ಲೆಕ್ಕದಲ್ಲಿ ನಡೆಯುತ್ತಿದೆ’ ಎಂದು ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದರು.

‘ಸರ್ಕಾರ ನೀಡಿರುವ ₹25 ಕೋಟಿ ಅನುದಾನದಲ್ಲಿ ಕನಿಷ್ಠ ₹2.5 ಕೋಟಿ ಉಳಿಸಿದರೂ, ನಾಡಿನ ಪ್ರಮುಖ ಲೇಖಕರ ಎಲ್ಲ ಕೃತಿಗಳು ಒಂದೇ ಕಡೆ ಸಿಗುವ ಗ್ರಂಥಾಲಯ ನಿರ್ಮಿಸಬಹುದು. ಇಂಥ ಗ್ರಂಥಾಲಯದ ಕೊರತೆ ಇಂದಿಗೂ ಕಾಡುತ್ತಿದೆ’ ಎಂದರು.

ಮುಖ್ಯಾಂಶಗಳು

- ಮರಾಠಿ ಸಮ್ಮೇಳನದ ಮಾದರಿ ಅನುಸರಿಸಿ
- ಸರ್ಕಾರದ ನೆರವಿಲ್ಲದೆ ಸಮ್ಮೇಳನ ನಡೆಯಲಿ



7 ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಪರಿಷತ್ತಿನ ನೇತೃತ್ವವನ್ನು ಸಾಹಿತಿಗಳಲ್ಲದವರು ವಹಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಪರಿಷತ್ತು ಅಧಿಕಾರದ ಕೇಂದ್ರವಾಗಿದೆ

ನರಹಳ್ಳಿ ಬಾಲಸುಬ್ರಹ್ಮಣ್ಯ, ವಿಮರ್ಶಕ

ಸಮ್ಮೇಳನ ಪ್ರತಿನಿಧಿಗಳಿಗೆ ‘ಮಂಡ್ಯ ಬೆಲ್ಲ’

ಮಂಡ್ಯ: ‘87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ನೋಂದಣಿಯಾಗುವ ಸದಸ್ಯರಿಗೆ ಮಂಡ್ಯ ಜಿಲ್ಲೆಯ ಸವಿ ನೆನಪಿಗಾಗಿ ಬೆಲ್ಲವನ್ನು ನೀಡಲಾಗುವುದು’ ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಲ್ಲ ತಯಾರಿಕಾ ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಒ) ಘಟಕಗಳ ಸಭೆ ನಡೆಸಿ ಅವರು ಮಾತನಾಡಿದರು. ಡಿ.20ರಿಂದ 22ರವರೆಗೆ ನಡೆಯಲಿರುವ ಸಮ್ಮೇಳನಕ್ಕೆ 10 ಸಾವಿರ ಮಂದಿ ನೋಂದಣಿಯಾಗುವ ನಿರೀಕ್ಷೆ ಇದೆ.

ಪ್ರತಿನಿಧಿಗಳಿಗೆ ಹಾಗೂ ಗಣ್ಯರಿಗೆ ಅರ್ಧ ಕೆ.ಜಿ ಬೆಲ್ಲ ನೀಡಿದರೆ ಸುಮಾರು 6 ಸಾವಿರದಿಂದ 7 ಸಾವಿರ ಕೆ.ಜಿ ಬೆಲ್ಲ ಬೇಕಾಗುತ್ತದೆ. ಬೆಲ್ಲ ತಯಾರಿಕಾ ಘಟಕಗಳು ಉತ್ತಮವಾಗಿ ಪ್ಯಾಕೇಜ್ ಮಾಡಿ, ಅದರ ಮೇಲೆ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಮುದ್ರಣ ಮಾಡಿ ಕೊಡುವಂತೆ ಸೂಚಿಸಿದರು.

‘ಧ್ವನಿ ಎತ್ತಿದರೆ ಉರುಳಿಸುತ್ತೇವೆ ಎಂಬ ವಾತಾವರಣ’

‘ರಾಜಕೀಯ ಮತ್ತು ಧರ್ಮ ಎಲ್ಲದರ ಮೇಲೂ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುತ್ತವೆ. ಅದಕ್ಕೆ ಸಮ್ಮೇಳನ ಬಲಿಯಾಗಬಾರದು. ಧ್ವನಿ ಎತ್ತಿದರೆ ಉರುಳಿಸುತ್ತೇವೆ ಎಂಬ ಭಯದ ವಾತಾವರಣವಿದೆ’ ಎಂದು ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಪ್ರಾಯಪಟ್ಟರು.

‘ಸಮಾಜದಲ್ಲೂ ಪ್ರತಿಭಟನೆಯ ಶಕ್ತಿ ಕಡಿಮೆಯಾಗಿದೆ. ಕೆಲವು ಸಾಹಿತಿಗಳು ಸ್ವಾಯತ್ತ ಪ್ರಜ್ಞೆ ಕಳೆದುಕೊಂಡಿರುವುದೂ ಸಮಸ್ಯೆಗೆ ಕಾರಣ. ಸಾಹಿತಿಗಳು ಪ್ರಶಸ್ತಿಯ ಹಂಗಿಗೆ ಬೀಳಬಾರದು, ಸ್ಥಾನಮಾನಕ್ಕಾಗಿ ವಿಧಾನಸೌಧ ಸುತ್ತಬಾರದು’ ಎಂದರು.

‘ಸರ್ಕಾರದ ನೆರವಿಲ್ಲದೆಯೇ ನಡೆಯುವ, ಆಳ್ವಾಸ್ ಸಂಸ್ಥೆಯ ನುಡಿಸಿರಿ ಮತ್ತು ಧಾರವಾಡದ ಸಾಹಿತ್ಯ ಸಂಭ್ರಮ ಮಾದರಿಯಾಗಿವೆ. ಆ ಬಗ್ಗೆ ಜಾಗೃತಿ ಮೂಡಬೇಕು’ ಎಂದರು.

ಜ್ಞಾನೇಶ್ವರ ಮುನಿ ಮಹಾರಾಜ ನಿಧನ

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ದೇವಲಾಪೂರ ಗ್ರಾಮದ ಅಷ್ಟಮ ನಂದೀಶ್ವರ ಕ್ಷೇತ್ರದ ಸಂಸ್ಥಾಪಕ 108 ಜ್ಞಾನೇಶ್ವರ ಮುನಿ ಮಹಾರಾಜ (86) ಬುಧವಾರ ಸಂಜೆ ನಿಧನರಾದರು. ಅವರು ನವೆಂಬರ್ 13ರಂದು ಯಮಸಲ್ಲೇಖನ ವ್ರತ ಸ್ವೀಕರಿಸಿದ್ದರು. ಅಂತಿಮ ದಹನ ಕ್ರಿಯಾ ವಿಧಿ ವಿಧಾನಗಳು ನವೆಂಬರ್ 21ರಂದು ಬೆಳಿಗ್ಗೆ 11ಕ್ಕೆ ದೇವಲಾಪೂರ ಗ್ರಾಮದ ಅಷ್ಟಮ ನಂದೀಶ್ವರ ಕ್ಷೇತ್ರದಲ್ಲಿ ನಡೆಯಲಿವೆ.



ಜ್ಞಾನೇಶ್ವರ ಮುನಿ ಮಹಾರಾಜ

ಅಪಾರ ಭಕ್ತ ಸಮೂಹ ಹೊಂದಿದ್ದ ಮುನಿಗಳು ದೇವಲಾಪೂರ ಗ್ರಾಮದಲ್ಲಿ ಅಷ್ಟಮ ನಂದೀಶ ಕ್ಷೇತ್ರ ಸ್ಥಾಪಿಸಿ ಜ್ಞಾನತೀರ್ಥ ವಿದ್ಯಾಪೀಠ ಶಿಕ್ಷಣ ಸ್ಥಾಪಿಸಿದ್ದರು. ಕುಲಭೂಷಣ ಅಲ್ಪಸಂಖ್ಯಾತರ ಕ್ರೆಡಿಟ್ ಸೊಸೈಟಿ ಸ್ಥಾಪಿಸಿ ಗ್ರಾಮಸ್ಥರ ಆರ್ಥಿಕತೆಗೆ ಅನುಕೂಲ ಮಾಡಿದ್ದರು. ಧಾರವಾಡ, ಬೆಳಗಾವಿ ಜಿಲ್ಲೆಯ ನೂರಕ್ಕೂ ಹೆಚ್ಚು ಗ್ರಾಮಗಳಲ್ಲಿ ಜಿನ ಮಂದಿರಗಳನ್ನು ಕಟ್ಟಿಸಿದ್ದರು. ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ಜಯಕೀರ್ತಿ ವಿದ್ಯಾಪೀಠ, ಸಹಕಾರಿ ಸಂಘ, ಜಿನ ಮಂದಿರಗಳನ್ನು ನಿರ್ಮಿಸಿದ್ದರು. ಅವರು 108 ಸಮೇದ ಶಿಖರಜಿಯ ಯಾತ್ರೆಯನ್ನು 5 ಬಾರಿ ಸಂಘದೊಂದಿಗೆ ಪಾದಯಾತ್ರೆ ಮಾಡಿದ್ದರು.

ಮುನಿಗಳು ಗರಗ ಗ್ರಾಮದ ಬಡ ಕುಟುಂಬದಲ್ಲಿ ಜನಿಸಿ ಸ್ವಸಾಧನೆಯಿಂದ ತಹಶೀಲ್ದಾರ್‌ರಾಗಿದ್ದರು. ನಿವೃತ್ತಿ ಬಳಿಕ ಮುನಿ ದೀಕ್ಷೆ ಪಡೆದು ಲೋಕ ಕಲ್ಯಾಣ ಮತ್ತು ಧರ್ಮ ಜಾಗೃತಿಗೆ ತಮ್ಮ ಜೀವನ ಸಮರ್ಪಿಸಿದ್ದರು.

ಪ್ರಕರಣ ಪೊಲೀಸ್ ಇಲಾಖೆಗೆ ಹಸ್ತಾಂತರ: ಆಂತರಿಕ ಭದ್ರತಾ ಡಿಜಿಪಿ ಪ್ರಣವ್ ಮೊಹಂತಿ ಹೇಳಿಕೆ

ಎನ್‌ಕೌಂಟರ್ ನಕಲಿ ಅಲ್ಲ; ಕೆಲವರು ಪರಾರಿ ಶಂಕೆ

ಪ್ರಜಾವಾಣಿ ವಾರ್ತೆ

ಆಂತರಿಕ ಭದ್ರತಾ ಡಿಜಿಪಿ ಪ್ರಣವ್ ಮೊಹಾಂತಿ ಮಾತನಾಡಿದರು

ಉಡುಪಿ: 'ಪೀತುಬೈಲ್‌ನಲ್ಲಿ ನಡೆದಿರುವುದು ನಕಲಿ ಎನ್‌ಕೌಂಟರ್ ಅಥವಾ ಪೂರ್ವಯೋಜಿತ ಕೃತ್ಯವಲ್ಲ. ಈ ಕುರಿತ ಆರೋಪಗಳು ಸುಳ್ಳು' ಎಂದು ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣವ್ ಮೊಹಾಂತಿ ಹೇಳಿದರು.

ಹೆಬ್ರಿ ಪೊಲೀಸ್ ಠಾಣೆಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಕ್ಸಲ್ ನಾಯಕ ವಿಕ್ರಂ ಗೌಡ ಎನ್‌ಕೌಂಟರ್ ಪ್ರಕರಣವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. ಈಗಾಗಲೇ ಎನ್‌ಕೌಂಟರ್ ಕುರಿತು ಹೆಬ್ರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದರು.

'ಸೋಮವಾರ ಸಂಜೆ 6 ಗಂಟೆಗೆ ವಿಕ್ರಂ ಗೌಡನ ಎನ್‌ಕೌಂಟರ್ ನಡೆದಿದೆ. ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಮತ್ತು ನಕ್ಸಲರು ಮುಖಾಮುಖಿ ಆಗಿದ್ದಾರೆ. ಈ ವೇಳೆ ಕತ್ತಲು ಕವಿದಿತ್ತು. ಪೊಲೀಸರ ಮೇಲೆ ಗುಂಡಿನ ದಾಳಿ ನಡೆದಿದೆ. ಆತ್ಮ ರಕ್ಷಣೆಗೆ ಪ್ರತಿ ದಾಳಿ ನಡೆದಾಗ ವಿಕ್ರಂ ಗೌಡ ಮೃತಪಟ್ಟಿದ್ದಾನೆ. 2 ರಿಂದ 3 ಮಂದಿ ಪರಾರಿಯಾಗಿರುವ ಸಾಧ್ಯತೆ ಇದೆ' ಎಂದು ವಿವರಿಸಿದರು.

'ಶರಣಾಗು ಎಂದು ವಿಕ್ರಂ ಗೌಡನಿಗೆ ಪದೇ ಪದೇ ಹೇಳಿದರೂ ಆತ ಗುಂಡು ಹಾರಿಸಿದ. ಆತನಿಂದ 9 ಎಂ.ಎಂ ಕಾರ್ಬೈನ್ ಬಂದೂಕು, ರಿವಾಲ್ವರ್ ಮತ್ತು ಚೂರಿಯನ್ನು ವಶಪಡಿಸಿಕೊಳ್ಳಲಾಗಿದೆ' ಎಂದರು.

ವಿಕ್ರಂನ ಎದೆ ಮತ್ತು ಇತರ ಭಾಗಗಳಿಗೆ ಗುಂಡೇಟು ತಗುಲಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಹೆಚ್ಚಿನ ಮಾಹಿತಿ ತಿಳಿಯಲಿದೆ. ಆತನಿಗೆ 45 ವರ್ಷ ಅಷ್ಟೇ ವಯಸ್ಸು, ಅವನ ಮುಖಪರಿಚಯ ನಮಗಿತ್ತು. ಈ ಕಾರಣಕ್ಕೆ ಅವನನ್ನು ಗುರುತಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ವಿಕ್ರಂ ಗೌಡ ದಿನಸಿ ಪಡೆಯಲು ಬಂದಿದ್ದನೋ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಎನ್‌ಕೌಂಟರ್ ನಡೆದ ಪ್ರದೇಶದ ಮನೆಗಳಲ್ಲಿನ ಜನರನ್ನು ಮೊದಲೇ ಸ್ಥಳಾಂತರ ಮಾಡಿರಲಿಲ್ಲ ಎಂದರು.

2024ರ ಮಾರ್ಚ್‌ನಲ್ಲಿ ಕೊಡಗು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಕ್ಸಲರ ಚಲನವಲನ ಇತ್ತು. ಈ ಬಗ್ಗೆ ನಾವು ಪ್ರಕರಣ ದಾಖಲಿಸಿಕೊಂಡಿದ್ದೆವು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿರಂತರವಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿತ್ತು. ಕಾರ್ಕಳ, ಹೆಬ್ರಿ ವಲಯದ ಕಾಡುಗಳಲ್ಲಿ ಈಚೆಗೆ ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಸದಸ್ಯರ ಚಲನವಲನಗಳು ಕಂಡು ಬರುತ್ತಿವೆ ಎಂದರು.

ಹೊರ ರಾಜ್ಯದ ನಕ್ಸಲರು ಇಲ್ಲಿಗೆ ಬಂದಿರುವ ಮಾಹಿತಿ ಇಲ್ಲ. ಸದ್ಯಕ್ಕಿರುವ ಮಾಹಿತಿ ಪ್ರಕಾರ ಸ್ಥಳೀಯರೇ ಇದ್ದಾರೆ. ಕೇರಳ ಪೊಲೀಸರ ಜೊತೆಗೆ ನಮ್ಮ ಎಎನ್‌ಎಫ್‌ನವರ ಸಂಬಂಧ ಚೆನ್ನಾಗಿದೆ. ಅವರಿಂದಲೂ ಸಹಕಾರ ಸಿಗುತ್ತಿದೆ ಎಂದು ತಿಳಿಸಿದರು.

ನಮ್ಮ ತಂಡ ಚೆನ್ನಾಗಿ ಕೆಲಸ ಮಾಡಿದೆ. ಸ್ಥಳೀಯ ಪೊಲೀಸರು ಕೂಡ ಸಹಕಾರ ನೀಡಿದ್ದಾರೆ ಎಂದರು.

ನಮ್ಮ ತಂಡಗಳು ನಿರಂತರವಾಗಿ ಶೋಧ ಕಾರ್ಯಾಚರಣೆ ನಡೆಸುತ್ತಲೇ ಇವೆ. ಜನರು ಭಯ, ಆತಂಕ ಪಡುವ ಅಗತ್ಯವಿಲ್ಲ. ಎನ್‌ಕೌಂಟರ್ ನಡೆದಿರುವ ಸ್ಥಳದಲ್ಲಿರುವ ಮನೆಯವರಿಗೆ ಪೊಲೀಸರು ಭದ್ರತೆ ನೀಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ., ಎಎನ್‌ಎಫ್ ಎಸ್.ಪಿ. ಜಿತೇಂದ್ರ ದಯಾಮ ಉಪಸ್ಥಿತರಿದ್ದರು.

'ಶರಣಾಗತಿಗೆ ಆದ್ಯತೆ'

'ನಕ್ಸಲ್ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವವರು ಶಸ್ತ್ರಾಸ್ತ್ರ ತೊರೆದು ಶರಣಾಗಿ ಮುಖ್ಯವಾಹಿನಿಗೆ ಬರುವುದಾದರೆ, ರಾಜ್ಯ ಸರ್ಕಾರವು ವಿಶೇಷ ಪ್ಯಾಕೇಜ್ ಮತ್ತು ಪುನರ್‌ವಸತಿ ಯೋಜನೆಗಳನ್ನು ಈಗಾಗಲೇ ಘೋಷಣೆ ಮಾಡಿದೆ. ನಾವು ಶರಣಾಗತಿಗೆ ಆದ್ಯತೆ ನಿಡುತ್ತೇವೆ. ಯಾರೇ ಆಗಲಿ ಕಾನೂನುಬಾಹಿರ ಚಟುವಟಿಗಳಲ್ಲಿ ತೊಡಗಿಸಿಕೊಂಡರೆ ಕ್ರಮ ಕೈಗೊಳ್ಳುತ್ತೇವೆ' ಎಂದು ಪ್ರಣವ್ ಮೊಹಾಂತಿ ಹೇಳಿದರು.

ಹುಟ್ಟೂರಲ್ಲಿ ವಿಕ್ರಂ ಗೌಡನ ಅಂತ್ಯಕ್ರಿಯೆ

ಕೂಡ್ಲುವಿನಲ್ಲಿ ನಕ್ಸಲ್ ಮುಖಂಡ ವಿಕ್ರಂ ಗೌಡನ ಅಂತಿಮ ವಿಧಿ ಬುಧವಾರ ನೆರವೇರಿತು

ಹೆಬ್ರಿ (ಉಡುಪಿ): ತಾಲ್ಲೂಕಿನ ಕಬ್ಬಿನಾಲೆ ಪೀತುಬೈಲುನಲ್ಲಿ ನಕ್ಸಲ್ ನಿಗ್ರಹ ಪಡೆಯ ಎನ್‌ಕೌಂಟರ್‌ನಲ್ಲಿ ಹತನಾದ ನಕ್ಸಲ್ ನಾಯಕ ವಿಕ್ರಂ ಗೌಡನ ಅಂತ್ಯಸಂಸ್ಕಾರ ನಾಡ್ಪಾಲು ಗ್ರಾಮದ ಕೂಡ್ಲುವಿನ ಮೈರೋಳಿ ಎಂಬಲ್ಲಿ ಆತನಿಗೆ ಸೇರಿದ ಜಾಗದಲ್ಲಿ ಬುಧವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ನೆರವೇರಿತು.

ವಿಕ್ರಂ ಗೌಡನ ತಮ್ಮ ಸುರೇಶ್ ಗೌಡ ಅಂತ್ಯಸಂಸ್ಕಾರದ ವಿಧಿ ವಿಧಾನ ನೆರವೇರಿಸಿದರು. ತಂಗಿ ಸುಗುಣಾ, ಹತ್ತಿರದ ಸಂಬಂಧಿಕರು, ಸ್ಥಳೀಯರು, ಪೊಲೀಸರು ಉಪಸ್ಥಿತರಿದ್ದರು. ಪೊಲೀಸರು ಭದ್ರತೆ ಒದಗಿಸಿದ್ದರು.

ಸಣ್ಣ ವಯಸ್ಸಿನಲ್ಲಿಯೇ ಕುಟುಂಬವನ್ನು ಬಿಟ್ಟು ದೂರವಾಗಿ 25 ವರ್ಷಗಳ ಬಳಿಕ ಶವವಾಗಿ ಬಂದ ಅಣ್ಣನನ್ನು ಕಂಡು ತಮ್ಮ, ತಂಗಿ ಹಾಗೂ ಸಂಬಂಧಿಕರು ಕಣ್ಣೀರು ಸುರಿಸಿದರು.

ಮಂಗಳವಾರ ಸಂಜೆವರೆಗೂ ಮೃತನ ಮನೆಮಂದಿ ಬಾರದ ಕಾರಣ ಪಂಚನಾಮೆ ನಡೆಸಲು ಸಾಧ್ಯವಾಗಿರಲಿಲ್ಲ. ಬುಧವಾರ ಎಲ್ಲ ಪ್ರಕ್ರಿಯೆಗಳನ್ನು ಪೂರೈಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿತ್ತು.

ಸುದ್ದಿ 2 ನಿಮಿಷ

ನಕ್ಸಲ್ ಪರ ಸಹಾನುಭೂತಿ ಅಪಾಯಕಾರಿ: ಸಿ.ಟಿ ರವಿ

ಬೆಂಗಳೂರು: 'ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಲ್ಲದ ಹಿಂಸಾತ್ಮಕ ಹೋರಾಟದಲ್ಲಿ ತೊಡಗಿರುವ ನಕ್ಸಲರ ಬಗ್ಗೆ ಕೆಲವರು ಅನುಕಂಪದ ಮಾತನಾಡುತ್ತಿರುವುದು ಅಪಾಯಕಾರಿ' ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ಆದಿವಾಸಿಗಳು, ರೈತರು, ಪೊಲೀಸರು, ಪತ್ರಕರ್ತರು ಸೇರಿ ಹಲವಾರು ಜನ ನಕ್ಸಲರಿಂದ ಹತ್ಯೆಗೊಳಗಾಗಿದ್ದಾರೆ. ರಾಷ್ಟ್ರದ ವಿವಿಧ ಭಾಗದಲ್ಲಿ ಅರೆ ಮಿಲಿಟರಿ ಪಡೆಗಳ ಸಿಬ್ಬಂದಿ ಕೂಡ ನಕ್ಸಲ್ ದಾಳಿಯಿಂದ ಸಾವು ನೋವಿಗೆ ಒಳಗಿದ್ದಾರೆ ಎಂದು ಅವರು ಹೇಳಿದ್ದಾರೆ. 'ಆಗೆಲ್ಲ ಬಾಯಿ ತೆರೆಯದ ಬಂಜಗೆರೆ ಜಯಪ್ರಕಾಶ್ ಅವರಂಥವರು ಈಗ ನಕ್ಸಲ್ ವಿಕ್ರಂ ಗೌಡ ಎನ್‌ಕೌಂಟರ್ ನಡೆದ ಮೇಲೆ ಸಹಾನುಭೂತಿ ವ್ಯಕ್ತಪಡಿಸುತ್ತಿರುವುದು ಅಪಾಯಕಾರಿ. ಪ್ರಜಾಪ್ರಭುತ್ವಕ್ಕೆ ಮಾರಕವಾದ ಸಂವಿಧಾನ ವಿರೋಧಿ ಸಂಘಟನೆಗಳು ಮತ್ತು ಅದರ ಸದಸ್ಯರನ್ನು ಬೆಂಬಲಿಸಿ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿ? ನಕ್ಸಲ್ ಪರ ಸಹಾನುಭೂತಿ ಹೊಂದಿರುವ ಇಂಥವರನ್ನು ಆಯಕಟ್ಟಿನ ಜಾಗದಲ್ಲಿ ಕೂರಿಸಿ ಮನ್ನಣೆ ಕೊಡುವುದರಿಂದಲೇ ನಕ್ಸಲರು ಬಲಗೊಳ್ಳಲು ಕಾರಣವಾಗುತ್ತದೆ' ಎಂದು ಹೇಳಿದ್ದಾರೆ.

ವಿಕ್ರಂ ಹತ್ಯೆ: ತನಿಖೆಗೆ ಆಗ್ರಹ

ಬೆಂಗಳೂರು: ಹೃದಯಹೀನ ಸರ್ಕಾರದ ನೀತಿ ಮತ್ತು ಕ್ರಾಂತಿಯ ಅಪ್ರಾಯೋಗಿಕ ಹಾದಿಯಿಂದಾಗಿ ಮಲೆನಾಡಿನ ಆದಿವಾಸಿ ಹೋರಾಟಗಾರ ವಿಕ್ರಂ ಗೌಡನ ಕೊಲೆಯಾಗಿದೆ. ಸರ್ಕಾರ ಈ ಕಳಂಕದಿಂದ ಹೊರಬರಬೇಕಿದ್ದರೆ ಪ್ರಕರಣವನ್ನು ನಿವೃತ್ತ ನ್ಯಾಯಮೂರ್ತಿಯೊಬ್ಬರ ಮೇಲುಸ್ತುವಾರಿಯಲ್ಲಿ ತನಿಖೆ ನಡೆಸಬೇಕು ಎಂದು ಮಾಜಿ ನಕ್ಸಲರೂ ಆಗಿರುವ ಸಾಮಾಜಿಕ ಕಾರ್ಯಕರ್ತರಾದ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು , '10 ವರ್ಷದಿಂದ ಕರ್ನಾಟಕ ಶಾಂತವಾಗಿತ್ತು. ಈಗ ವಿಕ್ರಂ ಗೌಡನ ಹತ್ಯೆಯ ಮೂಲಕ ಹೊಸ ವಿದ್ಯಮಾನ ಸೃಷ್ಟಿಸಲಾಗಿದೆ. ಪೊಲೀಸರ ಮೇಲೆ ದಾಳಿ ಮಾಡಿದ್ದನೆ? ಯಾರನ್ನಾದರೂ ಕೊಂದಿದ್ದನೆ? ಯಾವುದೂ ಇಲ್ಲದೇ ಯಾಕೆ ಕೊಂದು ಹಾಕಿದಿರಿ ಎಂಬ ಸತ್ಯವನ್ನು ಜನರ ಮುಂದೆ ಇಡಬೇಕು' ಎಂದು ಒತ್ತಾಯಿಸಿದರು.

'ಸಶಸ್ತ್ರ ಹೋರಾಟ ಬಿಟ್ಟು ಮುಖ್ಯವಾಹಿನಿಗೆ ಮರಳಿ ಎಂದು ಸರ್ಕಾರ ಕರೆಕೊಟ್ಟಿದೆ. ಆದರೆ, ಈ ಮಾತಿನಲ್ಲಿ ವಿಶ್ವಾಸ ಇಡುವಂತೆ ಸರ್ಕಾರ ನಡೆದುಕೊಂಡಿಲ್ಲ. 2014-18ರ ನಡುವೆ ಮುಖ್ಯವಾಹಿನಿಗೆ ಬಂದವರಲ್ಲಿ ಹಲವರು ನರಕಯಾತನೆ ಅನುಭವಿಸುತ್ತಿದ್ದಾರೆ. ಹೀಗಿರುವಾಗ ನಕ್ಸಲರು ಮುಖ್ಯವಾಹಿನಿಗೆ ಬರಲು ಮನಸ್ಸು ಮಾಡುವುದು ಹೇಗೆ' ಎಂದು ಪ್ರಶ್ನಿಸಿದರು.

'ವಿಕ್ರಂ ಗೌಡ ಕೂಡ ಒಮ್ಮೆಲೇ ನಕ್ಸಲ್ ಚಳವಳಿಗೆ ಸೇರಿದ್ದಲ್ಲ. ಪೊಲೀಸರು, ಅರಣ್ಯ ಇಲಾಖೆಯವರು ಸತತವಾಗಿ ಕಾಡಿದ್ದಲ್ಲದೇ ವಿಕ್ರಂ ಗೌಡ ಮತ್ತು ಗೆಳೆಯರ ಬದುಕನ್ನು ನರಕ ಮಾಡಿದ್ದರಿಂದ ಅವರು ನಕ್ಸಲ್ ಚಳವಳಿ ಜೊತೆಗೆ ಕೈ ಜೋಡಿಸಿದ್ದರು' ಎಂದು ಹೇಳಿದರು.

'ಅನಾಥ ಶವದಂತೆ ಬಿಡುವುದು ಬೇಡ ಎಂದು ಒಪ್ಪಿಕೊಂಡೆವು'

ಪ್ರಜಾವಾಣಿ ವಾರ್ತೆ

ಉಡುಪಿ: ಎಎನ್‌ಎಫ್ ಎನ್‌ಕೌಂಟರ್‌ನಲ್ಲಿ ಹತನಾದ ನಕ್ಸಲ್ ನಾಯಕ ವಿಕ್ರಂ ಗೌಡನ ಮೃತದೇಹದ ಮರಣೋತ್ತರ ಪರೀಕ್ಷೆ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಮಂಗಳವಾರ ತಡರಾತ್ರಿ ಆರಂಭಗೊಂಡು ಸುಮಾರು ಎರಡೂವರೆ ಗಂಟೆಗಳ ಕಾಲ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಮಣಿಪಾಲ ಆಸ್ಪತ್ರೆಯ ಶವಾಗಾರದಲ್ಲಿ ನ್ಯಾಯಾಧೀಶರ ಸಮ್ಮುಖದಲ್ಲಿ ಪಂಚನಾಮೆ ಕೂಡ ನಡೆದಿದೆ.

ವಿಕ್ರಂನ ಸಂಬಂಧಿಕರು ಯಾರೂ ಕೂಡ ಮಣಿಪಾಲಕ್ಕೆ ಮಂಗಳವಾರ ಬಂದಿರಲಿಲ್ಲ. ಬುಧವಾರ ಬೆಳಿಗ್ಗೆ ಆತನ ತಮ್ಮ ಸುರೇಶ ಗೌಡ ಮತ್ತು ತಂಗಿ ಸುಗಣಾ ಅವರು ಮೃತದೇಹವನ್ನು ಪಡೆಯಲು ಬಂದರು. ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ಬೆಳಿಗ್ಗೆ 11.30 ರ ಸುಮಾರಿಗೆ ಮೃತದೇಹವನ್ನು ಮಣಿಪಾಲದ ಆಸ್ಪತ್ರೆಯಿಂದ ವಿಕ್ರಂನ ಹುಟ್ಟೂರಾದ ಕೂಡ್ಲುವಿಗೆ ಕೊಂಡೊಯ್ಯಲಾಯಿತು.

'ನಮ್ಮ ಕುಟುಂಬದ ಜಾಗ ಇರುವಾಗ, ಅನಾಥ ಶವದಂತೆ ಬಿಟ್ಟುಬಿಡುವುದು ಯಾಕೆ ಎಂಬ ಕಾರಣಕ್ಕೆ ಅಣ್ಣನ ಅಂತ್ಯ ಸಂಸ್ಕಾರಕ್ಕೆ ಒಪ್ಪಿಕೊಂಡಿದ್ದೇವೆ. ಅಣ್ಣನ ಬಗ್ಗೆ ಹಲವು ವರ್ಷಗಳಿಂದ ನಮಗೆ ಯಾವುದೇ ಮಾಹಿತಿ ಇರಲಿಲ್ಲ' ಎಂದು ವಿಕ್ರಂ ಗೌಡನ ತಂಗಿ ಸುಗುಣಾ ತಿಳಿಸಿದರು.

ಮೃತದೇಹವಿರಿಸಿದ್ದ ಕೆಎಂಸಿ ಆಸ್ಪತ್ರೆಯ ಶವಾಗಾರಕ್ಕೆ ಕೇರಳ ಮತ್ತು ತಮಿಳುನಾಡು ಪೊಲೀಸರ ಗುಪ್ತಚರ ವಿಭಾಗದವರು ಭೇಟಿ ನೀಡಿ ಮಾಹಿತಿ ಕಲೆಹಾಕಿದರು.

ವಿಕ್ರಂ ಗೌಡನ ಮೃತದೇಹ ಕೊಂಡೊಯ್ಯುತ್ತಿದ್ದ ವೇಳೆ ರಸ್ತೆ ಬದಿಗೆ ವಾಲಿದ್ದ ಆ್ಯಂಬುಲೆನ್ಸ್ ಅನ್ನು ಮೇಲಕ್ಕೆತ್ತಲು ಸ್ಥಳೀಯರು ಸಹಕರಿಸಿದರು

'ತಮಿಳುನಾಡಿನಲ್ಲಿ ವಿಕ್ರಂ ಗೌಡನ ವಿರುದ್ಧ ಯಾವುದೇ ಪ್ರಕರಣಗಳಿಲ್ಲ. ಆದರೂ ಆತನ ಜೊತೆಗಿರುವವರು ಕರ್ನಾಟಕದ ಗಡಿಭಾಗದಿಂದ ತಮಿಳುನಾಡು ಪ್ರವೇಶಿಸುವ ಸಾಧ್ಯತೆ ಇದೆ' ಎಂದು ತಮಿಳುನಾಡಿನ ಪೊಲೀಸರೊಬ್ಬರು ತಿಳಿಸಿದರು.

ಆ್ಯಂಬುಲೆನ್ಸ್ ಅಪಘಾತ: ವಿಕ್ರಂ ಗೌಡನ ಮೃತದೇಹವನ್ನು ಮಣಿಪಾಲದಿಂದ ಕೂಡ್ಲುವಿಗೆ ಸಾಗಿಸುತ್ತಿದ್ದಾಗ ಹೆಬ್ರಿ ಬಳಿ ಆ್ಯಂಬುಲೆನ್ಸ್ ರಸ್ತೆಬದಿಗೆ ವಾಲಿದೆ. ಬಳಿಕ ಸ್ಥಳೀಯರ ನೆರವಿನಿಂದ ಆ್ಯಂಬುಲೆನ್ಸ್ ಅನ್ನು ರಸ್ತೆಗೆ ತಂದು ಮೃತದೇಹವನ್ನು ಕೊಂಡೊಯ್ಯಲಾಯಿತು.

'ಆ್ಯಂಬುಲೆನ್ಸ್ ವೇಗವಾಗಿ ಸಂಚರಿಸುತ್ತಿದ್ದಾಗ ದಿಢೀರನೆ ದನವೊಂದು ರಸ್ತೆಗೆ ಅಡ್ಡ ಬಂದಿತ್ತು. ಇದರಿಂದಾಗಿ ಆ್ಯಂಬುಲೆನ್ಸ್ ರಸ್ತೆ ಬದಿಗೆ ಸರಿದಿತ್ತು. ಯಾರಿಗೂ ಗಾಯಗಳಾಗಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ತಿಳಿಸಿದರು.

ಉಳಿದವರು ಬೆರಳೆಣಿಕೆಯಷ್ಟು: ಕರ್ನಾಟಕದಲ್ಲಿ ಕಬಿನಿ ದಳಂ-2 ಅನ್ನು ಮುನ್ನಡೆಸುತ್ತಿದ್ದ ವಿಕ್ರಂ ಗೌಡ ಹತನಾದ ಬಳಿಕ ರಾಜ್ಯದಲ್ಲಿ ಉಳಿದುಕೊಂಡಿರುವ ನಕ್ಸಲರ ಸಂಖ್ಯೆ ಬೆರಳೆಣಿಯಷ್ಟಿರಬಹುದು ಎಂದು ಮೂಲಗಳು ತಿಳಿಸಿವೆ.

ವಿಕ್ರಂನ ಜೊತೆಗಿದ್ದವರು ಕೇರಳ ಅಥವಾ ತಮಿಳುನಾಡಿಗೆ ಪರಾರಿಯಾಗಿರುವ ಸಾಧ್ಯತೆಯೂ ಇದೆ. ಕೇರಳದಲ್ಲಿ 'ಥಂಡರ್ ಬೋಲ್ಟ್' ಪಡೆಯು ನಕ್ಸಲರ ವಿರುದ್ಧದ ಕಾರ್ಯಾಚರಣೆಯನ್ನು ಚುರುಕುಗೊಳಿಸಿರುವುದರಿಂದ ನಕ್ಸಲರಿಗೆ ನೆಲೆ ತಪ್ಪಿದಂತಾಗಿದೆ ಎಂದೂ ಹೇಳಿವೆ.

ವಕ್ಫ್ ಆಸ್ತಿ ದಶಕದಲ್ಲಿ ಶೇ 135ರಷ್ಟು ಹೆಚ್ಚಳ: ಬಿ.ವೈ. ರಾಘವೇಂದ್ರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ದೇಶದಲ್ಲಿ ರಕ್ಷಣಾ ಮತ್ತು ರೈಲ್ವೆ ಇಲಾಖೆಯ ಆಸ್ತಿ ಹೊರತುಪಡಿಸಿದರೆ ವಕ್ಫ್ ಆಸ್ತಿಯೇ ಹೆಚ್ಚಿದೆ. 2009ರಲ್ಲಿ 4 ಲಕ್ಷ ಎಕರೆ ಇದ್ದ ಆಸ್ತಿ 2023ರಲ್ಲಿ 9 ಲಕ್ಷ ಎಕರೆಗೆ ಏರಿಕೆಯಾಗಿದೆ. 1 ದಶಕದ ಅವಧಿಯಲ್ಲಿ ಶೇ 135ರಷ್ಟು ವಕ್ಫ್ ಆಸ್ತಿ ಏರಿಕೆಯಾಗಿದ್ದು, ಅದರ ಮೊತ್ತವೇ ಅಂದಾಜು ₹ 1.50 ಲಕ್ಷ ಕೋಟಿ' ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

'ಕಾಂಗ್ರೆಸ್‌ನ ತುಷ್ಟೀಕರಣ ನೀತಿಯಿಂದಾಗಿ ದೇಶದಲ್ಲಿ ವಕ್ಫ್ ಆಸ್ತಿ ಹೆಚ್ಚಳವಾಗಿದೆ. ಕರ್ನಾಟಕದಲ್ಲಿ ಅಂದಾಜು 29,000 ಎಕರೆ ಭೂಮಿಯನ್ನು ಸೇರಿಸುವ ಪ್ರಯತ್ನ ನಡೆಯುತ್ತಿದೆ. ವಕ್ಫ್ ಹೆಸರಿನಲ್ಲಿ ಕಾಂಗ್ರೆಸ್ ನಾಯಕರು ಆಸ್ತಿ ಲೂಟಿ ಮಾಡುತ್ತಿದ್ದಾರೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಸಚಿವ ಜಮೀರ್ ಅಹ್ಮದ್ ಖಾನ್ ಅವರು ಭೂಮಿ ಜಿಹಾದ್ ನಡೆಸುತ್ತಿದ್ದಾರೆ. ಇವರನ್ನು ಕೂಡಲೇ ಸಚಿವ ಸಂಪುಟದಿಂದ ವಜಾ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಬುಧವಾರವೂ ಲೋಕಾಯುಕ್ತ ಕಚೇರಿಗೆ ಬಂದ ಮಲ್ಲಿಕಾರ್ಜುನ ಸ್ವಾಮಿ

ಕುತೂಹಲಕ್ಕೆ ಕಾರಣವಾದ 'ರಾತ್ರಿ' ಭೇಟಿ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನಗಳ ಹಂಚಿಕೆ ಪ್ರಕರಣದ ಮೂರನೇ ಆರೋಪಿಯಾಗಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಮೈದ ಮಲ್ಲಿಕಾರ್ಜುನ ಸ್ವಾಮಿ ಮಂಗಳವಾರ ರಾತ್ರಿ ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿದ್ದು, ಬುಧವಾರ ಮತ್ತೆ ಹಾಜರಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಮಂಗಳವಾರ ಬೆಳಿಗ್ಗೆಯಿಂದ ಸಂಜೆ 7ರವರೆಗೆ ಮುಡಾದ ಮಾಜಿ ಆಯುಕ್ತ ಡಿ.ಬಿ. ನಟೇಶ್ ಅವರನ್ನು ಲೋಕಾಯುಕ್ತ ಅಧಿಕಾರಿಗಳ ತಂಡವು ವಿಚಾರಣೆಗೆ ಒಳಪಡಿಸಿತ್ತು. ಅದಾದ ಒಂದು ಗಂಟೆ ಬಳಿಕ, ರಾತ್ರಿ 8ರ ವೇಳೆಗೆ ಮಲ್ಲಿಕಾರ್ಜುನ ಸ್ವಾಮಿ ಲೋಕಾಯುಕ್ತ ಕಚೇರಿಗೆ ಕೆಲವು ಪತ್ರಗಳೊಂದಿಗೆ ಬಂದು ಅಧಿಕಾರಿಗಳನ್ನು ಭೇಟಿ ಮಾಡಿದರು. ಬುಧವಾರ ಬೆಳಿಗ್ಗೆ 11.30ರ ಸುಮಾರಿಗೆ ಮತ್ತೆ ಭೇಟಿ ನೀಡಿದರು.

ಯಾವ ಉದ್ದೇಶಕ್ಕೆ ರಾತ್ರಿ ಭೇಟಿ ನೀಡಿದರು? ವಿಚಾರಣೆಗೆ ಕರೆಯಲಾಗಿತ್ತೆ? ಎಂಬುದು ಸ್ಪಷ್ಟ ಆಗಿಲ್ಲ. 'ಬ್ಯಾಂಕ್ ಖಾತೆಗೆ ಸಂಬಂಧಿಸಿ ತನಿಖಾಧಿಕಾರಿಗಳು ಕೇಳಿದ ಮಾಹಿತಿಯನ್ನು ನೀಡಲು ಬಂದಿದ್ದರು' ಎಂದು ಮೂಲಗಳು ತಿಳಿಸಿವೆ.

ಮಲ್ಲಿಕಾರ್ಜುನ ಸ್ವಾಮಿ

ಪಾಲಯ್ಯ ವಿಚಾರಣೆ: ಮೈಸೂರಿನ ನಿವೃತ್ತ ಹೆಚ್ಚುವರಿ ಜಿಲ್ಲಾಧಿಕಾರಿ ಪಾಲಯ್ಯ ಬುಧವಾರ ಎರಡನೇ ಬಾರಿಗೆ ಲೋಕಾಯುಕ್ತ ಕಚೇರಿಗೆ ವಿಚಾರಣೆಗೆ ಹಾಜರಾದರು.

ಅವರು 2004-05ರಲ್ಲಿ ಮೈಸೂರಿನ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಕೆಲ ಕಾಲ ಮುಡಾ ಆಯುಕ್ತರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನ ಸ್ವಾಮಿ ಅವರು ದೇವರಾಜು ಅವರಿಂದ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿನ ಜಮೀನು ಖರೀದಿಸಿದ ವೇಳೆ ಜಮೀನು ಪರಭಾರೆ, ಖಾತೆ ಸೇರಿದಂತೆ ಕೆಲವು ಕಡತಗಳಿಗೆ ಸಹಿ ಮಾಡಿದ್ದರು. ಆ ಬಗ್ಗೆ ಅಧಿಕಾರಿಗಳ ತಂಡವು ಮಾಹಿತಿ ಪಡೆಯಿತು.

'ಮೊದಲ ವಿಚಾರಣೆಯಲ್ಲಿ ಕೆಸರೆ ಜಮೀನಿಗೆ ಸಂಬಂಧಿಸಿ ಅಧಿಕಾರಿಗಳು ಪ್ರಶ್ನೆಗಳನ್ನು ಕೇಳಿದ್ದರು. ಇಂದು ಮುಡಾಕ್ಕೆ ಸಂಬಂಧಿಸಿದ ಮಾಹಿತಿ ಕೇಳಿದ್ದರು. ನಾನು ಆಯುಕ್ತನಾಗಿದ್ದಾಗ, ಸಿದ್ದರಾಮಯ್ಯ ಪತ್ನಿ ಪಾರ್ವತಿ ತಮ್ಮ ಜಮೀನಿಗೆ ಪರಿಹಾರ ಕೋರಿ ಟಪಾಲಿನ ಮೂಲಕ ಅರ್ಜಿ ಸಲ್ಲಿಸಿದ್ದರು. ಈ ಎಲ್ಲವನ್ನೂ ವಿವರಿಸಿದ್ದೇನೆ' ಎಂದು ಪಾಲಯ್ಯ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಪ್ರಕರಣದ ನಾಲ್ಕನೇ ಆರೋಪಿ ದೇವರಾಜು, ಮುಡಾದ ಮಾಜಿ ಆಯುಕ್ತ ಕಾಂತರಾಜು ಸೇರಿದಂತೆ ಹಲವರಿಗೆ ತನಿಖಾಧಿಕಾರಿಗಳು ನೋಟಿಸ್ ನೀಡಿದ್ದು, ಸದ್ಯದಲ್ಲೇ ವಿಚಾರಣೆಗೆ ಬರುವ ಸಾಧ್ಯತೆ ಇದೆ.

ಲೋಕಾಯುಕ್ತ ಎಡಿಜಿಪಿಗೆ ಸ್ನೇಹಮಯಿ ಕೃಷ್ಣ ಪತ್ರ

ಮೈಸೂರಿನ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸದೇ ಇರುವುದು ಹಾಗೂ ಲೋಕಾಯುಕ್ತ ಕಚೇರಿಗೆ ರಾತ್ರಿ ವೇಳೆ ಆರೋಪಿ ಮಲ್ಲಿಕಾರ್ಜುನ ಸ್ವಾಮಿ ಭೇಟಿಗೆ ಆಕ್ಷೇಪ ವ್ಯಕ್ತಪಡಿಸಿ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಿಗೆ ಬುಧವಾರ ಪತ್ರ ಬರೆದಿದ್ದಾರೆ.

'ಎಲ್ಲ ತನಿಖಾ ಸಂಸ್ಥೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ಸುಪ್ರೀಂ ಕೋರ್ಟ್ ಸೂಚಿಸಿದೆ. ಆದಾರೂ ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ಕ್ಯಾಮೆರಾಗಳನ್ನು ಅಳವಡಿಸಿಲ್ಲ. ನಾನು ಮನವಿ ಮಾಡಿದ್ದರೂ ಕ್ರಮ ಜರುಗಿಸಿಲ್ಲ. ಹೀಗಾಗಿ ಕಚೇರಿಯಲ್ಲಿನ ಚಟುವಟಿಕೆಗಳ ಬಗ್ಗೆ ಅನುಮಾನ ಮೂಡುತ್ತಿದೆ. ಕೂಡಲೇ ಕ್ಯಾಮೆರಾಗಳ ಅಳವಡಿಕೆಗೆ ಆದೇಶಿಸಬೇಕು' ಎಂದು ಕೋರಿದ್ದಾರೆ.

23ಕ್ಕೆ ಸಿಎಂ ಮೇಲ್ಮನವಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲರು ನೀಡಿರುವ ಅನುಮತಿಗೆ ಅಸ್ತು ಎಂದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಬಾಮೈದ ಮಲ್ಲಿಕಾರ್ಜುನ ಸ್ವಾಮಿಗೆ ಜಮೀನು ಮಾರಾಟ ಮಾಡಿದ್ದ ಜೆ.ದೇವರಾಜು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆಯನ್ನು ಹೈಕೋರ್ಟ್ ಇದೇ 23ಕ್ಕೆ ನಿಗದಿಪಡಿಸಿದೆ.

ರಿಟ್ ಮೇಲ್ಮನವಿಗಳ ಅರ್ಜಿದಾರರ ಪರ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ದುಷ್ಯಂತ ದವೆ ಅವರು ಬುಧವಾರ ಈ ಕುರಿತಂತೆ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ಪೀಠಕ್ಕೆ ಮನವಿ ಸಲ್ಲಿಸಿ, 'ಈ ಎರಡೂ ಪ್ರಕರಣ ಗಳನ್ನು ಪ್ರತ್ಯೇಕವಾಗಿ ವಿಚಾರಣೆಗೆ ಪರಿಗಣಿಸಬೇಕು' ಎಂದು ಕೋರಿದರು.

ಜೆ.ದೇವರಾಜು ಪರ ಮೇಲ್ಮನವಿಯನ್ನು ಉಲ್ಲೇಖಿಸಿದ ದುಷ್ಯಂತ ದವೆ ಅವರು, ' 25 ವರ್ಷಗಳ ಹಿಂದೆ ನಡೆದಿರುವ ಈ ಪ್ರಕರಣ ದಲ್ಲಿ ಅರ್ಜಿದಾರರನ್ನು ಪಕ್ಷಕಾರರನ್ನಾಗಿ ಮಾಡದೇ ಏಕಸದಸ್ಯ ಪೀಠ ಕಟು ಅಭಿಪ್ರಾಯ ವ್ಯಕ್ತಪಡಿಸಿದೆ. ಅರ್ಜಿದಾರರು ಸಣ್ಣ ಭೂಮಾಲೀಕರು. ಆದರೆ, ಶಕ್ತಿಯುತ ರಾಜಕಾರಣಿಗಳ ರಾಜಕೀಯ ಕೆಸರೆರಚಾಟದಲ್ಲಿ ಅವರನ್ನು ಸಿಲುಕಿಸಲಾಗಿದೆ' ಎಂದು ಆಕ್ಷೇಪಿಸಿದರು. 'ಅರ್ಜಿದಾರರು ಸಕಾರಣವಿಲ್ಲದೇ ಯಾತನೆ ಅನುಭವಿಸುವಂತಾಗಿದ್ದು, ಕ್ರಿಮಿನಲ್ ವಿಚಾರಣೆಗೆ ಗುರಿ ಆಗಬೇಕಿದೆ. ಈ ಮೇಲ್ಮನವಿಗಳನ್ನು ಇದೇ 22ಕ್ಕೆ ವಿಚಾರಣೆಗೆ ನಿಗದಿಪಡಿಸಬೇಕು. ಇಲ್ಲವಾದಲ್ಲಿ ಕ್ರಿಮಿನಲ್ ಮತ್ತು ಸಿವಿಲ್ ಹೊಣೆಗಾರಿಕೆ ಎದುರಿಸ ಬೇಕಾಗುತ್ತದೆ' ಎಂದರು. ಪೀಠವು ಇದೇ 23ಕ್ಕೆ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಏನಿದು ಪ್ರಕರಣ?

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಒಡೆತನದ್ದು ಎನ್ನಲಾದ ಕೃಷಿ ಭೂಮಿಯನ್ನು ಮುಡಾ ವಶಪಡಿಸಿಕೊಂಡು ಅದಕ್ಕೆ ಪರ್ಯಾಯವಾಗಿ 14 ನಿವೇಶನಗಳನ್ನು ಪ್ರಮುಖ ಜಾಗದಲ್ಲಿ ಹಂಚಿಕೆ ಮಾಡಲಾಗಿದೆ' ಎನ್ನುವುದು ವಿವಾದದ ಕೇಂದ್ರ ಬಿಂದು.

'ಪರಿಹಾರ ರೂಪದಲ್ಲಿ ನೀಡಲಾದ ನಿವೇಶನಗಳ ಹಂಚಿಕೆ ಪ್ರಕ್ರಿಯೆಯೇ ಅಕ್ರಮದಿಂದ ಕೂಡಿದೆ. ಇಡೀ ಪ್ರಕ್ರಿಯೆಯಲ್ಲಿ ಸಿದ್ದರಾಮಯ್ಯನವರು ಪ್ರಭಾವ ಬೀರಿರುವುದು ಕಂಡು ಬಂದಿದೆ' ಎಂದು ಆರೋಪಿಸಲಾದ ಮೂರು ಖಾಸಗಿ ದೂರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಲಾಗಿತ್ತು. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ-1988ರ ಕಲಂ (ಪಿಸಿ ಕಾಯ್ದೆ) 17ಎ ಅಡಿ ತನಿಖೆ ನಡೆಸಲು 2024ರ ಆಗಸ್ಟ್ 17ರಂದು ಮಂಜೂರಾತಿ ನೀಡಿದ್ದರು.

'ರಾಜ್ಯಪಾಲರ ಈ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಸಿದ್ದರಾಮಯ್ಯ ಹೈಕೋರ್ಟ್ ಮೆಟ್ಟಿಲೇರಿದ್ದರು. 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಸೆಪ್ಟೆಂಬರ್ 24ರಂದು ಅಸ್ತು ಎಂದು ತೀರ್ಪು ನೀಡಿದ್ದರು. ಮೈಸೂರಿನ ಲೋಕಾಯುಕ್ತ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದರು.

ಎಚ್‌ಎಸ್‌ಆರ್‌ಪಿ: ಮಧ್ಯಂತರ ಆದೇಶ ಡಿ.4ರವರೆಗೆ ವಿಸ್ತರಣೆ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಯಾಗಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿದೆ. ಈಗಾಗಲೇ ಚಾಲ್ತಿಯಲ್ಲಿರುವ ಮಧ್ಯಂತರ ಆದೇಶ ಮುಂದುವರಿಯಲಿ. ಜೊತೆಗೆ, ಏಕಸದಸ್ಯ ಪೀಠವೇ ಪ್ರಕರಣದ ಕುರಿತಂತೆ ನಿರ್ಧರಿಸಲು ಆದೇಶಿಸಬಹುದು' ಎಂದು ಸಲಹೆ ನೀಡಿದರು. ಇದಕ್ಕೆ ಸಮ್ಮತಿಸಿದ ನ್ಯಾಯಪೀಠವು ಮಧ್ಯಂತರ ಆದೇಶವನ್ನು ವಿಸ್ತರಿಸಿ, ವಿಚಾರಣೆಯನ್ನು ಡಿಸೆಂಬರ್ 4ಕ್ಕೆ ಮುಂದೂಡಿತು.

'ಅತಿಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ನಿರ್ದಿಷ್ಟ ಉತ್ಪಾದಕರು ಮಾತ್ರ ಪೂರೈಸಬೇಕು ಮತ್ತು ನಿರ್ದಿಷ್ಟ ಡೀಲರ್‌ಗಳು ಮಾತ್ರವೇ ಅಳವಡಿಸ ಬೇಕು' ಎಂದು ಸಾರಿಗೆ ಇಲಾಖೆ 2023ರ ಆಗಸ್ಟ್ 17ರಂದು ಹೊರಡಿಸಿರುವ ಅಧಿಸೂಚನೆ ಮತ್ತು 2023ರ ಆಗಸ್ಟ್ 18ರ ಸುತ್ತೋಲೆಗೆ ತಡೆ ನೀಡಲು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ನಿರಾಕರಿಸಿತ್ತು.

2023ರ ಸೆಪ್ಟೆಂಬರ್ 20ರಂದು ನೀಡಿದ್ದ ಈ ಆದೇಶವನ್ನು ಪ್ರಶ್ನಿಸಿ ಸೂರತ್‌ನ ಬಿಎನ್‌ಡಿ ಎನರ್ಜಿ ಪ್ರೈವೆಟ್ ಲಿಮಿಟೆಡ್ ಸೇರಿದಂತೆ ಇತರ ಮೂರು ಸಂಸ್ಥೆಗಳು ಈ ಮೇಲ್ಮನವಿ ಸಲ್ಲಿಸಿವೆ.

ನಬಾರ್ಡ್ ಸಾಲ ಕಡಿತ: ದೆಹಲಿಗೆ ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಬಾರ್ಡ್‌ನಿಂದ ರಾಜ್ಯಕ್ಕೆ ನೀಡಲಾಗುವ ಸಾಲದ ಮೊತ್ತವನ್ನು ಪ್ರಸಕ್ತ ಸಾಲಿನಲ್ಲಿ ಕಡಿತ ಮಾಡಿದ ಕುರಿತು ಚರ್ಚಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಲು ಸಮಯ ಕೇಳಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಿದ್ದರಾಮಯ್ಯ ಅವರು ಬುಧವಾರ ರಾತ್ರಿ ದೆಹಲಿಗೆ ಪ್ರಯಾಣ ಬೆಳೆಸಿದರು. ದೆಹಲಿಯಲ್ಲಿ ನಂದಿನಿ ಉತ್ಪನ್ನಗಳನ್ನು ಗುರುವಾರ ಅವರು ಬಿಡುಗಡೆ ಮಾಡಲಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, 'ನಬಾರ್ಡ್ ಕಳೆದ ವರ್ಷ ರಾಜ್ಯಕ್ಕೆ ₹5,600 ಕೋಟಿ ಸಾಲ ನೀಡಿತ್ತು. ಈ ವರ್ಷ ₹2,340 ಕೋಟಿಗೆ ಕಡಿತ ಮಾಡಿದೆ. ಈ ಬಗ್ಗೆ ಕೇಂದ್ರ ವಿತ್ತ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಲಾಗುವುದು' ಎಂದರು.

'ದೆಹಲಿ ಭೇಟಿ ವೇಳೆ ಕಾಂಗ್ರೆಸ್ ವರಿಷ್ಠರನ್ನು ಭೇಟಿ ಮಾಡುತ್ತೀರಾ' ಎಂಬ ಪ್ರಶ್ನೆಗೆ, 'ಗುರುವಾರ ಸಂಜೆಯ ಒಳಗೆ ರಾಜ್ಯಕ್ಕೆ ಮರಳಬೇಕು. ಸಮಯ ಸಿಕ್ಕರೆ ಭೇಟಿ ಮಾಡುತ್ತೇನೆ' ಎಂದರು.

ಕಲಿಕೆಗೆ ನೆರವಾಗುವ ಟ್ಯಾಕ್‌ಟೈಲ್ • 'ಆನ್‌ಲೈನ್‌ನಲ್ಲಿ ಗ್ರಾಮ ಪಂಚಾಯಿತಿ ಸಭೆ ನಡೆಸುವುದಕ್ಕೆ ಸರ್ಕಾರ ಶೀಘ್ರವೇ ಚಾಲನೆ'

ಟೆಕ್ ಶೃಂಗ: ಅಂಧರಿಗೆ ಬೆಳಕಾದ ಕನ್ನಡಕ

• ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರು: ಎದುರಿಗಿರುವ ವ್ಯಕ್ತಿಯ ಮಾತುಗಳ ಜತೆಗೆ, ಅವರ ಮುಖ ಚಹರೆಯ ಭಾವವನ್ನೂ ಅಂಧರಿಗೆ ತಿಳಿಸಬಲ್ಲ ಕನ್ನಡಕಗಳು ಹಾಗೂ ಅಂಧ ಮಕ್ಕಳ ಓದಿಗೆ ಚಿತ್ರ ಸಹಿತ ಮಾಹಿತಿ ನೀಡಲು ನೆರವಾಗುವ ಸಾಧನಗಳು ತಯಾರಾಗಿದ್ದು, ಕಣ್ಣು ಕಾಣದ ಸಮಸ್ಯೆ ಇರುವವರಿಗೆ ಹೊಸ ಬೆಳಕು ನೀಡಲಿವೆ.

ಬೆಂಗಳೂರು ಟೆಕ್ ಶೃಂಗದಲ್ಲಿ ಈ ಸಾಧನಗಳು ಗಮನ ಸೆಳೆಯುವಂತಿದ್ದವು.

ಚೆನ್ನೈನ ಐಐಟಿ ಮದ್ರಾಸ್‌ನ ವಿದ್ಯಾರ್ಥಿಗಳು 'ಪ್ಯಾನಾಕುಲಾನ್‌ಲ್ಯಾಬ್ಸ್' ಎಂಬ ನವೋದ್ಯ ಮೂಲಕ ಪ್ಯಾನಾಕಲ್ ಎಂಬ ಕೃತಕ ಬುದ್ಧಿಮತ್ತೆ ಆಧಾರಿತ ಸ್ಮಾರ್ಟ್ ಕನ್ನಡಕವನ್ನು ಅಂಧರಿಗಾಗಿ ಅಭಿವೃದ್ಧಿಪಡಿಸಿದ್ದಾರೆ. ಕ್ಯಾಮೆರಾ, ಇಯರ್‌ಪಾಡ್, ಇನ್‌ಫ್ರಾರೆಡ್ ರೇಡಿಯೇಷನ್, ಎಚ್ಚರಿಕೆ ನೀಡಬಲ್ಲ ವೈಬ್ರೇಷನ್ ಅನ್ನು ಇದು ಹೊಂದಿದೆ.

ಎದುರಿಗಿರುವ ವ್ಯಕ್ತಿಯ ಮುಖಭಾವನೆಗಳನ್ನು ಗ್ರಹಿಸಿ, ಕಿವಿಗೆ ಮಾಹಿತಿ ನೀಡುವ ಸ್ಮಾರ್ಟ್ ಗ್ಲಾಸ್ ಇದಾಗಿದೆ. ಇಷ್ಟೇ ಅಲ್ಲ, ಎದುರಿಗಿರುವ ವ್ಯಕ್ತಿಯು ನೀಡುವ ಮಾಹಿತಿಯನ್ನು ದಾಖಲಿಸಿ, ಅದನ್ನು ಅಕ್ಷರರೂಪದಲ್ಲಿ ದಾಖಲಿಸಿಕೊಳ್ಳುವ ಸಾಮರ್ಥ್ಯವೂ ಇದರಲ್ಲಿದೆ. ಒಮ್ಮೆ ಭೇಟಿ ನೀಡಿದ ವ್ಯಕ್ತಿ, ಮುಂದೆ ಎಂದಾದರೂ ಭೇಟಿಯಾದರೆ, ಅವರ ಪರಿಚಯ, ಹಿಂದೆ ಅವರೊಂದಿಗೆ ನಡೆಸಿದ ಸಂಭಾಷಣೆಯ ಸಂಕ್ಷಿಪ್ತ ಮಾಹಿತಿ ನೀಡಿ ನೆನಪಿಸುವ ಆಪ್ತಸಹಾಯಕ ಈ ಕನ್ನಡಕ. ರಸ್ತೆಯಲ್ಲಿ ನಡೆಯುವಾಗ ಎದುರಿಗೆ ಅಪಾಯ ಇರುವ ಮುನ್ಸೂಚನೆಯನ್ನೂ ನೀಡುವ ಮೂಲಕ ಬೀಳದಂತೆ ತಡೆಯಲಿದೆ ಎಂದು ಇದನ್ನು ಅಭಿವೃದ್ಧಿಪಡಿಸಿದ ತಂತ್ರಜ್ಞರು ವಿವರಿಸಿದರು.

ಬೆಂಗಳೂರಿನ ಅರಮನೆ ಆವರಣದಲ್ಲಿ ಆಯೋಜನೆಗೊಂಡಿರುವ ಬೆಂಗಳೂರು ಟೆಕ್ ಸಮಿಟ್‌ನಲ್ಲಿನ ಸ್ಟಾರ್ಟ್‌ಅಪ್ ಮಳಿಗೆಯಲ್ಲಿ ಟೆಕ್‌ಟೈಲ್ ಕಾರ್ಯವಿಧಾನ ವಿವರಿಸಿದ ಯುಡಾಟ್‌ನ ಕೆ. ಲಲಿಕಾ ಲಯಾ

ಚಿತ್ತಾರ ಗ್ರಹಿಸುವ ಟ್ಯಾಕ್ ಟೈಲ್: ಗುವಾಹಟಿ ಐಐಟಿಯಲ್ಲಿ ಬಿ.ಟೆಕ್ ಪದವಿ ಪಡೆದ ಕವಿರಾಜ್ ಪೃಥ್ವಿ ಹಾಗೂ ಕೆ. ಲಲಿಕಾ ಲಯಾ ಅವರು ಬೆಂಗಳೂರಿನಲ್ಲಿ ಆರಂಭಿಸಿರುವ 'ಯುಡಾಟ್' ಎಂಬ ಸ್ಟಾರ್ಟ್ ಅಪ್ ಕಂಪನಿಯು ಟಚ್‌ಸ್ಕ್ರೀನ್ ಮಾದರಿಯ ಟ್ಯಾಕ್‌ಟೈಲ್ ಎಂಬ ಸಾಧನವನ್ನು ಅಭಿವೃದ್ಧಿಪಡಿಸಿದೆ.

ಗರಿಷ್ಠ ಐದು ಸಾವಿರ ಚುಕ್ಕಿಗಳಿರುವ ಸಾಧನವಿದು. ಕಂಪ್ಯೂಟರ್‌ನಲ್ಲಿ ಶಿಕ್ಷಕರು ಮೂಡಿಸುವ ಉಬ್ಬು ಚುಕ್ಕಿಗಳಿಂದ ಮೂಡುವ ಚಿತ್ತಾರಗಳನ್ನು ಗ್ರಹಿಸಿ ಅಧ್ಯಯನ ನಡೆಸುವ ಸಾಧನ ಇದಾಗಿದೆ.

ಈ ಕುರಿತು ಮಾಹಿತಿ ನೀಡಿದ ಲಲಿಕಾ ಲಯಾ, 'ಪ್ರತಿ ಐದು ಅಂಧ ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರು ಇರಬೇಕು ಎಂಬ ನಿಯಮವಿದೆ. ಆದರೆ 20 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇರುವುದು ಸಾಮಾನ್ಯ ಎಂಬಂತಾಗಿದೆ. ಹೀಗಿದ್ದರೂ, ಚಿತ್ರ ಸಹಿತ ಕಲಿಕೆ ಮೂಲಕ ಅಂಧ ವಿದ್ಯಾರ್ಥಿಗಳ ಪರಿಣಾಮಕಾರಿ ಅಧ್ಯಯನಕ್ಕೆ ಈ ಸಾಧನ ನೆರವಾಗಲಿದೆ' ಎಂದರು.

'ಅಂಧ ವಿದ್ಯಾರ್ಥಿಗಳಿಗೆ ಹೊಸ ವಿಷಯವನ್ನು ಕೇವಲ ಬ್ರೈಲ್ ಮಾದರಿ ಅಕ್ಷರದಲ್ಲಿ ವಿವರಿಸುವುದು ಅಸಾಧ್ಯ. ಇಂಥಸಂದರ್ಭದಲ್ಲಿ ಟ್ಯಾಕ್‌ಟೈಲ್ ಸಾಧನದಿಂದ ಉಬ್ಬು ಚಿತ್ರಗಳನ್ನು ನಿರ್ಮಿಸಿ, ಅದರ ಮೂಲಕ ವಿಷಯವನ್ನು ಕಲಿಸಲು ಸಾಧ್ಯ ಎಂಬುದನ್ನು ಅಧ್ಯಯನ ದಲ್ಲಿ ಕಂಡುಕೊಂಡ ನಂತರ ಈ ಸಾಧನ ವನ್ನು ಅಭಿವೃದ್ಧಿಪಡಿಸಲಾಗಿದೆ. ಕಂಪ್ಯೂಟರ್‌ನಲ್ಲಿ ರಚಿಸುವ ಚಿತ್ರ ಗಳಂತೆಯೇ, ಈ ಸಾಧನ ಉಬ್ಬು ಚಿತ್ರಗಳನ್ನು ಮೂಡಿಸಲಿದೆ' ಎಂದು ತಿಳಿಸಿದರು.

ಗ್ರಾ.ಪಂ. ಸಭೆಗಳಿಗೆ ಆನ್‌ಲೈನ್ ಸ್ಪರ್ಶ

• ಕೆ.ಎಚ್. ಓಬಳೇಶ್

ಬೆಂಗಳೂರು: 'ಆನ್‌ಲೈನ್‌ನಲ್ಲಿ ಗ್ರಾಮ ಪಂಚಾಯಿತಿ ಸಭೆಗಳನ್ನು ನಡೆಸುವುದಕ್ಕೆ ಸರ್ಕಾರ ಶೀಘ್ರವೇ ಚಾಲನೆ ನೀಡಲಿದೆ' ಎಂದು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ತಿಳಿಸಿದ್ದಾರೆ.

ನಗರದಲ್ಲಿ ಬುಧವಾರ ನಡೆದ ಬೆಂಗಳೂರು ಟೆಕ್ ಶೃಂಗದಲ್ಲಿ 'ಆಡಳಿತದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆ' ಕುರಿತು ನಡೆದ ಚರ್ಚೆಯಲ್ಲಿ ಅವರು ಮಾತನಾಡಿದರು. ತಂತ್ರಜ್ಞಾನವು ಆಡಳಿತದ ಭಾಗವಾಗಿದೆ. ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಹಾಗೂ ಆದಾಯ ಹೆಚ್ಚಳಕ್ಕೂ ನೆರವಾಗಿದೆ ಎಂದು ಹೇಳಿದರು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಅನ್ವಯ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆ, ವಾರ್ಡ್ ಸಭೆ, ವಿಶೇಷ ಸಭೆ, ಸ್ಥಾಯಿ ಸಮಿತಿ ಸಭೆ, ಸಮಿತಿ ಹಾಗೂ ಉಪ ಸಮಿತಿ ಸಭೆ, ಕೆಡಿಪಿ ಸಭೆ ಆಯೋ ಜಿಸುವುದು ಕಡ್ಡಾಯ. ಈ ಎಲ್ಲಾ ಸಭೆಗಳನ್ನು ಇನ್ನು ಮುಂದೆ ಆನ್‌ಲೈನ್‌ನಲ್ಲಿ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಕೆಲವು ಬಾರಿ ಸಭೆ ನಡೆದಿದೆಯೇ ಅಥವಾ ಎಷ್ಟು ಸದಸ್ಯರು ಹಾಜರಾಗಿದ್ದಾರೆ ಎಂಬುದು ತಿಳಿಯುವುದಿಲ್ಲ. ಆನ್‌ಲೈನ್ ಸಭೆಗಳಿಂದ ಜಿಲ್ಲಾಮಟ್ಟದ ಹಿರಿಯ ಅಧಿಕಾರಿಗಳು ಸಭೆಯ ಆಗುಹೋಗುಗಳ ಮೇಲೆ ನಿಗಾ ಇಡಬಹುದು. ಜನರಿಗೂ ಸಭೆಯಲ್ಲಿ ಕೈಗೊಳ್ಳುವ ನಿರ್ಧಾರಗಳ ಬಗ್ಗೆ ತಿಳಿಯಲಿದೆ. ಇದರಿಂದ ಆಡಳಿತದಲ್ಲಿ ಸುಧಾರಣೆ ತರಲು ಸಹಕಾರಿಯಾಗಲಿದೆ ಎಂದರು. ರಾಜ್ಯ ಸರ್ಕಾರವು ತಂತ್ರಜ್ಞಾನ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯರು ಮತ್ತು ಸಿಬ್ಬಂದಿಯ ಹಾಜರಾತಿ, ಸಭಾ ನಡಾವಳಿಗಳನ್ನು ಡಿಜಿಟಲ್ ಸಾಧನದ ಮೂಲಕ ತಯಾರಿಸಿ ಅಧ್ಯಕ್ಷರ ಡಿಜಿಟಲ್ ಸಹಿಯೊಂದಿಗೆ ಅನುಮೋದನೆ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಇದಕ್ಕಾಗಿ ಪಂಚತಂತ್ರ 2.0 ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದು ವಿವರಿಸಿದರು.

ಉಮಾ ಮಹದೇವನ್

ಕೆಲವು ಇಲಾಖೆಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆಗೆ ಆದ್ಯತೆ ನೀಡಲಾಗಿದೆ. ಸರ್ಕಾರದ ದತ್ತಾಂಶಗಳ ಬಗ್ಗೆ ಅನಕ್ಷರಸ್ಥರಿಗೆ ಮಾಹಿತಿ ಇರುವುದಿಲ್ಲ. ಎ.ಐ ವಿಡಿಯೊಗಳ ಮೂಲಕ ಈ ದತ್ತಾಂಶ ಕುರಿತು ಅವರಿಗೆ ಅರಿವು ಮೂಡಿಸಲು ಪ್ರಯತ್ನ ಮಾಡಬಹುದಾಗಿದೆ ಎಂದರು.

ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣೆ: ಅಲ್ಲಲ್ಲಿ ಅಹಿತಕರ ಘಟನೆ

ಮತದಾನ ಬಹುತೇಕ ಶಾಂತಿಯುತ

ಪ್ರಜಾವಾಣಿ ವಾರ್ತೆ/ಪಿಟಿಐ

ರಾಂಚಿ/ಮುಂಬೈ: ಜಾರ್ಖಂಡ್‌ನಲ್ಲಿ 38 ವಿಧಾನಸಭೆ ಕ್ಷೇತ್ರಗಳಿಗೆ ಎರಡನೇ ಹಂತದ ಮತದಾನ ಬುಧವಾರ ನಡೆಯಿತು. ಮಹಾರಾಷ್ಟ್ರದ ಒಟ್ಟು 288 ವಿಧಾನಸಭಾ ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯಿತು. ಎರಡೂ ರಾಜ್ಯಗಳಲ್ಲಿ ಮತದಾನವು ಬಹುತೇಕ ಶಾಂತಿಯುತವಾಗಿ ನಡೆದಿದೆ. ಆದರೆ, ಮಹಾರಾಷ್ಟ್ರದಲ್ಲಿ ವಿವಿಧ ಪಕ್ಷಗಳ ಅಭ್ಯರ್ಥಿ ಮಧ್ಯೆ ವಾಕ್ಸಮರ ನಡೆದಿದೆ. ಶಿವಸೇನಾ ಅಭ್ಯರ್ಥಿ ಮೇಲೆ ಗುಂಡಿನ ದಾಳಿ ಆಗಿರುವ ಘಟನೆಯೂ ನಡೆದಿದೆ.

ಜಾರ್ಖಂಡ್‌ನ ಲತೆಹರ್ ಜಿಲ್ಲೆಯಲ್ಲಿ ಬುಧವಾರ ಬೆಳಿಗ್ಗೆ ನಕ್ಸಲರು ದಾಳಿ ನಡೆಸಿದ್ದಾರೆ. ಮತದಾರರಲ್ಲಿ ಭಯ ಹುಟ್ಟಿಸುವ ಸಲುವಾಗಿ ನಿಷೇಧಿತ ಸಂಘಟನೆಯಾದ 'ಜಾರ್ಖಂಡ್ ಪ್ರಸ್ತುತಿ ಸಮಿತಿ' (ಜೆಪಿಸಿ) ನಕ್ಸಲರು ಐದು ಟ್ರಕ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. ಈ ಘಟನೆ ಹೊರತುಪಡಿಸಿ, ನಕ್ಸಲ್ ಬಾಧಿತ ಇತರ ಜಿಲ್ಲೆಗಳಲ್ಲಿ ಮತದಾನವು ಶಾಂತಿಯುತವಾಗಿತ್ತು.

'ಮಹಾಯುತಿ' ಹಾಗೂ 'ಮಹಾ ವಿಕಾಸ ಆಘಾಡಿ' ಮಧ್ಯೆ ತೀವ್ರ ಹಣಾಹಣಿ ಏರ್ಪಟ್ಟಿರುವ ಮಹಾರಾಷ್ಟ್ರದಲ್ಲಿ ಬುಧವಾರ ಹಲವು ಘಟನೆಗಳು ಸಂಭವಿಸಿವೆ. ಬಿಜೆಪಿ, ಶಿವಸೇನಾ, ಶಿವಸೇನಾ (ಉದ್ಧವ್ ಬಣ) ಹಾಗೂ ಎನ್‌ಸಿಪಿ (ಶರದ್ ಬಣ) ಅಭ್ಯರ್ಥಿಗಳ ನಡುವೆ ಆರೋಪ ಪ್ರತ್ಯಾರೋಪಗಳು ನಡೆದಿವೆ.

ಮುಂಬೈನ ನಗರವಾಸಿಗಳು ತಮ್ಮ ಆಲಸ್ಯವನ್ನು ಮುಂದುವರಿಸಿದ್ದಾರೆ ಎಂದು ಚುನಾವಣಾ ಆಯೋಗ ಬೇಸರ ವ್ಯಕ್ತಪಡಿಸಿದೆ. 'ನಗರವಾಸಿಗಳು ಮತದಾನಕ್ಕೆ ಬರುವಂತೆ ಹಲವು ಅಭಿಯಾನಗಳನ್ನು ನಡೆಸಿದರೂ ಜನರು ನಿರಾಸಕ್ತಿ ತೋರಿಸಿದರು' ಎಂದು ಆಯೋಗ ಹೇಳಿದೆ.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ವೇಳೆ ನಾಗ್ಪುರ ಕ್ಷೇತ್ರದಲ್ಲಿ ಮತದಾನ ಮಾಡಲು ಸಾಲುಗಟ್ಟಿದ್ದ ಮತದಾರರು ತಮ್ಮ ಗುರುತು ಚೀಟಿ ಪ್ರದರ್ಶಿಸಿದರು ಪಿಟಿಐ ಚಿತ್ರ

- ಕುಷ್ಠರೋಗಿಗಳಿಗಾಗಿಯೇ ವಿಶೇಷವಾಗಿ ಸಿಂಗರಿಸಲಾಗಿದ್ದ ಬೂತ್‌ಗಳಲ್ಲಿ ಇದೇ ಮೊದಲ ಬಾರಿಗೆ ರೋಗಿಗಳು ಮತದಾನ ಮಾಡಿದರು. ಜಾರ್ಖಂಡ್‌ನ ಜಮತಾಢಾದಲ್ಲಿ ಈ ಪ್ರಯೋಗ ಮಾಡಲಾಗಿದೆ.
- ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಮುಂಬೈನ 113ರ ಕಂಚನ್‌ಬೇನ್ ನಂದ್‌ಕಿಶೋರ್ ಬಾದ್‌ಶಾ ಹಾಗೂ 103ರ ಜಿ.ಜಿ. ಪಾರಿಖ್ ಅವರು ಬೆಳಿಗ್ಗೆಯೇ ಮತಗಟ್ಟೆಗೆ ಬಂದು ಮತ ಚಲಾಯಿಸಿದರು. ಸ್ವಾತಂತ್ರ್ಯಾ ನಂತರ ನಡೆದ ಎಲ್ಲ ಚುನಾವಣೆಗಳಲ್ಲಿಯೂ ಪಾರಿಖ್ ಅವರು ಮತದಾನ ಮಾಡಿದ್ದಾರೆ. ಮಹಾರಾಷ್ಟ್ರದ ಲಾತೂರ್ ನಗರದಲ್ಲಿ 101 ವರ್ಷದ ನರ್ಮದಾಬಾಯಿ ಮದನ್‌ಲಾಲ್ ತೋಶ್ನಿವಾಲ್ ಅವರೂ ಬುಧವಾರ ಮತಚಲಾಯಿಸಿದರು
- ಮಾಧುಪುರ ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದರ ಪ್ರಿಸೈಡಿಂಗ್ ಅಧಿಕಾರಿ ರಮಾನಂದ್ ಕುಮಾರ್ ಪಾಸ್ವಾನ್ ಅವರು ಜೆಎಂಎಂನ ಅಭ್ಯರ್ಥಿಗೆ ಸಹಕಾರ ನೀಡುತ್ತಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದೂಬೆ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ. ದೂರಿನ ಆಧಾರದಲ್ಲಿ ಅಧಿಕಾರಿಯನ್ನು ಬಂಧಿಸಲಾಗಿದೆ.
- ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಪತ್ನಿ, ಜೆಎಂಎಂ ನಾಯಕಿ ಕಲ್ಪನಾ ಸೊರೇನ್ ಅವರು ಸ್ಪರ್ಧಿಸಿರುವ ಗಾಂಡೇಯ ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದರ ಪ್ರಿಸೈಡಿಂಗ್ ಅಧಿಕಾರಿಯಾಗಿದ್ದ ಪ್ರಮೋದ್ ಕುಮಾರ್ ಅವರನ್ನು ಬದಲಾಯಿಸಿ, ಮತದಾನದ ಗೋಪ್ಯತೆಯನ್ನು ಕಾಪಾಡದ ಕಾರಣ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ
- ಮಹಾರಾಷ್ಟ್ರದ ಬೀಡ್ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಬಾಳಾ ಸಾಹೇಬ್ ಶಿಂದೆ ಹೃದಯಾಘಾತದಿಂದ ಮತಗಟ್ಟೆಯಲ್ಲೇ ಕುಸಿದು ಮೃತಪಟ್ಟರು
- ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ರಾಜುರಾ ವಿಧಾನಸಭಾ ಕ್ಷೇತ್ರದಲ್ಲಿ ₹60 ಲಕ್ಷವನ್ನು ವಶಪಡಿಸಿಕೊಳ್ಳಲಾಗಿದೆ
- ಅಣಕು ಮತದಾನದ ವೇಳೆ ದೋಷ ಕಾಣಿಸಿಕೊಂಡಮಹಾರಾಷ್ಟ್ರದ ಹಿಂಗೋಲಿ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳಲ್ಲಿನ ಸುಮಾರು 21 ಇವಿಎಂಗಳನ್ನು ಬದಲಾಯಿಸಲಾಗಿದೆ ಎಂದು ಚುನಾವಣಾ ಅಧಿಕಾರಿಗಳು ಮಾಹಿತಿ ನೀಡಿದರು
- ಮಹಾರಾಷ್ಟ್ರದ ಶ್ರೀರಾಂಪುರದಲ್ಲಿ ಶಿವಸೇನಾ ಅಭ್ಯರ್ಥಿ ಭೌಸಾಹೇಬ್ ಕಾಂಬ್ಳೆ ಅವರ ಕಾರಿನ ಮೇಲೆ ಬುಧವಾರ ಮುಂಜಾನೆ ಮೂವರು ಅಪರಿಚಿತ ವ್ಯಕ್ತಿಗಳು ಗುಂಡು ಹಾರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ

ಜಾರ್ಖಂಡ್: ಶೇ 68.45ರಷ್ಟು ಮತದಾನ

ರಾಂಚಿ (ಪಿಟಿಐ): ಎರಡನೇ ಮತ್ತು ಅಂತಿಮ ಹಂತದ ಮತದಾನ ನಡೆದ ಜಾರ್ಖಂಡ್‌ನ 38 ವಿಧಾನಸಭಾ ಕ್ಷೇತ್ರಗಳಲ್ಲಿ ಬುಧವಾರ ಸಂಜೆ 5 ಗಂಟೆಯವರೆಗೆ ಸುಮಾರು ಶೇ 68.45ರಷ್ಟು ಮತದಾನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

12 ಜಿಲ್ಲೆಗಳ 14,218 ಬೂತ್‌ಗಳಲ್ಲಿ ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನ ಸಂಜೆ 5 ಗಂಟೆಯವರೆಗೆ ನಡೆಯಿತು. ಆದರೆ, 31 ಬೂತ್‌ಗಳಲ್ಲಿ ಸಂಜೆ 4 ಗಂಟೆಗೆ ಮತದಾನ ಮುಗಿಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡನೇ ಹಂತದ ಚುನಾವಣೆಯಲ್ಲಿ ಒಟ್ಟು 528 ಅಭ್ಯರ್ಥಿಗಳ ಅದೃಷ್ಟ ಮತಪೆಟ್ಟಿಗೆ ಸೇರಿದೆ. ಮೊದಲ ಹಂತದಲ್ಲಿ 43 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು. ಮತ ಎಣಿಕೆ ಇದೇ 23ರಂದು ನಡೆಯಲಿದೆ.

ಜಮ್ತಾರಾ ಜಿಲ್ಲೆಯಲ್ಲಿ ಅತಿ ಹೆಚ್ಚು ಶೇ 77.29 ರಷ್ಟು ಮತದಾನವಾಗಿದೆ. ಪಾಕುರ್ ಶೇ 76.60, ದೇವಘರ್ ಶೇ 72.62 ಮತ್ತು ರಾಂಚಿ ಶೇ 72.04, ರಾಮಗಢ ಶೇ 72.41, ದುಮ್ಕಾ ಶೇ 71.99, ಗೊಡ್ಡಾ ಶೇ 68.51, ಸಾಹೇಬಗಂಜ್ ಶೇ 68.95, ಗಿರಿದಿಹ್ ಶೇ 66.41, ಹಜಾರಿಬಾಗ್ ಶೇ 64.97 ಮತ್ತು ಧನ್‌ಬಾದ್ ಶೇ 63.40 ಹಾಗೂ ಬೊಕಾರೊ ಜಿಲ್ಲೆಯಲ್ಲಿ ಶೇ 63.22ರಷ್ಟು ಮತದಾನವಾಗಿದೆ.

ಮಹಾರಾಷ್ಟ್ರ: ಶೇ 65.02ರಷ್ಟು ಮತ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬುಧವಾರ ರಾತ್ರಿ 11.45ರವರೆಗಿನ ಮಾಹಿತಿ ಪ್ರಕಾರ ಶೇ 65.02ರಷ್ಟು ಮತದಾನವಾಗಿದೆ. ಕೊಲ್ಹಾಪುರ ಜಿಲ್ಲೆಯಲ್ಲಿ ಅತಿ ಹೆಚ್ಚು, ಶೇ 76 ಮತ್ತು ಗಢಚಿರೋಲಿ ಜಿಲ್ಲೆಯಲ್ಲಿ ಶೇ 73.68ರಷ್ಟು ಮತದಾನವಾಗಿದೆ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ನಗರದಲ್ಲಿ ಅತಿ ಕಡಿಮೆ ಅಂದರೆ, ಶೇ 52.07, ಮುಂಬೈ ಉಪನಗರ ಶೇ 55.77 ಹಾಗೂ ಠಾಣೆ ಜಿಲ್ಲೆಯಲ್ಲಿ ಶೇ 56.05ರಷ್ಟು ಮತದಾನವಾಗಿದೆ. ಸಾಂಗ್ಲಿ ಶೇ 71.89, ಸತಾರ ಶೇ 71.71, ಜಾಲ್ನಾ ಶೇ 72.30, ಹಿಂಗೋಲಿ ಶೇ 71.10, ಚಂದ್ರಾಪುರ ಶೇ 71.27, ಅಹಮದ್‌ನಗರ ಶೇ 71.73, ಪರ್ಭಾನಿ ಶೇ 70.38) ಹಾಗೂ ಬುಲ್ಢಾನದಲ್ಲಿ ಶೇ 70.32ರಷ್ಟು ಮತದಾನವಾಗಿದೆ.

ಗುರುತಿನ ಚೀಟಿ ಪರಿಶೀಲನೆ ಪೊಲೀಸರ ಅಮಾನತು

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಉಪ ಚುನಾವಣೆಯಲ್ಲಿ ಮತದಾರರ ಗುರುತಿನ ಚೀಟಿಗಳನ್ನು ಪರಿಶೀಲಿಸಿದ ಮತ್ತು ಅವರನ್ನು ಮತದಾನ ಮಾಡದಂತೆ ತಡೆದ ಆರೋಪಗಳ ಮೇರೆಗೆ ಚುನಾವಣಾ ಆಯೋಗವು ಅಲ್ಲಿನ ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿದೆ.

ಮಾರ್ಗಸೂಚಿ ಉಲ್ಲಂಘಿಸಿದ ಕಾರಣಕ್ಕೆ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಮತದಾರರ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್‌ಗಳನ್ನು ಪರಿಶೀಲಿಸಿದ ಎಲ್ಲ ಪೊಲೀಸ್ ಅಧಿಕಾರಿಗಳನ್ನು ವಿಡಿಯೊ ಸಾಕ್ಷ್ಯ ಆಧರಿಸಿ ಅಮಾನತುಗೊಳಿಸುವಂತೆ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು 'ಎಕ್ಸ್'ನಲ್ಲಿ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದರು.

ಮುಜಾಫರ್‌ನಗರ ಜಿಲ್ಲೆಯ ಮೀರಾಪುರ ಕ್ಷೇತ್ರದ ಪಕ್ಷದ ಅಭ್ಯರ್ಥಿ ಸುಂಬುಲ್ ರಾಣಾ ಅವರು ಅಪ್‌ಲೋಡ್ ಮಾಡಿರುವ ವಿಡಿಯೊವನ್ನು ಹಂಚಿಕೊಂಡಿರುವ ಅಖಿಲೇಶ್ ಅವರು, ಪೊಲೀಸ್ ಸಿಬ್ಬಂದಿಯು ಜನರು ಮತದಾನ ಮಾಡುವುದನ್ನು ತಡೆಯಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಆಯೋಗದ ಕಟ್ಟುನಿಟ್ಟಿನ ಸೂಚನೆ: ಸಮಾಜವಾದಿ ಪಕ್ಷದ ಮುಖ್ಯಸ್ಥರ ದೂರನ್ನು ಗಂಭೀರವಾಗಿ ಪರಿಗಣಿಸಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು, ಉತ್ತರ ಪ್ರದೇಶದ ಎಲ್ಲ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ಮುಕ್ತ ಮತ್ತು ನ್ಯಾಯಸಮ್ಮತ ಮತದಾನ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಆಯೋಗದ ನಿರ್ದೇಶನದ ಮೇರೆಗೆ ಜಿಲ್ಲಾ ಚುನಾವಣಾ ಅಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ದೂರನ್ನು ಪರಿಶೀಲಿಸಿ ಸಂಬಂಧಿತ ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿದ್ದಾರೆ.

> ಉಪ ಚುನಾವಣೆಯಲ್ಲಿ ಗೆಲ್ಲಲೇಬೇಕೆಂದು ಬಿಜೆಪಿ ಅಕ್ರಮ ಮತ್ತು ನಿಯಮ ಉಲ್ಲಂಘನೆಯಲ್ಲಿ ತೊಡಗಿದೆ. ಈ ಬಗ್ಗೆ ಆಯೋಗಕ್ಕೆ ದೂರು ನೀಡಿದ್ದೇವೆ
> **ಅಖಿಲೇಶ್ ಯಾದವ್**
> ಸಮಾಜವಾದಿ ಪಕ್ಷದ ಮುಖ್ಯಸ್ಥ

> ನಕಲಿ ಮತದಾನ ಮಾಡಿಸುವುದು ಸಮಾಜವಾದಿ ಪಕ್ಷದ ಟ್ರೇಡ್‌ಮಾರ್ಕ್ ಆಗಿದೆ. ಈ ಪಕ್ಷದವರು ಗೂಂಡಾಗಿರಿ ಪ್ರದರ್ಶಿಸಿದ್ದಾರೆ
> **ಭೂಪೇಂದ್ರ ಸಿಂಗ್ ಚೌಧರಿ**
> ಉತ್ತರ ಪ್ರದೇಶ ಬಿಜೆಪಿ ಅಧ್ಯಕ್ಷ

ಆಯೋಗದ ಮಧ್ಯ ಪ್ರವೇಶಕ್ಕೆ ಬಿಜೆಪಿ ಕರೆ

ಉತ್ತರ ಪ್ರದೇಶದ ಉಪಚುನಾವಣೆಯಲ್ಲಿ ಬುರ್ಖಾ ಧರಿಸಿದ ಕೆಲ ಮಹಿಳಾ ಮತದಾರರ ಮುಖಗಳು ಅವರ ಗುರುತಿನ ಚೀಟಿಗಳೊಂದಿಗೆ ಹೊಂದಿಕೆ ಆಗುತ್ತಿಲ್ಲ. ಹೀಗಾಗಿ ಚುನಾವಣಾ ಆಯೋಗ ಮಧ್ಯ ಪ್ರವೇಶಿಸಿ, ಈ ನಿಟ್ಟನಲ್ಲಿ ಸಮಗ್ರವಾಗಿ ಪರಿಶೀಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಬಿಜೆಪಿಯು ಆಯೋಗ ಮತ್ತು ಜಿಲ್ಲಾಡಳಿತವನ್ನು ಆಗ್ರಹಿಸಿದೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಸೋಲುವ ಭೀತಿಯಲ್ಲಿದ್ದಾರೆ ಎಂದು ಬಿಜೆಪಿ ವಕ್ತಾರ ಮನೀಶ್ ಶುಕ್ಲಾ ತಿರುಗೇಟು ನೀಡಿದ್ದಾರೆ.

ಕೇಂದ್ರ ಸಚಿವ ಸುಕಾಂತ ಬಂಧನ–ಬಿಡುಗಡೆ

ಕೋಲ್ಕತ್ತ(ಪಿಟಿಐ): ಕೇಂದ್ರದ ಶಿಕ್ಷಣ ಖಾತೆಯ ರಾಜ್ಯ ಸಚಿವ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಅವರನ್ನು ಪಶ್ಚಿಮ ಬಂಗಾಳ ಪೊಲೀಸರು ಮುಂಜಾಗ್ರತಾಕ್ರಮವಾಗಿ ಬುಧವಾರ ಮಧ್ಯಾಹ್ನ ಬಂಧಿಸಿ, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಸುಕಾಂತ ಮಜುಂದಾರ್

ಹಿಂಸಾಚಾರ ಪೀಡಿತ, ಮುರ್ಷಿದಾಬಾದ್‌ನ ಬೆಲ್ಡಾಂಗಾದ ಪರಿಸ್ಥಿತಿಯನ್ನು ಅವಲೋಕಿಸಲು ಹೊರಟಿದ್ದ ಮಜುಂದಾರ್ ಅವರನ್ನು ನಾದಿಯಾ ಜಿಲ್ಲೆಯ ಕೃಷ್ಣನಗರ ಪ್ರದೇಶದಲ್ಲಿ ಬಂಧಿಸಲಾಯಿತು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಮಜುಂದಾರ್ ಅವರು ನಿಷೇಧಾಜ್ಞೆ ಜಾರಿಯಲ್ಲಿದ್ದ ಸ್ಥಳಕ್ಕೆ ತೆರಳುತ್ತಿದ್ದರು. ಅವರ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 170ರ ಅಡಿಯಲ್ಲಿ ಕ್ರಮ ಜರುಗಿಸಲಾಗಿದೆ. ಗಂಭೀರ ಅಪರಾಧಗಳನ್ನು ತಡೆಯುವ ಸಲುವಾಗಿ ಅವರನ್ನು ಬಂಧಿಸಲಾಯಿತು ಎಂದು ಕೃಷ್ಣನಗರ ಪೊಲೀಸ್ ಜಿಲ್ಲೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಜುಂದಾರ್ ಬಂಧನದ ನಂತರ ಬಿಜೆಪಿ ಕಾರ್ಯಕರ್ತರು ಪೊಲೀಸರ ಕ್ರಮವನ್ನು ಖಂಡಿಸಿ ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿದರು.

ಎರಡು ಸಮುದಾಯಗಳ ನಡುವಿನ ಘರ್ಷಣೆಯಲ್ಲಿ ಸುಮಾರು 17 ಜನರು ಗಾಯಗೊಂಡಿರುವ ಬೆಲ್ಡಾಂಗಾಕ್ಕೆ ಭೇಟಿ ನೀಡಲು ಮಂಗಳವಾರ ಕೂಡ ಮಜುಂದಾರ್ ಯತ್ನಿಸಿದ್ದರು. ಆದರೆ, ಪೊಲೀಸರು ಇದಕ್ಕೆ ಅವಕಾಶ ನೀಡಿರಲಿಲ್ಲ. ಕೊತ್ವಾಲಿ ಠಾಣೆ ಪೊಲೀಸರಿಂದ ಬಂಧನಕ್ಕೆ ಒಳಗಾದ ಸಚಿವ ಮಜುಂದಾರ್, 'ಬೆಲ್ಡಾಂಗಾದಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಲು ಹೋಗುತ್ತಿದ್ದೆ' ಎಂದರು.

ಬಿಟ್‌ಕಾಯಿನ್ ಅಕ್ರಮ: ಚುನಾವಣಾ ಆಯೋಗಕ್ಕೆ ಮಾಜಿ ಐಪಿಎಸ್ ಅಧಿಕಾರಿ ದೂರು

ಪಟೋಲೆ, ಸುಳೆ ವಿರುದ್ಧ ಆರೋಪ

ಪುಣೆ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಮತದಾನದ ನಡುವೆಯೇ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಮತ್ತು ಎನ್‌ಸಿಪಿ (ಶರದ್ ಪವಾರ್ ಬಣ) ನಾಯಕಿ ಸುಪ್ರಿಯಾ ಸುಳೆ ಅವರ ವಿರುದ್ಧ ಮಾಜಿ ಐಪಿಎಸ್ ಅಧಿಕಾರಿ ರವೀಂದ್ರನಾಥ್ ಪಾಟೀಲ್ ಗಂಭೀರ ಆರೋಪ ಮಾಡಿದ್ದಾರೆ.

'ಪಟೋಲೆ ಮತ್ತು ಸುಳೆ ಸೇರಿದಂತೆ ವಿರೋಧ ಪಕ್ಷಗಳ ಕೆಲವು ನಾಯಕರ ಸಂಭಾಷಣೆಎನ್ನಲಾದ ಧ್ವನಿ ಮುದ್ರಿಕೆಗಳು ನನ್ನ ಬಳಿ ಇವೆ. ಅವುಗಳಲ್ಲಿ ಚುನಾವಣಾ ಪ್ರಚಾರಕ್ಕಾಗಿ ಬಿಟ್‌ಕಾಯಿನ್‌ಗಳನ್ನು ನಗದಾಗಿ ಪರಿವರ್ತಿಸುವಂತೆ ಮನವಿ ಮಾಡಿರುವ ಸಂಭಾಷಣೆ ಇದೆ' ಎಂದು ಪಾಟೀಲ್ ಹೇಳಿದ್ದಾರೆ.

ಈ ಮಧ್ಯೆ ನಾನಾ ಪಟೋಲೆ ಮತ್ತು ಸುಪ್ರಿಯಾ ಸುಳೆ ಅವರದ್ದು ಎನ್ನಲಾದ ಧ್ವನಿ ಮುದ್ರಿಕೆಗಳನ್ನು (ವಾಯ್ಸ್ ನೋಟ್) ಬಿಜೆಪಿ ಮಂಗಳವಾರ ಬಿಡುಗಡೆ ಮಾಡಿದೆ.

ಪಾಟೀಲ್ ಆರೋಪ ಏನು?: ಸುದ್ದಿಗಾರರೊಂದಿಗೆ ಮಾತನಾಡಿದ ಪಾಟೀಲ್, ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿರುವುದಾಗಿ ಬುಧವಾರ ತಿಳಿಸಿದರು.

'2018ರಲ್ಲಿ ದಾಖಲಾಗಿದ್ದ ಕ್ರಿಪ್ಟೋಕರೆನ್ಸಿ ಪ್ರಕರಣದ ತನಿಖೆಗೆ ನೆರವು ನೀಡಲು ನನ್ನ ಮತ್ತು ಸೈಬರ್ ಪರಿಣತ ಪಂಕಜ್ ಘೋಡೆ ಅವರನ್ನು ಪುಣೆ ಪೊಲೀಸ್ ಅಧಿಕಾರಿಗಳು ನೇಮಿಸಿದ್ದರು' ಎಂದರು.

'2022ರಲ್ಲಿ ಅಮಿತಾಭ್ ಗುಪ್ತಾ ಅವರು ಪುಣೆಯ ಆಯುಕ್ತರಾದ ನಂತರ, ತನಿಖಾಧಿಕಾರಿಗಳಿಗೆ ವಂಚಿಸಿದ ಆರೋಪದ ಮೇಲೆ ನನ್ನ ಮತ್ತು ಘೋಡೆ ಅವರನ್ನು ಬಂಧಿಸಲಾಯಿತು. ಸುಳ್ಳು ಪ್ರಕರಣದಲ್ಲಿ ನನ್ನನ್ನು ಬಂಧಿಸಲಾಗಿತ್ತು' ಎಂದು ಪಾಟೀಲ್ ಹೇಳಿದರು.

'ಪ್ರಕರಣದ ಸಂಬಂಧ 14 ತಿಂಗಳು ಜೈಲಿನಲ್ಲಿ ಇದ್ದೆ. ಈ ವರ್ಷ ನವೆಂಬರ್ 17ರಂದು 'ಸಿಗ್ನಲ್ ಆ್ಯಪ್'ನ ನನ್ನ ಖಾತೆಗೆ ನಿರಂತರವಾಗಿ ಕರೆಗಳು ಬರುತ್ತಿದ್ದವು. ನಂಬರ್ ಪರಿಶೀಲಿಸಿದಾಗ ಅದು ವಿಧಿವಿಜ್ಞಾನ ತಜ್ಞ ಗೌರವ್ ಮೆಹ್ತಾ ಅವರದ್ದು ಎಂದು ತಿಳಿದುಬಂತು' ಎಂದು ಆರೋಪಿಸಿದರು.

ಮೆಹ್ತಾ ಅವರು ಸಿಗ್ನಲ್ ಆ್ಯಪ್ ಮೂಲಕ 10 ಧ್ವನಿ ಮುದ್ರಿಕೆಗಳನ್ನು (ವಾಯ್ಸ್ ನೋಟ್) ಕಳುಹಿಸಿದ್ದಾರೆ. ಅವುಗಳಲ್ಲಿ ಸುಪ್ರಿಯಾ ಸುಳೆ, ನಾನಾ ಪಟೋಲೆ ಮತ್ತು ಐಪಿಎಸ್ ಅಧಿಕಾರಿಗಳಾದ ಅಮಿತಾಭ್ ಗುಪ್ತಾ ಮತ್ತು ಭಾಗ್ಯಶ್ರೀ ನವಟಕೆ ಅವರದ್ದು ಎನ್ನಲಾದ ಧ್ವನಿ ಇದೆ ಎಂದು ಹೇಳಿದರು.

ಮೂರು ಧ್ವನಿ ಮುದ್ರಿಕೆಗಳು ಸುಪ್ರಿಯಾ ಸುಳೆ ಅವರು ಮೆಹ್ತಾ ಅವರಿಗೆ ಕಳುಹಿಸಿರುವುದಾಗಿದೆ. ಅವುಗಳಲ್ಲಿ ಸುಪ್ರಿಯಾ ಅವರು, ಚುನಾವಣೆಗೆ ಅಗತ್ಯವಿರುವ ಕಾರಣ ಬಿಟ್‌ಕಾಯಿನ್‌ಗಳನ್ನು ನಗದಾಗಿ ಪರಿವರ್ತಿಸಲು ಕೇಳಿದ್ದಾರೆ ಮತ್ತು 'ತನಿಖೆ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ಅಧಿಕಾರಕ್ಕೆ ಬಂದ ನಂತರ ಎಲ್ಲವನ್ನೂ ನಿಭಾಯಿಸುತ್ತೇನೆ' ಎಂದಿದ್ದಾರೆ ಎಂದು ಪಾಟೀಲ್ ಆರೋಪಿಸಿದರು.

ದೂರಿನಲ್ಲಿ ಏನಿದೆ?: ಪಾಟೀಲ್ ಅವರು ಚುನಾವಣಾ ಆಯೋಗಕ್ಕೆ ಇ-ಮೇಲ್ ಮೂಲಕ ಕಳುಹಿಸಿರುವ ದೂರಿನಲ್ಲಿ, 'ವಶದಲ್ಲಿರುವ ಚಾಟ್ ಸಂದೇಶಗಳ ಪ್ರಕಾರ, ಕಳೆದ ಲೋಕಸಭಾ ಚುನಾವಣೆ ಮತ್ತು ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ನೂರಾರು ಬಿಟ್‌ಕಾಯಿನ್‌ಗಳು ಬಳಕೆಯಾಗಿರುವ ಸಾಧ್ಯತೆ ಇದೆ' ಎಂದು ತಿಳಿಸಿದ್ದಾರೆ.

'ಇದೊಂದು ಗಂಭೀರ ಕ್ರಿಮಿನಲ್ ಪ್ರಕರಣವಾಗಿದ್ದು, ತುರ್ತಾಗಿ ತನಿಖೆ ನಡೆಸಬೇಕು. ದಾಖಲೆಗಳ ಆಧಾರದಲ್ಲಿ ಹೈಕೋರ್ಟ್ ಮೆಟ್ಟಿಲೇರಿ ಪ್ರಕರಣವನ್ನು ಸಿಬಿಐ ತನಿಖೆಗೆ ನಿರ್ದೇಶನ ನೀಡಲು ಕೋರುತ್ತೇನೆ. ಸಾಕ್ಷಿಯಾಗಿ ತನಿಖೆಗೆ ಸಹಕರಿಸಲು ನಾನು ಸದಾ ಸಿದ್ಧ' ಎಂದು ಹೇಳಿದ್ದಾರೆ.

ಮೆಹ್ತಾ ಅವರು ಈಗಲೂ ನೂರಾರು ಕೋಟಿ ರೂಪಾಯಿ ಮೌಲ್ಯದ ದುರುಪಯೋಗಪಡಿಸಿಕೊಂಡ ಬಿಟ್‌ಕಾಯಿನ್‌ಗಳನ್ನು ಹೊಂದಿರುವ ಸಾಧ್ಯತೆ ಇದೆ ಎಂದು ದೂರಿದ್ದಾರೆ.

ಗೌರವ್ ಮೆಹ್ತಾಗೆ ಸಂಬಂಧಿತ ಜಾಗಗಳಲ್ಲಿ ಇ.ಡಿ ದಾಳಿ: ಮುಂಬೈ (ಪಿಟಿಐ): ಪ್ರಕರಣಕ್ಕೆ ಸಂಬಂಧಿಸಿದಂತೆ ಗೌರವ್ ಮೆಹ್ತಾ ಅವರಿಗೆ ಸಂಬಂಧಿಸಿದ ಛತ್ತೀಸಗಢದಲ್ಲಿರುವ ಪ್ರದೇಶಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಶೋಧ ನಡೆಸಿದರು.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಛತ್ತೀಸಗಢದ ರಾಜಧಾನಿ ರಾಯಪುರದಲ್ಲಿ ಕಾರ್ಯಾಚರಣೆ ನಡೆಸಿದರು.

> ಆರೋಪ ಮಾಡಿರುವ ವ್ಯಕ್ತಿ ಜೈಲಿನಲ್ಲಿದ್ದರು. ಬಿಜೆಪಿ ಎಷ್ಟು ಕೀಳುಮಟ್ಟಕ್ಕೆ ಇಳಿದಿದೆ ಎಂದು ಇದು ತೋರಿಸುತ್ತದೆ
> **ಶರದ್ ಪವಾರ್**
> ಎನ್‌ಸಿಪಿ ಅಧ್ಯಕ್ಷ

ಸುಳ್ಳು ಆರೋಪ: ಪಟೋಲೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಬಿಟ್‌ಕಾಯಿನ್ ವಂಚನೆ ಪ್ರಕರಣದಲ್ಲಿ ತಮ್ಮ ಹೆಸರನ್ನು ಎಳೆದುತರಲಾಗಿದೆ ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರು ಬಿಜೆಪಿ ವಿರುದ್ಧ ಕಿಡಿಕಾರಿದರು.

'ನನ್ನ ವಿರುದ್ಧದ ಸುಳ್ಳು ಆರೋಪಗಳ ವಿರುದ್ಧ ಕಾನೂನು ಮೂಲಕ ಹೋರಾಡುತ್ತೇನೆ' ಎಂದರು.

ಮತ ಚಲಾವಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನೊಬ್ಬ ರೈತ. ಬಿಟ್‌ಕಾಯಿನ್‌ಗಳ ಅಗತ್ಯ ನನಗೆ ಇಲ್ಲ' ಎಂದು ಹೇಳಿದರು.

'ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆಡಿಯೊದಲ್ಲಿ ಇರುವ ಧ್ವನಿ ನನ್ನದಲ್ಲ. ಪ್ರಧಾನಿ (ನರೇಂದ್ರ ಮೋದಿ) ಸಹ ನನ್ನ ಧ್ವನಿಯನ್ನು ಗುರುತಿಸುತ್ತಾರೆ ಎಂದು ಹೇಳಿದರು.

ಬಿಜೆಪಿಯ ಸುಧಾಂಶು ತ್ರಿವೇದಿ ಮತ್ತಿತರರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿದೆ ಎಂದರು.

ಕುತಂತ್ರಿಗಳ ಕೆಲಸ: ಸುಪ್ರಿಯಾ

ಸುಪ್ರಿಯಾ ಸುಳೆ ಅವರ ವಾಯ್ಸ್ ನೋಟ್‌ಗಳು ಸೇರಿದಂತೆ ತಮ್ಮ ವಿರುದ್ಧದ ಎಲ್ಲ ಆರೋಪಗಳನ್ನು ನಿರಾಕರಿಸಿದ್ದಾರೆ. ಈ ಸಂಬಂಧ ಚುನಾವಣಾ ಆಯೋಗ ಮತ್ತು ಮಹಾರಾಷ್ಟ್ರ ಪೊಲೀಸ್ ಬಳಿ ದೂರು ದಾಖಲಿಸಿದ್ದಾರೆ.

'ದುರುದ್ದೇಶಪೂರಿತ ಕುತಂತ್ರಿಗಳು ಇದರ ಹಿಂದೆ ಇರುವುದು ಸ್ಪಷ್ಟವಾಗಿದೆ. ಸಂವಿಧಾನದ ಮಾರ್ಗದರ್ಶನದಡಿ ಕಾರ್ಯನಿರ್ವಹಿಸುವ ಆರೋಗ್ಯಕರ ಪ್ರಜಾಪ್ರಭುತ್ವದಲ್ಲಿ ಇಂತಹುದು ನಡೆಯುವುದು ಖಂಡನಾರ್ಹ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಪುಣೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸುಪ್ರಿಯಾ ಸುಳೆ, 'ಬಿಜೆಪಿಯ ಆರೋಪಗಳಿಗೆ ನನ್ನ ಉತ್ತರ 'ಇಲ್ಲ' ಎಂಬುದೇ ಆಗಿದೆ. ಆಡಿಯೊದಲ್ಲಿರುವುದು ನನ್ನ ಧ್ವನಿ ಅಲ್ಲ. ಯಾರು ಬೇಕಾದರೂ ಪರಿಶೀಲಿಸಬಹುದು. ನನಗೂ ಪ್ರಕರಣಕ್ಕೂ ಸಂಬಂಧ ಇಲ್ಲ. ಎಲ್ಲ ಆರೋಪಗಳಿಗೆ ಉತ್ತರ ನೀಡಲು ಸಿದ್ಧ' ಎಂದರು.

ಬಿಜೆಪಿಯ ಸಂಬಿತ್ ಪಾತ್ರಾ ವಾಗ್ದಾಳಿ

ನವದೆಹಲಿ (ಪಿಟಿಐ): ಸುಪ್ರಿಯಾ ಸುಳೆ ಮತ್ತು ನಾನಾ ಪಟೋಲೆ ಬಿಟ್‌ಕಾಯಿನ್ ಅಕ್ರಮದಲ್ಲಿ ಭಾಗಿಯಾಗಿ, ಈ ಹಣವನ್ನು ಚುನಾವಣಾ ಪ್ರಚಾರಕ್ಕೆ ಬಳಸಿದ್ದಾರೆ ಎಂಬ ಆರೋಪ ವಿಚಾರವಾಗಿ ಬಿಜೆಪಿ ಬುಧವಾರ ತೀವ್ರ ವಾಗ್ದಾಳಿ ನಡೆಸಿತು.

ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, 'ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ಹರಿಹಾಯ್ದರು'

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಿತೂರಿ' ಹಿಂದೆ ಬಿಜೆಪಿ ಇದೆ ಎಂಬ ವಿಪಕ್ಷಗಳ ಆರೋಪವನ್ನು ತಳ್ಳಿಹಾಕಿದರು. ಈ ಹಗರಣದಲ್ಲಿ ₹235 ಕೋಟಿ ಅಕ್ರಮ ನಡೆದಂತಿದೆ ಎಂದು ಶಂಕೆ ವ್ಯಕ್ತಪಡಿಸಿದರು.

ವಿರೋಧಿಗಳ ಹೋಟೆಲ್‌ನಲ್ಲಿ ಹಣ ಹಂಚುವಷ್ಟು ಮೂರ್ಖನಲ್ಲ: ತಾವ್ಡೆ

ವಿನೋದ್ ತಾವ್ಡೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ವಿಧಾನಸಭಾ ಚುನಾವಣೆ ವೇಳೆ ಮತದಾರರ ಮೇಲೆ ಪ್ರಭಾವ ಬೀರಲು ಹಣ ಹಂಚಿಕೆ ಮಾಡಿದ್ದ ಆರೋಪವನ್ನು ತಳ್ಳಿಹಾಕಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ, 'ರಾಜಕೀಯ ವಿರೋಧಿಗಳ ಮಾಲೀಕತ್ವದ ಹೋಟೆಲ್‌ನಲ್ಲಿ ಇಂತಹ ಚಟುವಟಿಕೆಯಲ್ಲಿ ತೊಡಗುವಷ್ಟು ಮೂರ್ಖ ನಾನಲ್ಲ' ಎಂದು ಪ್ರತಿಕ್ರಿಯಿಸಿದರು.

ಮತದಾರರನ್ನು ಓಲೈಸಲು ತಾವ್ಡೆ ಅವರು ಮುಂಬೈನಿಂದ 60 ಕಿ.ಮೀ ದೂರದಲ್ಲಿರುವ ವಿರಾರ್‌ನ ಹೋಟೆಲ್‌ನಲ್ಲಿ ₹5 ಕೋಟಿ ಹಂಚಿದ್ದಾರೆ ಎಂದು ಬಹುಜನ ವಿಕಾಸ್ ಆಘಾಡಿ (ಬಿವಿಎ) ನಾಯಕ ಹಿತೇಂದ್ರ ಠಾಕೂರ್ ಮಂಗಳವಾರ ಆರೋಪ ಮಾಡಿದ್ದರು. ಇದರ ಬೆನ್ನಲ್ಲೇ ಚುನಾವಣಾ ಅಧಿಕಾರಿಯೊಬ್ಬರು ಹೋಟೆಲ್ ಕೊಠಡಿಗಳಿಂದ ₹9.93 ಲಕ್ಷ ನಗದು ವಶಪಡಿಸಿಕೊಂಡಿದ್ದರು.

ಈ ಆರೋಪಗಳನ್ನು ಅಲ್ಲಗಳೆದಿರುವ ತಾವ್ಡೆ, 'ಚುನಾವಣಾ ಪ್ರಕ್ರಿಯೆಗಳ ಕುರಿತು ಪಕ್ಷದ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡುತ್ತಿದ್ದೆನಷ್ಟೆ' ಎಂದು ತಿಳಿಸಿದರು.

'ಪಾಲ್ಘರ್‌ನ ವಿರಾರ್‌ನಲ್ಲಿ ಠಾಕೂರರ ಒಡೆತನದ ಹೋಟೆಲ್‌ನಲ್ಲಿ ಹಣ ಹಂಚುವಷ್ಟು ಮೂರ್ಖ ನಾನಲ್ಲ. 40 ವರ್ಷಗಳಿಂದ ರಾಜಕೀಯದಲ್ಲಿದ್ದೇನೆ. ಚುನಾವಣಾ ನಿಯಮಗಳ ಬಗ್ಗೆ ಅರಿವಿದೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು.

ಗೋಣಿಚೀಲದಲ್ಲಿ ಮಹಿಳೆ ಶವ ರಾಜಕೀಯ ದ್ವೇಷದಿಂದ ಹತ್ಯೆ?

ಪ್ರಜಾವಾಣಿ ವಾರ್ತೆ

ಲಖನೌ (ಉತ್ತರ ಪ್ರದೇಶ): ಮೈನ್‌ಪುರಿ ಜಿಲ್ಲೆಯ ಕರಹಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಉಪ ಚುನಾವಣೆ ಮತದಾನದ ದಿನದಂತೆ ದಲಿತ ಮಹಿಳೆಯ ಶವ ಗೋಣಿಚೀಲದಲ್ಲಿ ಪತ್ತೆಯಾಗಿದೆ.

28 ವರ್ಷದ ಮಹಿಳೆಯು ಮಂಗಳವಾರ ರಾತ್ರಿಯಿಂದ ನಾಪತ್ತೆಯಾಗಿದ್ದರು. ರಾಜಕೀಯ ಕಾರಣಕ್ಕೆ ಈ ಕೊಲೆ ನಡೆದಿದೆ ಎಂದು ಶಂಕಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ನಗಲಾ ಎಂಟಿ ಎಂಬ ಪ್ರದೇಶದಲ್ಲಿ ಶವ ದೊರೆತಿದೆ. ಮೃತಳ ಕುಟುಂಬದವರ ದೂರನ್ನು ಆಧರಿಸಿ ಪ್ರಶಾಂತ್ ಯಾದವ್ ಹಾಗೂ ದುರ್ಗಾ ಯಾದವ್ ಎಂಬಿಬ್ಬರನ್ನು ಬಂಧಿಸಲಾಗಿದೆ.

ಉಪ ಚುನಾವಣೆಯಲ್ಲಿ ನಿರ್ದಿಷ್ಟ ಪಕ್ಷಕ್ಕೆ ಮತಹಾಕುವಂತೆ ದಲಿತ ಮಹಿಳೆಗೆ ಪ್ರಶಾಂತ್ ಹಾಗೂ ದುರ್ಗಾ ತಾಕೀತು ಮಾಡಿದ್ದರು. ಒಪ್ಪಲಿಲ್ಲ ಎಂದು ಹತ್ಯೆ ಮಾಡಲಾಗಿದೆ ಎಂದು ದೂರು ನೀಡಲಾಗಿದೆ ಎಂದು ಮೈನ್‌ಪುರಿಯ ಪೊಲೀಸರು ಹೇಳಿದರು.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಕರಹಲ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಕನೌಜ್‌ನಿಂದ ಲೋಕಸಭಾ ಚುನಾವಣೆಯಲ್ಲಿ ಗೆದ್ದಮೇಲೆ ಅವರು ಇಲ್ಲಿನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ ಆ ಸ್ಥಾನಕ್ಕೆ ಚುನಾವಣೆ ನಡೆಯಿತು.

ವಕ್ಫ್ ಮಸೂದೆಗೆ ವಿರೋಧ: ಟಿಎಂಸಿ ನಿರ್ಣಯ ಸಾಧ್ಯತೆ

ಕೋಲ್ಕತ್ತ (ಪಿಟಿಐ): ಕೇಂದ್ರದ ಉದ್ದೇಶಿತ 2024ರ ವಕ್ಫ್ (ತಿದ್ದುಪಡಿ) ಮಸೂದೆಯನ್ನು ವಿರೋಧಿಸಿ ಪಶ್ಚಿಮ ಬಂಗಾಳದ ಟಿಎಂಸಿ ಸರ್ಕಾರವು ನಿರ್ಣಯ ಮಂಡಿಸುವ ಸಾಧ್ಯತೆಯಿದೆ.

ನ.25ರಂದು ಪ್ರಾರಂಭವಾಗುವ ರಾಜ್ಯ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ನಿರ್ಣಯ ಮಂಡಿಸುವ ಸಾಧ್ಯತೆಯಿದೆ. ಕೇಂದ್ರದ ಈ ಕ್ರಮವು ರಾಜ್ಯ ಸರ್ಕಾರದ ಹಕ್ಕುಗಳನ್ನು ಕಸಿಯುವ ಮತ್ತು ಅಲ್ಪ ಸಂಖ್ಯಾತರನ್ನು ಇನ್ನಷ್ಟು ಕಡೆಗಣಿಸುವ ಕ್ರಮವಾಗಿದೆ ಎಂದು ಟಿಎಂಸಿ ಆರೋಪಿಸಿದೆ.

ವಕ್ಫ್ ವಿಷಯಗಳಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶವನ್ನು ನಿರ್ಣಯ ಹೊಂದಿದೆ ಎಂದು ವಿಧಾನಸಭೆ ಮೂಲಗಳು ತಿಳಿಸಿವೆ.

ಕೇಂದ್ರದ ವಕ್ಫ್ (ತಿದ್ದುಪಡಿ) ಮಸೂದೆಯು ಎಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ. ಈ ಮಸೂದೆಯು ವಕ್ಫ್ ಆಸ್ತಿಗಳ ಮೇಲೆ ಕೇಂದ್ರೀಕೃತ ನಿಯಂತ್ರಣ ಹೊಂದುವ ಹಾಗೂ ರಾಜ್ಯದ ಹಕ್ಕುಗಳು ಮತ್ತು ಸಮುದಾಯದ ಸಾರ್ವಭೌಮತ್ವವನ್ನು ಕಡೆಗಣಿಸುವ ಕ್ರಮವಾಗಿದೆ ಎಂದು ವಿರೋಧ ಪಕ್ಷಗಳು ಹಾಗೂ ಅಲ್ಪ ಸಂಖ್ಯಾತರ ಸಂಘಟನೆಗಳು ಆರೋಪಿಸಿವೆ.

ಇಂದೋರ್‌ನ ಭಾರತೀಯ ತಂತ್ರಜ್ಞಾನ ಸಂಸ್ಥೆಯಿಂದ ಅಭಿವೃದ್ಧಿ

ಹೃದ್ರೋಗ ಚಿಕಿತ್ಸಾ ಯಂತ್ರಕ್ಕೆ ಹೊಸ ತಂತ್ರಜ್ಞಾನ

ಇಂದೋರ್ (ಪಿಟಿಐ): ಇ.ಸಿ.ಜಿ (ಎಲೆಕ್ಟ್ರೊಕಾರ್ಡಿಯೊಗ್ರಾಮ್) ಯಂತ್ರ ಹಾಗೂ ಹೃದಯದ ಬಡಿತವನ್ನು ಸುಸ್ಥಿತಿಯಲ್ಲಿಡುವ ಉಪಕರಣಗಳ (ಪೇಸ್‌ಮೇಕರ್ಸ್) ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸುಧಾರಿತ ತಂತ್ರಜ್ಞಾನವನ್ನು ಇಂದೋರ್‌ನ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಅಭಿವೃದ್ಧಿಪಡಿಸಿದೆ.

ಪ್ರೊ. ಅನಿರ್ಬನ್ ಸೇನ್‌ಗುಪ್ತಾ ನೇತೃತ್ವದ ತಂಡವು ಈ ನವೀನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದು, ಈ ಸಂಬಂಧ ಹಕ್ಕುಸ್ವಾಮ್ಯವನ್ನೂ (ಪೇಟೆಂಟ್) ಪಡೆದುಕೊಂಡಿದೆ.

ಮುಖ್ಯಾಂಶಗಳು
- ಅಭಿವೃದ್ಧಿ ಪಡಿಸಿರುವ ನವೀನ ತಂತ್ರಜ್ಞಾನಕ್ಕೆ ಹಕ್ಕುಸ್ವಾಮ್ಯ
- ಇದರಿಂದ ಯಂತ್ರಗಳು ತಪ್ಪಾಗಿ ರೋಗ ಗುರುತಿಸುವ ಸಾಧ್ಯತೆ ತಪ್ಪಲಿದೆ
- ಇ.ಸಿ.ಜಿ ಯಂತ್ರಗಳಲ್ಲಿ ನಕಲಿ ಚಿಪ್ ಅಳವಡಿಕೆ ತಪ್ಪಿಸಲಿದೆ

'ಇ.ಸಿ.ಜಿ ಯಂತ್ರ ಪೇಸ್‌ಮೇಕರ್‌ಗಳಿಗೆ ಈ ಸುಧಾರಿತ ತಂತ್ರಜ್ಞಾನವುಳ್ಳ ಚಿಪ್‌ಗಳನ್ನು ಅಳವಡಿಸಲಾಗುವುದು. ಇದರಿಂದ ಈ ಯಂತ್ರಗಳ ದಕ್ಷತೆ ಸುಧಾರಿಸಲಿದ್ದು, ತಪ್ಪಾಗಿ ರೋಗ ನಿರ್ಣಯವಾಗುವ ಸಾಧ್ಯತೆಗಳನ್ನು ಕಡಿಮೆ ಮಾಡಲಿದೆ. ಈ ಮೂಲಕ ರೋಗಿಗಳಿಗೆ ಅಸಮರ್ಪಕ ಚಿಕಿತ್ಸೆ ನೀಡುವುದು ತಪ್ಪಲಿದೆ' ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಈ ತಂತ್ರಜ್ಞಾನವು ಇ.ಸಿ.ಜಿ ಯಂತ್ರಗಳಲ್ಲಿ ನಕಲಿ ಚಿಪ್‌ಗಳ ಅಳವಡಿಕೆಯನ್ನು ತಪ್ಪಿಸಲಿದೆ. ಹೃದ್ರೋಗಗಳ ಚಿಕಿತ್ಸೆಗೆ ಬಳಸಲಾಗುವ ಉಪಕರಣಗಳ ದಕ್ಷತೆ, ಸುರಕ್ಷತೆ ಹಾಗೂ ವಿಶ್ವಾಸಾರ್ಹತೆಯನ್ನು ಬಲಪಡಿಸಲಿದ್ದು, ನ್ಯೂನತೆಗಳನ್ನು ಸರಿಪಡಿಸಲಿದೆ ಎಂದು ಪ್ರೊ. ಸೇನ್‌ಗುಪ್ತಾ ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹೈದರಾಬಾದ್‌ನಲ್ಲಿ ವಾಲಿದ ಕಟ್ಟಡ: 30 ಜನ ಪಾರು

ಹೈದರಾಬಾದ್ (ಪಿಟಿಐ): ಹೈದರಾಬಾದ್‌ನ ಸಿದ್ದೀಕಿ ನಗರದಲ್ಲಿ ನಾಲ್ಕು ಅಂತಸ್ತಿನ ಕಟ್ಟಡವು ವಾಲಿದ ನಂತರ, ಅದರಲ್ಲಿದ್ದ ಸುಮಾರು 30 ಜನರು ಅಪಾಯದಿಂದ ಪಾರಾಗಿದ್ದಾರೆ.

ಕಟ್ಟಡವು ಒಂದು ಬದಿ ವಾಲಿದ ಬಳಿಕ, ಅದರಲ್ಲಿದ್ದ ಜನರು ಹೊರಬಂದಿದ್ದಾರೆ. ಪ್ರಾಣ ಕಳೆದುಕೊಳ್ಳುವ ಭೀತಿಯಿಂದ ಅನೇಕರು ಕಟ್ಟಡದಿಂದ ಜಿಗಿದಿದ್ದಾರೆ. ಈ ವೇಳೆ ಸುತ್ತಮುತ್ತಲಿನ ಜನರು ತೀವ್ರ ಆತಂಕಗೊಂಡಿದ್ದರು.

ಘಟನೆ ನಂತರ ಸ್ಥಳಕ್ಕೆ ಬಂದ ಅಧಿಕಾರಿಗಳು, ಇತರ ಕಟ್ಟಡಗಳು ಹಾಗೂ ಸ್ಥಳೀಯರಿಗೆ ಕಟ್ಟಡದಿಂದ ಅಪಾಯವಾಗುವ ಸಾಧ್ಯತೆ ಇದ್ದ ಕಾರಣ ಅದನ್ನು ಕೆಡವಲು ನಿರ್ಧರಿಸಿದರು. ಬುಧವಾರ ಕಟ್ಟಡ ಧ್ವಂಸ ಕಾರ್ಯಾಚರಣೆ ಆರಂಭವಾಗಿದೆ.

ಇದೊಂದು ಅಕ್ರಮ ಕಟ್ಟಡ ಎಂದು ತಿಳಿದುಬಂದಿದ್ದು, ಕೇವಲ 70 ಗಜ ಅಡಿ ಜಾಗದಲ್ಲಿ ಮಾಲೀಕರು ನಾಲ್ಕು ಅಂತಸ್ತಿನ ಕಟ್ಟಡವನ್ನು ನಿರ್ಮಿಸಿದ್ದಾರೆ. ಅಲ್ಲದೇ ಕಟ್ಟಡದ ಅಡಿಪಾಯವು ದುರ್ಬಲವಾಗಿತ್ತು ಎಂದು ತಿಳಿದುಬಂದಿದೆ. ಪಕ್ಕದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕಾಗಿ ಅಡಿಪಾಯ ಹಾಕುತ್ತಿದ್ದ ಕಾರಣದಿಂದ ಈ ಕಟ್ಟಡವು ವಾಲಿತ್ತು.

ಶಿಶು ಹೊತ್ತೊಯ್ದ ಕಾಡುಪ್ರಾಣಿ

ಬಲರಾಮಪುರ, ಉತ್ತರಪ್ರದೇಶ (ಪಿಟಿಐ): ತಾಯಿಯೊಂದಿಗೆ ಮಲಗಿದ್ದ 19 ದಿನದ ಶಿಶುವನ್ನು ಕಾಡುಪ್ರಾಣಿಯೊಂದು ಹೊತ್ತೊಯ್ದಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಘಟನೆ ಬಾರಹವಾ ವ್ಯಾಪ್ತಿಯ ಭುಜೆರ ಗ್ರಾಮದಲ್ಲಿ ಮಂಗಳವಾರ ಮಧ್ಯರಾತ್ರಿ ನಡೆದಿದೆ.

'ಗೀತಾ ದೇವಿ ತನ್ನ ಮಗು ಕಾಜಲ್‌ನೊಂದಿಗೆ ಮಲಗಿದ್ದ ವೇಳೆ ಕಾಡುಪ್ರಾಣಿಯು ಮಗುವನ್ನು ಹೊತ್ತೊಯ್ದಿದೆ. ಶಬ್ದ ಕೇಳಿ ಎಚ್ಚರಗೊಂಡು ನೋಡಿದಾಗ ಮಗು ಕಾಣಿಸದಿರುವುದು ಕಂಡು ಗೀತಾ, ಎಲ್ಲರಿಗೂ ವಿಷಯವನ್ನು ತಿಳಿಸಿದ್ದಾರೆ. ನಂತರ ಗ್ರಾಮಸ್ಥರು ಮಗುವಿನ ಪತ್ತೆಗಾಗಿ ಹುಡುಕಾಟ ನಡೆಸಿದರೂ ಮಗು ಪತ್ತೆಯಾಗಲಿಲ್ಲ ಎಂದು ವಿಭಾಗೀಯ ಅರಣ್ಯಾಧಿಕಾರಿ (ಡಿಎಫ್‌ಒ) ಡಾ. ಸ್ಯಾಮ್ ಮಾರನ್ ಎಂ. ತಿಳಿಸಿದ್ದಾರೆ.

'ಪ್ರಾಣಿಯ ಪತ್ತೆಗಾಗಿ ಅರಣ್ಯ ಇಲಾಖೆಯ ಎರಡು ತಂಡಗಳನ್ನು ಕಳುಹಿಸಲಾಗಿದ್ದು, ಇಲ್ಲಿಯವರೆಗೆ ಯಾವುದೇ ಸುಳಿವು ಸಿಕ್ಕಿಲ್ಲ. ಪ್ರಾಣಿಯನ್ನು ಸೆರೆ ಹಿಡಿಯಲು ಗ್ರಾಮದ ಬಳಿ ಬೋನುಗಳನ್ನು ಇರಿಸಿದ್ದು, ಟ್ರ್ಯಾಕಿಂಗ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ' ಎಂದು ಅವರು ಹೇಳಿದರು.

ಚೆನ್ನೈ: ಕಾರು ಗುದ್ದಿ ಪತ್ರಕರ್ತ ಸಾವು

ಚೆನ್ನೈ (ಪಿಟಿಐ): ಇಲ್ಲಿನ ಮದುರಾವೋಯಲ್- ತಂಬರಂ ಬೈಪಾಸ್‌ನಲ್ಲಿ ವೇಗವಾಗಿ ಬಂದ ಬಿಎಂಡಬ್ಲ್ಯು ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ತೆಲುಗಿನ ಖಾಸಗಿ ಟಿ.ವಿ ಚಾನಲ್ ಪತ್ರಕರ್ತರೊಬ್ಬರು ಮೃತಪಟ್ಟಿದ್ದಾರೆ.

ಮಂಗಳವಾರ ತಡರಾತ್ರಿ ಈ ಅಪಘಾತ ನಡೆದಿದೆ. ಅಪಘಾತದ ಬಳಿಕ ಕಾರು ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಪಾಂಡಿ ಬಜಾರ್ ನಿವಾಸಿಯಾಗಿರುವ ಪ್ರದೀಪ್ ಕುಮಾರ್ (39) ಮೃತ ವ್ಯಕ್ತಿ. ಇವರು 'ರ್‍ಯಾಪಿಡೊ'ನಲ್ಲಿ ಅರೆಕಾಲಿಕ ಚಾಲಕನಾಗಿದ್ದ ಎನ್ನಲಾಗಿದೆ.

'ಜಮ್ಮು ಮತ್ತು ಕಾಶ್ಮೀರ: ಪರಿಸ್ಥಿತಿ ನಿಯಂತ್ರಣಕ್ಕೆ'

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪಡೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿದ್ದು, ಸದ್ಯ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ ಎಂದು ಸಿಆರ್‌ಪಿಎಫ್ ಮಹಾ ನಿರೀಕ್ಷಕ (ಶ್ರೀನಗರ ವಲಯ) ಪಿ.ಕೆ. ಶರ್ಮಾ ಬುಧವಾರ ತಿಳಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಎರಡನೇ ಆವೃತ್ತಿಯ 'ಸಿಆರ್‌ಪಿಎಫ್ ಕಪ್' ಕ್ರಿಕೆಟ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಕ್ರೀಡೆಗಳು ಸಹಜವಾಗಿ ಯುವಕರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತವೆ. ಕಾಶ್ಮೀರದಲ್ಲಿ ಸ್ಥಳೀಯ ಯುವಕರೊಂದಿಗೆ ನಿಕಟ ಸಂಪರ್ಕ ಸಾಧಿಸುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ' ಎಂದು ತಿಳಿಸಿದ್ದಾರೆ.

❦ ಸುಭಾಷಿತ ❦

ಅಜ್ಞಾನಿಗಳೊಡನೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳೊಡನೆ ಜಗಳವಾಡುವುದು ಲೇಸು.

–ಕನಕದಾಸ

ಬಿಪಿಎಲ್ ಪಡಿತರ ಚೀಟಿ ಪರಿಷ್ಕರಣೆ ರಾಜ್ಯ ಸರ್ಕಾರ ದೃಢ ನಿಲುವು ತಳೆಯಲಿ

ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಪಡಿತರ ಚೀಟಿಗಳನ್ನು ಅರ್ಹರಲ್ಲದವರೂ ಪಡೆದುಕೊಂಡಿದ್ದಾರೆ. ಅಂತಹವುಗಳನ್ನು ಗುರುತಿಸಿ, ರದ್ದುಗೊಳಿಸುವ ಕೆಲಸ ಆಗಲೇಬೇಕಾಗಿದೆ. ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಪ್ರಯೋಜನವು ಅರ್ಹ ಫಲಾನುಭವಿಗಳಿಗೆ ಮಾತ್ರ ತಲುಪುವುದನ್ನು ಖಾತರಿಪಡಿಸಿಕೊಳ್ಳುವ ದೃಷ್ಟಿಯಿಂದ ಇದು ಅಗತ್ಯವಾಗಿ ಮಾಡಲೇಬೇಕಾದ ಕೆಲಸ. ನೀತಿ ಆಯೋಗವು ಈ ವರ್ಷದ ಜನವರಿಯಲ್ಲಿ ಬಿಡುಗಡೆ ಮಾಡಿರುವ ವರದಿ ಪ್ರಕಾರ, ಭಾರತದಲ್ಲಿ ಬಹು ಆಯಾಮದ ಬಡತನದ ಪ್ರಮಾಣವು 2022–23ರ ವೇಳೆಗೆ ಶೇಕಡ 11.28ಕ್ಕೆ ಕುಸಿದಿದೆ. ಆದರೆ, ಕರ್ನಾಟಕದ ಶೇ 85ರಷ್ಟು ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿವೆ. ಕರ್ನಾಟಕವು ಈಗ ದಕ್ಷಿಣ ಭಾರತದಲ್ಲಿ ಅತ್ಯಧಿಕ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವ ರಾಜ್ಯವಾಗಿದೆ. ದುರ್ಬಲರಿಗಾಗಿ ಜಾರಿಯಲ್ಲಿರುವ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯಗಳನ್ನು ಕೆಲವು ಸರ್ಕಾರಿ ನೌಕರರೂ ಸೇರಿದಂತೆ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು ಕಬಳಿಸುತ್ತಿದ್ದಾರೆ. ಅರ್ಹರಲ್ಲದವರು ಹೊಂದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡುವುದು ಸಂಪನ್ಮೂಲದ ಸರಿಯಾದ ಹಂಚಿಕೆಗೆ ಅವಕಾಶ ಕಲ್ಪಿಸುವುದಲ್ಲದೆ ರಾಜ್ಯದ ಬೊಕ್ಕಸದ ಮೇಲಿನ ಹೊರೆಯನ್ನೂ ತಗ್ಗಿಸಲಿದೆ.

ಅನರ್ಹರು ಸರ್ಕಾರದ ಯೋಜನೆಗಳ ದುರ್ಲಾಭ ಪಡೆಯುವುದನ್ನು ತಡೆಯಲು ಈ ಹೆಜ್ಜೆ ಅತಿ ಅಗತ್ಯ ಎಂಬುದನ್ನು ಸರ್ಕಾರವು ಜನರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ

ಸರಿಯಾದ ನಿಗಾ ವ್ಯವಸ್ಥೆ ಇಲ್ಲದಿರುವುದು ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಅರ್ಹರಲ್ಲದವರು ಈ ಯೋಜನೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದು, ಬಡವರಿಗೆ ಅಗತ್ಯವಿರುವ ನೆರವಿನ ನಿರಾಕರಣೆಗೆ ಕಾರಣವಾಗುತ್ತಿದೆ. ಸ್ಥಳೀಯ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಬಿಪಿಎಲ್ ಪಡಿತರ ಚೀಟಿಗಳ ದುರ್ಬಳಕೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಶಾಮೀಲಾಗಿದ್ದಾರೆ. ಹಲವು ಪ್ರಕರಣಗಳಲ್ಲಿ ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಮಣಿದು, ಅರ್ಹತಾ ಮಾನದಂಡಗಳನ್ನೇ ಉಲ್ಲಂಘಿಸಿ ಅರ್ಹರಲ್ಲದವರಿಗೆ ಬಿಪಿಎಲ್ ಪಡಿತರ ಚೀಟಿಗಳನ್ನು ಮಂಜೂರು ಮಾಡಿರುವ ಉದಾಹರಣೆಗಳಿವೆ. ಬಿಪಿಎಲ್ ಕುಟುಂಬಗಳ ಪಟ್ಟಿಯನ್ನು ತಂತ್ರಜ್ಞಾನದ ನೆರವಿನಿಂದ ನಿಯಮಿತವಾಗಿ ಪರಿಷ್ಕರಿಸದೇ ಇರುವುದು ಕೂಡ ಈ ಸಮಸ್ಯೆ ಜಟಿಲವಾಗಿ ಬೆಳೆಯಲು ಕಾರಣ. ಇದನ್ನು ತಡೆಯಬೇಕಾದರೆ, ಅರ್ಹತಾ ಮಾನದಂಡಗಳ ಉಲ್ಲಂಘನೆಗೆ ಅವಕಾಶವೇ ಇಲ್ಲದಂತಹ ಅತ್ಯಂತ ಬಲಿಷ್ಠವಾದ ಮೇಲುಸ್ತುವಾರಿ ವ್ಯವಸ್ಥೆಯೊಂದನ್ನು ರಾಜ್ಯ ಸರ್ಕಾರ ರೂಪಿಸಬೇಕು. ಬಿಪಿಎಲ್ ಕುಟುಂಬಗಳ ಪಟ್ಟಿಯನ್ನು ನಿರಂತರವಾಗಿ ಪರಿಷ್ಕರಿಸುವ ವ್ಯವಸ್ಥೆ ಇರಬೇಕು. ಅದು, ಪಾರದರ್ಶಕವಾಗಿರಬೇಕು ಮತ್ತು ನಿಯಮಿತವಾಗಿ ಪರಿಶೀಲನೆಗೂ ಒಳಗಾಗಬೇಕು. ಈ ದಿಸೆಯಲ್ಲಿ ಸ್ವತಂತ್ರ ವ್ಯವಸ್ಥೆಯೊಂದನ್ನು ಅಸ್ತಿತ್ವಕ್ಕೆ ತರುವ ಬಗ್ಗೆಯೂ ರಾಜ್ಯ ಸರ್ಕಾರ ಯೋಚಿಸಬೇಕು.

ಯಾವ ಅರ್ಹ ಫಲಾನುಭವಿಯೂ ಪಟ್ಟಿಯಿಂದ ಹೊರಗುಳಿಯಬಾರದು ಮತ್ತು ಕಾನೂನಿನ ಅಡಿಯಲ್ಲಿ ಅವರಿಗೆ ಸಿಗಬೇಕಾದ ಸೌಲಭ್ಯಗಳು ಸಿಗಬೇಕು. ಇದನ್ನು ಖಾತರಿಪಡಿಸುವುದೇ ಈ ಪ್ರಕ್ರಿಯೆಯ ಗುರಿಯಾಗಿರಬೇಕು. ಸರ್ಕಾರದ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಮುಕ್ತ ಮತ್ತು ನ್ಯಾಯಸಮ್ಮತ ವ್ಯವಸ್ಥೆಯೊಂದನ್ನು ರೂಪಿಸಲು ಈ ಶುದ್ಧೀಕರಣ ಪ್ರಕ್ರಿಯೆಯು ಬಳಕೆಯಾಗಬೇಕು. ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಆಗುತ್ತಿರುವ ಹೊರೆಯನ್ನು ತಪ್ಪಿಸಲು ಹಾಗೂ ಅರ್ಹರಲ್ಲದವರು ಸರ್ಕಾರದ ಯೋಜನೆಗಳ ದುರ್ಲಾಭ ಪಡೆಯುವುದನ್ನು ತಡೆಯಲು ಈ ಹೆಜ್ಜೆ ಅತಿ ಅಗತ್ಯ ಎಂಬುದನ್ನು ಸರ್ಕಾರವು ಜನರಿಗೆ ಮನವರಿಕೆ ಮಾಡಿಕೊಡಬೇಕು. ರಾಜಕೀಯ ಲಾಭಕ್ಕಾಗಿ ಮಾಡುವ ವಿರೋಧವನ್ನು ಲೆಕ್ಕಿಸದೇ ದೃಢವಾದ ನಿಲುವು ತಳೆಯಬೇಕಾದ ಹೊಣೆಗಾರಿಕೆ ಆಡಳಿತ ನಡೆಸುತ್ತಿರುವವರ ಮೇಲಿದೆ. ಬಿಪಿಎಲ್ ಕುಟುಂಬಗಳ ಪಟ್ಟಿ ಪರಿಷ್ಕರಣೆಯು ದೀರ್ಘಕಾಲದಿಂದಲೂ ಕಗ್ಗಂಟಾಗಿಯೇ ಉಳಿದಿದೆ. ಅದಕ್ಕೆ ಅಂತ್ಯ ಹಾಡಲು ಇದು ಸಕಾಲ. ಜೊತೆಗೆ ಈಗಲೂ ಅಂತಹ ಸೌಲಭ್ಯಗಳಿಂದ ದೂರವೇ ಉಳಿದಿರುವ ಅರ್ಹ ಬಡ ಕುಟುಂಬಗಳನ್ನು ಬಿಪಿಎಲ್ ಪಟ್ಟಿಗೆ ಸೇರಿಸಿ ನ್ಯಾಯ ಒದಗಿಸಬೇಕಾದ ಜವಾಬ್ದಾರಿಯೂ ಸರ್ಕಾರದ ಮೇಲಿದೆ. ಈ ದಿಸೆಯಲ್ಲಿ ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪ, ಪಕ್ಷಪಾತಕ್ಕೆ ಅವಕಾಶವೇ ಇಲ್ಲದಂತಹ ಕಟ್ಟುನಿಟ್ಟಿನ ಪ್ರಕ್ರಿಯೆಯೊಂದನ್ನು ರೂಪಿಸಿ, ಅನುಷ್ಠಾನಕ್ಕೆ ತಂದರಷ್ಟೇ ಈ ಎಲ್ಲವೂ ಸಾಧ್ಯ.

ದಿನದ ಟ್ವೀಟ್

ಸಬಲೀಕರಣಕ್ಕೆ ಕೊಡುಗೆ

ಎಂತಹ ಉದಾತ್ತ ಪ್ರಯತ್ನ! ಬೆಂಗಳೂರಿನ ಕಾರ್ಪೊರೇಟ್ ಸಂಸ್ಥೆಗಳು ಇದನ್ನು ಕೈಗೆತ್ತಿಕೊಳ್ಳಬೇಕು ಮತ್ತು ರಾಜ್ಯದಾದ್ಯಂತ ಈ ಸೌಲಭ್ಯ ಕಲ್ಪಿಸಲು ನೆರವು ನೀಡಬೇಕು. ಸರ್ಕಾರ ಸಹ ಈ ಕಾರ್ಯಕ್ಕೆ ಕೊಡುಗೆ ನೀಡುವ ಮೂಲಕ, ಇದು ಸುಗಮವಾಗಿ ಕಾರ್ಯರೂಪಕ್ಕೆ ಬರಲು ಅನುವು ಮಾಡಿಕೊಡಬೇಕು.

(ಬೆಂಗಳೂರಿನ ಐ.ಟಿ. ಕಂಪನಿಯೊಂದರ ಉದ್ಯೋಗಿ ಆ್ಯಂಟನಿ ಸಜೀತ್ ಅವರು ಕೋಲಾರ ಜಿಲ್ಲೆಯ ವಿವಿಧೆಡೆ ಸರ್ಕಾರಿ ಶಾಲೆಗಳಲ್ಲಿ ಪಿಂಕ್ ರೂಮ್ (ಹೆಣ್ಣುಮಕ್ಕಳಿಗಾಗಿ ವಿಶ್ರಾಂತಿ ಕೊಠಡಿ) ಸ್ಥಾಪಿಸಲು ಮುಂದಾಗಿರುವುದಕ್ಕೆ ಶ್ಲಾಘನೆ)

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

ಕಿಡಿನುಡಿ

ಬಿಟ್‌ಕಾಯಿನ್‌ನಿಂದ ಬಂದ ಹಣವನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳುವಂತೆ ಹೇಳಿದ್ದಾರೆ ಎನ್ನಲಾದ ತಮ್ಮ ಆಡಿಯೊ ಕ್ಲಿಪ್ ಹರಿದಾಡಿದ ಬಳಿಕ ಸುಪ್ರಿಯಾ ಸುಳೆ ಅವರು ಕ್ರಿಮಿನಲ್ ಮತ್ತು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ. ತನ್ನ ಹಿರಿಯ ನಾಯಕ ವಿನೋದ್ ತಾವ್ಡೆ ಅವರು 'ವೋಟಿಗಾಗಿ ನೋಟು' ಹಗರಣದಲ್ಲಿ ಸಿಲುಕಿದ ಆರೋಪ ಕೇಳಿಬಂದ ಕೆಲವೇ ಗಂಟೆಗಳಲ್ಲಿ ಬಿಜೆಪಿಯು ಇಂತಹ ಆರೋಪ ಮಾಡಿರುವುದು ಆಸಕ್ತಿಕರವಾಗಿದೆ. ಇದಕ್ಕಿಂತ ಹೆಚ್ಚು ಕುತೂಹಲದ ಸಂಗತಿಯೆಂದರೆ, ಈ ಆರೋಪ ಮಾಡಿದ ವ್ಯಕ್ತಿ ಹಲವು ತಿಂಗಳು ಜೈಲಿನಲ್ಲಿದ್ದವರು! ಎಲ್ಲ ಕೆಸರೂ ಹೊರಬರಬೇಕೆಂದರೆ, ಮಹಾರಾಷ್ಟ್ರದ ರಾಜಕೀಯ ನಾಟಕವು ಒಟಿಟಿ ಧಾರಾವಾಹಿಯಾಗಿ ಪ್ರಸಾರವಾಗಬೇಕು!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 21-11-1999

● ರಾಜ್ಯಸಭೆಗೆ ಲತಾ, ನಾರಿಮನ್, ನಾನಾಜಿ, ಚೊ ನಾಮಕರಣ

ನವದೆಹಲಿ, ನ. 20 (ಪಿಟಿಐ)– ಹಿನ್ನೆಲೆ ಗಾಯಕಿ ಲತಾ ಮಂಗೇಶ್ಕರ್, ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ನಾನಾಜಿ ದೇಶ್‌ಮುಖ್, ಸಂವಿಧಾನ ತಜ್ಞ ಫಾಲಿ ಎಸ್. ನಾರಿಮನ್ ಮತ್ತು ತಮಿಳು ಪತ್ರಕರ್ತ ಚೊ ರಾಮಸ್ವಾಮಿ ಅವರನ್ನು ಇಂದು ರಾಜ್ಯಸಭೆಗೆ ನಾಮಕರಣ ಮಾಡಲಾಗಿದೆ.

ಪ್ರಧಾನಿ ಕಚೇರಿಯೊಂದಿಗೆ ಚರ್ಚಿಸಿದ ಗೃಹ ಸಚಿವಾಲಯ ಈ ನಾಲ್ವರನ್ನು ಆಯ್ಕೆ ಮಾಡಿದ್ದು, ಅನುಮೋದನೆಗಾಗಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರಿಗೆ ಕಳಿಸಿಕೊಟ್ಟಿದೆ. ಈ ನಾಲ್ಕು ಮಂದಿ, ನಟಿ ವೈಜಯಂತಿಮಾಲಾ ಬಾಲಿ ಸೇರಿದಂತೆ ನಾಲ್ಕು ಮಂದಿ ಸದಸ್ಯರಿಂದ ತೆರವಾಗಿರುವ ಸ್ಥಾನಗಳನ್ನು ತುಂಬಲಿದ್ದಾರೆ.

● 'ದಿ ಕಾರ್ಟ್' ಅತ್ಯುತ್ತಮ: ಭಾರತದ 'ಮಲ್ಲಿ'ಗೆ ಬಾಲನಟಿ ಪ್ರಶಸ್ತಿ

ಹೈದರಾಬಾದ್, ನ. 20 (ಪಿಟಿಐ)– ಇರಾನ್‌ನ ನಿರ್ದೇಶಕ ಗುಲಾಂ ರಜಿ ರಮೆಜಾನಿ ಅವರ ನಿರ್ದೇಶನದ 'ದಿ ಕಾರ್ಟ್' ಮಕ್ಕಳ ಚಿತ್ರವು 'ಅತ್ಯುತ್ತಮ ಕಥಾಚಿತ್ರ' ಪ್ರಶಸ್ತಿ ಸಹಿತ ಮೂರು ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

ಇಂದು ಇಲ್ಲಿ ಅಂತ್ಯವಾದ 11ನೇ ಅಂತರರಾಷ್ಟ್ರೀಯ ಮಕ್ಕಳ ಚಲನ ಚಿತ್ರೋತ್ಸವದ 'ಗೋಲ್ಡನ್ ಎಲಿಫೆಂಟ್', 'ಇಂಟರ್‌ನ್ಯಾಷನಲ್ ಕ್ರಿಟಿಕ್ಸ್ ಜ್ಯೂರಿ' ಮತ್ತು 'ಚಿಲ್ಡ್ರನ್ಸ್ ಜ್ಯೂರಿ' ಪ್ರಶಸ್ತಿಗಳು 'ದಿ ಕಾರ್ಟ್'ಗೆ ಲಭಿಸಿವೆ. ಸಂತೋಷ್ ಶಿವನ್ ನಿರ್ದೇಶನದ 'ಮಲ್ಲಿ' ಆ್ಯಕ್ಷನ್ ಚಿತ್ರದಲ್ಲಿನ ಅತ್ಯುತ್ತಮ ಅಭಿನಯಕ್ಕಾಗಿ ಪುಟ್ಟ ಹುಡುಗಿ ಶ್ವೇತಾ ಅತ್ಯುತ್ತಮ ಬಾಲನಟಿ ಪ್ರಶಸ್ತಿ ಪಡೆದಿದ್ದಾಳೆ.

50 ವರ್ಷಗಳ ಹಿಂದೆ

ಗುರುವಾರ, 21-11-1974

● ಬೇಕೆಂದೇ ಉತ್ಪಾದನೆ ಕುಗ್ಗಿಸುವ ಕೈಗಾರಿಕೆಗಳಿಗೆ ಪೈ ಎಚ್ಚರಿಕೆ

ನವದೆಹಲಿ, ನ. 20– ಲಾಭ ಕಡಿಮೆ ಎಂಬ ಕಾರಣದಿಂದ ಉತ್ಪಾದನೆಯನ್ನು ಬೇಕೆಂದೇ ಕಡಿತಗೊಳಿಸುವ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಸಚಿವ ಟಿ.ಎ.ಪೈ ಅವರು ಇಂದು ಲೋಕಸಭೆಯಲ್ಲಿ ಎಚ್ಚರಿಕೆ ನೀಡಿದರು.

ವಿದ್ಯುಚ್ಛಕ್ತಿ ಮತ್ತು ಕಚ್ಚಾವಸ್ತುಗಳ ಅಭಾವ ನೀಗಿಸಲು ಸರ್ಕಾರ ಎಲ್ಲ ಕ್ರಮಗಳನ್ನೂ ಕೈಗೊಳ್ಳುವುದೆಂದು ಎಸ್.ಆರ್.ದಯನಿ ಅವರ ಉಪ ಪ್ರಶ್ನೆಗೆ ಉತ್ತರ ನೀಡುತ್ತಾ ತಿಳಿಸಿದರು. ಬಳಕೆದಾರರು ಬೆಲೆ ಏರಿಕೆ ವಿರೋಧಿಸುತ್ತಿದ್ದಾರೆಂಬ ಕಾರಣ ತಮ್ಮ ತಮ್ಮ ಉತ್ಪಾದನೆ ತಗ್ಗಿಸಕೂಡದೆಂದು ಸಚಿವರು ಕೈಗಾರಿಕೆಗಳಿಗೆ ಸೂಚಿಸಿದರು.

ಬೆಲೆಗಳು ಏರಿರುವಾಗ ಹೆಚ್ಚು ಲಾಭ ಗಳಿಸಿದ ಕೈಗಾರಿಕೆಗಳು ಈಗ ಬಳಕೆದಾರರು ವಿರೋಧ ವ್ಯಕ್ತಪಡಿಸುತ್ತಿದ್ದಾರೆಂದು ಬೇಕಾಗಿಯೇ ಉತ್ಪಾದನೆಯನ್ನು ಕುಂಠಿತಗೊಳಿಸದೆ, ಬೆಲೆಗಳನ್ನು ಇಳಿಸಿ ಉತ್ಪಾದನೆ ಹೆಚ್ಚಿಸುವುದರಿಂದ ಜನತೆಯ ಅಗತ್ಯ ಪೂರೈಸಬೇಕೆಂದು ಸಲಹೆ ನೀಡಿದರು.

ಎಲ್ಲವನ್ನೂ ದಕ್ಕಿಸಿಕೊಳ್ಳಬಹುದು ಎಂಬ ವಾತಾವರಣದಲ್ಲಿ ಭರವಸೆ ಎಲ್ಲಿಂದ ಹುಟ್ಟೀತು?

ಹಣದ ಹೊಳೆಯಲ್ಲಿ ಅಧಿಕಾರದ ಬೆಳೆ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ರಾಜ್ಯದ ಶಿಗ್ಗಾವಿ, ಚನ್ನಪಟ್ಟಣ ಮತ್ತು ಸಂಡೂರು ಕ್ಷೇತ್ರಗಳಿಂದ ವಿಧಾನಸಭೆಗೆ ಇದೇ 13ರಂದು ನಡೆದ ಉಪಚುನಾವಣೆ ಹಲವು ಕಾರಣಗಳಿಂದ ಏಕಕಾಲಕ್ಕೆ ಮುಖ್ಯವೂ ಅಮುಖ್ಯವೂ ಆಗಿತ್ತು. ಈ ಕ್ಷೇತ್ರಗಳಲ್ಲಿ ಶಾಸಕರಾಗಿದ್ದ ಬಸವರಾಜ ಬೊಮ್ಮಾಯಿ, ಎಚ್‌.ಡಿ. ಕುಮಾರಸ್ವಾಮಿ ಮತ್ತು ಇ.ತುಕಾರಾಮ್ ಅವರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸಂಸದರಾಗಿ ಆಯ್ಕೆಯಾಗಿದ್ದರಿಂದ ಈ ಕ್ಷೇತ್ರಗಳಿಗೆ ಉಪಚುನಾವಣೆಯ ಆರ್ಭಟ ಕಾಲಿರಿಸುವಂತಾಗಿತ್ತು.

ಎರಡು ಕ್ಷೇತ್ರಗಳಲ್ಲಿ ಹಾಲಿ ಸಂಸದರ ಮಕ್ಕಳು ಹಾಗೂ ಇನ್ನೊಂದರಲ್ಲಿ ಸಂಸದರ ಮಡದಿ ತಮ್ಮೆಲ್ಲಾ ಸ್ವಹಿತಾಸಕ್ತಿಗಳನ್ನು 'ತ್ಯಾಗ' ಮಾಡಿ, ಚುನಾವಣಾ ಕಣಕ್ಕಿಳಿಯುವ ಮೂಲಕ ಜನಸೇವೆಗೆ ಮುಂದಾಗಿದ್ದನ್ನು ಮತದಾರರು ಅಚ್ಚರಿ, ಅಭಿಮಾನ ಮತ್ತು ಆತಂಕದಿಂದ ವೀಕ್ಷಿಸಿದ್ದಾರೆ!

ಉಪಚುನಾವಣೆಯ ಫಲಿತಾಂಶವು 136 ಶಾಸಕರ ಬೆಂಬಲದಿಂದ ಸದೃಢವಾಗಿರುವ ಸರ್ಕಾರದ ಮೇಲಾಗಲೀ ಸಂಸತ್ ಚುನಾವಣೆಯಲ್ಲಿ ಸಮಾಧಾನಕರ ಪ್ರದರ್ಶನ ನೀಡಿರುವ ವಿರೋಧ ಪಕ್ಷಗಳ ವರ್ತಮಾನ ಅಥವಾ ಹತ್ತಿರದ ಭವಿಷ್ಯದ ಮೇಲಾಗಲೀ ಪರಿಣಾಮ ಬೀರುವ ಸಾಧ್ಯತೆ ಇರಲೇ ಇಲ್ಲ. ಆದಾಗ್ಯೂ ಈ ಉಪ ಚುನಾವಣೆಯ ಆರಂಭ, ಮಧ್ಯಂತರ ಮತ್ತು ಕೊನೆಯ ಹಂತಗಳ ಆಗುಹೋಗುಗಳು ಸಾಮಾನ್ಯ ಜನರೊಂದಿಗೆ ರಾಜಕೀಯ ವಿಶ್ಲೇಷಕರನ್ನೂ ಗೊಂದಲದಲ್ಲಿ ಮುಳುಗಿಸುವಷ್ಟು ತಿರುವುಗಳನ್ನು ಪಡೆದಿದ್ದನ್ನು ಗಮನಿಸಿದ್ದೇವೆ.

ಅಮುಖ್ಯ ಸ್ಪರ್ಧಾಕಣ ಕೂಡ ಅತಿಯಾದ ಪ್ರಾಮುಖ್ಯ ಪಡೆಯುವಲ್ಲಿ ಕುಟುಂಬ ರಾಜಕಾರಣದ ಪ್ರತಿಷ್ಠೆಯ ಕೊಂಬುಗಳ ತಾಕಲಾಟವೇ ಬಹುದೊಡ್ಡ ಪಾತ್ರ ವಹಿಸಿರುವುದು ಎದ್ದು ಕಾಣಿಸುತ್ತದೆ. ಯಾವುದೇ ಸಂದರ್ಭದಲ್ಲಿ ಪ್ರತಿಷ್ಠೆ ಎಂಬುದು ಅಖಾಡಕ್ಕೆ ಇಳಿದಾಗ, ಆಟದ ಎಲ್ಲಾ ನೀತಿನಿಯಮಗಳು ಗಾಳಿಯಲ್ಲಿ ತೂರಿಹೋಗುವುದು, ತಿರುವುಮುರುವು ಆಗುವುದು ಸಾಮಾನ್ಯ.

ಅಂತೆಯೇ ಉಪಚುನಾವಣೆಯಲ್ಲಿ ಆರೋಪ, ಪ್ರತ್ಯಾರೋಪ, ನಿಂದನೆ, ಕೆಸರೆರಚಾಟ, ವ್ಯಕ್ತಿಗತ ದಾಳಿ, ಅಸಭ್ಯ ಭಾಷಾಬಳಕೆ... ಯಾವುದರಲ್ಲೂ ಯಾರೂ ಯಾವ ಪಕ್ಷವೂ ಹಿಂದೆ ಬೀಳಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಚುನಾವಣೆಗಳಲ್ಲಿ ನಡೆದ ಹಣಕಾಸಿನ ವಹಿವಾಟು ಎಲ್ಲರ ಊಹೆ, ತರ್ಕ, ಲೆಕ್ಕಾಚಾರವನ್ನೂ ಮೀರಿಸಿದೆ. ಈ ಮೂರೂ ಕ್ಷೇತ್ರಗಳಲ್ಲಿ ಚುನಾವಣೆ ಸಂದರ್ಭದಲ್ಲಿ ಕೇಳಿಬಂದ ಹಣದ ಚಲಾವಣೆ ಬಗೆಗಿನ ಮಾಹಿತಿಗಳು ಬೆಚ್ಚಿಬೀಳಿಸುವಂತಹವು.

ಶಿಗ್ಗಾವಿ ಕ್ಷೇತ್ರದ ರೈತನೊಬ್ಬ ಅಕಾಲಿಕ ಮಳೆಯಿಂದ ನೆಲಕಚ್ಚಿದ್ದ ಮೆಕ್ಕೆಜೋಳ ಕಟಾವು ಮಾಡಲು ಕೂಲಿಕಾರರ ತಂಡದ ಮುಖಂಡನನ್ನು ಸಂಪರ್ಕಿಸಿದನಂತೆ. ಆತ, 'ಅಣ್ಣಾರ... ಇನ್ನೆರಡು ದಿನ ಬಿಟ್ಟುಬಿಡ್ರಿ, ಆಳುಗಳು ಸಿಗಂಗಿಲ್ಲ. ವೋಟಿಗೆ ಒಬ್ಬರು 2,000, ಇನ್ನೊಬ್ಬರು 1,500 ರೂಪಾಯಿ ಕೊಟ್ಟಾರ...' ಎಂದು ಲೆಕ್ಕ ಬಿಚ್ಚಿಟ್ಟ. ಸಂಡೂರು ಕ್ಷೇತ್ರ ಯಾವತ್ತೂ ಅಭ್ಯರ್ಥಿಗಳ ಪಾಲಿಗೆ ದುಬಾರಿ ಎನ್ನಿಸಿಕೊಂಡಿದ್ದೇ ಇಲ್ಲ. ಇಲ್ಲಿ ಸಾಮಾನ್ಯವಾಗಿ ಒಗ್ಗರಣೆ ಮೆಣಸಿನಕಾಯಿಗೆ ತೃಪ್ತಿಪಡುವಷ್ಟು ಸಂಭಾವಿತ ಮತದಾರರು ಕಾಣಸಿಗುತ್ತಾರೆ. ಆದರೆ ಈ ಬಾರಿ ಜನಾರ್ದನ ರೆಡ್ಡಿ ಅವರು ಸಂಡೂರಿನಲ್ಲಿ ಠಿಕಾಣಿ ಹೂಡಿದ್ದರಿಂದ, ಕ್ಷೇತ್ರದ ಮೌಲ್ಯವೂ ಬಹಳಷ್ಟು ತೇಜಿ ದಾಖಲಿಸಲು ಸಾಧ್ಯವಾಗಿದೆ ಎಂಬ ಮಾತು ಕೇಳಿಬಂದಿದೆ.

ಇನ್ನು, ಚನ್ನಪಟ್ಟಣದಲ್ಲಂತೂ ಚುನಾವಣೆ ಬದಲು ವಾಹಿನಿಗಳು ಬಣ್ಣಿಸುವಂತೆ 'ರೋಚಕ ಕದನ'ವೇ ಏರ್ಪಟ್ಟಿದ್ದನ್ನು ನಾಡು ಬೆರಗುಗಣ್ಣಿನಿಂದ ನೋಡುವಂತಾಯಿತು. ಅಲ್ಲಿ ಸುರಿದ ದ್ವೇಷದ ಮಳೆ, ಹರಿದ ಹಣದ ಹೊಳೆ ಯಾರ ಅಂದಾಜಿಗೂ ನಿಲುಕುವ ಪ್ರಮಾಣದ್ದಲ್ಲ. ಇತ್ತೀಚೆಗಿನ ಸಮೀಕ್ಷೆ ಪ್ರಕಾರ, ಭಾರತದಲ್ಲಿ ಶಿಕ್ಷಣಕ್ಕಿಂತ ಮದುವೆಗಳಿಗೆ ಹೆಚ್ಚಿನ ಹಣ ವ್ಯಯವಾಗುತ್ತಿದೆಯಂತೆ. ಅದರಂತೆ ಕ್ಷೇತ್ರದ ಅಭಿವೃದ್ಧಿ ವೆಚ್ಚ ಮತ್ತು ಚುನಾವಣೆ ಖರ್ಚಿನ ಅನುಪಾತದ ಬಗ್ಗೆ ಅಧ್ಯಯನ ಆಗಬೇಕಿದೆ!

ಈ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಇಷ್ಟೊಂದು ದನಿ, ಧನ, ಪ್ರತಿಷ್ಠೆಯನ್ನು ಖರ್ಚು ಮಾಡಿ ಸಾಧಿಸುವುದಾದರೂ ಏನನ್ನು ಎಂಬ ಅಮಾಯಕ ಸಂದೇಹ ಮೂಡಬಹುದು. ನಿಜದಲ್ಲಿ, ಇವೆಲ್ಲಾ ಅವರು ಮಾಡುವ ಖರ್ಚಲ್ಲ; ಬದಲಾಗಿ, ಹೂಡಿಕೆ ಎಂಬುದು ಮತದಾರರ ಪ್ರಜ್ಞೆಯ ಪರಿಧಿಯನ್ನು ಪ್ರವೇಶಿಸದಿದ್ದರೆ ಪ್ರಜಾಪ್ರಭುತ್ವದ ಗುಣಮಟ್ಟ ಪಾತಾಳ ಮುಟ್ಟಲು ಬಹಳ ಸಮಯವನ್ನೇನೂ ಬೇಡುವುದಿಲ್ಲ. ಅಷ್ಟಕ್ಕೂ ಭ್ರಷ್ಟ ರಾಜಕಾರಣಿಗಳು ಚುನಾವಣೆಗಳ ಸಮಯದಲ್ಲಿ ಹೂಡಿಕೆ ಮಾಡುವ ಇಷ್ಟೊಂದು ಬಂಡವಾಳ ಎಲ್ಲಿಂದ ಬರುತ್ತದೆ, ಈ ಹೂಡಿಕೆಗೆ ಪ್ರತಿಯಾಗಿ ಅವರು ಎಲ್ಲಿಂದ ಲಾಭ ಗಳಿಸುತ್ತಾರೆ ಎಂಬಂತಹ ಪ್ರಶ್ನೆಗಳು ಮೂಡುವಷ್ಟು ಮುಗ್ಧತೆಯನ್ನು ಪ್ರಜಾಪ್ರಭುಗಳು ಈಗಾಗಲೇ ಕಳೆದುಕೊಂಡಾಗಿದೆ. ರಾಜಕಾರಣ ಎಂದರೆ ಹಣದ ವಹಿವಾಟು ಮತ್ತು ಅಧಿಕಾರದ ಕವಾಟ ಎಂಬ ವ್ಯಾಖ್ಯಾನದ ಎದುರಿನಲ್ಲಿ ಎಲ್ಲ ತತ್ವ, ಸಿದ್ಧಾಂತಗಳು ಕೈಕಟ್ಟಿ, ತಲೆಬಾಗಿ ನಿಂತಿರುವುದನ್ನು ಕಾಣುತ್ತಿದ್ದೇವೆ.

ಇಂತಿರುವ ಹಾಲಿ ರಾಜಕೀಯ ವಾತಾವರಣದಲ್ಲಿ ಯಾವ ಪುಣ್ಯಾತ್ಮ ತಾನೇ ಇಷ್ಟೊಂದು ಬಂಡವಾಳವನ್ನು ಕುಟುಂಬಸ್ಥರ ಮೇಲಲ್ಲದೆ ಕಾರ್ಯಕರ್ತರ ಮೇಲೆ ಹೂಡಲು ಮನಸ್ಸು ಮಾಡಿಯಾನು ಎಂಬ ತರ್ಕದಲ್ಲಿ ಕುಟುಂಬ ರಾಜಕಾರಣ ಕುರಿತ ಟೀಕೆಗಳಿಗೆ ಉತ್ತರವಿದೆ. ಈ ಮಧ್ಯೆ ರಾಜಕೀಯ ತಾತ್ವಿಕತೆ, ನೈತಿಕತೆ ಕೂಡ ಅವಕಾಶವಾದಿ ನೆಲೆಯಲ್ಲಿ ತೇಲಿಹೋಗುವುದನ್ನು ಗಮನಿಸಬಹುದು. 'ಕೋಮುವಾದಿ ಬಿಜೆಪಿ'ಯ ಲಕ್ಷ್ಮಣ ಸವದಿ, ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರಿದ ತಕ್ಷಣ 'ಸೆಕ್ಯುಲರ್' ಆಗಬಲ್ಲರು. 'ಗುಲಾಮಗಿರಿ ಪಾಲನೆ'ಗೆ ಹೆಸರಾದ ಕಾಂಗ್ರೆಸ್ ಪಕ್ಷದ 15 ಶಾಸಕರು ಬಿಜೆಪಿ ಸೇರಿ ಸರ್ಕಾರ ರಚಿಸಿದ ಕೂಡಲೇ 'ರಾಷ್ಟ್ರೀಯವಾದಿ' ಆಗಲು ಸಾಧ್ಯ. ಜಗದೀಶ ಶೆಟ್ಟರ್ ಅಂತಹವರು ಕೆಲವೇ ತಿಂಗಳಲ್ಲಿ ಸೆಕ್ಯುಲರ್ ಮತ್ತು ಕೋಮುವಾದಿ ಪೋಷಾಕನ್ನು ಅದಲು ಬದಲು ಮಾಡಿಕೊಳ್ಳಬಹುದು. ಇಂತಹ ಬೆಳವಣಿಗೆಗಳನ್ನು ಆಧರಿಸಿಯೇ ಶಾಸಕರ ಖರೀದಿಯ ಹೇಳಿಕೆಗಳನ್ನು ನಿಕಷಕ್ಕೆ ಒಡ್ಡಬೇಕಿದೆ.

ಕಾಂಗ್ರೆಸ್ ಪಕ್ಷದ ಐವತ್ತು ಶಾಸಕರಿಗೆ ಬಿಜೆಪಿ ತಲಾ ₹ 50 ಕೋಟಿಯ ಆಮಿಷ ಒಡ್ಡಿದೆ ಎಂಬ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದ್ದಾರೆ. ಆಫರ್ ಮೊತ್ತ ಐವತ್ತಲ್ಲ, ನೂರು ಕೋಟಿ ರೂಪಾಯಿ ಎಂದು ತಿದ್ದುಪಡಿ ಮಾಡಿದವರು ಮಂಡ್ಯದ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್. ಅಷ್ಟೇ ಅಲ್ಲ, ಅವರು ತಮ್ಮ ಈ ಆರೋಪವನ್ನು ರುಜುವಾತು ಮಾಡಲು ಬಹಳಷ್ಟು ಸಾಕ್ಷ್ಯಗಳೂ ಇರುವುದಾಗಿ ಖಚಿತಪಡಿಸಿದ್ದಾರೆ. ಸಿದ್ದರಾಮಯ್ಯ ಮತ್ತು ಅವರ ತಂಡದವರು ಅಧಿಕಾರದ ಸೂತ್ರ ಹಿಡಿದ ಒಂದೂವರೆ ವರ್ಷದ ನಂತರವೂ ವಿರೋಧ ಪಕ್ಷದ ಹ್ಯಾಂಗೋವರ್‌ನಿಂದ ಹೊರಬಂದಂತೆ ಕಾಣುವುದಿಲ್ಲ. ಜನಪರ ಆಡಳಿತದಲ್ಲಿ ತೊಡಗುವ ಬದಲು ದಿನಕ್ಕೊಂದು ಆರೋಪ ಮಾಡುವುದರಲ್ಲಿ ಕಾಲಕಳೆಯುತ್ತಿದ್ದಾರೆ. ಆರೋಪ, ಸಾಕ್ಷ್ಯ, ಆಡಳಿತ, ತನಿಖಾ ವ್ಯವಸ್ಥೆ ಎಲ್ಲವನ್ನೂ ತಮ್ಮ ಬಳಿಯೇ ಇರಿಸಿಕೊಂಡು ಗಾಳಿಹೇಳಿಕೆಗಳಲ್ಲಿ ನಿರತರಾದರೆ ಹೇಗೆ?

ಏಳು ಕೋಟಿ ಜನಸಂಖ್ಯೆಯುಳ್ಳ ಕರ್ನಾಟಕದಂತಹ ಬೃಹತ್ ರಾಜ್ಯದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿಗೆ ತಪ್ಪಿತಸ್ಥರನ್ನು ಪತ್ತೆಹಚ್ಚಿ ಶಿಕ್ಷೆಗೆ ಗುರಿಪಡಿಸುವ ಕನಿಷ್ಠ ನ್ಯಾಯಪ್ರಜ್ಞೆ ಇರಬೇಕೆಂದು ನಿರೀಕ್ಷಿಸುವುದು ಸಹಜ. ಶಾಸಕರ ಸಂಖ್ಯೆಯ ಶೇಕಡ 15ರಷ್ಟು ಮಂತ್ರಿಮಂಡಲ ಸದಸ್ಯರ ಜೊತೆಗೆ ಸುಮಾರು 80 ಜನ ಸಚಿವ ದರ್ಜೆಯ ಸಲಹೆಗಾರರ ತಂಡ ಹೊಂದಿರುವ ಮುಖ್ಯಮಂತ್ರಿ, ಒಬ್ಬ ಸಾಮಾನ್ಯ ರಾಜಕಾರಣಿಯಂತೆ ಆರೋಪ, ಪ್ರತ್ಯಾರೋಪಗಳಲ್ಲಿ ಸಮಯ ಹರಣ ಮಾಡಲಾಗದು.

ವಾಲ್ಮೀಕಿ ನಿಗಮದ ಹಗರಣ ಮತ್ತು ಮುಡಾ ಅಕ್ರಮ ಆರೋಪ ಉರುಳಾಗಬಹುದು ಎಂಬ ಸಂದರ್ಭದಲ್ಲಿ ಕೊನೆಗೂ ಎಚ್ಚೆತ್ತುಕೊಂಡ ಅಥವಾ ಹಾಗೆಂದು ನಟಿಸಿದ ಸರ್ಕಾರ, ಬಿಜೆಪಿ ನೇತೃತ್ವದ ಸರ್ಕಾರದ ಈ ಹಿಂದಿನ ಆಡಳಿತದ ಅವ್ಯವಹಾರಗಳನ್ನು ಬಯಲಿಗೆಳೆಯಲು, ತನಿಖೆಗೆ ಒಳಪಡಿಸಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ಆದರೆ ಹಿಂದಿನ ಸರ್ಕಾರದ ಅವಧಿಯ 22 ಹಗರಣಗಳ ತನಿಖೆಯು ತಾರ್ಕಿಕ ಅಂತ್ಯ ತಲುಪಿ ಭ್ರಷ್ಟರನ್ನು ಶಿಕ್ಷಿಸಲಾಗುತ್ತದೆ ಎಂದು ನಂಬಲು ಜನಸಾಮಾನ್ಯರಿಗೆ ಪೂರ್ವ ನಿದರ್ಶನಗಳೇ ದೊರಕುತ್ತಿಲ್ಲ. ಇಲ್ಲಿ ಏನು ಮಾಡಿದರೂ ದಕ್ಕಿಸಿಕೊಳ್ಳಬಹುದು ಎಂಬ 'ಬಾರಾ ಖೂನ್ ಮಾಫಿ' ವಾತಾವರಣದಲ್ಲಿ ಭರವಸೆ ಎಲ್ಲಿಂದ ಹುಟ್ಟೀತು?!

ಚುರುಮುರಿ

ದುಡ್ಡಿನ ದಾರಿ

● ಗುರು ಪಿ.ಎಸ್.

'ಮುಂಬೈಗೆ ಹೋಗೋಣ ನಡೀರಿ...' ಹೊಸ ವರಸೆ ಶುರುವಿಟ್ಟುಕೊಂಡಳು ಹೆಂಡತಿ.

'ಮುಂಬೈಗಾ! ಇದ್ದಕ್ಕಿದ್ದಂತೆ ಅಲ್ಲಿಗೇಕೆ?' ಅಚ್ಚರಿಯಿಂದ ಕೇಳಿದೆ.

'ಮಹಾರಾಷ್ಟ್ರದಲ್ಲಿ ಎಲೆಕ್ಷನ್ ನಡೀತಿಲ್ವೇನ್ರೀ, ಕೋಟಿ ಕೋಟಿ ರೂಪಾಯಿ ದುಡ್ಡು ಹಂಚ್ತಿದ್ದಾರಂತೆ, ನಾವೂ ಇಸ್ಕೊಂಡು ಬರೋಣ'.

'ಅಲ್ಲಿ ನಮ್ಮದೂ ವೋಟ್ ಇರಬೇಕು, ಸುಮ್ ಸುಮ್ನೆ ದುಡ್ಡು ಕೊಡೋಕೆ ಅವರೇನು ಹುಚ್ಚರಾ?'

'ಅಲ್ಲೇ ನಮ್ ರಿಲೇಶನ್ಸ್ ಮನೇಲಿ ಇರೋಣ. ಮನೆಯಲ್ಲಿರೋ ಮಂದೀನ ಎಣಿಸಿ, ತಲೆಗೆ ಇಷ್ಟಿಷ್ಟು ಕೊಡ್ತಾರಂತೆ. ದುಡ್ಡು ಇಸ್ಕೊಂಡು ಬಸ್ ಹತ್ತಿಬಿಡೋಣ. ನಾವು ವೋಟ್ ಹಾಕಿದೆವೋ ಇಲ್ಲವೋ ಅನ್ನೋದು ಅವರಿಗೇನ್ ಗೊತ್ತಾಗುತ್ತೆ' ಹೊಸ ಐಡಿಯಾ ಏನೋ ಎಂಬಂತೆ ಹೇಳಿದಳು.

'ಅಲ್ಲಿ ಆಗಲೇ ವೋಟಿಂಗ್ ಮುಗಿದಾಯ್ತು. ಹಾಗೇನಾದರೂ ದುಡ್ಡು ಬೇಕು ಅಂದರೆ ಚನ್ನಪಟ್ಟಣಕ್ಕೆ ಹೋಗು ನೀನು' ಎಂದೆ ನಗುತ್ತಾ.

'ಚನ್ನಪಟ್ಟಣಕ್ಕಾ, ಅಲ್ಲಿ ಇನ್ನೂ ಎಲೆಕ್ಷನ್ ನಡೀತಿದೆಯಾ' ಅಚ್ಚರಿಯಿಂದ ಕೇಳಿದಳು.

'ಎಲೆಕ್ಷನ್ ನಡೀತಿಲ್ಲ, ಬೆಟ್ಟಿಂಗ್ ಜೋರಾಗಿ ನಡೀತಿದೆ'.

'ಓಹ್ ಹೌದಾ! ಹೇಗಿದೆ ಟ್ರೆಂಡ್?'

'ಒಂದು ಪಕ್ಷದ ಅಭ್ಯರ್ಥಿಯೇ ಈಗಾಗಲೇ ಸೋಲು ಕಂಡಂತೆ ಮಾತನಾಡಿದ್ರಿಂದ ಇನ್ನೊಬ್ಬ ಅಭ್ಯರ್ಥಿ ಕಡೆ ವಾಲ್ತಿದೆ. ಹಂಗಂದ್ಕೊಂಡು ಯಾವುದೇ ಅಭ್ಯರ್ಥಿ ಪರ ಅಥವಾ ವಿರುದ್ಧ ಬಾಜಿ ಕಟ್ಟಿದರೆ, ಇರೋ ದುಡ್ಡು, ಜಮೀನನ್ನು ಕಳ್ಕೊಳ್ಳೋದು ಗ್ಯಾರಂಟಿ ನೀನು'.

'ಅಯ್ಯೋ, ಹಾಗಾದರೆ ಚನ್ನಪಟ್ಟಣದ ಸಹವಾಸ ಬೇಡಪ್ಪ. ಬೇರೆ ಮಾರ್ಗ ಯಾವುದಿದೆ ರೀ, ದಿಢೀರ್ ದುಡ್ಡು ಮಾಡೋದಕ್ಕೆ'.

'ಮಂಡ್ಯ ಮಾರ್ಗ ಇದೆ ನೋಡು'.

'ಮಂಡ್ಯ ಮಾರ್ಗವಾ, ಹಂಗಂದ್ರೆ?'

'ಅಲ್ಲಿ ನಡೆಯಲಿರೋ ಸಾಹಿತ್ಯ ಸಮ್ಮೇಳನದಲ್ಲಿ ಫ್ಲೆಕ್ಸ್, ಬ್ಯಾನರ್ ಹಾಕೋ ಆರ್ಡರ್ ತಗೊ. ಅದೊಂದೇ ಈಗ ದೊಡ್ಡ ಈವೆಂಟ್'.

'ಕನ್ನಡ ಪುಸ್ತಕ ಮಾರು ಅನ್ನೋದು ಬಿಟ್ಟು, ಫ್ಲೆಕ್ಸ್, ಬ್ಯಾನರ್ ಹಾಕು ಅಂತೀರಲ್ರೀ'.

'ಅಲ್ಲಿ ಪುಸ್ತಕಕ್ಕಿಂತ ಬ್ಯಾನರ್‌ಗೇ ಬೇಡಿಕೆ ಜಾಸ್ತಿ ಈಗ'.

ಸಂಗತ

ಆಹಾ... ಸಮುದ್ರ ಆಹಾರ

ಮೀನುಗಾರಿಕೆಯಲ್ಲಿ ತೊಡಗಿರುವವರ ಸಂಕಷ್ಟಗಳಿಗೆ ಪರಿಹಾರ ಹುಡುಕುವ ಕೆಲಸ ಜರೂರಾಗಿ ಆಗಬೇಕಾಗಿದೆ

● ಡಾ. ಗೌತಮ್ ಚೌಧರಿ

ಹವಾಮಾನ ಬದಲಾವಣೆ, ಜೀವನಶೈಲಿ, ಆಹಾರ ಪದ್ಧತಿಯಿಂದಾಗಿ ನಾವೀಗ ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸಬೇಕಾದ ಸ್ಥಿತಿ ಉಂಟಾಗಿದೆ. ಹವಾಮಾನ ಬದಲಾವಣೆಯಿಂದ ಭಾರತದ ಬಹುತೇಕರು ಮಾನಸಿಕವಾಗಿ, ದೈಹಿಕವಾಗಿ ಕುಗ್ಗಿಹೋಗಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ನಿವೃತ್ತ ಮುಖ್ಯ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ಅವರು ಅಭಿಪ್ರಾಯಪಟ್ಟಿರುವುದು ಇದಕ್ಕೆ ಪುಷ್ಟಿ ನೀಡುವಂತಿದೆ.

ಕೋವಿಡ್ ಬಳಿಕ ನಾವು ನಮ್ಮ ಆರೋಗ್ಯದತ್ತ ಹೆಚ್ಚು ನಿಗಾ ವಹಿಸುತ್ತಿದ್ದೇವೆ. ಆರೋಗ್ಯದ ಬಗೆಗಿನ ಕಾಳಜಿ ನಮ್ಮಲ್ಲಿ ದಿನೇದಿನೇ ಹೆಚ್ಚುತ್ತಲೇ ಇದೆ. ಇಂದಿನ ಕಲಬೆರಕೆ ಹಾಗೂ ರಾಸಾಯನಿಕಮಿಶ್ರಿತ ಆಹಾರವೂ ಹಲವರ ಆರೋಗ್ಯದಲ್ಲಿ ಏರುಪೇರು ಆಗಲು ಕಾರಣ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ.

ಇದರಿಂದ ಕಂಗೆಟ್ಟಿರುವ ನಾವು, ಮೀನಿನಂತಹ ಸಮುದ್ರ ಆಹಾರಗಳತ್ತ ದೃಷ್ಟಿ ಹೊರಳಿಸಿದ್ದೇವೆ. ಇದರ ಪರಿಣಾಮವಾಗಿ, ಸಮುದ್ರ ಆಹಾರಗಳಿಗೆ ಬೇಡಿಕೆ ಹೆಚ್ಚುತ್ತಿದೆ. ನಮ್ಮಲ್ಲಿ ಅಕ್ವಾಕಲ್ಚರ್ ವೇಗವಾಗಿ ಬೆಳೆಯುತ್ತಿದೆ. ಮೀನಿನಲ್ಲಿ ಹೇರಳವಾಗಿರುವ ಒಮೆಗಾ– 3 ಅಂಶದ ಬಗ್ಗೆ ನಾವು ಹೆಚ್ಚು ಆಸಕ್ತರಾಗಿದ್ದೇವೆ. ಒಮೆಗಾ– 3 ರಕ್ತದೊತ್ತಡ ಕಡಿಮೆ ಮಾಡುತ್ತದೆ. ರಕ್ತದಲ್ಲಿನ ಟ್ರೈಗ್ಲಿಸರೈಡ್‌ಗಳನ್ನು ಕಡಿಮೆ ಮಾಡುತ್ತದೆ. ಸಂಧಿವಾತ ಕಾಯಿಲೆಯಲ್ಲಿ ಕೀಲುಗಳ ಉರಿಯೂತ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಮೆದುಳು ಮತ್ತು ಕಣ್ಣುಗಳ ಕಾರ್ಯವನ್ನು ಪೋಷಿಸಲು ನೆರವಾಗುತ್ತದೆ. ಬುದ್ಧಿಮಾಂದ್ಯತೆ, ಖಿನ್ನತೆ, ಆಸ್ತಮಾ, ಮೈಗ್ರೇನ್ ಮತ್ತು ಮಧುಮೇಹ ತಡೆಯಲು, ನಿವಾರಿಸಲು ಹಾಗೂ ಇದರ ಅಪಾಯವನ್ನು ಕಡಿಮೆ ಮಾಡಲು ಕಾರಣವಾಗುತ್ತದೆ.

ಮೀನುಗಾರಿಕೆಯು ಇಂದು ಭಾರತದ ಆರ್ಥಿಕತೆಯ ಒಂದು ಪ್ರಮುಖ ಕ್ಷೇತ್ರವಾಗಿ ಹೊರಹೊಮ್ಮಿದೆ. ದೇಶದ ಒಟ್ಟು ಜಿಡಿಪಿಯ ಶೇ 1.24ರಷ್ಟು ಕೊಡುಗೆ ಮೀನುಗಾರಿಕೆಯಿಂದಲೇ ಸಿಗುತ್ತಿದೆ. ಅಷ್ಟೇ ಅಲ್ಲ, ಮೀನುಗಾರಿಕೆ ಕ್ಷೇತ್ರವು ದೇಶದಲ್ಲಿ 2.8 ಕೋಟಿಗೂ ಹೆಚ್ಚು ಜನರ ಜೀವನೋಪಾಯಕ್ಕೆ ಬುನಾದಿಯಾಗಿದೆ. ಜಾಗತಿಕ ಉತ್ಪಾದನೆಯಲ್ಲಿ ಶೇ 6.96ರಷ್ಟು ಪಾಲನ್ನು ಹೊಂದಿರುವ ಭಾರತವು ವಿಶ್ವದ ಮೂರನೇ ಅತಿ ದೊಡ್ಡ ಮೀನು ಉತ್ಪಾದಕ ದೇಶವಾಗಿದೆ. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯದ ಪ್ರಕಾರ, ಮೀನು ಉತ್ಪಾದನೆಯು 1950– 51ರಲ್ಲಿ 7.52 ಲಕ್ಷ ಟನ್‌ಗಳಿದ್ದರೆ, 2018– 19ರಲ್ಲಿ 125.90 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ. ಅಂದರೆ ಉತ್ಪಾದನೆ 17 ಪಟ್ಟು ಹೆಚ್ಚಾಗಿದೆ.

ಕೌಟಿಲ್ಯನ 'ಅರ್ಥಶಾಸ್ತ್ರ' ಮತ್ತು ರಾಜ ಸೋಮೇಶ್ವರನ 'ಮಾನಸೋಲ್ಲಾಸ' ಗ್ರಂಥಗಳು ಮೀನು ಸಂಸ್ಕೃತಿಯನ್ನು ಉಲ್ಲೇಖಿಸುತ್ತವೆ. ಶತಮಾನಗಳಿಂದಲೂ ಭಾರತವು ಸಣ್ಣ ಕೊಳಗಳಲ್ಲಿ ಸಾಂಪ್ರದಾಯಿಕವಾಗಿ ಮೀನು ಕೃಷಿ ನಡೆಸುತ್ತಾ ಬಂದಿದೆ. 19ನೇ ಶತಮಾನದ ಆರಂಭದಲ್ಲಿ ಟ್ಯಾಂಕ್‌ಗಳಲ್ಲಿ ನಿಯಂತ್ರಿತ ಸಂತಾನೋತ್ಪತ್ತಿಯೊಂದಿಗೆ ಉತ್ಪಾದಕತೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಯಿತು. ಉಪ್ಪುನೀರಿನ ಕೃಷಿಯನ್ನು ಹಳೆಯ ಪದ್ಧತಿಯಲ್ಲಿ ಮಾಡಲಾಗುತ್ತಿತ್ತು. ಸಾಂಪ್ರದಾಯಿಕ ಮೀನುಗಾರಿಕೆ ವಿಧಾನಗಳು ಮಧ್ಯ ಮತ್ತು ದಕ್ಷಿಣ ಭಾರತದಲ್ಲಿ 2000 ವರ್ಷಗಳಿಂದ ಆಚರಣೆಯಲ್ಲಿವೆ.

ಇಂತಹದ್ದೊಂದು ಸುದೀರ್ಘ ಇತಿಹಾಸ ಹೊಂದಿರುವ ಕ್ಷೇತ್ರದಲ್ಲಿ ತೊಡಗಿಕೊಂಡಿರುವವರ ಸಂಕಷ್ಟಗಳತ್ತಲೂ ನಾವು ಗಮನಹರಿಸಬೇಕಾಗಿದೆ. ಶ್ರೀಲಂಕಾ ಮತ್ತು ಪಾಕಿಸ್ತಾನ ನೌಕಾಪಡೆಗಳು ಆಗಾಗ ಭಾರತೀಯ ಮೀನುಗಾರರನ್ನು ಗಡಿ ಉಲ್ಲಂಘನೆ ಆರೋಪದ ಮೇಲೆ ಹಲವು ದಿನಗಳ ಕಾಲ ವಶದಲ್ಲಿ ಇಟ್ಟುಕೊಳ್ಳುತ್ತಿವೆ. ಶ್ರೀಲಂಕಾ ನೌಕಾಪಡೆಯೊಂದಿಗೆ ನಡೆಯುವ ಚಕಮಕಿಗಳು ಸಾವು ನೋವಿಗೆ ಕಾರಣವಾಗುತ್ತಿವೆ. ದೋಣಿಗಳು ಜಖಂಗೊಳ್ಳುತ್ತವೆ. ಇದರಿಂದ ಮೀನುಗಾರರ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೀಡಾಗುತ್ತಿವೆ.

ಎಲ್ಲ ಕ್ಷೇತ್ರಗಳಂತೆ ಮೀನುಗಾರಿಕೆ ಕ್ಷೇತ್ರದಲ್ಲೂ ಅಭಿವೃದ್ಧಿಯ ಮಾತು ಮೀನುಗಾರರ ನಿದ್ದೆಗೆಡಿಸಿದೆ. ಒಳನಾಡು ಮೀನುಗಾರಿಕೆಗೆ ಆದ್ಯತೆ ಸಿಗದೆ ಮೀನುಗಾರರು ಸಂಕಷ್ಟಕ್ಕೀಡಾಗಿದ್ದಾರೆ. ಹೊನ್ನಾವರದ ಬಂದರು ಯೋಜನೆಯಿಂದ ರಿಟ್ಲೆ ಕಡಲಾಮೆ ಮತ್ತು ಇಲ್ಲಿನ ಮೀನುಗಾರರ ಬದುಕು ಅವಸಾನದ ಅಂಚಿನಲ್ಲಿದೆ.

ಮೀನುಗಾರರಿಗೆ ಮನೆ ನಿರ್ಮಿಸಿಕೊಡುವ ಯೋಜನೆ ಕರ್ನಾಟಕದಲ್ಲಿ ಸಮರ್ಪಕವಾಗಿ ಜಾರಿಯಾಗಬೇಕಿದೆ. ಒಳನಾಡು ಮೀನುಗಾರಿಕೆ ಹಾಗೂ ಸಮುದ್ರ ಮೀನುಗಾರಿಕೆಗೆ ಆದ್ಯತೆ ಸಿಗಬೇಕಿದೆ. ಆರೋಗ್ಯ ವಿಮೆ ಪರಿಣಾಮಕಾರಿಯಾಗಿ ಸಿಗಬೇಕಿದೆ. ಮಂಗಳೂರಿನಲ್ಲಿರುವ ಮೀನುಗಾರರ ಶಾಲೆಯಲ್ಲಿ ಮೀನುಗಾರರ ಮಕ್ಕಳಿಗೇ ಪ್ರವೇಶಾವಕಾಶ ಸಿಗುತ್ತಿಲ್ಲ. ಈ ಅವ್ಯವಸ್ಥೆ ಬದಲಾಗಿ, ಆದ್ಯತೆಯ ಮೇರೆಗೆ ಅವಕಾಶ ಸಿಗುವಂತೆ ಆಗಬೇಕು. ಮೀನುಗಾರಿಕೆಯ ಮೂಲಸೌಲಭ್ಯವಾಗಿರುವ ಶೀತಲೀಕರಣ ವ್ಯವಸ್ಥೆ ಕಲ್ಪಿಸುವ ಭರವಸೆ ಇನ್ನೂ ಕೃತಿಗೆ ಇಳಿದಿಲ್ಲ. ಈ ಎಲ್ಲ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ಒದಗಿಸಿಕೊಡಬೇಕಾಗಿದೆ.

ಈ ನಡುವೆ, ಮೀನುಗಾರರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ರಾಷ್ಟ್ರೀಯ ಮೀನುಗಾರರ ಸಂಘ ಕಾರ್ಯೋನ್ಮುಖವಾಗಿದೆ. ಮೊದಲ ಹಂತದಲ್ಲಿ, ಕರ್ನಾಟಕದಲ್ಲಿ ಸರಣಿ ಔಟ್‌ಲೆಟ್‌ಗಳನ್ನು ಸ್ಥಾಪಿಸಿ, ಮೀನು ಸೇರಿದಂತೆ ಸಮುದ್ರ ಆಹಾರಗಳನ್ನು ತಾಜಾ ಆಗಿ ಮಾರಾಟ ಮಾಡಲು ಅದು ಮುಂದಾಗಿರುವುದು ಆಶಾದಾಯಕ ಬೆಳವಣಿಗೆ. ಅಂದಹಾಗೆ, ಇಂದು (ನ. 21) ವಿಶ್ವ ಮೀನುಗಾರಿಕೆ ದಿನ.

ಲೇಖಕ: ಮಕ್ಕಳ ತಜ್ಞ, ಉಪಾಧ್ಯಕ್ಷ, ರಾಷ್ಟ್ರೀಯ ಮೀನುಗಾರರ ಸಂಘ

ವಾಚಕರ ವಾಣಿ

ಕರ್ಕಶ ಸದ್ದು: ಬೇಕು ನಿಯಂತ್ರಣ

ಬೆಂಗಳೂರಿನಲ್ಲಿ ಯುವಕರು ವಾಹನಗಳ ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು, ಕರ್ಕಶ ಶಬ್ದ ಉಂಟುಮಾಡುತ್ತಾ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವ 'ಟ್ರೆಂಡ್' ಕುರಿತು ವರದಿಯಾಗಿದೆ (ಪ್ರ.ವಾ., ನ. 20). ಇಂತಹ ಕ್ರೇಜ್ ರಾಜಧಾನಿಯಲ್ಲಷ್ಟೇ ಅಲ್ಲ ಹಳ್ಳಿಗಳಿಗೂ ಹಬ್ಬಿದೆ. ಜನರ ಗಮನವನ್ನು ತಮ್ಮತ್ತ ಸೆಳೆಯಲು ಕೆಲವು 'ಶೋಕಿವಾಲಾ'ಗಳು ಮಾಡುವ ತಂತ್ರಗಳಿವು. ಸಾಮಾಜಿಕ ಮಾಧ್ಯಮ, ರೀಲ್ಸ್ ಪ್ರಭಾವದಿಂದ ಯುವಜನ ಇಂತಹ ಹುಚ್ಚುತನಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಈ 'ಸೆಲೆಬ್ರಿಟಿಸಂ'ನ ವ್ಯಾಮೋಹ ಮನುಷ್ಯರ ಮನಸ್ಸುಗಳಲ್ಲಿ ಎಷ್ಟರಮಟ್ಟಿಗೆ ಇದೆ ಎಂದರೆ, ಹೇಗಾದರೂ ಸರಿ ಜನ ತಮ್ಮನ್ನು ಗುರುತಿಸಬೇಕು ಎನ್ನುವ ಮನೋಭಾವ ಜಾಸ್ತಿಯಾಗುತ್ತಿದೆ.

ಅತಿವೇಗದ ಬೈಕ್ ಸವಾರಿ, ವಿನಾಕಾರಣ ಹಾರ್ನ್ ಮಾಡುವಂತಹ ಕಸರತ್ತುಗಳ ಮೂಲಕ ಜನ ತಮ್ಮತ್ತ ತಿರುಗಿ ನೋಡುವಂತೆ ಮಾಡಲು ಏನೆಲ್ಲಾ ಸರ್ಕಸ್ ಮಾಡುತ್ತಾರೆ. ಇದರಿಂದ ಜನಸಾಮಾನ್ಯರಿಗೆ ಆಗುವ ತೊಂದರೆಗಳ ಬಗ್ಗೆ ಅವರಿಗೆ ಅರಿವಿರುವುದಿಲ್ಲ. ಮಾರ್ಪಡಿಸಿದ ಸೈಲೆನ್ಸರ್‌ಗಳಿಂದ ಶಬ್ದಮಾಲಿನ್ಯ ಮತ್ತು ವಾಯುಮಾಲಿನ್ಯ ಏಕಕಾಲದಲ್ಲಿ ಆಗುತ್ತವೆ. ಅಜಾಗರೂಕ ವಾಹನ ಚಾಲನೆಯಿಂದಲೇ ಅಪಘಾತಗಳಾಗುವ ಸಂದರ್ಭಗಳು ಹೆಚ್ಚು. ಸೈಲೆನ್ಸರ್ ಮೋಜು ಒಂದೆಡೆಯಾದರೆ, ರೀಲ್ಸ್ ಮೋಹಕ್ಕೆ ಬಲಿಯಾದವರ ಉದಾಹರಣೆಗಳೂ ಇವೆ. ಖುಷಿ- ಮನರಂಜನೆಯ ಹೊರತಾಗಿ ಇಂತಹ ಅದೆಷ್ಟೋ ವಿಚಾರಗಳಲ್ಲಿ ಇಂದಿನ ಯುವಪೀಳಿಗೆ ಹಾದಿ ತಪ್ಪುತ್ತಿರುವುದು ಶೋಚನೀಯ. ಈ ಬಗ್ಗೆ ಸಂಚಾರ ಪೊಲೀಸರು ಶೀಘ್ರವೇ ಕ್ರಮ ಕೈಗೊಳ್ಳುವುದು ಅಗತ್ಯ.

ಮಂಜುನಾಥ್ ಹಾಲವರ್ತಿ, ಕೊಪ್ಪಳ

ಉಪಯುಕ್ತ ಪುಸ್ತಕಕ್ಕೇಕೆ ಈ ಪರಿ ಬೆಲೆ?

ಜಿ.ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ವಿದ್ವಜ್ಜನರ ಪರಿಶ್ರಮದಿಂದ 'ಕನ್ನಡ ರತ್ನಕೋಶ'ವನ್ನು ಹೊರತಂದಿದ್ದರು. ಆಗ ಅದರ ಬೆಲೆ ಬರೀ ₹ 2 ಆಗಿತ್ತು. 2010ರಲ್ಲಿ ಅದರ ಪರಿಷ್ಕೃತ ಆವೃತ್ತಿಯ ಬೆಲೆ ₹ 20 ಆಯಿತು. 2019ರಲ್ಲಿ ಅದರ ಪುನರ್‌ಮುದ್ರಿತ ಬೆಲೆ ₹ 50. ಅದರ ಯಥಾವತ್ ಪುನರ್‌ಮುದ್ರಿತ ಬೆಲೆ ಈಗ ₹ 80ಕ್ಕೆ ಏರಿದೆ.

ಪ್ರತಿ ಕನ್ನಡಿಗನ ಮನೆಯಲ್ಲಿ ಇರಬೇಕಾದ ಈ ಉಪಯುಕ್ತ ಪುಟ್ಟ ಪುಸ್ತಕದ ಬೆಲೆಯನ್ನು ಎರಡು ರೂಪಾಯಿಯಿಂದ ಎಂಬತ್ತು ರೂಪಾಯಿಗೆ ಏರಿಸುವಾಗ ವಾಸ್ತವಿಕ ಲೆಕ್ಕಾಚಾರವೊಂದು ಇರಬೇಕಲ್ಲವೇ? ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಈ ಹಿಂದಿನವರೇ ಸಿದ್ಧಪಡಿಸಿಟ್ಟು ಹೋದ ಅದರ ಪಠ್ಯ- ಸಾಮಗ್ರಿ ಇದೆ, ಪರಿಷತ್ತಿನದೇ ಆದ ಮುದ್ರಣಾಲಯ ಇದೆ, ಕೆಲಸ ಮಾಡುವ ಸಿಬ್ಬಂದಿಯೂ ಇದ್ದಾರೆ. ಪುನರ್‌ಮುದ್ರಣಕ್ಕೆ ಬೇಕಾದ ಕಾಗದ ಮಾತ್ರವೇ ಇಲ್ಲಿ ಖರ್ಚಾಗಿರುವುದು. ಅಷ್ಟಾದರೂ ಈ ಪುಸ್ತಕದ ಬೆಲೆಯನ್ನು ಈ ಪರಿ ಏರಿಸುವುದು ಎಷ್ಟು ಸರಿ?

ಈರಪ್ಪ ಎಂ. ಕಂಬಳಿ, ಬೆಂಗಳೂರು

ಕೃಷಿಮೇಳ: ಅನಪೇಕ್ಷಿತ ರೂಪಾಂತರ

ಕೃಷಿಮೇಳಗಳ ಅನಪೇಕ್ಷಿತ ರೂಪಾಂತರವನ್ನು ಮಣ್ಣೆರಾಜು ಅವರ 'ಖುಷಿ ಮೇಳ' ಚುರುಮುರಿ (ಪ್ರ.ವಾ., ನ. 20) ಬಯಲುಗೊಳಿಸಿದೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಅಧ್ಯಾಪಕನಾದ ನಾನು, ರಾಜ್ಯದ ವಿವಿಧ ಕೃಷಿಮೇಳಗಳಲ್ಲಿನ ಬದಲಾವಣೆಗಳನ್ನು ನಾಲ್ಕು ದಶಕಗಳಿಂದ ತೀವ್ರವಾಗಿ ಗಮನಿಸುತ್ತಾ ಬಂದಿದ್ದೇನೆ. ತಾಕುಗಳಲ್ಲಿನ ಬೆಳೆ ದರ್ಶನ ಮತ್ತು ಅದರಿಂದ ರೈತರಿಗೆ ಬೇಸಾಯ ಪದ್ಧತಿ ಕುರಿತು ಉಪಯುಕ್ತ ಮಾಹಿತಿ ಒದಗಿಸುವ ಪ್ರಮುಖ ಉದ್ದೇಶದಿಂದ ಪ್ರಾರಂಭವಾದಂತಹವು ಈ ಕೃಷಿಮೇಳಗಳು.

ಈಗ ವಾಣಿಜ್ಯೀಕರಣದ ಪ್ರಭಾವದಿಂದ (?) ತರಹೇವಾರಿ ವಸ್ತುಪ್ರದರ್ಶನಗಳಾಗಿ ಅವು ಮಾರ್ಪಟ್ಟಿರುವುದು ಹಿತವೆನಿಸದು. ಜೊತೆಗೆ, ನಮ್ಮ ವಿಶ್ವವಿದ್ಯಾಲಯಗಳ ಧೋರಣೆಗಳು ಮತ್ತು ಕೃಷಿಕರ ಆಸಕ್ತಿಗಳು ಮೂಲ ಉದ್ದೇಶವನ್ನೇ ಮರೆಸುವಷ್ಟು ಬದಲಾದವೇ ಎಂಬ ಗುಮಾನಿ ಕಾಡುತ್ತಿದೆ.

ಅನಿಲಕುಮಾರ ಮುಗಳಿ, ಧಾರವಾಡ

ಗುರಿಯಿಲ್ಲದ ವಿವಾದ ಅಂತ್ಯವಾಗುವುದೆಂದು?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಗೊತ್ತು ಗುರಿಯಿಲ್ಲದ ವಿವಾದಗಳು ಅಂತ್ಯವಾಗುವ ಸೂಚನೆಯೇ ಕಾಣುತ್ತಿಲ್ಲ. ಮಂಡ್ಯದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಸಾಹಿತಿಗಳ ಸಭೆಯಲ್ಲಿ, ಸಾಹಿತ್ಯಕ್ಕೆ ಸಂಬಂಧವೇ ಇಲ್ಲದ ವಾಗ್ವಾದ, ಬಹಿರಂಗ ಜಗಳವೂ ನಡೆದಿರುವುದು ತೀರಾ ಅನಪೇಕ್ಷಣೀಯವಾಗಿತ್ತು. 'ಮುಖ್ಯಮಂತ್ರಿ ಹಾಗೂ ಸಚಿವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಮನೆಗೆ ಬರಬೇಕು, ನಾವು ಅವರ ಮನೆಗೆ ಹೋಗುವುದಲ್ಲ' ಎಂಬ ಜೋಶಿ ಅವರ ಮಾತು ಏಕಾಏಕಿ ಎಲ್ಲಿಂದ ಬಂತು? ಇದೇ ಜೋಶಿಯವರು ಪರಿಷತ್ತಿನ ಅಧ್ಯಕ್ಷ ಗಾದಿಗೆ ಅಭ್ಯರ್ಥಿಯಾಗಿದ್ದಾಗ, ಬಿಜೆಪಿಯ ಕಚೇರಿಯಲ್ಲಿ ಸ್ವತಃ ಪ್ರಚಾರ ಮಾಡಿದ್ದರಲ್ಲವೇ? ಆಗ ಇವರ ಈಗಿನ ಘನತೆ ಎಲ್ಲಿ ಹೋಗಿತ್ತು?

ಪ್ರೊ. ಬಿ.ಕೆ.ಚಂದ್ರಶೇಖರ್, ಬೆಂಗಳೂರು

ಅವೈಜ್ಞಾನಿಕ ಹೇಳಿಕೆ ಸಲ್ಲ

'ವೇದಕಾಲದ ಋಷಿ ಭಾರಧ್ವಾಜ ಮೊದಲಿಗೆ ವಿಮಾನದ ಪರಿಕಲ್ಪನೆಯನ್ನು ಮೂಡಿಸಿದ್ದರು. ಆದರೆ ಆವಿಷ್ಕಾರದ ಗೌರವವು ರೈಟ್ ಸಹೋದರರ ಪಾಲಾಯಿತು' ಎಂದು ಉತ್ತರಪ್ರದೇಶದ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಅವರು ಹೇಳಿರುವುದು ಅವೈಜ್ಞಾನಿಕ ಅಷ್ಟೇ ಅಲ್ಲ ಆಧಾರರಹಿತವಾಗಿದೆ. ಇಂಥ ಮೂಢನಂಬಿಕೆಯಿಂದ, ವಿಜ್ಞಾನದಲ್ಲಿ ನಂಬಿಕೆ ಇಟ್ಟಿರುವವರ ಮನಃಸ್ಥಿತಿಯನ್ನೇನೂ ಬದಲಾಯಿಸಲು ಸಾಧ್ಯವಿಲ್ಲ. ಯಾವ ಸಂಶೋಧನೆಯನ್ನು ಯಾವ ದೇಶದವರೇ ಮಾಡಿರಲಿ ಅದನ್ನು ಒಪ್ಪಿಕೊಂಡು ಗೌರವಿಸಿ 'ವಿಶ್ವಮಾನವ'ರಾಗೋಣ. ಈ ಬಗೆಯ ಹೇಳಿಕೆಗಳು ಭಾರತವನ್ನು ವೈಜ್ಞಾನಿಕ ಮನೋಭಾವದಿಂದ ಹಿಂದೆ ಸರಿಯುವಂತೆ ಮಾಡುತ್ತವೆ ಎನ್ನುವುದನ್ನು ಹೇಳಿಕೆ ಕೊಡುವ ಅಧಿಕಾರಸ್ಥರು ಅರಿತುಕೊಳ್ಳುವುದು ಒಳಿತು.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡ ಸಿನಿಮಾ: ಸಮೃದ್ಧ ಸಂಸ್ಕೃತಿಯಿಂದ 'ಪ್ಯಾನ್‌–ಇಂಡಿಯಾ' ಬಾಣಲೆವರೆಗೆ

● ವಿಶಾಖ ಎನ್.

ಮದ್ರಾಸ್‌ಗೆ ಹೋಗಿ ಮೇಕಪ್ ಟೆಸ್ಟ್ ಕೊಟ್ಟು ಬಂದಿದ್ದ ಮುತ್ತುರಾಜ್ ಅವರಿಗೆ ಅದಾಗಲೇ ಮದುವೆ ಆಗಿತ್ತು. ರಂಗಭೂಮಿಯಲ್ಲಿ ಹುಟ್ಟುತ್ತಿದ್ದ ಚಿಕ್ಕಾಸಿನಿಂದ ಸಂಸಾರದ ರಥ ಎಳೆಯುವುದು ಹೇಗೋ ಎಂಬ ಪ್ರಶ್ನೆ. ಮೇಕಪ್ ಟೆಸ್ಟ್ ಕೊಟ್ಟು ಬಂದು, ದಿನಗಳು ಉರುಳಿದರೂ ಅತ್ತಣಿಂದ ಏನೂ ಸಂದೇಶವಿಲ್ಲ. ನಿತ್ಯವೂ ಅಂಚೆಯ ಅಣ್ಣನಿಗಾಗಿ ಕಾಯುವುದೇ ಬಂತು. ಅದೊಂದು ದಿನ ಅವರು ಎಲ್ಲ ಕಷ್ಟಗಳನ್ನು ಕರಗಿಸುವ ಏನಾದರೊಂದು ಆಗಬಾರದೇ ಎಂದುಕೊಂಡು, ಮನಸ್ಸಿನ ತುಂಬಾ ನಿರೀಕ್ಷೆಯ ಹುಳುಗಳನ್ನು ಬಿಟ್ಟುಕೊಂಡು ಅಭ್ಯಂಜನ ಮಾಡುತ್ತಿದ್ದರು. ಆಗ ಹೊರಗಿನಿಂದ ಅಂಚೆಯ ಅಣ್ಣನ ಕೂಗು. ಮೇಕಪ್ ಟೆಸ್ಟ್ ಹಣ್ಣಾದ ರಸಗಳಿಗೆ ಅದು. ಅಂದು ಚಾತಕಪಕ್ಷಿಯಾಗಿದ್ದ ಮುತ್ತುರಾಜ್, ಮುಂದೆ ವರನಟ ಎಂಬ ವಿಶೇಷಣ ಗಳಿಸಿಕೊಂಡ ಶ್ರಮದ ಕಥನ ನಮ್ಮ ಕಣ್ಣೆದುರಲ್ಲಿದೆ.

ಸ್ವಾತಂತ್ರ್ಯಾನಂತರದ ಏಳು ವರ್ಷಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಒದಗಿಬಂದ ಮುತ್ತು ರಾಜಕುಮಾರ್. ಮೈಸೂರು ರಾಜ್ಯವು ಕರ್ನಾಟಕ ಎಂದು ಹೆಸರಾಗುವ ಹೊತ್ತಿಗೆ ಈ ನಟ ಚಿತ್ರರಂಗಕ್ಕೆ ಕೊಟ್ಟಿದ್ದ ಸ್ಮರಣೀಯ ಸಿನಿಮಾಗಳ ಪಟ್ಟಿ ಬೆಳೆದಿತ್ತು. 'ಬೇಡರ ಕಣ್ಣಪ್ಪ'ನಾಗಿ ಪ್ರವೇಶಿಸಿದ್ದ ರಾಜಕುಮಾರ್, 'ಬಂಗಾರದ ಮನುಷ್ಯ'ನಾಗಿ ಕಟ್ಟಿಕೊಟ್ಟ ಒಕ್ಕಲುತನದ ಗಟ್ಟಿ ತೆನೆ ತೂಗಿದ್ದು 1972ರಲ್ಲಿ. ನಿರ್ದೇಶಕ ಎಸ್.ಸಿದ್ದಲಿಂಗಯ್ಯನವರ ಸಾಮಾಜಿಕ ಸೂಕ್ಷ್ಮದ ರುಜು ಇದ್ದ ಈ ಸಿನಿಮಾ ನೋಡಿ ಉಳುವ ಯೋಗಿಗಳಾಗಲು ಹೊರಟ ಪದವೀಧರರ ಸಂಖ್ಯೆ ದೊಡ್ಡದಿತ್ತು. ಕನ್ನಡ ಸಂಸ್ಕೃತಿಯ 'ಐಕಾನ್' ಆಗಿ ರಾಜಕುಮಾರ್ ಅವರಿತ್ತ ಪ್ರಭಾವಳಿಯಲ್ಲಿಯೇ ಇಡೀ ಕನ್ನಡ ಚಿತ್ರರಂಗವನ್ನು 'ಸುವರ್ಣ ಕರ್ನಾಟಕ'ದ ಸಂದರ್ಭದಲ್ಲಿ ನಾವು ನೋಡಬೇಕಿದೆ.

1970–80ರ ದಶಕದಲ್ಲಿ ತಾರಾ ನಟರಾದ ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್, ಅನಂತನಾಗ್, ಶಂಕರ್‌ನಾಗ್ ಎಲ್ಲರೂ ವರ್ಷಕ್ಕೆ ಏಳೆಂಟು ಸಿನಿಮಾಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಅವುಗಳಲ್ಲಿ ಬಹುತೇಕವು ಕೆಲವೇ ತಿಂಗಳುಗಳಲ್ಲಿ ಬಿಡುಗಡೆಯೂ ಆಗುತ್ತಿದ್ದವು. ಶಂಕರ್‌ನಾಗ್ ಮೂರು ಶಿಫ್ಟ್‌ಗಳಲ್ಲಿ ಅಭಿನಯಿಸುತ್ತಿದ್ದುದೇ ಅಲ್ಲದೆ, ಮಹತ್ವಾಕಾಂಕ್ಷಿ ನಿರ್ದೇಶಕರೂ ಆಗಿದ್ದರು. ಶಿವರಾಜಕುಮಾರ್ ಅವರ ಆರಂಭದ ದಿನಗಳೂ ಹಾಗೆಯೇ ಇದ್ದವು. ರವಿಚಂದ್ರನ್, ಜಗ್ಗೇಶ್, ರಾಘವೇಂದ್ರ ರಾಜಕುಮಾರ್, ರಮೇಶ್, ಸುನಿಲ್, ಶಶಿಕುಮಾರ್, ಸುದೀಪ್, ದರ್ಶನ್, ಉಪೇಂದ್ರ, ಪುನೀತ್ ರಾಜಕುಮಾರ್, ವಿಜಯ್ ರಾಘವೇಂದ್ರ, ಗಣೇಶ್, ದುನಿಯಾ ವಿಜಯ್, ಶ್ರೀಮುರಳಿ, ದಿಗಂತ್, ಧ್ರುವ ಸರ್ಜಾ, ಪ್ರಜ್ವಲ್ ದೇವರಾಜ್, ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ, ಡಾಲಿ ಧನಂಜಯ... ಈ ನಟರು ಏಕಕಾಲದಲ್ಲಿ ತೊಡಗುತ್ತಿರುವ ಸಿನಿಮಾಗಳ ಸಂಖ್ಯೆಯನ್ನು ಹಳೆಯ ತಾರಾನಟರ ಜೊತೆಗೆ ಹೋಲಿಸಲು ಸಾಧ್ಯವೇ ಇಲ್ಲ. ಪುನೀತ್ ಅವರು ಒಮ್ಮೆಗೆ ಒಂದೇ ಸಿನಿಮಾ ಎನ್ನುವ ಬದ್ಧತೆಯನ್ನು ತಮ್ಮದಾಗಿಸಿಕೊಂಡಿದ್ದರು.

'ಕೆಜಿಎಫ್' ಸರಣಿ ಸಿನಿಮಾಗಳಿಂದ ನಟ ಯಶ್ ಪ್ಯಾನ್‌–ಇಂಡಿಯಾ ಎನ್ನುವ ಮಾದರಿಯನ್ನು ತೇಲಿಬಿಟ್ಟ ನಂತರ ಚಿತ್ರ ನಿರ್ಮಾಪಕರ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಿದೆ. ಕಾರ್ಪೊರೇಟ್–ಕಂಪನಿ ಸಂಸ್ಕೃತಿಯ ರೀತಿಯಲ್ಲಿ ದೊಡ್ಡ ಬಜೆಟ್‌ನ ಚಿತ್ರಗಳದ್ದು ಈಗ ಪ್ರತ್ಯೇಕ ಪ್ರಭೇದ. ಕನ್ನಡ ಚಿತ್ರಗಳನ್ನು ಮೂಸದ ಒಟಿಟಿ ವೇದಿಕೆಗಳಿಗೆ ಶಾಪ ಹಾಕುತ್ತಲೇ, ಹೊಸ ಪ್ರಯತ್ನಗಳನ್ನು ಬೆಂಬಲಿಸಲು ಜನರು ಚಿತ್ರಮಂದಿರಗಳಿಗೆ ಬರುತ್ತಿಲ್ಲವಲ್ಲ ಎಂಬ ನಿಟ್ಟುಸಿರನ್ನೂ ಅನೇಕ ಉತ್ಸಾಹಿಗಳು ದಾಟಿಸುತ್ತಿರುವ ಹೊತ್ತಿದು.

ಗತದಿಂದ ಈ ಪಥದವರೆಗೆ...

ಗುಬ್ಬಿ ವೀರಣ್ಣ, ಆರ್.ನಾಗೇಂದ್ರ ರಾವ್, ಸುಬ್ಬಯ್ಯ ನಾಯ್ಡು, ಬಿ.ಆರ್.ಪಂತುಲು ಅವರಂತಹ ದಿಗ್ಗಜರು ಹಾಕಿಕೊಟ್ಟ ಬುನಾದಿಯ ಮೇಲೆ ರಾಜಕುಮಾರ್ ಅವರದ್ದಷ್ಟೇ ಅಲ್ಲ, ಉದಯಕುಮಾರ್, ಕಲ್ಯಾಣಕುಮಾರ್, ನರಸಿಂಹರಾಜು, ಟಿ.ಎನ್. ಬಾಲಕೃಷ್ಣ ತರಹದ ಪ್ರತಿಭಾವಂತ ನಟರ ಯಶೋ ಮೆರವಣಿಗೆ ನಡೆದಿತ್ತು. ಜಿ.ವಿ. ಅಯ್ಯರ್, ಪುಟ್ಟಣ್ಣ ಕಣಗಾಲ್, ದೊರೈ–ಭಗವಾನ್ ರೀತಿಯ ಭಿನ್ನ ಜಾಯಮಾನದ ಸಿನಿಮಾಗಳನ್ನು ಕೊಡಬಲ್ಲ ಮನಸ್ಸುಗಳು ಅರಳಿದ್ದಾಗಿತ್ತು. 'ನಾಂದಿ' ಚಿತ್ರದ ಮೂಲಕ ನಿರ್ದೇಶಕ ಎನ್.ಲಕ್ಷ್ಮೀನಾರಾಯಣ್ 1964ರಲ್ಲಿಯೇ ಹೊಸ ಅಲೆಯ ಚಿತ್ರಗಳ ಫಸಲಿಗೆ ಕಾರಣವಾಗಬಲ್ಲ ಬೀಜ ಚೆಲ್ಲಿದ್ದರು.1970ರ ಹೊತ್ತಿಗೆ 'ಸಂಸ್ಕಾರ' ಚಿತ್ರವು ಹೊಸ ಅಲೆಯ ಉಬ್ಬರಕ್ಕೆ ಮುನ್ನುಡಿಯಾಯಿತು.

ಪಟ್ಟಾಭಿರಾಮ ರೆಡ್ಡಿ ನಿರ್ದೇಶನದ 'ಸಂಸ್ಕಾರ' ಯು.ಆರ್. ಅನಂತಮೂರ್ತಿ ಅವರ ಕಥೆಯನ್ನು ಆಧರಿಸಿತ್ತು. ಕನ್ನಡಕ್ಕೆ ಮೊದಲ ಸ್ವರ್ಣ ಕಮಲವನ್ನು ಈ ಸಿನಿಮಾ ತಂದು ಕೊಟ್ಟಿತು. 'ವಂಶವೃಕ್ಷ', 'ಚೋಮನ ದುಡಿ', 'ಘಟಶ್ರಾದ್ಧ', 'ಅಬಚೂರಿನ ಪೋಸ್ಟಾಫೀಸು', 'ಸಂಕಲ್ಪ' ಇವೆಲ್ಲವೂ ಹೊಸ ಅಲೆಯ ಮೂಲಕ ದಕ್ಕಿದ ಸ್ಮರಣೀಯ ಚಿತ್ರಗಳು. ಆಮೇಲೆ ಇದೇ ನೆಲೆಗಟ್ಟಿನಲ್ಲಿ ಗಿರೀಶ ಕಾಸರವಳ್ಳಿಯವರು ತಮ್ಮದೇ ವ್ಯಾಕರಣದ ಭಿನ್ನ ಚಿತ್ರಗಳನ್ನು ಕಾಣ್ಕೆಯಾಗಿ ಕೊಟ್ಟರು. 'ಘಟಶ್ರಾದ್ಧ' ಅವರ ಮೊದಲ ಚಿತ್ರವಾದರೂ ದೊಡ್ಡ ಮಟ್ಟದ ಯಶಸ್ಸು ಕಂಡಿತ್ತು. ಅವರ ನಿರ್ದೇಶನದ 'ತಬರನ ಕಥೆ', 'ತಾಯಿಸಾಹೇಬ', 'ದ್ವೀಪ', 'ಹಸೀನಾ', 'ಗುಲಾಬಿ ಟಾಕೀಸ್' 'ಕನಸೆಂಬೋ ಕುದುರೆಯನೇರಿ', 'ಕೂರ್ಮಾವತಾರ' ಇವುಗಳೆಲ್ಲ ಕಥಾವೈವಿಧ್ಯ ಅಷ್ಟೇ ಅಲ್ಲದೆ ನಿರೂಪಣಾ ತಂತ್ರ, ಹಲವು ಕನ್ನಡಗಳ ಪ್ರಯೋಗಗಳಿಗೂ ಸಾಕ್ಷ್ಯಗಳಾಗಿ ಉಳಿದಿವೆ. ನಾಲ್ಕು 'ಸ್ವರ್ಣ ಕಮಲ'ಗಳನ್ನು ಕನ್ನಡಕ್ಕೆ ದಕ್ಕಿಸಿಕೊಟ್ಟ ಪ್ರತಿಭೆ ಅವರು. ಪಿ.ಲಂಕೇಶ್, ಟಿ.ಎನ್. ಸೀತಾರಾಂ, ಕೋಟಿಗಾನಹಳ್ಳಿ ರಾಮಯ್ಯ ಅವರಂತಹ ಸಾಹಿತಿಗಳಿಗೂ ಸಿನಿಮಾ ನಂಟು ಸಂದುದು ಈ ಮಾಧ್ಯಮದ ಚುಂಬಕಶಕ್ತಿಗೆ ಸಾಕ್ಷಿ.

ಬಿ.ವಿ. ಕಾರಂತರ 'ಚೋಮನದುಡಿ' ಪಾತ್ರಧಾರಿ ವಾಸುದೇವ ರಾವ್ ಅವರಿಗೆ ಅಭಿನಯಕ್ಕೆ ರಾಷ್ಟ್ರ ಪ್ರಶಸ್ತಿ ಸಂದಿತು. ಅದಾದಮೇಲೆ 'ತಬರನ ಕಥೆ'ಯ ನಟನೆಗಾಗಿ ಚಾರುಹಾಸನ್, 'ನಾನು ಅವನಲ್ಲ ಅವಳು' ಸಿನಿಮಾದಲ್ಲಿನ ಅಭಿನಯಕ್ಕಾಗಿ 'ಸಂಚಾರಿ' ವಿಜಯ್ ಹಾಗೂ 'ಕಾಂತಾರ' ನಟನೆಗಾಗಿ ರಿಷಬ್ ಶೆಟ್ಟಿ ಈ ಪ್ರಶಸ್ತಿಗೆ ಭಾಜನರಾದರು.

ಕಾಸರವಳ್ಳಿಯವರಿಂದ ಸ್ಫೂರ್ತಿ ಪಡೆದೂ ತಮ್ಮತನದ ಸಿನಿಮಾಗಳನ್ನು ಮಾಡಿದ ಪಿ. ಶೇಷಾದ್ರಿ, ಬಿ.ಎಸ್. ಲಿಂಗದೇವರು ಕೂಡ ಹೊಸತೇ ಉದಾಹರಣೆಗಳನ್ನು ಉಳಿಸಿದ್ದಾರೆ. ಸಾಮಾಜಿಕ ಸಂದೇಶದ ಮಾಧ್ಯಮವನ್ನಾಗಿ ಜನಪ್ರಿಯ ಸಿನಿಮಾ ಹಾಗೂ ಪರ್ಯಾಯ ಸಿನಿಮಾ ಎರಡನ್ನೂ ದುಡಿಸಿಕೊಂಡು ಅದನ್ನು 'ಬ್ರಿಜ್' ಪ್ರಕಾರ ಎಂದೇ ಕರೆದವರು ಬರಗೂರು ರಾಮಚಂದ್ರಪ್ಪ. ತಾಲ್ಲೂಕು ಮಟ್ಟದಲ್ಲಿ ತಮ್ಮ ಚಿತ್ರಗಳ ಪ್ರದರ್ಶನ ಆಯೋಜಿಸುವಂತಹ ಪ್ರಯೋಗಕ್ಕೂ ಅವರು ನೀರೆರೆದರು.

'ನಾಗಮಂಡಲ', 'ಮೈಸೂರು ಮಲ್ಲಿಗೆ', 'ಜನುಮದ ಜೋಡಿ' ರೀತಿಯ ಸಿನಿ ಹೂಗಳನ್ನು ಕಟ್ಟಿದ ಟಿ.ಎಸ್. ನಾಗಾಭರಣ ಅವರದ್ದು ಇನ್ನೊಂದು ಫಾರ್ಮ್. ನಾಗತಿಹಳ್ಳಿ ಚಂದ್ರಶೇಖರ್ 'ಅಮೆರಿಕ ಅಮೆರಿಕ' ರೀತಿಯ ಸಾಗರದಾಚೆಗೆ ಹೋಗಿ ಚಿತ್ರೀಕರಣ ನಡೆಸುವ ಸಾಹಸವನ್ನು ಮೈಮೇಲೆ ಎಳೆದುಕೊಂಡರು. ಉಮಾಶಂಕರ ಸ್ವಾಮಿ, ಕೆ. ಶಿವರುದ್ರಯ್ಯ, ರಾಮ್ ರೆಡ್ಡಿ, ಸತ್ಯಪ್ರಕಾಶ್, ಅಭಯಸಿಂಹ, ಮಂಸೋರೆ, ನಟೇಶ್ ಹೆಗಡೆ, ಉತ್ಸವ್ ಗೋನವಾರ್, ಪೃಥ್ವಿ ಕೊಣನೂರು ಇವರೆಲ್ಲ ಆಯಾ ಕಾಲಘಟ್ಟದಲ್ಲಿ ನೆನಪಿನಲ್ಲಿ ಇಡುವಂತಹ ಸಿನಿಪ್ರಯೋಗಗಳಿಗೆ ಕೈಹಾಕಿದವರು.

ರಾಜಕುಮಾರ್ ಅದಾಗಲೇ ಭೂಮಿಕೆಯ ರೂಪದಲ್ಲಿ ಹಾಕಿಕೊಟ್ಟಿದ್ದ ಜನಪ್ರಿಯ ಸಿನಿಮಾ ಮಾದರಿಯಲ್ಲಿಯೇ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಭಾರ್ಗವ, ಜಿ.ರಾಜಶೇಖರ್, ಗೀತಪ್ರಿಯ, ಎಸ್.ನಾರಾಯಣ್, ರಾಜೇಂದ್ರ ಬಾಬು, ವಿಜಯ್ ಅವರಂತಹ ನಿರ್ದೇಶಕರು ಛಾಪು ಮೂಡಿಸಿದರು.

ನಟ–ತಂತ್ರಜ್ಞರ ಹುಲ್ಲುಗಾವಲು

ರವಿಚಂದ್ರನ್ ಕನ್ನಡ ಚಿತ್ರರಂಗದ ತಾಂತ್ರಿಕ ಶ್ರೀಮಂತಿಕೆಗೆ 'ಪ್ರೇಮಲೋಕ', 'ರಣಧೀರ' ಮೂಲಕ ಕಾಣ್ಕೆ ನೀಡಿದರೆ, ಜಗ್ಗೇಶ್ ನಗೆರುಜುವಿನ ಮೂಲಕ ಗುರುತಾದರು. ಶಿವರಾಜಕುಮಾರ್ ಪಥದಲ್ಲಿಯೇ ಹೆಜ್ಜೆ ಹಾಕಿದ ಸುದೀಪ್, ದರ್ಶನ್ ಕನ್ನಡ ಸಿನಿಮಾಗಳಲ್ಲಿ ತೆಲುಗಿನ ಜಾಯಮಾನದ ರೌಡಿಸಂ ಸಿನಿಮಾಗಳ ಪ್ರಭೇದದ ಪರೀಕ್ಷೆಗೂ ಒಡ್ಡಿಕೊಂಡರು. ಸುದೀಪ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನಿರ್ದೇಶನಕ್ಕೂ ಇಳಿದು ಪ್ರಯೋಗಮುಖಿ ಆದರು. ನಟ ದುನಿಯಾ ವಿಜಯ್ ಕೂಡ ನಿರ್ದೇಶಕನಾಗಿ ಎರಡು ಗೆಲುವುಗಳನ್ನು ದಾಖಲಿಸಿದ್ದಾರೆ.

ಬೇರೆ ಚಿತ್ರರಂಗದವರಿಗೂ ಕನ್ನಡ ಸಿನಿಮಾ ಪ್ರಯೋಗಶಾಲೆಯಾಗಿದ್ದಕ್ಕೆ ಕೆಲವು ಉದಾಹರಣೆಗಳಿವೆ. ಕೆ. ಬಾಲಚಂದರ್, ಸಿಂಗೀತಂ ಶ್ರೀನಿವಾಸ್, ಪೂರಿ ಜಗನ್ನಾಥ್ ಇದಕ್ಕೆ ಕೆಲವು ಉದಾಹರಣೆಗಳಷ್ಟೆ.

ಹೊಸ ಸಹಸ್ರಮಾನದಲ್ಲಿ 'ಮುಂಗಾರು ಮಳೆ' ಸುರಿಯಿತು. ನಿರ್ದೇಶಕ–ಚಿತ್ರ ಸಾಹಿತಿ ಯೋಗರಾಜ ಭಟ್ಟರು ಮಧುರಕಾವ್ಯವನ್ನೂ, ತ್ಯಾಗರಾಜನಂತಹ ನಾಯಕನ ಹುಟ್ಟಿಗೆ ಕಾರಣವಾದ ಬರವಣಿಗೆಯನ್ನೂ ಮೂಡಿಸಿದರು. ನಿರ್ದೇಶಕ ಸೂರಿ 'ದುನಿಯಾ'ದಂತಹ ಕಚ್ಚಾ ಮಾದರಿಯ ಸಿನಿಮಾದಿಂದ ತಮ್ಮದೇ ವ್ಯಾಕರಣವೊಂದನ್ನು ಮೂಡಿಸಿದರು. ರಂಗಕರ್ಮಿ ಸೂರಿ ಜೊತೆಗೂಡಿ ಅವರು ಕೆಲವು ಚಿತ್ರಗಳ ಬರವಣಿಗೆಯ ಪ್ರಯೋಗ ಮಾಡಿದ್ದು ಇನ್ನೊಂದು ಗಮನಾರ್ಹ ಅಂಶ. ನಿರ್ದೇಶಕ ಶಶಾಂಕ್ ಕೂಡ ಸ್ತ್ರೀ ಪಾತ್ರಗಳಿಗೆ ಜೀವ ತುಂಬಿ ಕೆಲವು ಚಿತ್ರಗಳನ್ನು ಕೊಟ್ಟರು. ಹೊಸತನವನ್ನು ಅನುಭವಿಸುವ ಜಾಯಮಾನದ ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ, ರಾಜ್ ಬಿ. ಶೆಟ್ಟಿ ಒಂದು ರೀತಿಯಲ್ಲಿ ಮುಷ್ಟಿಗೆ ಸುರಿದ ತಾರೆಗಳ ಬೆಳಕನ್ನು ಹೊತ್ತು ಇದೀಗ ಮುನ್ನಡೆಯುತ್ತಿದ್ದಾರೆ.

ಕನ್ನಡದ ಮೇರುನಟರೆಲ್ಲ 1970–80ರ ದಶಕದಲ್ಲಿ ವರ್ಷಕ್ಕೆ ಏಳೆಂಟು ಸಿನಿಮಾಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಈಗ ಎರಡು ಮೂರು ವರ್ಷಕ್ಕೆ ಒಂದು ಸಿನಿಮಾ ಕೈಗಿಡುವ ತಾರಾಬಳಗವನ್ನು ನೋಡಿದರೆ ನಿರ್ಮಾಪಕ ವರ್ಗ ಬೆಚ್ಚುತ್ತಿದೆ. ಹೊಸ ಕಾಲದ ಸಿನಿಮಾ ಸಂಕಷ್ಟಗಳ ಪಡಸಾಲೆಯಲ್ಲಿ ಕುಳಿತು ಹಳೆಯ ಸಂಕ್ರಮಣ ಕಾಲವನ್ನು ನೆನಪಿಸಿಕೊಳ್ಳಲು ದಂಡಿಯಾಗಿ ಕಾರಣಗಳಂತೂ ಸಿಗುತ್ತಿವೆ



ಕನ್ನಡ ಚಿನ್ನದ ಹೊಳಪು

ಬಗೆ ಬಗೆ ಸಂವೇದನೆ

ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ, ರಾಜ್ ಬಿ. ಶೆಟ್ಟಿ ಕನ್ನಡ ಚಿತ್ರರಂಗಕ್ಕೆ ಹೊಸತನದ ಚುಚ್ಚುಮದ್ದನ್ನು ಕೊಟ್ಟವರಲ್ಲಿ ಮುಖ್ಯರಾದವರು. ಬೇರೆ ಬಗೆಯ ಸಂವೇದನೆಯನ್ನು, ತಾಂತ್ರಿಕ ಪರಿಭಾಷೆಯನ್ನು ಅವರು ಚಿತ್ರರಂಗಕ್ಕೆ ನೆಲದನಿಯ ಸಹಿತ ತಂದರು. ಪ್ರೇಮ್, ಆರ್. ಚಂದ್ರು, ಕೆ.ಎಂ.ಚೈತನ್ಯ, ಜಯತೀರ್ಥ, ತರುಣ್ ಸುಧೀರ್, ಹೇಮಂತ್ ಎಂ. ರಾವ್, ನೂತನ್, ಶಶಾಂಕ್ ಸೋಗಲ್ ಮೊದಲಾದ ನಿರ್ದೇಶಕರು ಕನಸುಗಳನ್ನು ಮಾರಲು ಈಗಲೂ ಸಿನಿಮಾ ಮಾರುಕಟ್ಟೆಯಲ್ಲಿ ನಿಂತಿದ್ದಾರೆ.

ಸಿನಿಮಾ ಅಭಿನಯದಲ್ಲಿ ಛಾಪು ಮೂಡಿಸಿದ ನಟಿಯರ ಯಾದಿ ದೊಡ್ಡದಿದೆ. ಬಿ.ಸರೋಜಾದೇವಿ, ಲೀಲಾವತಿ, ಭಾರತಿ, ಕಲ್ಪನಾ, ಲಕ್ಷ್ಮೀ, ಆರತಿ, ಜಯಮಾಲಾ, ಸುಧಾರಾಣಿ, ಶ್ರುತಿ, ಮಾಲಾಶ್ರೀ, ಸೌಂದರ್ಯ, ಪ್ರೇಮಾ, ಉಮಾಶ್ರೀ, ರಾಧಿಕಾ ಪಂಡಿತ್ ಅವರಿಂದ ಈಗಿನ ಆಶಿಕಾ ರಂಗನಾಥ್, ಅದಿತಿ ಪ್ರಭುದೇವ, ರಚಿತಾ ರಾಮ್, ಚೈತ್ರಾ ರಾವ್, ರುಕ್ಮಿಣಿ ವಸಂತ್ ಅವರವರೆಗೆ ಈ ಕ್ಷೇತ್ರದಲ್ಲಿ ಹೊಳೆದ ತಾರೆಗಳು ಕಾಣುತ್ತವೆ. ಆದರೆ, ನಿರ್ದೇಶನದ ಕುರ್ಚಿ ಮೇಲೆ ಕುಳಿತವರು ಬೆರಳೆಣಿಕೆಯಷ್ಟು. ಪ್ರೇಮಾ ಕಾರಂತ ಅವರು 'ಫಣಿಯಮ್ಮ' ಸಿನಿಮಾ ನಿರ್ದೇಶಿಸಿದರು. ಹೊಸಕಾಲದಲ್ಲಿ ವಿಜಯಲಕ್ಷ್ಮಿ ಸಿಂಗ್, ಸುಮನ್ ಕಿತ್ತೂರು, ಚಂಪಾ ಶೆಟ್ಟಿ, ರೂಪಾ ರಾವ್, ಸಿಂಧು ಶ್ರೀನಿವಾಸಮೂರ್ತಿ ಅವರಂತಹ ಕೆಲವರು ನಿರ್ದೇಶನದ ಹೊಣೆಗಾರಿಕೆ ನಿಭಾಯಿಸಿ ಸೈ ಎನಿಸಿಕೊಂಡಿದ್ದಾರೆ.

ಕನ್ನಡದ ಹೆಮ್ಮೆ

ಶಿವಕುಮಾರ ಸ್ವಾಮೀಜಿ



ಏಪ್ರಿಲ್ 1, 1908 – ಜನವರಿ 21, 2019

'ಸದ್ದುಗದ್ದಲವಿಲ್ಲದ ಸಾಧನೆ ಇಲ್ಲಿ ಗದ್ದುಗೆಯೇರಿದೆ, ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ, ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ, ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ...' ಎನ್ನುವ ಕವಿ ಜಿ.ಎಸ್. ಶಿವರುದ್ರಪ್ಪ ಅವರ ನಾಲ್ಕು ಸಾಲುಗಳಷ್ಟೇ ಸಾಕು, ತುಮಕೂರಿನ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರ ಹಿರಿಮೆಯನ್ನು ಹೇಳಲು. ಬೆಳಕು ಉಳಿಸಿ ಮರೆಯಾಗಿರುವ ಕನ್ನಡದ ಈ ಅಧ್ಯಾತ್ಮ ಸೂರ್ಯ, ನಾಡಿನ ಲಕ್ಷ ಲಕ್ಷ ಮಕ್ಕಳಿಗೆ ಅನ್ನದಾನದ ಜತೆಗೆ ವಿದ್ಯಾದಾನವನ್ನೂ ಮಾಡಿ ಬದುಕು ಉದ್ಧರಿಸಿದವರು. ಸಂತರ ಸಂತತಿ ಹೇಗಿರಬೇಕು ಎನ್ನುವುದಕ್ಕೆ ಮಾದರಿಯಾಗಿ ನಿಂತವರು. ಯಾವುದೇ ಬಿರುದು–ಬಾವಲಿಗಳ ಕಡೆಗೆ ಕಣ್ಣೆತ್ತಿ ನೋಡದೆ ಕಾಯಕಯೋಗದ ಮಹತ್ವವನ್ನೂ ಸಾರಿದವರು. ನಿತ್ಯ ಇಷ್ಟಲಿಂಗದ ಪೂಜೆ ಮಾಡುತ್ತಾ, ತ್ರಿವಿಧ ದಾಸೋಹದ ಕೈಂಕರ್ಯ ನೆರವೇರಿಸುತ್ತಾ, ಬಂದವರಿಗೆಲ್ಲ ತಾಯಿ ಮಮತೆಯನ್ನು ತೋರುತ್ತಾ ಬಂದಿದ್ದ ಈ ಶತಮಾನದ ಸಂತ, ಕೊನೆಗೆ ತಾವೇ ದೇವರ ಸ್ವರೂಪವನ್ನು ತಾಳಿಬಿಟ್ಟವರು. ಐದು ತಲೆಮಾರುಗಳ ಶಿಷ್ಯಬಳಗವನ್ನು ಪೋಷಿಸಿದ ಮಹಾತ್ಮ ಅವರು. ನಾಡಿನ ತುಂಬಾ ಸದ್ದುಗದ್ದಲವಿಲ್ಲದೆ ವಿದ್ಯೆಯ ಹಣತೆ ಬೆಳಗಿ, ಸಾಮಾನ್ಯರ ಮನೆಗಳ ನಂದಾದೀಪವಾದ ಇಂತಹ ಸಂತನನ್ನು ಪಡೆದಿದ್ದು ಕನ್ನಡ ನಾಡಿನ ಭಾಗ್ಯ.

ಪಿ.ಲಂಕೇಶ್

ಮಾರ್ಚ್ 8, 1935 – ಜನವರಿ 25, 2000

ಪಿ.ಲಂಕೇಶ್ ಆಧುನಿಕ ಕನ್ನಡ ಸಾಹಿತ್ಯದ ಬಹು ಮುಖ್ಯ ಲೇಖಕ; ಕಥೆ, ಕಾದಂಬರಿ, ಕಾವ್ಯ, ನಾಟಕ ಹೀಗೆ ತಾವು ಬರೆದ ಪ್ರತಿ ಪ್ರಕಾರದಲ್ಲಿಯೂ ಮೌಲ್ಯಯುತವಾದ ಕೃತಿಗಳನ್ನು ಕೊಟ್ಟವರು. ಮನುಷ್ಯನ ಕೇಡಿನ ಸ್ವಭಾವ, ಸಣ್ಣತನ, ವ್ಯಕ್ತಿತ್ವದ ವೈರುಧ್ಯಗಳನ್ನು ಶೋಧಿಸಿ ಸಾಹಿತ್ಯ ರಚನೆ ಮಾಡಿದವರು ಲಂಕೇಶ್. ಲೋಹಿಯಾವಾದಿಯಾಗಿದ್ದ ಅವರು, ಕರ್ನಾಟಕದ ಸಮಾಜವಾದಿ ಚಳವಳಿಯ ಪ್ರಮುಖ ಭಾಗವಾಗಿದ್ದರು. ಎರಡು ದಶಕ ಇಂಗ್ಲಿಷ್ ಅಧ್ಯಾಪಕರಾಗಿದ್ದ ಲಂಕೇಶ್, ತಮ್ಮ ವೃತ್ತಿಗೆ ರಾಜೀನಾಮೆ ನೀಡಿ ಸಿನಿಮಾ ನಿರ್ದೇಶನಕ್ಕಿಳಿದರು; ಮೊದಲ ಚಿತ್ರಕ್ಕೇ (ಪಲ್ಲವಿ) ರಾಷ್ಟ್ರ ಪ್ರಶಸ್ತಿ ಪಡೆದರು. ನಂತರ 'ಲಂಕೇಶ್ ಪತ್ರಿಕೆ' ಆರಂಭಿಸಿ, ತಮ್ಮ ನಿರ್ಭೀತ ಬರವಣಿಗೆಯ ಮೂಲಕ ಜಾಣ ಜಾಣೆಯರ ಮನ ಗೆದ್ದರು; ವಿವಿಧ ಜಾತಿ, ಧರ್ಮಗಳ ಹತ್ತಾರು ಹೊಸ ಲೇಖಕರ ಸೃಷ್ಟಿಗೆ ಕಾರಣರಾದರು. 'ಪ್ರಗತಿ ರಂಗ' ಸ್ಥಾಪಿಸಿ, ಪರ್ಯಾಯ ರಾಜಕೀಯದ ಪ್ರಯತ್ನವನ್ನೂ ಮಾಡಿದರು. ಅತ್ಯುತ್ತಮ ಗದ್ಯ ಬರಹಗಾರರಾಗಿದ್ದ ಲಂಕೇಶ್, ತಮ್ಮ ಜಾತ್ಯತೀತ ಚಿಂತನೆಗೆ, ಕಠೋರ ನಿಲುವಿಗೆ, ಬಹುಮುಖ ಪ್ರತಿಭೆಗೆ ಹೆಸರಾಗಿದ್ದರು. ಅವರು ತಮ್ಮ ಸಾಹಿತ್ಯ ಕೃತಿಗಳು, ಪತ್ರಿಕೆ, ಸಾಮಾಜಿಕ ಕ್ರಿಯೆಗಳ ಮೂಲಕ ಕನ್ನಡದ ಸಾಂಸ್ಕೃತಿಕ ಲೋಕದಲ್ಲಿ ಚಿರಂತನ ಪ್ರಭಾವವನ್ನು ಉಳಿಸಿದ್ದಾರೆ.

ಕಿರಣ್ ಮಜುಂದಾರ್ ಶಾ

ಜನನ: ಮಾರ್ಚ್ 23, 1953

ಜಗತ್ತಿನ ನಕಾಶೆಯಲ್ಲಿ ಬೆಂಗಳೂರು 'ಐಟಿ–ಬಿಟಿ' ಸಿಟಿ ಎಂದೇ ಗುರುತಿಸಿಕೊಳ್ಳುತ್ತಿದೆ. ಉದ್ಯಾನನಗರಿಗೆ 'ಐಟಿ'ಯೊಂದಿಗೆ 'ಬಿಟಿ' ವಿಶೇಷಣ ಸೇರಲು ಪ್ರಮುಖ ಕಾರಣ ಬಯೋಕಾನ್ ಸಂಸ್ಥೆ. ಜೈವಿಕ ತಂತ್ರಜ್ಞಾನ, ಔಷಧ ತಯಾರಿಕಾ ಕ್ಷೇತ್ರದಲ್ಲಿ ಇದು ಲೋಕವಿಖ್ಯಾತ. ಇದರ ಹಿಂದಿನ ಶಕ್ತಿ ಕಿರಣ್ ಮಜುಂದಾರ್ ಶಾ. ಅವರು ಹುಟ್ಟಿದ್ದು, ಬೆಳೆದಿದ್ದು ಬೆಂಗಳೂರಿನಲ್ಲಿ. ಮಹಿಳೆಯರು ಮನೆ ಕೆಲಸಕ್ಕಷ್ಟೇ ಸೀಮಿತ ಎಂಬಂತಹ ವಾತಾವರಣ ಇದ್ದ ಕಾಲದಲ್ಲೇ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆದಿದ್ದು ಮಾತ್ರವಲ್ಲದೇ, 1978ರಲ್ಲಿ ಕೇವಲ ₹10 ಸಾವಿರ ಬಂಡವಾಳ ಹೂಡಿ ತಮ್ಮ ಮನೆಯಲ್ಲೇ ಕಂಪನಿ ಹುಟ್ಟುಹಾಕಿದವರು ಅವರು. ಜೈವಿಕ ತಂತ್ರಜ್ಞಾನ ಪ್ರವರ್ಧಮಾನಕ್ಕೆ ಬರುತ್ತಿದ್ದ ಹೊತ್ತಿನಲ್ಲಿ ಹೆಜ್ಜೆ ಹೆಜ್ಜೆಗೂ ಎದುರಾದ ಸವಾಲುಗಳನ್ನು ಮೆಟ್ಟಿನಿಂತು ದೊಡ್ಡ ಉದ್ಯಮಿಯಾಗಿ, ಜಗತ್ತಿನ ಪ್ರಭಾವಿ ಮಹಿಳೆಯರಲ್ಲಿ ಒಬ್ಬರಾಗಿ ಹೊರಹೊಮ್ಮಿರುವ ಶಾ, ಮಹತ್ವಾಕಾಂಕ್ಷಿ ಮಹಿಳೆಯರಿಗೆ ಬಹು ದೊಡ್ಡ ಆದರ್ಶ. ಸದಾ ಭಿನ್ನವಾಗಿ ಆಲೋಚಿಸುವ ಗುಣಸ್ವಭಾವದ ಶಾ, ಲೋಕಹಿತೈಷಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಎಲ್ಲರಿಗೂ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ, ಔಷಧ ಸಿಗಬೇಕು ಎಂಬ ಆಶಯ ಹೊಂದಿರುವ ಅವರು, ನಾರಾಯಣ ಹೆಲ್ತ್‌ನ ಸಹಯೋಗದಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ ಬೆಂಗಳೂರಿನಲ್ಲಿ ಸುಸಜ್ಜಿತ ಆಸ್ಪತ್ರೆಯನ್ನು ಸ್ಥಾಪಿಸಿದ್ದಾರೆ. ಅವರ ಮುಕುಟ ಏರಿರುವ ಜಾಗತಿಕ ಮಟ್ಟದ ಹಲವು ಪ್ರಶಸ್ತಿಗಳು, ದೇಶದ ಉನ್ನತ ನಾಗರಿಕ ಪುರಸ್ಕಾರಗಳಾದ ಪದ್ಮಶ್ರೀ, ಪದ್ಮ ಭೂಷಣಗಳು ಅವರು ಜೈವಿಕ ತಂತ್ರಜ್ಞಾನ, ಆರೋಗ್ಯ ಕ್ಷೇತ್ರ, ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಸಾಕ್ಷೀಕರಿಸುತ್ತವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಮಹಾರಾಷ್ಟ್ರ ವಿಧಾನಸಭೆಯ ಬಿಜೆಪಿ ಶಾಸಕ ನಿತೇಶ್ ರಾಣೆ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಗ್ರಾಫಿಕ್ ಚಿತ್ರವೊಂದನ್ನು ಹಂಚಿಕೊಂಡಿದ್ದರು. 'ವಕ್ಫ್ ಬೋರ್ಡ್ ಮುಂಬೈನ ಸಿದ್ಧಿವಿನಾಯಕ ದೇವಸ್ಥಾನ ತನ್ನದೆಂದು ಹಕ್ಕು ಚಲಾಯಿಸುತ್ತಿದೆ. ಹೀಗಾಗಿ ಯುಬಿಟಿ, ಕಾಂಗ್ರೆಸ್‌ಗೆ ಮತ ಚಲಾಯಿಸಬೇಡಿ' ಎಂದು ಅವರು ತಮ್ಮ ಪೋಸ್ಟ್ ಅಡಿಬರಹದಲ್ಲಿ ಉಲ್ಲೇಖಿಸಿದ್ದರು. 'ಸಕಾಳ್' ಸೇರಿದಂತೆ ಹಲವು ಮಾಧ್ಯಮ ಸಂಸ್ಥೆಗಳ ಲಾಂಛನದೊಂದಿಗೆ ಈ ಗ್ರಾಫಿಕ್ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ವಕ್ಫ್ ಬೋರ್ಡ್ ಗ್ರಾಫಿಕ್ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡತೊಡಗಿದ ನಂತರ ಈ ಬಗ್ಗೆ ಪ್ರಕಟಣೆ ನೀಡಿದ 'ಸಕಾಳ್' ಮಾಧ್ಯಮ ಸಂಸ್ಥೆಯು, 'ಕೆಲವು ಕಿಡಿಗೇಡಿಗಳು ನಮ್ಮ ಲಾಂಛನ ನಕಲು ಮಾಡಿ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ' ಎಂದು ಸ್ಪಷ್ಟೀಕರಣ ನೀಡಿದೆ. ಸಿದ್ಧಿವಿನಾಯಕ ದೇವಸ್ಥಾನದ ಖಜಾಂಚಿಯೂ ಆಗಿರುವ ಮುಂಬೈ ಬಿಜೆಪಿ ಘಟಕದ ಉಪಾಧ್ಯಕ್ಷ ಪವನ್ ತ್ರಿಪಾಠಿ ಅವರು ಕೂಡ ಈ ಸುದ್ದಿಯನ್ನು ನಿರಾಕರಿಸಿದ್ದಾರೆ. ಈ ಬಗ್ಗೆ ಮುಂಬೈ ಜಿಲ್ಲಾ ವಕ್ಫ್ ಅಧಿಕಾರಿಯನ್ನು ಸಂಪರ್ಕಿಸಿದಾಗ, ತಾವು ಅಂಥ ಯಾವುದೇ ಹಕ್ಕು ಪ್ರತಿಪಾದನೆ ಮಾಡಿಲ್ಲ ಎಂದು ಸ್ಪಷ್ಟೀಕರಣ ನೀಡಿದರು. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಕಲ್ಯಾಣ ಕಟ್ಟುವ ಕಾಯಕ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

71

ಒಬ್ಬ ತಾಯಿ ಸಂತನ ಬಳಿಗೆ ಹೋಗಿ ತನ್ನ ಮಗ ಸತ್ತ ದುಃಖವನ್ನು ಹೇಳಿಕೊಂಡಳು. ಅದಕ್ಕೆ ಸಂತ 'ನೋವಿಲ್ಲದ ಮನೆ, ಸಾವಿಲ್ಲದ ಮನೆಯ ಸಾಸಿವೆ ಕಾಳು ತಗೊಂಡು ಬಾ' ಅಂದ. ಅಂದರ ನೋವಿಲ್ಲದ ಮನವೂ ಇಲ್ಲ, ಸಾವಿಲ್ಲದ ಮನೆಯೂ ಇಲ್ಲ. ಎಷ್ಟೂಂತ ನೆನಪು ಇಟ್ಟುಕೊಳ್ಳುವುದು. ಸತ್ಯವನ್ನು ಒಪ್ಪಿಕೊಳ್ಳುವುದೇ ಜ್ಞಾನ. ಕಟ್ಟಿದ ಮನೆ ಒಂದು ದಿನ ಬಿದ್ದು ಹೋಗತೈತಿ. ಹಚ್ಚಿದ ದೀಪ ಒಂದು ದಿನ ಆರಿ ಹೋಗತೈತಿ. ಹುಟ್ಟಿದ ಮನುಷ್ಯ ಒಂದು ದಿನ ಸತ್ತು ಹೋಗುತ್ತಾನೆ. ಇದನ್ನು ಸಾವಕಾಶವಾಗಿಯಾದರೂ ನಾವು ಸ್ವೀಕಾರ ಮಾಡಬೇಕಾಗತೈತಿ.ಬೇಂದ್ರೆ ಅನುಭವದ ಮಾತು ಹೇಳ್ತಾರ. 'ಸಾವಿಗೆ ನಾನು ಹೆದರೋದಿಲ್ಲ. ನಾ ಇದ್ದಾಗ ಸಾವು ಬರೋದಿಲ್ಲ. ಸಾವು ಬಂದಾಗ ನಾನು ಇರೋದಿಲ್ಲ' ಅಂತ. ಇದೇ ಜ್ಞಾನ. ಇಂತಹ ಜ್ಞಾನ ಇರಬೇಕು ಅನ್ನೋದು ಎಲ್ಲರ ಬಯಕೆ. ಈ ಜ್ಞಾನ ಪಡೆಯೋದು ಎಲ್ಲಿಂದ?

12ನೇ ಶತಮಾನದಲ್ಲಿ ಒಂದು ಅದ್ಭುತ ಘಟನೆ ನಡೆಯಿತು. ಕಲ್ಯಾಣಕ್ಕೆ ಜನ ಬಂದರಲ್ಲ. ಎಲ್ಲೆಲ್ಲಿಂದ ಜನ ಬಂದರು! ಕಾಶ್ಮೀರದಿಂದ ಮಹದೇವ ಭೂಪಾಲ ಬಂದ. ಅವ ದೊಡ್ಡ ದೊರೆ. ಇಲ್ಲಿ ಬಂದು ಮೋಳಿಗೆಯ ಮಾರಯ್ಯ ಆಗಿ ಕಟ್ಟಿಗೆ ಒಡೆಯುವ ಕಾಯಕ ಮಾಡಲು ಶುರು ಮಾಡಿದ. ಅಫ್ಘಾನಿಸ್ತಾನದಿಂದ ಮರುಳ ಶಂಕರ ದೇವರು ಬಂದರು. ಗುಜರಾತದಿಂದ ಆದಯ್ಯ ಬಂದ. ಮಧ್ಯಪ್ರದೇಶದಿಂದ ಕಕ್ಕಯ್ಯ ಬಂದ. ತಮಿಳುನಾಡಿನಿಂದ ಚನ್ನಯ್ಯ ಬಂದ. ಒರಿಸ್ಸಾದಿಂದ ಸುಜ್ಞಾನ ದೇವರು ಬಂದರು. ಮಹಾರಾಷ್ಟ್ರದಿಂದ ಸಿದ್ಧರಾಮ ಬಂದ. ಕನ್ನಡನಾಡಿನಿಂದ ಹಲವಾರು ಶರಣರು ಬಂದರು. ಯಾಕ ಬಂದರು? ಅಲ್ಲೇನು ಉದ್ಯೋಗ ಖಾತ್ರಿ ಯೋಜನೆ ಇತ್ತೇನು? ಆಶ್ರಯ ಮನೆ ಕೊಡ್ತೀನಿ ಅಂದಿದ್ರೇನು? ನಿಮಗೇನು ಅನ್ನ ಕೊಡ್ತೀವಿ, ಬಸ್ ಕೊಡ್ತೀವಿ ಅಂದಿದ್ರೇನು? ಇಲ್ಲ. ಅವರೆಲ್ಲ ಯಾಕೆ ಬಂದರು? ಬಸವಾದಿ ಶರಣರ ಜ್ಞಾನದ ಮಾತುಗಳಿಗೆ ಹಂಬಲಿಸಿ ಬಂದಿದ್ದರು.

ಇಡೀ ಜಗತ್ತಿನಲ್ಲಿ ಮೊಟ್ಟ ಮೊದಲು ಧಾರ್ಮಿಕ ಸಂಸತ್ ಶುರುವಾಗಿದ್ದರೆ ಅದು ಕರ್ನಾಟಕದ ಕಲ್ಯಾಣದಲ್ಲಿ ಅನ್ನೋದು ನಮ್ಮ ಹೆಮ್ಮೆ. ಕಲ್ಯಾಣ ಅಂದರ ಮತ್ತೇನೂ ಅಲ್ಲ; ಬಾಗಿದ ತಲೆ, ಮುಗಿದ ಕೈ, ಹೃದಯದಲ್ಲಿ ಜ್ಞಾನ. ಇದೇ ಕಲ್ಯಾಣ. ನಮ್ಮ ದೃಷ್ಟಿಯಲ್ಲಿ ಕಲ್ಯಾಣ ಅಂದರ ಮದುವೆ ಅಷ್ಟೆ. ಆದರೆ ಶರಣರ ದೃಷ್ಟಿಯಲ್ಲಿ ಕಲ್ಯಾಣ ಅಂದರ ಆತ್ಮದ ಕಲ್ಯಾಣ. ಕರುನಾಡಿನ ಕಲ್ಯಾಣದಲ್ಲಿ ಕುಲು ಮನಾಲಿ, ಡಾರ್ಜಲಿಂಗ್‌ನಂತಹ ಗಿರಿಧಾಮ ಇರಲಿಲ್ಲ. ತಂಪು ಇರಲಿಲ್ಲ. ಆದರೆ ಕೋಪತಾಪದ ಸನ್ನಿವೇಶ ಬಂದರೂ ಸಮಾಧಾನಿಯಾಗಿರುವ ಮಾತಿನ ತಂಪಿತ್ತು. ಅದಕ್ಕೆ ಜನ ಎಲ್ಲೆಲ್ಲಿಂದಲೋ ಅಲ್ಲಿಗೆ ಬಂದರು. ನೋಡಾಕ ಹೋಗೋಣ ಅನ್ನಲು ಅಲ್ಲೇನು ಬೇಲೂರು, ಹಂಪಿ, ಹಳೆಬೀಡಿನಂತಹ ದೇವಾಲಯಗಳೂ ಇರಲಿಲ್ಲ. ದೇಹವೇ ದೇವಾಲಯ ಅನ್ನೋ ಹೊಸ ಒಂದು ದೃಷ್ಟಿಕೋನ ಕೊಟ್ಟಿದ್ದರು. ಅದಕ್ಕೆ ಜನ ಬಂದರು. ಎಂತೆಂತಹ ಜನ ಅಲ್ಲಿದ್ದರು!

ತುರುಗಾಯಿ ರಾಮಣ್ಣ ಅಂತ ಒಬ್ಬ ದನಾ ಕಾಯ್ತಿದ್ದ. ಅವನ ಹತ್ತಿರ ಬಂದು ಬಸವಣ್ಣ, 'ನೀನೂ ಅನುಭವ ಮಂಟಪಕ್ಕೆ ಬಾ' ಅಂದರು. ಅದಕ್ಕೆ ಅವ, 'ಅಯ್ಯೋ ನಾನ್ಯಾಕೆ. ನಾನು ದನಾ ಕಾಯೋ ಮನುಷ್ಯ' ಅಂದ. ಅದಕ್ಕೆ ಬಸವಣ್ಣ, 'ನೀನು ದೇವರಿದ್ದಂಗೆ. ದೇವರು ಜನ ಕಾಯ್ತಾನ, ನೀನು ದನಾ ಕಾಯ್ತಿ. ಕಾಯುವವರು ಯಾವಾಗಲೂ ದೇವರಾಗ್ತಾರ' ಅಂದರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ನವೆಂಬರ್ 21, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಷಷ್ಠಿ ಗಂ. 17-04 ನಕ್ಷತ್ರ: ಪುಷ್ಯ ಗಂ. 15-36 ಯೋಗ: ಶುಕ್ಲ (ಶುಕ್ರ) ಗಂ. 12-01 ಕರಣ: ವಣಿಜ ಗಂ. 17-04, ವೃಶ್ಚಿಕ ಮಾಸದ 05 ನೇ ದಿನ, ಮಳೆನಕ್ಷತ್ರ: ಅನುರಾಧ 1.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-36 ಸೂರ್ಯಾಸ್ತ : 05-57

ಮುಸ್ಲಿಂ ದಿನಾಂಕ : 18 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ : 10, 4

ಮೇಷ: ವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಲು ಈ ದಿನ ಪ್ರಯತ್ನ ಪಡುವುದು ಒಳ್ಳೆಯದು. ಬುದ್ಧಿಕೌಶಲ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನಡೆಯನ್ನು ಸಾಧಿಸಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣುವಿರಿ.

ವೃಷಭ: ಸಮಾನ ಮನಸ್ಕರಲ್ಲಿನ ಮಾತುಕತೆಗಳಿಂದ ಕೆಲಸ ಕಾರ್ಯಗಳು ಸುಗಮವಾಗುತ್ತವೆ. ಶಿಕ್ಷಕ ವೃತ್ತಿಯನ್ನು ಮಾಡುತ್ತಿರುವವರಿಗೆ ಅತ್ಯಂತ ಹೆಮ್ಮೆಯ ಸಂದರ್ಭವೊಂದು ಬರಲಿದೆ. ಆತ್ಮವಿಶ್ವಾಸವು ಹೆಚ್ಚುವುದು.

ಮಿಥುನ: ವೃತ್ತಿಯಲ್ಲಿ ಅನುಭವ ಹಾಗೂ ಪರಿಶ್ರಮ ಸೂಕ್ತ ಸಮಯದಲ್ಲಿ ಬೆಳಕಿಗೆ ಬಂದು ಉಪಯೋಗವಾಗುವುದು. ಅನೇಕ ದಿನಗಳಿಂದ ಕಾಡುತ್ತಿರುವ ಆರೋಗ್ಯ ಸಮಸ್ಯೆ ಉಪಶಮನವಾಗಲಿದೆ. ಮಾತಿನಲ್ಲಿ ವಿನಯ ಇರಲಿ.

ಕರ್ಕಾಟಕ: ಸಹವರ್ತಿಗಳು ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ಸ್ಥಾನ ಗಳಿಸುವಿರಿ. ಮದುವೆಯ ಸಲುವಾಗಿ ವಸ್ತ್ರಾಭರಣದ ಖರೀದಿಯನ್ನು ನಡೆಸಬಹುದು. ಹೆಚ್ಚಿನ ಅಧ್ಯಯನಕ್ಕೆ ಇದು ಸಕಾಲ.

ಸಿಂಹ: ಗೊತ್ತಿಲ್ಲದ ವಿಷಯವನ್ನು ಗುರುಹಿರಿಯರ ಬಳಿಯಲ್ಲಿ ಕೇಳಿ ತಿಳಿಯುವುದು ಅಗೌರವವೆಂದು ಭಾವಿಸಬೇಡಿ. ವ್ಯವಹಾರದಲ್ಲಿ ಮಗನ ಸಹಾಯದಿಂದ ಅಭಿವೃದ್ಧಿ ಕಾಣುವಿರಿ.ಹಳೆ ಬಾಕಿ ಸಂದಾಯವಾಗುವುದು.

ಕನ್ಯಾ: ಮುಂದಾಲೋಚನೆ ಇಲ್ಲದೇ ಯಾರಿಗೂ ಯಾವುದೇ ತರಹದ ಭರವಸೆಯನ್ನೂ ನೀಡಬೇಡಿ. ಎಲ್ಲ ಕೆಲಸಗಳಲ್ಲೂ ಧೈರ್ಯದಿಂದ ಮುನ್ನಡೆ ಸಾಧಿಸುವಿರಿ. ಇತರರಿಗೆ ಉಪಕಾರ ಮಾಡದಿದ್ದರೂ ಕೆಡುಕು ಬಯಸದಿರಿ.

ತುಲಾ: ಕರಕುಶಲ ವಸ್ತು ತಯಾರಕರು ಉತ್ತಮ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ರಾಸಾಯನಿಕ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ ಬರುವುದು. ವಿವಾಹ ಅಪೇಕ್ಷಿಗಳಿಗೆ ಶುಭವಿರುತ್ತದೆ.

ವೃಶ್ಚಿಕ: ನೆರೆಯವರ ಸಹಕಾರ ಕೇಳುವ ಸಂದರ್ಭ ಬರಲಿದೆ. ಆದರೆ, ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವಿರಿ. ಆಟೋಮೊಬೈಲ್ಸ್ ಸಂಬಂಧಿತ ಕೆಲಸಗಾರರಿಗೆ ಹರ್ಷದಾಯಕ ದಿನ.

ಧನು: ಮಾನಸಿಕ ಒತ್ತಡ ಹೆಚ್ಚಿಸುವಂಥ ಕೆಲಸವನ್ನು ಮಾಡುವವರಿಗೆ ಸಹಾಯಕನ ಅವಶ್ಯಕತೆ, ಅನಿವಾರ್ಯತೆ ಹೆಚ್ಚುವುದು. ಈ ದಿನದ ಪರಿಸ್ಥಿತಿಗಳು ಸ್ವಲ್ಪ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು.

ಮಕರ: ಮಗಳ ಜೀವನದ ವಿಚಾರದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ದುಡುಕು ನಿರ್ಧಾರಗಳಿಂದ ಮುಖಭಂಗವಾಗುವ ಲಕ್ಷಣಗಳಿವೆ. ಸಿವಿಲ್ ಎಂಜಿನಿಯರ್‌ಗಳಿಗೆ ಅವಕಾಶಗಳು ಸಿಗುವುದು.

ಕುಂಭ: ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗೆ ಕುಟುಂಬದಲ್ಲಿ ಚರ್ಚೆ ನಡೆಯುವುದು. ಅದಕ್ಕಾಗಿ ಹೆಚ್ಚು ಸಮಯ ವಿನಿಯೋಗಿಸುವಿರಿ. ಹೊಸ ಯೋಜನೆಗಳ ತಯಾರಿಗೆ ಒಳ್ಳೆಯ ಸಮಯ.

ಮೀನ: ಹಿಂದೆ ನಡೆದಿರುವ ವಿಚಾರದ ಬಗೆಗಿನ ಯೋಚನೆಗಿಂತ ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮ. ಪಾಲುದಾರಿಕೆಯಲ್ಲಿ ಒಮ್ಮತ ಮೂಡದೆ ಹಿಂದೆ ಸರಿಯುವಂತೆ ಆಗಲಿದೆ.

ಪದಬಂಧ 5868

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಲೋಭನಿಗೆ ಆಸೆಯನ್ನು ಹುಟ್ಟಿಸುವಿಕೆ! (4)
2.ಆಣೆಯಿಟ್ಟರೂ ಪಕ್ಷದವರೆಲ್ಲಾ ಮಾಡುತ್ತಿರುವ ನಿಂದೆ (4)
4.ಸಂಪೂರ್ಣವಾಗಿ ಪಕ್ವವಾಗಿರುವುದು (4)
7.ಜನಗಣತಿಗಾಗಿ ನಿರ್ಮಿಸಿರುವ ವೇದಿಕೆ (3)
8.ಮಾತಿಲ್ಲದೆ ನೀರವತೆ (2)
9.ಎಲ್ಲಾ ಬಲ್ಲವನೆಂದು ಹೇಳಿಕೊಳ್ಳುತ್ತಿರುವ ಪತಿ (3)
10.ಊಟಕ್ಕೆ ಕುಳಿತಿರುವ ಜನಗಳ ಸಾಲು (2)
11.ಹಸೆ ಹಾಕುವ ಜಾಗದಲ್ಲಿ ಬೆಳೆದಿರುವ ಪಾಚಿ (3)
12.ತಮ್ಮನು ತೋರಿಸಿದ ಭೇದಭಾವ (4)
14.ಬೇಡವಾದವರ ಮೇಲೆ ಬೆಳೆಸಿಕೊಂಡಿರುವ ಶತ್ರುತ್ವ (4)
15.ಅಡವಿ ಸೇರಲು ತೋರಿಸುತ್ತಿರುವ ಆತುರ (4)

ಮೇಲಿಂದ ಕೆಳಕ್ಕೆ

1.ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
3.ಪತಿಯೊಂದಿಗಿರುವ ಕಾಲಾಳು (3)
5.ಉತ್ತಮ ಜಾತಿಯ ಜೇನುತುಪ್ಪ ಉಲ್ಟಾ ಕಾಣುತ್ತಿದೆ (3)
6.ವರ ಖಡ್ಗ ಹಿಡಿದು ಮಾಡುತ್ತಿರುವ ಸಾಧನೆ (5)
7.ಈತ ಬಲು ಆಲಸಿ (5)
10.ಖಂಡಿತಾ ಇವನು ವಿದ್ವಾಂಸ! (3)
11.ಹಾವು ಕಚ್ಚೀತೆಂದು ಧರಿಸಿರುವ ಮರದ ಮೆಟ್ಟು (3)
13.ಮಡಿವಂತ ಏರಿರುವ ಅಟ್ಟ (3)



5867ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜನಜನಿತ 3.ಶತಕ
5.ಸದ್ವಿನಿಯೋಗ
7.ರಿಗಾನ 9.ಗಜಗಮನ
12.ರಖಶಿ 4.ಆಮ್ಲಜನಕ
16.ಚರಟ 17.ದುರುಪಯೋಗ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ನಿಶ್ವಾಸ
4.ತರಂಗ 6.ನಿಯಮ 8.ನಗ
10.ಜಲಜ 11.ನರ
13. ಶಿಲಾಯುಗ 14.ಆಕರ
15.ಕದಿರು

ಸುಡೊಕು 6253

		1		8				5
	8		2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6252 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹19000
ಎಸಿ	₹11070
ಆರ್‌ಪಿ	₹19000
ಆರ್‌ಸಿ	₹10710

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1510 (1515)
ಸೋಯಾ (ರಿಫೈನ್ಡ್)	₹1345 (1350)
ಸೂರ್ಯಕಾಂತಿ (ರಿಫೈನ್ಡ್)	₹1405 (1410)
ಪಾಮೋಲಿನ್	₹1380 (1385)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹411-588
ದ್ವಿತಳಿ (ಬಿ.ವಿ)
₹501-752

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4
₹178
ಆರ್‌ಎಸ್‌ಎಸ್-5
₹172
ಗುಡ್ ಲಾಟ್
(ಪ್ರತಿ ಕೆ.ಜಿಗೆ) ₹168

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33500
ಹಳತು	43000-50000
ಪುತ್ತೂರು	
ಹೊಸತು	25000-33000
ಹಳತು	36000-50000
ಕುಮಟ	
ಚಿಪ್ಪು	23019-26609
ಕೋಕ	7019-22809
ಫ್ಯಾಕ್ಟರಿ	3539-18929
ಹಳೆಚಾಲಿ	36699-40099
ಹೊಸಚಾಲಿ	31099-35301
ಶಿವಮೊಗ್ಗ	
ಬೆಟ್ಟೆ	43009-57530
ಗೊರಬಲು	16109-31129
ಹೊಸತು	46596-49889
ರಾಶಿ	32299-49999
ಸರಕು	53009-89999
ಸಿದ್ದಾಪುರ	
ಬಿಳಿಗೋಟು	24169-27899
ಚಾಲಿ	32119-36019
ಕೋಕ	20689-26119
ಕೆಂಪುಗೋಟು	19799-20119
ರಾಶಿ	42099-46309
ತಟ್ಟಿಬೆಟ್ಟೆ	29099-43099
ಶಿರಸಿ	
ಬೆಟ್ಟೆ	26099-38100
ಬಿಳಿಗೋಟು	21001-29608
ಚಾಲಿ	33608-36721
ಕೆಂಪುಗೋಟು	12009-25019
ರಾಶಿ	40289-45309

ಎಫ್‌ಟಿಎ: ಮುಂದಿನ ವರ್ಷ ಭಾರತ–ಬ್ರಿಟನ್ ಮಾತುಕತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಕುರಿತ (ಎಫ್‌ಟಿಎ) ಮಾತುಕತೆಯು 2025ರಲ್ಲಿ ನಡೆಯುವ ನಿರೀಕ್ಷೆ ಇದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬುಧವಾರ ತಿಳಿಸಿದೆ.

ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ನಡೆಯುತ್ತಿರುವ ಜಿ-20 ಶೃಂಗಸಭೆಯಲ್ಲಿ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ ಸ್ಟಾರ್ಮರ್, ಎಫ್‌ಟಿಎ ಕುರಿತ ಸಮಾಲೋಚನೆಗಳಿಗೆ ಮುಂದಿನ ವರ್ಷ ಮತ್ತೆ ಚಾಲನೆ ನೀಡಲಾಗುವುದು ಎಂದು ಘೋಷಿಸಿದ್ದರು.

ಮುಕ್ತ ವ್ಯಾಪಾರ ಒಪ್ಪಂದ ಕುರಿತು ಮಾತುಕತೆ ನಡೆಸುವ ದಿನಾಂಕವನ್ನು ರಾಜತಾಂತ್ರಿಕ ಅಧಿಕಾರಿಗಳು ನಿರ್ಧರಿಸಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಇಂದಿನಿಂದ ಹಾಲು, ಇತರೆ ಉತ್ಪನ್ನ ಮಾರಾಟ

ದೆಹಲಿಗೆ ನಂದಿನಿ ಲಗ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನಂದಿನಿ ಬ್ರ್ಯಾಂಡ್‌ನ ಮಾರುಕಟ್ಟೆಯನ್ನುರಾಷ್ಟ್ರ ರಾಜಧಾನಿಗೂ ವಿಸ್ತರಿಸಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯು (ಕೆಎಂಎಫ್) ಸಜ್ಜಾಗಿದೆ.

ದೆಹಲಿಯಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯದ ಸಚಿವರು ನಂದಿನಿ ಹಾಲು, ಮೊಸರು ಹಾಗೂ ಇತರೆ ಉತ್ಪನ್ನಗಳ ಮಾರಾಟಕ್ಕೆ ಚಾಲನೆ ನೀಡಲಿದ್ದಾರೆ.

ಮಹಾರಾಷ್ಟ್ರದ ಮುಂಬೈ, ನಾಗ್ಪುರ, ಪುಣೆ ಮತ್ತು ಸೊಲ್ಲಾಪುರ, ಗೋವಾ, ಹೈದರಾಬಾದ್, ಚೆನ್ನೈ ಮತ್ತು ಕೇರಳ ರಾಜ್ಯದಲ್ಲಿ ಈಗಾಗಲೇ ನಂದಿನಿ ಉತ್ಪನ್ನಗಳು ಮಾರಾಟವಾಗುತ್ತಿವೆ. ದೆಹಲಿಗೆ ಪ್ರವೇಶಿಸುವ ಮೂಲಕ ಉತ್ತರ ಭಾರತದಲ್ಲಿ ಮಾರುಕಟ್ಟೆಯನ್ನು ವಿಸ್ತರಿಸಲು ಕೆಎಂಎಫ್ ಗುರಿ ಹೊಂದಿದೆ.

ಮುಖ್ಯಾಂಶಗಳು

- ನಿತ್ಯ 1 ಲಕ್ಷ ಲೀ. ಹಾಲು ಮಾರಾಟ ಗುರಿ
- ಅಮುಲ್, ಮದರ್ ಡೇರಿ ಜೊತೆ ಕೆಎಂಎಫ್ ಸ್ಪರ್ಧೆ
- 100ಕ್ಕೂ ಹೆಚ್ಚು ವಿತರಕರ ಜೊತೆಗೆ ಒಪ್ಪಂದ

ಪ್ರಸ್ತುತ ದೆಹಲಿ ಮಾರುಕಟ್ಟೆಯಲ್ಲಿ ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್‌ಎಲ್) ಅಮುಲ್ ಬ್ರ್ಯಾಂಡ್ ಹಾಗೂ ಮದರ್ ಡೇರಿ ಹಿಡಿತ ಸಾಧಿಸಿವೆ. ಕೆಎಂಎಫ್ ಇವುಗಳೊಟ್ಟಿಗೆ ಸ್ಪರ್ಧೆಗೆ ಇಳಿಯಲಿದೆ.

'ದೆಹಲಿಯಲ್ಲಿ ಆರಂಭಿಕ ಹಂತದಲ್ಲಿ ಪ್ರತಿನಿತ್ಯ 1 ಲಕ್ಷ ಲೀಟರ್ ಹಾಲು ಮಾರಾಟ ಮಾಡಲಾಗುತ್ತದೆ. ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಮಾರಲು 100ಕ್ಕೂ ಹೆಚ್ಚು ವಿತರಕರು ಸಂಸ್ಥೆಯ ಜತೆಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಆರು ತಿಂಗಳೊಳಗೆ ಹಾಲಿನ ಮಾರಾಟವನ್ನು 2.5 ಲಕ್ಷ ಲೀಟರ್‌ಗೆ ಏರಿಸುವ ಗುರಿ ಹೊಂದಲಾಗಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ತಿಳಿಸಿದರು.

'ದೆಹಲಿಯಲ್ಲಿ ಹಾಲು ಮತ್ತು ಮೊಸರು ಮಾರಾಟಕ್ಕೂ ಮೊದಲು ರಸ್ತೆ ಮಾರ್ಗವಾಗಿ ಇಲ್ಲಿಗೆ ಉತ್ಪನ್ನಗಳನ್ನು ಪ್ರಾಯೋಗಿಕವಾಗಿ ರವಾನಿಸಲಾಗಿತ್ತು. ಈ ವೇಳೆ ಹಾಲಿನ ಗುಣಮಟ್ಟ ಕಾಯ್ದುಕೊಳ್ಳಲಾಗಿತ್ತು' ಎಂದು ತಿಳಿಸಿದರು. ಮಂಡ್ಯದಿಂದ ದೆಹಲಿ ಮತ್ತು ಗುರುಗ್ರಾಮಕ್ಕೆ 2 ಸಾವಿರ ಟ್ಯಾಂಕರ್‌ಗಳ ಮೂಲಕ ಹಾಲು ಪೂರೈಕೆಗೆ ಯೋಜನೆ ರೂಪಿಸಲಾಗಿದೆ ಎಂದು ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ಕಾಸಾಗ್ರ್ಯಾಂಡ್‌ನ ಸಿಬ್ಬಂದಿಗೆ ವಿದೇಶ ಪ್ರವಾಸ ಭಾಗ್ಯ

ಚೆನ್ನೈ (ಪಿಟಿಐ): ರಿಯಲ್ ಎಸ್ಟೇಟ್ ಕಂಪನಿ ಕಾಸಾಗ್ರ್ಯಾಂಡ್ ಉತ್ತಮ ಸೇವೆ ಸಲ್ಲಿಸಿದ ಒಂದು ಸಾವಿರ ಉದ್ಯೋಗಿಗಳನ್ನು ವಿದೇಶ ಪ್ರವಾಸಕ್ಕೆ ಕರೆದೊಯ್ಯಲು ನಿರ್ಧರಿಸಿದೆ.

ಸ್ಪೇನ್‌ನ ಬಾರ್ಸಿಲೋನಾಗೆ ಒಂದು ವಾರ ಪ್ರವಾಸಕ್ಕೆ ಕರೆದೊಯ್ಯಲಿದ್ದು, ಸಂಪೂರ್ಣ ವೆಚ್ಚವನ್ನು ಕಂಪನಿಯೇ ಭರಿಸಲಿದೆ.

ಉದ್ಯೋಗಿಗಳಿಗೂ ಲಾಭದ ಕೊಡುಗೆ ನೀಡುವ ಭಾಗವಾಗಿ ಈ ಪ್ರವಾಸ ಆಯೋಜಿಸಲಾಗಿದೆ. ಉದ್ಯೋಗಿಗಳು ಕಂಪನಿಯ ಅಭಿವೃದ್ಧಿಗೆ ನೀಡಿದ ಕೊಡುಗೆ ಆಧಾರದ ಮೇಲೆ ಲಾಭದ ಹಂಚಿಕೆಯನ್ನು ನಿರ್ಧರಿಸಲಾಗುತ್ತದೆ. ಈ ಪ್ರವಾಸವು ಉದ್ಯೋಗಿಗಳಲ್ಲಿ ಬದ್ಧತೆ ಮತ್ತು ಸಮರ್ಪಣಾ ಭಾವವನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದು ಕಂಪನಿಯು ಬುಧವಾರ ತಿಳಿಸಿದೆ.

2023ರಲ್ಲೂ ಕಂಪನಿಯು ಉದ್ಯೋಗಿಗಳನ್ನು ಆಸ್ಟ್ರೇಲಿಯಾ ಪ್ರವಾಸಕ್ಕೆ ಕರೆದೊಯ್ದಿತ್ತು.

ಬಿಟ್‌ಕಾಯಿನ್ ಮೌಲ್ಯ 94 ಸಾವಿರ ಡಾಲರ್‌ಗೆ ಏರಿಕೆ

ಸಿಂಗಪುರ (ರಾಯಿಟರ್ಸ್): ಕ್ರಿಪ್ಟೊ ಟ್ರೇಡಿಂಗ್ ಕಂಪನಿಯಾದ ಬಕ್ಟ್ ಖರೀದಿಗೆ ಡೊನಾಲ್ಡ್ ಟ್ರಂಪ್ ಒಡೆತನದ ಸಾಮಾಜಿಕ ಮಾಧ್ಯಮ ಕಂಪನಿಯು ಮಾತುಕತೆ ನಡೆಸಿರುವ ಬೆನ್ನಲ್ಲೇ, ಬಿಟ್‌ಕಾಯಿನ್ ಮೌಲ್ಯವು ಮೊದಲ ಬಾರಿಗೆ 94 ಸಾವಿರ ಅಮೆರಿಕನ್ ಡಾಲರ್‌ಗೆ (₹79.32 ಲಕ್ಷ) ಮುಟ್ಟಿದೆ.

ಅಮೆರಿಕದ ನಿಯೋಜಿತ ಅಧ್ಯಕ್ಷ ಟ್ರಂಪ್ ಅವರ ಅಧಿಕಾರಾವಧಿಯಲ್ಲಿ ಕ್ರಿಪ್ಟೊಕರೆನ್ಸಿ ಮಾರುಕಟ್ಟೆ ಬಲವರ್ಧನೆಗೊಳ್ಳಲಿದೆ ಎಂಬ ಆಶಾಭಾವ ಹೂಡಿಕೆದಾರರಲ್ಲಿ ಮೂಡಿದೆ. ಇದಕ್ಕೆ ಪೂರಕವಾದ ಆಡಳಿತ ಸ್ನೇಹಿ ಕ್ರಮಗಳನ್ನು ಜಾರಿಗೊಳಿಸುವ ನಿರೀಕ್ಷೆಯಿದೆ. ಹಾಗಾಗಿ, ಬಿಟ್‌ಕಾಯಿನ್ ಬೆಲೆಯು ಏರಿಕೆಯ ಹಾದಿ ಹಿಡಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

5.8 ಕೋಟಿ ಪಡಿತರ ಚೀಟಿ ರದ್ದು

ಒಂದನೇ ಪುಟದಿಂದ...

ಪಿಡಿಎಸ್ ವ್ಯವಸ್ಥೆಯ ಡಿಜಿಟಲೀಕರಣದ ಮೂಲಕ ಜಾಗತಿಕ ಮಟ್ಟದಲ್ಲಿ ಸರ್ಕಾರವು ಆಹಾರ ಭದ್ರತೆ ಕಾರ್ಯಕ್ರಮದಲ್ಲಿ ಹೊಸ ಹೆಗ್ಗುರುತು ಮೂಡಿಸಿದೆ. ಎಲ್ಲ 20.4 ಕೋಟಿ ಕುಟುಂಬಗಳ ಪಡಿತರ ಚೀಟಿ ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಸಚಿವಾಲಯ ವಿವರಿಸಿದೆ.

ಪ್ರಸ್ತುತ ದೇಶದಲ್ಲಿ ಶೇ 98ರಷ್ಟು ಪಡಿತರ ವಿತರಣೆಯು ಆಧಾರ್ ದೃಢೀಕರಣದ ಮೂಲಕ ನಡೆಯುತ್ತಿದೆ. ಅನರ್ಹರಿಗೆ ಆಹಾರ ಧಾನ್ಯಗಳ ವಿತರಣೆ ಹಾಗೂ ಪಡಿತರ ಕಳ್ಳತನಕ್ಕೆ ತಡೆ ಬಿದ್ದಿದೆ ಎಂದು ಹೇಳಿದೆ. ಆಹಾರ ಭದ್ರತೆ ದೃಷ್ಟಿಯಿಂದ 'ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಯೋಜನೆ'ಯನ್ನು ಅನುಷ್ಠಾನಗೊಳಿಸಿದೆ. ಹಾಲಿ ಇರುವ ಕಾರ್ಡ್‌ಗಳ ಮೂಲಕ ಫಲಾನುಭವಿಗಳು ದೇಶದ ಯಾವ ನ್ಯಾಯಬೆಲೆ ಅಂಗಡಿಯಲ್ಲಿ ಬೇಕಾದರೂ ಪಡಿತರ ಪಡೆಯಬಹುದಾಗಿದೆ ಎಂದು ವಿವರಿಸಿದೆ.

ಇ–ಕೆವೈಸಿ

ಒಂದು ಬಾರಿ ಪಡಿತರ ಕಾರ್ಡ್‌ನಲ್ಲಿರುವ ಕುಟುಂಬದ ಎಲ್ಲಾ ಸದಸ್ಯರು ಇ–ಕೆವೈಸಿ ಮಾಡಿಸಬೇಕಿದೆ. ಇಲ್ಲಿಯವರೆಗೆ ಈ ಪ್ರಕ್ರಿಯೆಯು ಶೇ 64ರಷ್ಟು ಪೂರ್ಣಗೊಂಡಿದೆ. ಉಳಿದವರಿಗೆ ನ್ಯಾಯಬೆಲೆ ಅಂಗಡಿಗಳಲ್ಲಿ ದೃಢೀಕರಣ ಪ್ರಕ್ರಿಯೆ ನಡೆಯುತ್ತಿದೆ.

ಇ–ಪಿಒಎಸ್

ದೇಶದಾದ್ಯಂತ 5.33 ಲಕ್ಷ ನ್ಯಾಯಬೆಲೆ ಅಂಗಡಿಗಳಲ್ಲಿ ತಂತ್ರಜ್ಞಾನ ಆಧರಿತ ಇ–ಪಿಒಎಸ್ (ಪಾಯಿಂಟ್ ಆಫ್ ಸೇಲ್) ಸಾಧನಗಳನ್ನು ಅಳವಡಿಸಲಾ ಗಿದೆ. ಇವುಗಳ ಮೂಲಕ ಪಡಿತರ ವಿತರಣೆ ವೇಳೆ ಆಧಾರ್ ಸಂಖ್ಯೆಯನ್ನು ದೃಢೀಕರಿಸಲಾಗುತ್ತದೆ. ಅರ್ಹ ಚೀಟಿದಾರರಿಗೆ ಪಡಿತರ ವಿತರಿಸಲಾಗುತ್ತಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಜನುಮದಾತೆಯ ಪ್ರಥಮ ಪುಣ್ಯಸ್ಮರಣೆ

ಸುಶೀಲಾ .ಎಸ್
ನಿಧನ : 21–11–2023
(ದಿ॥ ಶ್ರೀನಿವಾಸ್‌ರವರ ಧರ್ಮಪತ್ನಿ)
ಮರೆಯಲಾಗದ ಮಾಣಿಕ್ಯ ನಮ್ಮ "ಅಮ್ಮ"
ನಿಮ್ಮ ಆದರ್ಶಮಯ ಜೀವನ, ಪ್ರೀತಿ–ವಾತ್ಸಲ್ಯ
ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿದಿದೆ.
ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ
ನೀಡಲೆಂದು ಪ್ರಾರ್ಥಿಸುವ
ಇಂತಿ ದುಃಖತಪ್ತರು : ಕುಟುಂಬವರ್ಗದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Agents Wanted
EVENT ORGANIZERS, Exhibition, Schools, Colleges, Factories, Flea Market, Rural Jatre,Offices, Religious Gatherings, Associations In Bangalore City and Rural 6366936485

ವೈಯಕ್ತಿಕ
Lost
DOCUMENT LOST
I, Albert Mascarenhas Residing at Flat No.D1, Shalom Apartment, Father Muller Road, Mangalore-575002, have lost my Original GPA Document executed on 29.5.2007 Documet No. 113096, 113097, 113098, 113099, 113100 While in transit. Finder Please Contact: 9740457973

ಭವಿಷ್ಯ
Astrology
ಓಂ ಶ್ರೀ ಮಹಾಗಣಪತಿ ಜ್ಯೋತಿಷ್ಯಾಲಯ: ಪಂಡಿತ ವೆಂಕಟೇಶ ರಾವ್ ಶಾಸ್ತ್ರೀಜಿ, ಕೇರಳದ ಪ್ರಸಿದ್ಧ ಜ್ಯೋತಿಷಿಗಳು, ಧನವಶ ಜನವಶ ಶತ್ರುನಾಶ, ಸ್ತ್ರೀ ಪುರುಷವಶೀಕರಣ ಇನ್ನೂ ಹಲವಾರು ಸಮಸ್ಯೆಗಳಿಗೆ 2 ದಿನಗಳಲ್ಲಿ ಶಾಶ್ವತ ಪರಿಹಾರ. 9606064461

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರೆಂಟಲ್ ಪ್ರಾಪರ್ಟೀಸ್
Accommodation Available
Commercial
WAREHOUSE SPACE, 30000 Sq Ft Immediately Available Near Hennur / Hebbal, Contact No. 9004476233

ಪ್ರವಾಸ
Travel
ಸುಸಜ್ಜಿತ ವ್ಯವಸ್ಥೆಯೊಂದಿಗೆ 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ 23.12.2024, 19.01.2025 ರಿಂದ 7 ದಿನಗಳ ಹೈದರಾಬಾದ್ ಮಂತ್ರಾಲಯ ಶ್ರೀಶೈಲಂ 4-12-2024 28-01-2025 ರಿಂದ 17/11/8 ದಿನಗಳ ರಾಜಸ್ಥಾನ್ ಗುಜರಾತ್ ಪ್ರವಾಸಗಳು. 12.12.2024, 04.02.2025, ರಿಂದ 7/11 ದಿನಗಳ ಸಿಂಗಾಪುರ್. ಮಲೇಶಿಯಾ. 19.12.2024 ರಿಂದ5 ದಿನಗಳ ಥೈಲ್ಯಾಂಡ್. 16.01.2025 ರಿಂದ 10ದಿನಗಳ ವಿಯೆಟ್ನಾಮ್, ಕಾಂಬೋಡಿಯ 23.1.2025, 07.02.2025 ರಿಂದ 6ದಿನಗಳ ದುಬೈ, ಅಬುಧಾಬಿ ಪ್ರವಾಸಗಳು ಮಾರ್ಚ್ ತಿಂಗಳಲ್ಲಿ ಕಾಶಿ,ಗಯಾ ಚಾರ್ ದಾಮ್ ಪ್ರವಾಸಗಳಿಗೆ ಆನಂದ್ ವಿಹಾರಿ ಬೆಂಗಳೂರು 23. 080- 23385837, 8088887677

04.01.2025 12.03.2025 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 13.01.2025 ದುಬೈ,ಅಬುದಾಬಿ 6 ದಿನಗಳು. 23.12.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 7 ದಿನಗಳು. 10.12.2024 08.01.2025 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್, ಬೆಂಗಳೂರು-03. 9448402248 7022547922

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಹೂಡಿಕೆ: ದೇಶದಲ್ಲೇ 2ನೇ ಸ್ಥಾನಕ್ಕೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಕ್ಷೇತ್ರದ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕವು ದೇಶದಲ್ಲಿ ಮೂರನೇ ಸ್ಥಾನದಲ್ಲಿದ್ದು, 2025ರ ಜೂನ್ ವೇಳೆಗೆ ಎರಡನೇ ಸ್ಥಾನಕ್ಕೆ ಏರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಕೆವಿಕೆ ಆವರಣದಲ್ಲಿ ಬುಧವಾರ ನಡೆದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೆಟಲ್ಸ್ (ಐಐಎಂ) ಸಂಸ್ಥೆಯ 78ನೇ ವಾರ್ಷಿಕ ತಾಂತ್ರಿಕ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಈಗ ₹54,427 ಕೋಟಿ ಹೂಡಿಕೆ ಜತೆಗೆ ಮುಂದಿನ ಆರೇಳು ತಿಂಗಳಲ್ಲಿ ಇನ್ನೂ ₹19,059 ಕೋಟಿ ಬಂಡವಾಳ ಹರಿದು ಬರುವುದು ಖಾತರಿ ಆಗಿದೆ. ಈ ಮೂಲಕ ರಾಜ್ಯದಲ್ಲಿ ₹73 ಸಾವಿರ ಕೋಟಿಗೂ ಹೆಚ್ಚಿನ ಹೂಡಿಕೆ ಆಗಲಿದೆ. ಈ ವರ್ಷ ಈಗಾಗಲೇ 21 ವಿವಿಧ ಉದ್ಯಮಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇದರಿಂದ ₹46,375 ಕೋಟಿ ಬಂಡವಾಳ ಹರಿದು ಬರಲಿದೆ. ಇದರಿಂದ 27 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿ ಆಗಲಿವೆ ಎಂದು ವಿವರಿಸಿದರು.

ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಗಳ ಮೂಲಕ ₹90 ಸಾವಿರ ಕೋಟಿಗೂ ಹೆಚ್ಚಿನ ಹೂಡಿಕೆ ಆಗಲಿರುವ 669 ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದಾಗಿ 1.73 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದರು.

ಸಿದ್ದರಾಮಯ್ಯ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮಾತ್ರವಲ್ಲದೇ ಸೆಮಿಕಂಡಕ್ಟರ್, ವಿದ್ಯುನ್ಮಾನ, ಚಿಪ್ ವಿನ್ಯಾಸ, ನವೋದ್ಯಮ, ವಿದ್ಯುತ್‌ಚಾಲಿತ ವಾಹನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಮರ್ಥ ನೀತಿಗಳನ್ನು ಹೊಂದಿದೆ ಎಂದು ತಿಳಿಸಿದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ಉದ್ಯಮ ಕ್ಷೇತ್ರದಲ್ಲಿ ಈಗ ಡಿಜಿಟಲ್ ಉತ್ಪಾದನೆ, ಕೃತಕ ಬುದ್ಧಿಮತ್ತೆ ಮತ್ತು ಆಟೊಮೇಷನ್ ನಿರ್ಣಾಯಕವಾಗಿದ್ದು, ಹೊಸ ಬಗೆಯ ಶಕ್ತಿ ಸಾಮರ್ಥ್ಯ ತಂದುಕೊಟ್ಟಿವೆ. ಸುಧಾರಿತ ಅಲಾಯ್, ಅಧಿಕ ಸಾಮರ್ಥ್ಯದ ಉಕ್ಕು ಮತ್ತು ಸುಸ್ಥಿರ ಮೆಟೀರಿಯಲ್‌ಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಐಐಎಂ ಅಧ್ಯಕ್ಷ ಸಜ್ಜನ್ ಜಿಂದಾಲ್, ಜಿಂದಾಲ್ ಅಧ್ಯಕ್ಷ ಪಿ.ಕೆ. ಮುರುಗನ್ ಇದ್ದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯನಂದನ್, ಆರ್.ಆರ್. ನಗರ, ಬೆಂಗಳೂರು.

- **ಪ್ರಶ್ನೆ:** ನಾನು ಮ್ಯೂಚುವಲ್ ಫಂಡ್‌ಗಳ ಡೆಬ್ಟ್ ಸ್ಕೀಂಗಳಲ್ಲಿ ಅತ್ಯಂತ ಕಡಿಮೆ ಲಾಭ ಬರುವುದರಿಂದ ಯಾವುದೇ ರಿಸ್ಕ್ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಆದರೆ, ಇದಕ್ಕೆ ಅಪವಾದ ಎಂಬಂತೆ ಅದು ಕೆಲವೊಮ್ಮೆ ನಂಬುವುದು ಕಷ್ಟ ಎನ್ನುವ ಮಾಹಿತಿಯನ್ನೂ ಕೇಳಿದ್ದೇನೆ. ಈ ಬಗ್ಗೆ ಅರಿತು ಹೇಗೆ ನಿರ್ಧಾರ ತೆಗೆದುಕೊಳ್ಳಬೇಕು?

ಉತ್ತರ: ನಿಮ್ಮ ಊಹೆ ಹಾಗೂ ಮಾಹಿತಿ ಬಗೆಗಿನ ಅರಿವು ಸರಿಯಾಗಿದೆ. ಎಲ್ಲ ಹೂಡಿಕೆದಾರರು ಈ ಬಗ್ಗೆ ತಿಳಿದುಕೊಂಡಿರುವುದು ಅಗತ್ಯ. ಡೆಬ್ಟ್ ಫಂಡ್‌ಗಳ ಮೂಲ ಆದಾಯ ಹೂಡಿಕೆಯ ಮೇಲಿನ ಬಡ್ಡಿಯಾಗಿದೆ. ಇದು ಟ್ರೆಷರಿ ಬಿಲ್, ಡಿಬೆಂಚರ್, ಬ್ಯಾಂಕ್ ಬಡ್ಡಿ, ಸರ್ಕಾರಿ ಭದ್ರತೆಯ ಬಾಂಡ್ ಇತ್ಯಾದಿ ಯಾವುದೇ ಉತ್ಪನ್ನಗಳ ಮೇಲಿನ ಹೂಡಿಕೆಯಿಂದ ಬಂದಿರಬಹುದು.

ಈ ಹೂಡಿಕೆಗಳಿಗೂ ಬಡ್ಡಿ ಮೇಲಿನ ಏರಿಳಿತದ ಅಪಾಯ ಇದೆ. ಕೆಲವೊಮ್ಮೆ ಯಾವ ಸಂಸ್ಥೆಯಲ್ಲಿ ಹೂಡಿಕೆ ಮಾಡಲಾಗಿದೆಯೋ ಆ ಸಂಸ್ಥೆಯ ಅಸ್ತಿತ್ವವು ಅಪಾಯಕ್ಕೆ ಸಿಲುಕಿದಾಗ ಅಸಲು ಮೊತ್ತಕ್ಕೆ ಖಾತರಿ ಇಲ್ಲದಾಗುವ ಕೆಲವು ಅನಿರೀಕ್ಷಿತ ಸನ್ನಿವೇಶ ಸೃಷ್ಟಿಯಾಗುತ್ತವೆ (ಉದಾಹರಣೆಗೆ ಸಾಲಪತ್ರ ನೀಡಿದ ಬ್ಯಾಂಕ್, ಸಾಲಪತ್ರ ನೀಡಿದ ಕಂಪನಿ). ಇವು ಹೂಡಿದ ಫಂಡ್‌ಗಳ ದಿನವಹಿ ಮೌಲ್ಯದಲ್ಲೂ ಅಲ್ಪಾವಧಿ ಅಥವಾ ದೀರ್ಘಾವಧಿ ಪರಿಣಾಮ ಬೀರಬಹುದು. ಹೀಗಾಗಿ, ಯಾವತ್ತೂ ಫಂಡ್ ಹೌಸ್‌ಗಳು ಎಲ್ಲಿ ಹೂಡಿಕೆ ಮಾಡುತ್ತವೆ ಹಾಗೂ ಅವುಗಳ ಮಾನದಂಡದ ಗುಣಮಟ್ಟ ಏನು ಎನ್ನುವುದು ಗಮನದಲ್ಲಿ ಇರಬೇಕು.

ನಾಗೇಶ್ ಎಚ್., ಹೊನ್ನಾವರ.

- **ಪ್ರಶ್ನೆ:** ನಾನು ಇನ್ಫೊಸಿಸ್, ಟಿಸಿಎಸ್, ರಿಲಯನ್ಸ್, ಐಟಿಸಿ, ಕೋಲ್ ಇಂಡಿಯಾ, ಎಚ್‌ಎಎಲ್, ಏಷ್ಯನ್ ಪೇಂಟ್ಸ್, ಡಿಮಾರ್ಟ್, ಟಾಟಾ ಸಮೂಹದ ಕಂಪನಿಗಳನ್ನು ಆಯ್ಕೆ ಮಾಡಿ ಹೂಡಿಕೆ ಮಾಡುತ್ತಿದ್ದೇನೆ. ಕಳೆದ ಒಂದು ತಿಂಗಳಿನಿಂದ ಮಾರುಕಟ್ಟೆ ತೀವ್ರವಾಗಿ ಕುಸಿಯುತ್ತಿದೆ. ಈ ನಡುವೆ ಮಾರುಕಟ್ಟೆ ಕೆಲವು ಬಾರಿ ಏರುವುದನ್ನೂ ಕಂಡಿದ್ದೇವೆ.

ನನ್ನ ಪ್ರಶ್ನೆ ಏನೆಂದರೆ ಈ ಎಲ್ಲಾ ಕಂಪನಿಗಳು ಉತ್ತಮ ಹೆಸರು ಗಳಿಸಿವೆ. ಇದರ ಆಧಾರದಲ್ಲಿ ನಾವು ಹೂಡಿಕೆ ಮಾಡುತ್ತಿದ್ದೇವೆ ಎನ್ನುವುದು ನಿಜವಿದ್ದರೂ ಈ ಕಂಪನಿಗಳ ಆಯ್ಕೆಯಲ್ಲಿ ಇನ್ನೂ ಕಾಳಜಿ ಅಗತ್ಯವೇ ಅಥವಾ ಈಗ ಕುಸಿಯುತ್ತಿರುವ ಮಾರುಕಟ್ಟೆಯಲ್ಲಿ ಈ ಷೇರುಗಳು ಖರೀದಿಗೆ ಯೋಗ್ಯವೇ. ಈ ಬಗ್ಗೆ ತಿಳಿಸಿ.

ಉತ್ತರ: ನಿಮ್ಮ ಪ್ರಶ್ನೆ ಸಹಜವಾದುದಾಗಿದೆ. ಆದರೆ, ಈ ಅಂಕಣದಲ್ಲಿ ನಾವು ಯಾವುದೇ ನಿರ್ದಿಷ್ಟ ಹೂಡಿಕೆಯ ಖರೀದಿ- ಮಾರಾಟದ ಬಗ್ಗೆ ಸಲಹೆ ನೀಡುತ್ತಿಲ್ಲ. ಆದರೆ, ಓದುಗ ಹೂಡಿಕೆದಾರರಿಗೆ ನೆರವಾಗುವ ಸಾಮಾನ್ಯ ಮಾರ್ಗಸೂಚಿಗಳನ್ನಷ್ಟೇ ನಾವು ಸೂಚಿಸಬಹುದು. ಯಾವುದೇ ಹೂಡಿಕೆಯ ಮಾರ್ಗೋಪಾಯಗಳಿದ್ದರೂ ಅದು ಕೆಲವು ಮೂಲ ಅಂಶಗಳ ಸುತ್ತ ನಮ್ಮ ನಿರ್ಧಾರ ಅವಲಂಬಿತವಾಗಿದೆ ಎಂಬ ಪ್ರಮುಖ ಅಂಶಗಳನ್ನು ಗಮನಿಸಬೇಕಾಗಿದೆ.

- **ಕಂಪನಿಗಳ ಆಯ್ಕೆ ಬಗ್ಗೆ ಸಮೀಕ್ಷೆ:** ನೀವು ಹೇಳಿರುವ ಕಂಪನಿಗಳು ದೇಶದ ಪ್ರಸಿದ್ಧ ಹಾಗೂ ಭರವಸೆ ಇಡಬಹುದಾದ ಕಂಪನಿಗಳೇ ಆಗಿವೆ. ಇದರಿಂದ ಅವು ಹಲವು ವರ್ಷಗಳಿಂದ ಸೂಚ್ಯಂಕಗಳ ಭಾಗವಾಗಿ ಉಳಿದಿವೆ. ಹಾಗಿದ್ದರೂ ಹೂಡಿಕೆ ಮಾಡುವಾಗ ವಿಶೇಷ ಕಾಳಜಿ ಅಗತ್ಯ. ಕಂಪನಿಗಳ ಇತಿಹಾಸ ಹಾಗೂ ಮುನ್ನೋಟ, ನಿರಂತರ ಲಾಭದಾಯಕತೆ, ಪ್ರಸ್ತುತ ಮೌಲ್ಯಮಾಪನ ಮತ್ತು ಮಾರುಕಟ್ಟೆಯಲ್ಲಿನ ಪ್ರಸ್ತುತ ಸಾಮರ್ಥ್ಯ ಆಧರಿಸಿ ಈ ಆಯ್ಕೆ ಮಾಡಬೇಕಾಗಿದೆ.

ಹೀಗಾಗಿ ಪ್ರತಿ ತ್ರೈಮಾಸಿಕ ಅವಧಿಗೊಮ್ಮೆ ಕಂಪನಿಗಳು ಬಿಡುಗಡೆ ಮಾಡುವ ಆರ್ಥಿಕ ಲೆಕ್ಕಪತ್ರಗಳನ್ನು ಪರಾಮರ್ಶಿಸಿ. ಇಲ್ಲಿ ಯಾವುದೋ ಒಂದೆರಡು ಅಂಕಿ-ಅಂಶಗಳು ನಿರೀಕ್ಷೆಯನ್ನು ಹುಸಿಗೊಳಿಸಿರಬಹುದು. ಆದರೆ, ಅಂತಹ ವಿಚಾರ ದೀರ್ಘಾವಧಿಯಲ್ಲಿ ಕಂಪನಿಯ ಆರ್ಥಿಕ ಕ್ಷಮತೆ ಮೇಲೆ ಪರಿಣಾಮ ಬೀರುವುದಾದರೆ ಅಂತಹ ಸಂದರ್ಭದಲ್ಲಿ ಹೂಡಿಕೆ ಸೂಕ್ತವಲ್ಲ. ಹೀಗಾಗಿ, ದೂರಗಾಮಿ ಯೋಜನೆಗಳು ಪ್ರಸಕ್ತ ಸನ್ನಿವೇಶಕ್ಕಿಂತ ಉನ್ನತ ಸ್ಥಿತಿಗೆ ಕೊಂಡೊಯ್ಯುವ ಕಂಪನಿಗಳು ನಿಮ್ಮ ಮೊದಲ ಆಯ್ಕೆಯಾಗಿರಲಿ.

- **ಮಾರುಕಟ್ಟೆ ಸ್ಥಿತಿಗತಿ:** ಕಳೆದ ಒಂದೆರಡು ತಿಂಗಳಲ್ಲಿ ದೇಶದ ಷೇರು ಮಾರುಕಟ್ಟೆಯು ಜಾಗತಿಕ ಬಿಕ್ಕಟ್ಟಿನಿಂದಾಗಿ ಶೇ 10ಕ್ಕಿಂತ ಕೆಳಗೆ ಕುಸಿದಿರುವುದು ಸತ್ಯ. ಈ ಮಟ್ಟ ಹೊಸ ಹೂಡಿಕೆಗೆ ತಳಮಟ್ಟ ಹೌದೇ, ಅಲ್ಲವೇ ಎನ್ನುವುದು ಇನ್ನು ಮುಂದಿನ ದಿನಗಳ ಆರ್ಥಿಕ ವಿದ್ಯಮಾನಗಳ ಮೇಲೂ ಅವಲಂಬಿತವಾಗಿದೆ. ಉದಾಹರಣೆಗೆ ಅಮೆರಿಕದಲ್ಲಿ ಮುಂದೆ ಅಧಿಕಾರ ಸ್ವೀಕರಿಸಲಿರುವ ಡೊನಾಲ್ಡ್ ಟ್ರಂಪ್ ಯಾವ ರೀತಿಯ ಆರ್ಥಿಕ ನಿರ್ಧಾರ ಕೈಗೊಳ್ಳುತ್ತಾರೆ. ಮುಂದಿನ ಫೆಬ್ರುವರಿ ತಿಂಗಳಲ್ಲಿ ಕೇಂದ್ರ ಸರ್ಕಾರ ಮಂಡಿಸುವ ಆರ್ಥಿಕ ಸಮೀಕ್ಷೆಯ ಮುನ್ನೋಟ, ಬಜೆಟ್ ಇತ್ಯಾದಿ.

ಈ ನಡುವೆ ಸಂಭವಿಸುವ ಸಣ್ಣ ಸಣ್ಣ ಏರಿಕೆಯನ್ನು ಮಾರುಕಟ್ಟೆಯ ಪುನಶ್ಚೇತನ ಎಂದು ಖಚಿತವಾಗಿ ಹೇಳಲಾಗದು. ಯಾವುದೇ ಆರ್ಥಿಕತೆ ನಿಜವಾದ ಪ್ರಗತಿಯತ್ತ ಹೋಗುತ್ತಿದೆಯೇ ಅಥವಾ ತಾತ್ಕಾಲಿಕ ಪುನಃಶ್ಚೇತನವೇ ಎಂದು ತಿಳಿಯಲು ಆರ್ಥಿಕ ಅಂಕಿ–ಅಂಶಗಳು, ನಿಜವಾಗಿ ದೃಢತೆಯ ಸಂಕೇತ ಸಾರುತ್ತವೆಯೇ ಎಂಬುದನ್ನು ಗಮನಿಸಬೇಕು. ಉದಾಹರಣೆಗೆ ಜಾಗತಿಕ ಹಾಗೂ ದೇಶೀಯ ಜಿಡಿಪಿ, ಹಣದುಬ್ಬರದ ಪ್ರಮಾಣ, ಮುಂದಿನ ತ್ರೈಮಾಸಿಕ ಫಲಿತಾಂಶದ ಪೂರ್ವಭಾವಿ ಸಮೀಕ್ಷೆ, ತೆರಿಗೆ ನೀತಿಗಳ ಬದಲಾವಣೆ, ಖರೀದಿ ಸಾಮರ್ಥ್ಯ, ತೈಲ ಹಾಗೂ ಕಚ್ಚಾ ವಸ್ತುಗಳ ಸೂಚ್ಯಂಕ, ವಿದೇಶಿ ಹೂಡಿಕೆದಾರ ನಿರೀಕ್ಷೆ ಇತ್ಯಾದಿ.

ಇವುಗಳ ಧನಾತ್ಮಕ ದಿಸೆಯೇ ಒಟ್ಟಾರೆ ಮಾರುಕಟ್ಟೆಯ ಬಹುದೊಡ್ಡ ಹೂಡಿಕೆದಾರಾದ ದೇಶೀಯ ಹಾಗೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರನ್ನು ಆಕರ್ಷಿಸುವಂತೆ ಮಾಡುವ ಪ್ರಮುಖ ಅಂಶವಾಗಿದೆ.

- **ನೀವು ಪರಿಶೀಲಿಸಬೇಕಾದ ಅಂಶಗಳು:** ನೀವು ದೀರ್ಘಾವಧಿ ಹೂಡಿಕೆದಾರರಾಗಿದ್ದರೆ ಈ ಮೇಲಿನ ಅಂಶಗಳನ್ನು ಗಮನಿಸಿಕೊಂಡು ಪ್ರಸಕ್ತ ಸನ್ನಿವೇಶದಲ್ಲೂ ವಿವಿಧ ಹಂತಗಳಲ್ಲಿ ಮುಂದಿನ ದಿನಗಳಲ್ಲಿ ಹೂಡಿಕೆ ಮಾಡಬಹುದು. ಅಂತಹ ಸಂದರ್ಭದಲ್ಲಿ ಸಾಮಾನ್ಯ ಮಾನದಂಡಗಳಿಂದಲಾದರೂ ಆಯಾ ಕಂಪನಿಗಳ ಆರ್ಥಿಕ ಸ್ಥಿತಿಗತಿ ಯಾವ ರೀತಿ ಇದೆ ಎಂಬುದನ್ನು ಈ ಕೆಳಗಿನ ಮಾಹಿತಿಯೊಡನೆ ಅವಲೋಕಿಸಬಹುದು.

- **ಮೌಲ್ಯಮಾಪನ:** ಒಂದೇ ವ್ಯವಹಾರದಲ್ಲಿ ತೊಡಗಿರುವ ಅನೇಕ ಕಂಪನಿಗಳಿದ್ದಾಗ ಯಾವ ಕಂಪನಿಯ ಷೇರುಗಳು ಖರೀದಿಗೆ ಪ್ರಸ್ತುತ, ಯಾವುದು 'ಅಂಡರ್‌ವ್ಯಾಲ್ಯೂಡ್' ಅಥವಾ 'ಓವರ್‌ವ್ಯಾಲ್ಯೂಡ್' ಆಗಿವೆ ಎಂದು ತಿಳಿಯಲು, ಆಯಾ ವರ್ಗದ ಸರಾಸರಿ ಪ್ರೈಸ್ ಅರ್ನಿಂಗ್‌ಗೆ (ಪಿಇ) ತುಸು ಹತ್ತಿರದ ಪಿಇ ಮೌಲ್ಯ ಇರುವ ಕಂಪನಿಗಳನ್ನು ಪರಿಗಣಿಸಬೇಕಿದೆ. -

- **ತಾಂತ್ರಿಕ ಮತ್ತು ಮೂಲಭೂತ ವಿಶ್ಲೇಷಣೆ:** ಅನೇಕ ಸಂಶೋಧನಾ ನಿರತ ಕಂಪನಿಗಳು ಪ್ರತಿಷ್ಠಿತ ಕಂಪನಿಗಳ ಮಾರುಕಟ್ಟೆ ಸಮೀಕ್ಷೆ ನಡೆಸಿ ತಮ್ಮ ಮೌಲ್ಯಾಂಕವನ್ನು ಆಗಾಗ ನೀಡುತ್ತಿರುತ್ತವೆ. ಇವುಗಳನ್ನು ನಿಮ್ಮ ಹೂಡಿಕೆಗೂ ಮುನ್ನ ಪರಾಮರ್ಶಿಸಿ ನಿಮ್ಮ ಹೂಡಿಕೆಯ ನಿರ್ಧಾರದ ದೃಢತೆಯನ್ನು ಮತ್ತಷ್ಟು ಹೆಚ್ಚಿಸಬಹುದು. ಇಲ್ಲಿ ಆಯಾ ವರ್ಗದ ಇತರೆ ಕಂಪನಿಗಳ ಕ್ರಿಯಾಶೀಲತೆ ಬಗ್ಗೆ ಹಾಗೂ ಅವು ಕಾರ್ಯ ನಿರ್ವಹಿಸುವ ಕ್ಷೇತ್ರದಲ್ಲಿ ಏನೆಲ್ಲಾ ಬದಲಾವಣೆಗಳು ನಡೆಯುತ್ತಿವೆ ಎಂಬ ಬಗ್ಗೆ ಒಟ್ಟಾರೆ ಮಾಹಿತಿ ಸಿಗುತ್ತದೆ. ಇಂತಹ ಸಮೀಕ್ಷೆಗಳ ಅಧ್ಯಯನ, ನಿಮ್ಮ ಒಟ್ಟಾರೆ ಹೂಡಿಕೆಯ ದೃಷ್ಟಿಕೋನವನ್ನು ವಿಸ್ತರಿಸಬಹುದು.

ಒಂದು ವೇಳೆ ನಿಮಗೆ ತಿಳಿಯದ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಮುನ್ನ, ಹೂಡಿಕೆ ತಜ್ಞರ ಸಲಹೆಯನ್ನು ಪಡೆಯುವುದು ಉತ್ತಮವಾಗಿದೆ. ಪ್ರಸ್ತುತ ಮಾರುಕಟ್ಟೆಯ ಇಳಿತ, ಸಾಧಾರಣವಾಗಿ ದೀರ್ಘಾವಧಿ ಹೂಡಿಕೆದಾರರಿಗೆ ಉತ್ತಮ ಅವಕಾಶಗಳನ್ನು ಒದಗಿಸುವ ನಿರೀಕ್ಷೆ ಹುಟ್ಟಿಸುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್:businessdesk@prajavani.co.in

ಮುಂಬೈ ಧಾರಣೆ

ಶೇಂಗಾ
20-11-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1525)
ಒಂದು ವಾರದ ಡೆಲಿವರಿ	1515 (1520)
ಪಾಮ್ ವಾರದ ಡೆಲಿವರಿ	1378 (1383)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ
ಚಿನ್ನ 10ಗ್ರಾಂ
₹75,550 (75,500)
ಬೆಳ್ಳಿ ಕೆ.ಜಿ ₹90,750 (90,900)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14600-14600
ದಾವಣಗೆರೆ	₹9300-9300

ಜಿಡಿಪಿ ಶೇ 6.5ಕ್ಕೆ ಇಳಿಕೆ ಐಸಿಆರ್‌ಎ ಅಂದಾಜು

ಮುಂಬೈ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ (ಜುಲೈನಿಂದ ಸೆಪ್ಟೆಂಬರ್) ಭಾರತದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 6.5ಕ್ಕೆ ಕುಸಿತಗೊಳ್ಳುವ ಸಾಧ್ಯತೆಯಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್‌ನಿಂದ ಜೂನ್) ಜಿಡಿಪಿಯು ಶೇ 6.7ರಷ್ಟು ದಾಖಲಾಗಿತ್ತು. ಎರಡನೇ ತ್ರೈಮಾಸಿಕದ ಅಧಿಕೃತ ವರದಿಯನ್ನು ರಾಷ್ಟ್ರೀಯ ಸಾಂಖ್ಯಿಕ ಇಲಾಖೆಯು ನವೆಂಬರ್ 30ರಂದು ಬಿಡುಗಡೆ ಮಾಡಲಿದೆ.

ಭಾರಿ ಮಳೆ ಹಾಗೂ ಕಾರ್ಪೊರೇಟ್ ವಲಯದಲ್ಲಿನ ಬೆಳವಣಿಗೆ ಕಡಿಮೆ ಆಗಿರುವುದೇ ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಕುಸಿತಕ್ಕೆ ಕಾರಣ ಎಂದು ಬುಧವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ. ಆದರೆ, 2024–25ನೇ ಆರ್ಥಿಕ ವರ್ಷದ ಜಿಡಿಪಿ ಶೇ 7ರಷ್ಟು ಪ್ರಗತಿ ಕಾಣಲಿದೆ. ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಆರ್ಥಿಕ ಚಟುವಟಿಕೆಗಳು ಸದೃಢಗೊಳ್ಳಲಿವೆ ಎಂದು ಹೇಳಿದೆ.

ಸರ್ಕಾರದ ಬಂಡವಾಳ ವೆಚ್ಚ ಇಳಿಕೆ?

2024–25ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರದ ಬಂಡವಾಳ ವೆಚ್ಚವನ್ನು ₹11.11 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ. ಆದರೆ, ಈ ಗುರಿ ಸಾಧನೆ ಕಷ್ಟಕರ. ಆದರೆ, ಕಳೆದ ವರ್ಷದಲ್ಲಿ ಮಾಡಿದ ₹9.5 ಲಕ್ಷ ಕೋಟಿ ವೆಚ್ಚಕ್ಕಿಂತ ಹೆಚ್ಚು ವೆಚ್ಚ ಮಾಡಲಾಗುವುದು ಎಂದು ಕೇಂದ್ರ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ಹೇಳಿದ್ದಾರೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಇಳಿಕೆಯಾದರೂ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒಟ್ಟಾರೆ ಪ್ರಗತಿಯು ಶೇ 6.5ರಿಂದ ಶೇ 7ರಷ್ಟು ದಾಖಲಾಗಲಿದೆ ಎಂದು ಹೇಳಿದ್ದಾರೆ.

ಆಸ್ಟ್ರೇಲಿಯಾ ಪ್ರಧಾನಿ ಅಲ್ಬನೀಸ್–ನರೇಂದ್ರ ಮೋದಿ ಮಾತುಕತೆ

ನವೀಕರಿಸಬಹುದಾದ ಇಂಧನ: ಒಪ್ಪಂದ

ರಿಯೊ ಡಿಜನೈರೊ (ಪಿಟಿಐ): ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಪಾಲುದಾರಿಕೆ ಕುರಿತ ಮಹತ್ವದ ಒಪ್ಪಂದಕ್ಕೆ ಭಾರತ ಹಾಗೂ ಆಸ್ಟ್ರೇಲಿಯಾ ಸಹಿ ಹಾಕಿವೆ.

ಜಿ20 ಶೃಂಗಸಭೆ ಸಂದರ್ಭದಲ್ಲಿ, ಮಾತುಕತೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಆಸ್ಟ್ರೇಲಿಯಾ ಪ್ರಧಾನಿ ಆ್ಯಂಥೋನಿ ಅಲ್ಬನೀಸ್, ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಸಮ್ಮತಿಸಿದರು.

'ರಕ್ಷಣೆ ಮತ್ತು ಭದ್ರತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣ, ಹಡಗು ನಿರ್ಮಾಣ, ಕ್ರೀಡೆ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿನ ಹೊಸ ಸಾಧ್ಯತೆಗಳ ಕುರಿತು ಭಾರತ ಮತ್ತು ಆಸ್ಟ್ರೇಲಿಯಾ ಒಟ್ಟಾಗಿ ಕಾರ್ಯ ನಿರ್ವಹಿಸಲು ಮಾತುಕತೆ ನಡೆಸಲಾಯಿತು' ಎಂದು ಮೋದಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸೌರಶಕ್ತಿ, ಹಸಿರು ಜಲಜನಕ ಹಾಗೂ ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಗಳಲ್ಲಿ ಹೂಡಿಕೆ ಸೇರಿದಂತೆ ಹಲವು ಆದ್ಯತಾ ವಲಯಗಳಲ್ಲಿ ಸಹಕಾರ ಕುರಿತು 'ನವೀಕರಿಸಬಹುದಾದ ಇಂಧನ ಪಾಲುದಾರಿಕೆ' (ಆರ್‌ಇಪಿ) ಚೌಕಟ್ಟು ಒದಗಿಸಲಿದೆ' ಎಂದು ಜಂಟಿ ಪ್ರಕಟಣೆ ತಿಳಿಸಿದೆ.

ಆಸ್ಟ್ರೇಲಿಯಾ ಪ್ರಧಾನಿ ಆ್ಯಂಥೋನಿ ಅಲ್ಬನೀಸ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು — ಪಿಟಿಐ ಚಿತ್ರ

'ಮೇಕ್ ಇನ್ ಇಂಡಿಯಾ' ಹಾಗೂ 'ಫ್ಯೂಚರ್ ಮೇಡ್ ಇನ್ ಆಸ್ಟ್ರೇಲಿಯಾ' ಕಾರ್ಯಕ್ರಮಗಳು ಪರಸ್ಪರ ಪೂರಕವಾಗಿದ್ದು, ಹೊಸ ಉದ್ಯೋಗಾವಕಾಶ ಸೃಷ್ಟಿ, ಆರ್ಥಿಕ ಪ್ರಗತಿಗೆ ನೆರವಾಗಲಿವೆ ಎಂಬುದಾಗಿ ಉಭಯ ನಾಯಕರು ಅಭಿಪ್ರಾಯಪಟ್ಟರು' ಎಂದೂ ಪ್ರಕಟಣೆ ತಿಳಿಸಿದೆ.

ವೇದಾಂತ ಬೋಧನೆ: ಜೋನಸ್ ಕಾರ್ಯಕ್ಕೆ ಶ್ಲಾಘನೆ

ಬ್ರೆಜಿಲ್‌ನಲ್ಲಿ ವೇದಾಂತ ಹಾಗೂ ಭಗವದ್ಗೀತೆ ಕುರಿತು ಪ್ರಚಾರ ಕೈಗೊಂಡಿರುವ ಜೋನಸ್ ಮಸೆಟ್ಟಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಭೇಟಿ ಮಾಡಿ, ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ.

ಅವರ ಕಾರ್ಯ ಕುರಿತು ಮಾಹಿತಿ ಪಡೆದ ಮೋದಿ, 'ಜೋನಸ್ ಮಸೆಟ್ಟಿ ಅವರು ವಿಶ್ವದೆಲ್ಲೆಡೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುತ್ತಿರುವುದು ಶ್ಲಾಘನೀಯ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಸೆಟ್ಟಿ ಕುರಿತು 2020ರ ನವೆಂಬರ್ 29ರಂದು ಬಿತ್ತರಗೊಂಡಿದ್ದ 'ಮನ್ ಕಿ ಬಾತ್'ನಲ್ಲಿ ಮೋದಿ ಪ್ರಸ್ತಾಪಿಸಿದ್ದರು.

ಬಿಳಿ ಧೋತ್ರ ಉಟ್ಟು, ಹಣೆಯಲ್ಲಿ ತಿಲಕ ಧರಿಸಿದ್ದ ಮಸೆಟ್ಟಿ, ತಮ್ಮ ತಂಡದೊಂದಿಗೆ ಜಿ20 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು. ವೃತ್ತಿಯಿಂದ ಮೆಕಾನಿಕಲ್ ಎಂಜಿನಿಯರ್ ಆಗಿದ್ದ ಮಸೆಟ್ಟಿ, ಭಾರತದಲ್ಲಿ ವೇದಾಂತ ಅಧ್ಯಯನ ಕೈಗೊಂಡಿದ್ದರು. ರಿಯೊ ಡಿಜನೈರೊ ಬಳಿಯ ಪೆಟ್ರೊಪೊಲಿಸ್ ನಗರದ ಬೆಟ್ಟದಲ್ಲಿ 'ವಿಶ್ವವಿದ್ಯಾ' ಎಂಬ ಸಂಸ್ಥೆ ಸ್ಥಾಪಿಸಿ, ವೇದಾಂತ ಹಾಗೂ ಭಾರತೀಯ ಸಂಸ್ಕೃತಿ ಕುರಿತ ಶಿಕ್ಷಣ ನೀಡುತ್ತಿದ್ದಾರೆ.

ಕೀವ್: ದಾಳಿ ಎಚ್ಚರಿಕೆ ಅಮೆರಿಕ ರಾಯಭಾರ ಕಚೇರಿ ಬಂದ್

ಕೀವ್ (ಎಪಿ): ಉಕ್ರೇನ್ ರಾಜಧಾನಿ ಕೀವ್‌ನಲ್ಲಿರುವ ತನ್ನ ಕಚೇರಿಯನ್ನು ಮುಚ್ಚಿರುವುದಾಗಿ ಅಮೆರಿಕದ ರಾಯಭಾರ ಕಚೇರಿ ಬುಧವಾರ ಹೇಳಿದೆ.

ರಷ್ಯಾ ಪಡೆಗಳು ವೈಮಾನಿಕ ದಾಳಿ ನಡೆಸುವ ಸಾಧ್ಯತೆ ಕುರಿತು ಮಾಹಿತಿ ಲಭಿಸಿದ ಬೆನ್ನಲ್ಲೇ, ಅಮೆರಿಕ ಈ ನಿರ್ಧಾರ ಕೈಗೊಂಡಿದೆ.

ಕಚೇರಿಯ ಸಿಬ್ಬಂದಿ ಮತ್ತು ಕೀವ್‌ನಲ್ಲಿರುವ ಅಮೆರಿಕ ನಾಗರಿಕರು ತಕ್ಷಣವೇ ಸುರಕ್ಷಿತ ತಾಣಗಳಲ್ಲಿ ಆಶ್ರಯ ಪಡೆಯುವಂತೆ ರಾಯಭಾರ ಕಚೇರಿ ತಿಳಿಸಿದೆ.

ಈ ಮಧ್ಯೆ, ರಷ್ಯಾ ಪಡೆಗಳು ಕ್ಷಿಪಣಿ ದಾಳಿ ನಡೆಸುವ ಬಗ್ಗೆ ಕೀವ್ ಹಾಗೂ ಇತರ ಕೆಲ ಪ್ರದೇಶಗಳಲ್ಲಿ 'ಅಲರ್ಟ್' ಘೋಷಿಸಲಾಗಿದೆ.

‘ಸರ್ಕಾರ ವಿರಮಿಸದು, ಕ್ರಮ ಖಚಿತ’

ಆರು ಜನರ ಹತ್ಯೆ ಅಕ್ಷಮ್ಯ, ಕುಕಿ ಬಂಡುಕೋರರ ವಿರುದ್ಧ ಮಣಿಪುರ ಮುಖ್ಯಮಂತ್ರಿ ಆಕ್ರೋಶ

ಮಣಿಪುರದಲ್ಲಿ ಇತ್ತೀಚೆಗೆ ನಡೆದ ಅಮಾಯಕರ ಹತ್ಯೆ ಖಂಡಿಸಿ ಮತ್ತು ಆಫ್‌ಸ್ಪಾ ಕಾಯ್ದೆ ಜಾರಿಯನ್ನು ವಿರೋಧಿಸಿ ಮಹಿಳೆಯರು ಇಂಫಾಲದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

ಅಮಾಯಕರ ಹತ್ಯೆ ಕೃತ್ಯಗಳಿಗೆ ನಾಗರಿಕ ಸಮಾಜದಲ್ಲಿ ಅವಕಾಶವಿಲ್ಲ, ಬಂಡುಕೋರರಿಗೆ ತಕ್ಕ ಶಿಕ್ಷೆ ಆಗಲಿದೆ. ನೊಂದವರಿಗೆ ನ್ಯಾಯ ಸಿಗಲಿದೆ

ಎನ್.ಬಿರೇನ್ ಸಿಂಗ್
ಮುಖ್ಯಮಂತ್ರಿ, ಮಣಿಪುರ

ಇಂಫಾಲ್ (ಪಿಟಿಐ): ‘ಆರು ಜನ ಅಮಾಯಕರ ಹತ್ಯೆಗೆ ಕಾರಣರಾದ ಕುಕಿ ಬಂಡುಕೋರರಿಗೆ ಕಠಿಣ ಶಿಕ್ಷೆ ಆಗುವವರೆಗೆ ಸರ್ಕಾರ ವಿರಮಿಸದು’ ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಹೇಳಿದ್ದಾರೆ.

ಹತ್ಯೆಕೋರರ ಪತ್ತೆಗೆ ಶೋಧ ನಡೆದಿದೆ. ಮೂವರು ಮಹಿಳೆಯರು, ಮೂವರು ಮಕ್ಕಳ ಶವಗಳು ಜಿರೀಬಾಮ್ ಜಿಲ್ಲೆಯ ನದಿಯಲ್ಲಿ ಪತ್ತೆ ಆಗಿವೆ ಎಂದಿದ್ದಾರೆ.

‘ಎಕ್ಸ್’ ಜಾಲತಾಣದಲ್ಲಿ ವಿಡಿಯೊ ಸಂದೇಶ ಹಂಚಿಕೊಂಡಿರುವ ಅವರು, ‘ಬಂಡುಕೋರರು ಒತ್ತೆ ಇರಿಸಿಕೊಂಡಿದ್ದವರ ಭೀಕರ ಹತ್ಯೆಯನ್ನು ಖಂಡಿಸುತ್ತೇನೆ. ನನಗೆ ತೀವ್ರ ದುಃಖವಾಗಿದೆ’ ಎಂದು ಹೇಳಿದ್ದಾರೆ.

ನ.11ರಂದು ಕುಕಿ ಬಂಡುಕೋರರು ಮತ್ತು ಭದ್ರತಾ ಪಡೆಗಳ ಮಧ್ಯೆ ಗುಂಡಿನ ಚಕಮಕಿ ನಡೆದು, ಜಿರೀಬಾಮ್‌ನ ಶಿಬಿರದಿಂದ ಆರು ಮಂದಿ ನಾಪತ್ತೆಯಾಗಿದ್ದರು. ಅಂದು 40–50 ಶಸ್ತ್ರಸಜ್ಜಿತ ಬಂಡುಕೋರರು ದಾಳಿ ಮಾಡಿದ್ದರು.

ದಾಳಿ ನಡೆಸಿದ ಸಂದರ್ಭದಲ್ಲಿ ಅಂದು ಸಿಆರ್‌ಪಿಎಫ್ ಕ್ಷಿಪ್ರ ಕಾರ್ಯಾಚರಣೆ ನಡೆಸುವ ಮೂಲಕ ಶಿಬಿರದಲ್ಲಿದ್ದ ನೂರಾರು ಜನರನ್ನು ರಕ್ಷಣೆ ಮಾಡಿದೆ ಎಂದು ಶ್ಲಾಘಿಸಿದರು.

ರಾಜ್ಯದಲ್ಲಿ ಶಾಂತಿ ನೆಲಸುವ ಸಂಬಂಧ ಕೇಂದ್ರದ ನಾಯಕರು ಅನಿಯಮಿತವಾಗಿ ಬದ್ಧತೆ ತೋರುತ್ತಿದ್ದಾರೆ ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ಶ್ಲಾಘಿಸಿದರು.

ರಾಜ್ಯದಲ್ಲಿ ಸದ್ಯ ಇರುವ ತುಕಡಿಗಳ ಜೊತೆಗೆ ಕೇಂದ್ರ, ಹೆಚ್ಚುವರಿಯಾಗಿ ಸಿಆರ್‌ಪಿಎಫ್‌ನ 20 ಮತ್ತು ಹೆಚ್ಚುವರಿ 50 ಭದ್ರತಾ ಪಡೆಗಳನ್ನು ಈವರೆಗೆ ನಿಯೋಜಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ವಾರದ ಮಟ್ಟಿಗೆ ಪ್ರತಿಭಟನೆ ಕೈಬಿಟ್ಟ ಕೊಕೊಮಿ

ಕುಕಿ ಬಂಡುಕೋರರ ವಿರುದ್ಧ ಸಮಗ್ರ ಕಾರ್ಯಾಚರಣೆಗೆ ಎನ್‌ಡಿಎ ಶಾಸಕರು ನಿರ್ಣಯ ಕೈಗೊಂಡ ಕಾರಣ ಮಣಿಪುರ ಏಕತೆಯ ಸಮನ್ವಯ ಸಮಿತಿ (ಕೊಕೊಮಿ) ವಾರದ ಮಟ್ಟಿಗೆ ಪ್ರತಿಭಟನೆ ಕೈಬಿಟ್ಟಿದೆ.

ಇಂಫಾಲ ಕಣಿವೆಯ ಪ್ರತಿನಿಧಿಗಳಿರುವ ಕೊಕೊಮಿ ನಾಗರಿಕ ಸಂಘಟನೆಯು, ಕುಕಿ ಬಂಡುಕೋರರಿಂದ ನಡೆದ ಜನರ ಹತ್ಯೆ ಖಂಡಿಸಿ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ.

ಸುದ್ದಿಗಾರರಿಗೆ ಕೊಕೊಮಿ ಸಂಯೋಜಕ ಸೊಮೊರೆಂದ್ರೊ ಥೊಕ್‌ಚೊಮ್ ಈ ಮಾಹಿತಿ ನೀಡಿದ್ದಾರೆ.

‘ಎನ್‌ಡಿಎ ಶಾಸಕರ ನಿರ್ಣಯ ಆಧರಿಸಿ ವಾರದ ಮಟ್ಟಿಗೆ ಪ್ರತಿಭಟನೆ ಹಿಂಪಡೆದಿದ್ದೇವೆ. ನಂತರದ ಬೆಳವಣಿಗೆ ಆಧರಿಸಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಅವರು ತಿಳಿಸಿದರು.

ತಕ್ಷಣಕ್ಕೆ ಪ್ರತಿಭಟನೆ ಕೈಬಿಡುವ ಕೊಕೊಮಿ ನಿರ್ಧಾರವನ್ನು ವಿವಿಧ ಮಹಿಳಾ ಸಂಘಟನೆಗಳು ವಿರೋಧಿಸಿವೆ. ಪ್ರತಿಭಟನೆಯನ್ನು ಮುಂದುವರಿಸಬೇಕು ಎಂದು ಪಟ್ಟುಹಿಡಿದಿವೆ.

ಇಂಟರ್‌ನೆಟ್ ನಿರ್ಬಂಧ ಮುಂದುವರಿಕೆ

ಮುನ್ನೆಚ್ಚರಿಕೆಯಾಗಿ ಮಣಿಪುರದಲ್ಲಿ ವಿಧಿಸಲಾಗಿದ್ದ ಮೊಬೈಲ್ ಇಂಟರ್‌ನೆಟ್ ಸೇವೆ ಮೇಲಿನ ನಿರ್ಬಂಧವನ್ನು ಏಳು ಜಿಲ್ಲೆಗಳಿಗೆ ಅನ್ವಯಿಸಿ ಇನ್ನೂ ಮೂರು ದಿನದ ಮಟ್ಟಿಗೆ (ನ.22ರವರೆಗೆ) ಮುಂದುವರಿಸಲಾಗಿದೆ.

ಸಮಾಜವಿರೋಧಿ ಶಕ್ತಿಗಳು ಸುಳ್ಳು ಸುದ್ದಿಗಳನ್ನು ಹಬ್ಬಿಸದಿರಲಿ ಎಂದು ನ. 16ರಂದು ಎರಡು ದಿನದ ಮಟ್ಟಿಗೆ ನಿರ್ಬಂಧ ಹೇರಲಾಗಿತ್ತು. ಸೋಮವಾರ ಮತ್ತೆರಡು ದಿನಗಳಿಗೆ ವಿಸ್ತರಿಸಲಾಗಿತ್ತು.

ಸಾಮಾನ್ಯ ಜನತೆ, ಆರೋಗ್ಯ ಸೇವೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಆಗುತ್ತಿರುವ ಅನನುಕೂಲತೆಯನ್ನು ಪರಿಗಣಿಸಿ ಬ್ರಾಡ್‌ಬ್ಯಾಂಡ್ ಸೇವೆಗಳ ಮೇಲಿನ ನಿರ್ಬಂಧವನ್ನು ಮಂಗಳವಾರ ಹಿಂಪಡೆಯಲಾಗಿತ್ತು.

ಮಣಿಪುರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಕೃಷ್ಣಕುಮಾರ್ ನೇಮಕ

ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿ ನ್ಯಾ. ಡಿ.ಕೃಷ್ಣಕುಮಾರ್ ಅವರನ್ನು ಬುಧವಾರ ನೇಮಕ ಮಾಡಲಾಗಿದೆ.

ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದ 48 ಗಂಟೆಗಳ ಒಳಗಾಗಿ ಈ ಆದೇಶ ಹೊರಬಿದ್ದಿದೆ.

ಹಾಲಿ ಮುಖ್ಯ ನ್ಯಾಯಮೂರ್ತಿ ಸಿದ್ಧಾರ್ಥ್ ಮೃದುಲ್ ಅವರಿಗೆ 62 ವರ್ಷಗಳು ಪೂರ್ಣಗೊಂಡ ಕಾರಣ ಅವರ ಅಧಿಕಾರಾವಧಿಯು ಗುರುವಾರ ಮುಕ್ತಾಯವಾಗಲಿದೆ. ಕೃಷ್ಣಕುಮಾರ್ ಅವರು ಇದಕ್ಕೂ ಮುನ್ನ ಮದ್ರಾಸ್ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿ ಆಗಿದ್ದರು. ಇವರು 2025 ಮೇ 21ರಂದು ನಿವೃತ್ತರಾಗಲಿದ್ದಾರೆ.

ಲಾವೊಸ್‌ನಲ್ಲಿ ಭಾರತ–ಚೀನಾ ರಕ್ಷಣಾ ಸಚಿವರ ಚರ್ಚೆ

‘ವಿಶ್ವಾಸ ಮರುಸ್ಥಾಪನೆಗೆ ಕ್ರಮ’

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಚೀನಾದ ರಕ್ಷಣಾ ಸಚಿವ ಡೊಂಗ್ ಜುನ್ ಅವರನ್ನು ಭೇಟಿಯಾಗಿ ಚರ್ಚಿಸಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪರಸ್ಪರ ವಿಶ್ವಾಸ ಮರುಸ್ಥಾಪಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ನೀಲನಕ್ಷೆ ಸಿದ್ಧಪಡಿಸಲು ಭಾರತ ಮತ್ತು ಚೀನಾ ಸಮ್ಮತಿಸಿವೆ.

ಚೀನಾದ ರಕ್ಷಣಾ ಸಚಿವ ಡೊಂಗ್ ಜುನ್ ಅವರೊಂದಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬುಧವಾರ ಲಾವೊಸ್‌ನ ರಾಜಧಾನಿ ವಿಯೆಂಟೈನಲ್ಲಿ ನಡೆಸಿದ ನಿಯೋಗ ಮಟ್ಟದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

‘ಅನಪೇಕ್ಷಿತ ಗಡಿ ಕಲಹ’ದಿಂದ ಪಾಠ ಕಲಿಯಬೇಕಾಗಿದೆ. ಗಾಲ್ವನ್‌ನಂಥ ಘಟನೆ ಮರುಕಳಿಸದಂತೆ ನಿಗಾವಹಿಸಬೇಕು ಎಂದು ರಾಜನಾಥ್ ಸಿಂಗ್ ಹೇಳಿದರು.

ಪೂರ್ವ ಲಡಾಖ್‌ನ ಭಾರತ ಮತ್ತು ಚೀನಾ ಗಡಿಯಲ್ಲಿ ಉಭಯ ರಾಷ್ಟ್ರಗಳು ನಿಯೋಜಿಸಿದ್ದ ಸೇನಾ ವಾಪಸಾತಿ ಪ್ರಕ್ರಿಯೆ ಮುಗಿದ ವಾರದ ನಂತರ ಈ ಮಾತುಕತೆ ನಡೆದಿದೆ.

10 ರಾಷ್ಟ್ರಗಳು ಸದಸ್ಯರಾಗಿರುವ ಆಸಿಯಾನ್ ಶೃಂಗಸಭೆಗೆ ಈ ಮುಖಂಡರು ಲಾವೊಸ್‌ಗೆ ಆಗಮಿಸಿದ್ದರು. ನಿಯೋಗ ಹಂತದ ಚರ್ಚೆ ಕುರಿತು ರಾಜನಾಥ್ ಸಿಂಗ್ ಅವರ ಕಚೇರಿಯು ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದೆ.

ಉಭಯ ದೇಶಗಳು ನೆರೆರಾಷ್ಟ್ರಗಳಾಗಿಯೇ ಮುಂದುವರಿಯಬೇಕಾಗಿದೆ. ಹೀಗಾಗಿ, ಬಿಕ್ಕಟ್ಟಿನ ಬದಲಾಗಿ ಸಹಕಾರ ಕುರಿತು ಹೆಚ್ಚಿನ ಗಮನ ಹರಿಸಬೇಕಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು ಎಂದಿದೆ.

ಡೆಮ್‌ಚೊಕ್ ಮತ್ತು ಡೆಪ್ಸಾಂಗ್ ಪ್ರದೇಶದಿಂದ ಸೇನೆಯನ್ನು ಉಭಯ ರಾಷ್ಟ್ರಗಳ ಸೇನೆ ಹಿಂಪಡೆದಿವೆ. ಅಲ್ಲದೆ, ಉಭಯ ಸೇನೆಗಳು ಗಸ್ತು ಚಟುವಟಿಕೆಗಳನ್ನು ಆರಂಭಿಸಿವೆ.

ಲಾವೊಸ್‌ನಲ್ಲಿ ಆಸಿಯಾನ್ ರಾಷ್ಟ್ರಗಳ ರಕ್ಷಣಾ ಸಚಿವರ ಸಭೆಯು ನಡೆಯುತ್ತಿದೆ. ಭಾರತವಲ್ಲದೆ ಚೀನಾ, ಆಸ್ಟ್ರೇಲಿಯ, ಜಪಾನ್, ನ್ಯೂಜಿಲೆಂಡ್, ಕೊರಿಯಾ, ರಷ್ಯಾ, ಅಮೆರಿಕದ ರಕ್ಷಣಾ ಮುಖ್ಯಸ್ಥರು ಭಾಗವಹಿಸಿದ್ದಾರೆ.

‘ಸಂಧಾನ ಮಾತುಕತೆ ವಾತಾವರಣ ಈಗಿಲ್ಲ’

ಮುಖ್ಯಾಂಶಗಳು

- ರಷ್ಯಾ ರಾಯಭಾರಿ ಡೆನಿಸ್ ಅಲಿಪೊವ್ ಪ್ರತಿಕ್ರಿಯೆ
- ಸಮಸ್ಯೆ ಪರಿಹಾರಕ್ಕೆ ‘ಬ್ರಿಕ್ಸ್’ ಪೂರಕ ವೇದಿಕೆ– ರಷ್ಯಾ ವಿಶ್ವಾಸ

ನವದೆಹಲಿ (ಪಿಟಿಐ): ‘ಸ್ವೀಕಾರಾರ್ಹ ಅಂಶ’ಗಳ ಆಧಾರದಲ್ಲಿ ಉಕ್ರೇನ್‌ನ ಜೊತೆ ಚರ್ಚೆಗೆ ರಷ್ಯಾ ಸಿದ್ಧವಿದೆ. ಆದರೆ ಪ್ರಸ್ತುತ, ಸಂಧಾನ ಮಾತುಕತೆಗೆ ಪೂರಕವಾದ ವಾತಾವರಣ ಇಲ್ಲ’ ಎಂದು ಭಾರತದಲ್ಲಿನ ರಷ್ಯಾದ ರಾಯಭಾರಿ ಡೆನಿಸ್ ಅಲಿಪೊವ್ ಹೇಳಿದ್ದಾರೆ.

‘ಬ್ರಿಕ್ಸ್ ಮತ್ತು ಅದರ ಸಾಧ್ಯತೆಗಳು’ ವಿಷಯ ಕುರಿತ ಸಂವಾದದ ವೇಳೆ ಪ್ರಶ್ನೆಯೊಂದಕ್ಕೆ ಈ ಪ್ರತಿಕ್ರಿಯೆ ನೀಡಿದರು. ಬ್ರಿಕ್ಸ್ ಶೃಂಗವನ್ನು ಶ್ಲಾಘಿಸಿದ ಅವರು, ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕತೆಯ ಈ ಸಮೂಹವು ‘ಹೊಸ ವಾಸ್ತವಗಳ ಪ್ರತಿಬಿಂಬ’ವಾಗಿದೆ ಎಂದು ಹೇಳಿದರು.

ರಷ್ಯಾದ ‘ಸ್ಪುಟ್ನಿಕ್’ ಸುದ್ದಿಸಂಸ್ಥೆ ಈ ಸಂವಾದವನ್ನು ಆಯೋಜಿಸಿತ್ತು. 2022ರ ಫೆಬ್ರುವರಿಯಲ್ಲಿ ಆರಂಭವಾದ ರಷ್ಯಾ ಮತ್ತು ಉಕ್ರೇನ್ ಬಿಕ್ಕಟ್ಟು ಮತ್ತು ಸಂಘರ್ಷ ಒಂದು ಸಾವಿರ ದಿನಗಳವರೆಗೆ ಮುಂದುವರಿದಿದೆ.

ಉಕ್ರೇನ್ ಜೊತೆಗೆ ಮುಖಾಮುಖಿ ಚರ್ಚೆಗೆ ರಷ್ಯಾ ಸಿದ್ಧವಿದೆಯೇ ಎಂಬ ಪ್ರಶ್ನೆಗೆ, ‘ನೇರವಾಗಿ ಹೇಳುವುದಾದರೆ ಸದ್ಯ ಅಂತಹ ಪರಿಸ್ಥಿತಿ ಇಲ್ಲ. ಸ್ಪಷ್ಟ ಆಧಾರ ಇದ್ದಲ್ಲಿ ಚರ್ಚೆಗೆ ರಷ್ಯಾ ಸಿದ್ಧವಿದೆ’ ಎಂದು ತಿಳಿಸಿದರು.

ಉಕ್ರೇನ್‌ನಲ್ಲಿರುವ ರಷ್ಯನ್ನರ ಭದ್ರತೆ–ಸುರಕ್ಷತೆ ಹಾಗೂ ರಷ್ಯಾ ವಲಯದಲ್ಲಿರುವ ಉಕ್ರೇನಿಯನ್ನರ ಸುರಕ್ಷತೆಗೆ ತಮ್ಮ ದೇಶದ ದೃಷ್ಟಿಕೋನದಿಂದ ಪೂರಕ ವಾತಾವರಣ ಇರಬೇಕು ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ನಡೆಯುತ್ತಿರುವ ಎರಡು ಯುದ್ಧಗಳಿಂದಾಗಿ ಭವಿಷ್ಯದಲ್ಲಿ ಜಾಗತಿಕ ಸ್ವರೂಪ ಬದಲಾಗಲಿದೆಯೇ ಎಂಬ ಪ್ರಶ್ನೆಗೆ, ‘ಬಿಕ್ಕಟ್ಟು ನಿವಾರಣೆಗೆ ಬ್ರಿಕ್ಸ್ ಶೃಂಗವು ಪ್ರಮುಖ ವೇದಿಕೆಯಾಗಬಹುದು’ ಎಂದು ಹೇಳಿದರು.

‘ಬ್ರಿಕ್ಸ್’ಗೆ ಅಂತಹ ಸಾಮರ್ಥ್ಯವಿದೆ. ಆದರೆ, ಸದ್ಯದ ಬಿಕ್ಕಟ್ಟನ್ನೂ ಅದು ನಿವಾರಿಸ ಬಲ್ಲುದೇ, ಇಲ್ಲವೇ ಎಂಬುದನ್ನು ಕಾದುನೋಡಬೇಕಾಗಿದೆ ಎಂದರು.

ಕಟಕ್: ಬಾಲಕಿ ಮೇಲೆ ಅತ್ಯಾಚಾರ

ಕಟಕ್ (ಪಿಟಿಐ): ಒಡಿಶಾದ ಕಟಕ್ ಜಿಲ್ಲೆಯ ತ್ರಿಸೂಲಿಯಾ ಪ್ರದೇಶದ ಇಟ್ಟಿಗೆ ತಯಾರಿಕಾ ಘಟಕವೊಂದರಲ್ಲಿ ಮಂಗಳವಾರ ರಾತ್ರಿ ಎಂಟು ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆದಿದೆ. ಪ್ರಕರಣದ ಸಂಬಂಧ 16 ವರ್ಷದ ಬಾಲಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಟಕ್‌ನಲ್ಲಿರುವ ಎಸ್‌ಸಿಬಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಬಾಲಕಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆಕೆಯ ಸ್ಥಿತಿ ಗಂಭೀರವಾಗಿದೆ ಎಂದು ಅವರು ಹೇಳಿದ್ದಾರೆ.

ಬಾಲಕಿಯ ಪೋಷಕರು ಇಟ್ಟಿಗೆ ತಯಾರಿಕಾ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಬಾರಂಗ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ‘ಜಾರ್ಖಂಡ್‌ನ 16 ವರ್ಷದ ಬಾಲಕ ಈ ಕೃತ್ಯ ಎಸಗಿದ್ದಾನೆ’ ಎಂದು ತಿಳಿಸಿದ್ದಾರೆ.

‘ಬಾಲಕ ಕೂಡ ಅದೇ ಇಟ್ಟಿಗೆ ತಯಾರಿಕಾ ಘಟಕದಲ್ಲಿ ಕೆಲಸ ಮಾಡುತ್ತಿದ್ದ. ಆ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ’ ಎಂದು ಕಟಕ್ ಡಿಸಿಪಿ ಜಗಮೋಹನ್ ಮೀನಾ ಹೇಳಿದ್ದಾರೆ.

‘ಆರೋಪಿಯ ಪತ್ತೆಗೆ ಮೂರು ಪೊಲೀಸ್ ತಂಡಗಳನ್ನು ರಚಿಸಲಾಗಿತ್ತು. ಬಾಲಕ ಮತ್ತು ಸಂತ್ರಸ್ತ ಬಾಲಕಿಯ ಕುಟುಂಬದವರೂ ಜಾರ್ಖಂಡ್‌ನವರಾಗಿರುವುದರಿಂದ ಒಂದು ತಂಡವನ್ನು ಜಾರ್ಖಂಡ್‌ಗೆ ಕಳುಹಿಸಲಾಗಿತ್ತು. ಮತ್ತೊಂದು ತಂಡ ಒಡಿಶಾದ ಇತರ ಜಿಲ್ಲೆಗಳಲ್ಲಿ ಹಾಗೂ ಇನ್ನೊಂದು ತಂಡವು ಘಟನೆ ನಡೆದ ಸ್ಥಳದ ಸುತ್ತಮುತ್ತ ಹುಡುಕಾಟ ನಡೆಸಿತ್ತು’ ಎಂದು ಮೀನಾ ಮಾಹಿತಿ ನೀಡಿದ್ದಾರೆ.

ಈ ತಿಂಗಳ ಆರಂಭದಲ್ಲಿ ಕಟಕ್‌ನಲ್ಲಿ 19 ವರ್ಷದ ಕಾಲೇಜು ವಿದ್ಯಾರ್ಥಿನಿಯೊಬ್ಬಳ ಅತ್ಯಾಚಾರ ಪ್ರಕರಣ ನಡೆದಿತ್ತು. ಇದಕ್ಕೆ ಸಂಬಂಧಿಸಿದಂತೆ ಒಬ್ಬ ಬಾಲಕ ಸೇರಿದಂತೆ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದರು.

ವಿಮಾನದಲ್ಲಿ ಲೈಂಗಿಕ ಕಿರುಕುಳ: ಬಂಧನ

ಪಣಜಿ (ಪಿಟಿಐ): ದೆಹಲಿಯಿಂದ ಗೋವಾಕ್ಕೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಮೇಲೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಸಹ ಪ್ರಯಾಣಿಕ 23 ವರ್ಷದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಏರ್ ಇಂಡಿಯಾ ವಿಮಾನದಲ್ಲಿ ಮಂಗಳವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.20ರ ನಡುವೆ ಈ ಘಟನೆ ನಡೆದಿದೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

28 ವರ್ಷದ ಮಹಿಳೆಯ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಆರೋಪಿ, ಹೊದಿಕೆಯನ್ನು ತೆಗೆದುಕೊಳ್ಳುವ ನೆಪದಲ್ಲಿ ಅನುಚಿತವಾಗಿ ವರ್ತಿಸಿದ್ದಾನೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ. ಕೃತ್ಯದ ವೇಳೆ ಆರೋಪಿ ಉದ್ದೇಶಪೂರ್ವಕವಾಗಿಯೇ ಮಹಿಳೆಯ ಪಕ್ಕದಲ್ಲಿ ಹೊದಿಕೆಯನ್ನು ಇರಿಸಿದ್ದ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ಗೋವಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಯುತ್ತಿದ್ದಂತೆಯೇ ಮಹಿಳೆ ಪೊಲೀಸರಿಗೆ ದೂರು ನೀಡಿದ್ದಾರೆ.

ಆರೋಪಿಯನ್ನು ಹರಿಯಾಣದ ಪಾನಿಪತ್ ಮೂಲದ ಜಿತೇಂದರ್ ಜಂಗಿಯಾ ಎಂದು ಗುರುತಿಸಲಾಗಿದ್ದು, ಡಾಬೋಲಿಮ್ ವಿಮಾನ ನಿಲ್ದಾಣದ ಪೊಲೀಸರು ಬಂಧಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಿದಂಬರಂ ವಿರುದ್ಧದ ವಿಚಾರಣೆಗೆ ತಡೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಪಿ.ಚಿದಂಬರಂ ವಿರುದ್ಧ ಜಾರಿ ನಿರ್ದೇಶನಾಲಯ ಮೊಕದ್ದಮೆ ಹೂಡಿದ್ದ ಏರ್‌ಸೆಲ್–ಮ್ಯಾಕ್ಸಿಸ್ ಪ್ರಕರಣದಲ್ಲಿ ಕೆಳಹಂತದ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ದೆಹಲಿ ಹೈಕೋರ್ಟ್ ಬುಧವಾರ ತಡೆಯಾಜ್ಞೆ ನೀಡಿದೆ.

ವಿಚಾರಣೆಯನ್ನು ಜನವರಿ 22ಕ್ಕೆ ಮುಂದೂಡಲಾಗಿದೆ.

ಎ.ಆರ್. ರೆಹಮಾನ್ ಸಾಯಿರಾ ವಿಚ್ಛೇದನ

ಮುಂಬೈ (ಪಿಟಿಐ): ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಹಾಗೂ ಅವರ ಪತ್ನಿ ಸಾಯಿರಾ ಬಾನು 29 ವರ್ಷಗಳ ವೈವಾಹಿಕ ಬದುಕಿಗೆ ವಿಚ್ಛೇದನದ ಮೂಲಕ ಅಂತ್ಯ ಹಾಡಿದ್ದಾರೆ.

‘ಸಂಬಂಧದಲ್ಲಿ ಭಾವುಕ ನೆಲೆಗಟ್ಟಿನಲ್ಲಿ ಒತ್ತಡ ಉಂಟಾಗಿದ್ದರಿಂದ ಬೇರೆಯಾಗಲು ನಿರ್ಧರಿಸಿದರು’ ಎಂದು ವಕೀಲೆ ವಂದನಾ ಶಾ ತಿಳಿಸಿದ್ದಾರೆ.

ವಿಚ್ಛೇದನದ ಸಂಗತಿಯನ್ನು ಜಂಟಿ ಪತ್ರಿಕಾ ಹೇಳಿಕೆಯಿಂದ ಕೂಡ ಸ್ಪಷ್ಟಪಡಿಸಿದ್ದಾರೆ.

ದೆಹಲಿಯಲ್ಲಿ ಮಾಲಿನ್ಯ: ಶೇ 50 ಸರ್ಕಾರಿ ಸಿಬ್ಬಂದಿಗೆ ಮನೆಯಿಂದಲೇ ಕೆಲಸ

ನವದೆಹಲಿಯಲ್ಲಿ ವಾಯುಮಾಲಿನ್ಯ ಸ್ಥಿತಿ ಇನ್ನಷ್ಟು ಗಂಭೀರವಾಗಿದ್ದು, ಅಕ್ಷರಧಾಮ ದೇವಸ್ಥಾನ ಬುಧವಾರ ಬೆಳಿಗ್ಗೆ ಕಂಡ ಬಗೆ ಇದು — ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ಸರ್ಕಾರಿ ಕಚೇರಿಗಳಲ್ಲಿನ ಶೇ 50ರಷ್ಟು ಸಿಬ್ಬಂದಿ ಮನೆಯಿಂದ ಕೆಲಸ ಮಾಡಲಿದ್ದಾರೆ. ವಾಯು ಗುಣಮಟ್ಟವು ದಿನೇ ದಿನೇ ಹದಗೆಡುತ್ತಿರುವುದು ಇದಕ್ಕೆ ಕಾರಣ.

ದೆಹಲಿಯ ಪರಿಸರ ಸಚಿವ ಗೋಪಾಲ್ ರಾಯ್ ಅವರು ‘ಎಕ್ಸ್’ ಮೂಲಕ ಈ ವಿಷಯ ತಿಳಿಸಿದ್ದಾರೆ. ಖಾಸಗಿ ಸಂಸ್ಥೆಗಳೂ ಇದೇ ಕ್ರಮ ಅನುಸರಿಸಬೇಕು ಎಂದು ಆಗ್ರಹಪಡಿಸಿದ್ದಾರೆ.

ಖಾಸಗಿ ಸಂಸ್ಥೆಗಳು ಪಾಳಿ ಬದಲಾವಣೆಯ ಅವಧಿಯನ್ನು ಬೆಳಗಿನ 10.30ರಿಂದ 11ರವರೆಗೆ ಮರುನಿಗದಿ ಮಾಡಬೇಕು. ಇದೇ ಕ್ರಮವನ್ನು ದೆಹಲಿ ಸರ್ಕಾರ ತನ್ನ ಸಿಬ್ಬಂದಿಗೆ ಜಾರಿಗಳಿಸಿದೆ ಎಂದು ತಿಳಿಸಿದ್ದಾರೆ.

ಸಾರ್ವಜನಿಕ ಸೇವೆಗೆ ಧಕ್ಕೆ ಆಗದಂತೆ ಆರೋಗ್ಯ, ಒಳಚರಂಡಿ, ಸಾರ್ವಜನಿಕ ಸಾರಿಗೆ, ಅಗ್ನಿಶಾಮಕ ಸೇವೆ, ನೀರು ಸರಬರಾಜು, ಇತರೆ ತುರ್ತು ಸೇವೆಗಳ ಇಲಾಖೆಗಳವರು ಪೂರ್ಣಪ್ರಮಾಣದಲ್ಲಿ ಕೆಲಸ ಮಾಡುವರು.

ದೆಹಲಿಯಲ್ಲಿ ಬುಧವಾರ ಬೆಳಿಗ್ಗೆ ವಾಯು ಗುಣಮಟ್ಟ ಸೂಚ್ಯಂಕವು 426 ಇತ್ತು. ಇಲ್ಲಿನ ನಿವಾಸಿಗಳಿಗೆ ಕಣ್ಣು ಉರಿ, ಉಸಿರಾಟದ ಸಮಸ್ಯೆಗಳು ಹಾಗೂ ಇತರೆ ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ.

ರಾಜಧಾನಿ ನೆರೆಯ ಉತ್ತರ ಪ್ರದೇಶ, ಹರಿಯಾಣ, ರಾಜಸ್ಥಾನ, ಮಧ್ಯಪ್ರದೇಶ ಸರ್ಕಾರಗಳು ಮಾಲಿನ್ಯ ನಿಯಂತ್ರಿಸಲು ಅಗತ್ಯ ಮುನ್ನೆಚ್ಚರಿಕೆ ವಹಿಸುತ್ತಿಲ್ಲ ಎಂದು ಗೋಪಾಲ್ ರಾಯ್ ಅಸಮಾಧಾನ ವ್ಯಕ್ತಪಡಿಸಿದರು.

ಈ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದ್ದು, ಪ್ರತಿಕ್ರಿಯಾತ್ಮಕ ಕ್ರಮಗಳ ಕೊರತೆ ಇದೆ. ಮಾಲಿನ್ಯ ತಡೆಯಲು ಈ ಸರ್ಕಾರಗಳು ಕೂಡ ದೆಹಲಿ ಸರ್ಕಾರದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ಅವರು ಕೋರಿದ್ದಾರೆ.

‘ಆನ್‌ಲೈನ್ ತರಗತಿ’

ಜೈಪುರ: ದೆಹಲಿ–ಎನ್‌ಸಿಆರ್ ವ್ಯಾಪ್ತಿಗೆ ಒಳಪಡುವ ಖೈರ್ಥಲ್–ತಿಜಾರಾ ಜಿಲ್ಲೆಯಲ್ಲಿ ಎಲ್ಲ ಶಾಲೆಗಳು ಆನ್‌ಲೈನ್ ತರಗತಿ ನಡೆಸಬೇಕು ಎಂದು ರಾಜಸ್ಥಾನ ಸರ್ಕಾರ ಆದೇಶಿಸಿದೆ.

ವಾಯುಮಾಲಿನ್ಯದ ಕಾರಣ ದೆಹಲಿ ಎನ್‌ಸಿಆರ್ ವ್ಯಾಪ್ತಿ ಪ್ರದೇಶಗಳ ಎಲ್ಲ ಸರ್ಕಾರಗಳು ಭೌತಿಕ ತರಗತಿಗಳ ಕುರಿತು ಸ್ಪಷ್ಟ ತೀರ್ಮಾನ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಹೀಗಾಗಿ ಜಿಲ್ಲಾಡಳಿತ ಈ ಆದೇಶ ನೀಡಿದೆ.

ಮಿನಿ ಒಲಿಂಪಿಕ್ಸ್: ಇಯಾನ್, ಗೌರಿಗೆ ಪ್ರಶಸ್ತಿ

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ಮುಕ್ತಾಯವಾದ ಮಿನಿ ಒಲಿಂಪಿಕ್ ಕ್ರೀಡಾಕೂಟದಲ್ಲಿ ಪ್ರಶಸ್ತಿ ಗಳಿಸಿದ ಅಥ್ಲೀಟ್‌ಗಳೊಂದಿಗೆ ಕೆಒಎ ಕಾರ್ಯದರ್ಶಿ ಟಿ. ಅನಂತರಾಜು, ಸಚಿವರಾದ ಎಂ.ಸಿ. ಸುಧಾಕರ್, ಜಿ.ಪರಮೇಶ್ವರ್, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್, ಸಚಿವ ಮಧು ಬಂಗಾರಪ್ಪ ಪಾಲ್ಗೊಂಡರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಇಯಾನ್ ಅಮನ್ನ ಮತ್ತು ಬೆಳಗಾವಿಯ ಗೌರಿ ಪೂಜಾರಿ ಬುಧವಾರ ಮುಕ್ತಾಯವಾದ ಮಿನಿ ಒಲಿಂಪಿಕ್ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಗೌರವ ಗಳಿಸಿದರು.

ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕೂಟದಲ್ಲಿ ಇಯಾನ್ ಅವರು ಬಾಲಕರ ವಿಭಾಗದಲ್ಲಿ ಒಟ್ಟು 691 ಅಂಕ, ಬಾಲಕಿಯರ ವಿಭಾಗದಲ್ಲಿ ಗೌರಿ 804 ಗಳಿಸಿದರು.

ಶ್ರೇಷ್ಠ ಪ್ರದರ್ಶನ ನೀಡಿದ 15 ಅಥ್ಲೀಟ್‌ಗಳಿಗೆ ತಲಾ ₹5 ಸಾವಿರ ನಗದು ಬಹುಮಾನ ನೀಡಲಾಯಿತು.

ಶಿಕ್ಷಣದೊಂದಿಗೆ ಕ್ರೀಡೆಗೂ ಆದ್ಯತೆ: ಮಧು ಬಂಗಾರಪ್ಪ

‘ಶಿಕ್ಷಣ ವ್ಯವಸ್ಥೆಯಲ್ಲಿ ಓದಿನೊಂದಿಗೆ ಕ್ರೀಡೆಗೂ ಆದ್ಯತೆ ನೀಡಬೇಕು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅವಕಾಶ ಕಲ್ಪಿಸುವುದು ನಮ್ಮ ಗುರಿ. ಶಾಲೆ ಮತ್ತು ಪಿಯುಸಿ ಮಟ್ಟದಲ್ಲಿ ಮಕ್ಕಳಿಗೆ ಕ್ರೀಡಾ ತರಬೇತಿಗಾಗಿ ದೈಹಿಕ ಶಿಕ್ಷಕರ ನೇಮಕಕ್ಕೆ ಆದ್ಯತೆ ನೀಡಲಾಗುವುದು’ ಎಂದು ರಾಜ್ಯ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಕ್ರೀಡಾಕೂಟದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ನಾವು ವಿದ್ಯಾರ್ಥಿಗಳಾಗಿದ್ದಾಗ ಕ್ರೀಡೆಗಳಿಗೆ ಇಷ್ಟೊಂದು ಸೌಲಭ್ಯಗಳು ಇರಲಿಲ್ಲ. ಈಗ ಉತ್ತಮ ಮೂಲಸೌಲಭ್ಯಗಳಿವೆ. ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು’ ಎಂದರು. ಗೃಹ ಸಚಿವ ಜಿ. ಪರಮೇಶ್ವರ್, ‘ಕ್ರೀಡೆಯಲ್ಲಿ ತೊಡಗಿಕೊಂಡವರು ಓದಿನಲ್ಲಿ ಹಿಂದುಳಿಯುತ್ತಾರೆ ಎಂಬ ಅಭಿಪ್ರಾಯ ತಪ್ಪು. ಎರಡನ್ನೂ ಸಮತೋಲನ ಮಾಡಲು ಸಾಧ್ಯವಿದೆ. ನಾನು ರಾಜ್ಯ ಮತ್ತು ರಾಷ್ಟ್ರ ಮಟದಲ್ಲಿ ಅಥ್ಲೀಟ್ ಆಗಿದ್ದವನು. ಜೊತೆಗೆ ಉತ್ತಮ ಅಂಕಗಳನ್ನೂ ಪಡೆದಿದ್ದೇನೆ’ ಎಂದರು.

ಫಲಿತಾಂಶಗಳು (ವಿಜೇತರು):

ಬಾಲಕರು: ಅಥ್ಲೆಟಿಕ್ಸ್: ಇಯಾನ್ ಅಮನ್ನ (ದಕ್ಷಿಣ ಕನ್ನಡ; 691 ಅಂಕ) **ಬ್ಯಾಸ್ಕೆಟ್‌ಬಾಲ್:** ಎಂಸಿಎಚ್‌ಎಸ್ -1, ಪಿಪಿಸಿ -2, ಮೈಸೂರು -3 ಫುಟ್‌ಬಾಲ್’: ಹಾಸನ-1, ಕೊಡಗು-2 **ಹ್ಯಾಂಡ್‌ಬಾಲ್:** ಹಾವೇರಿ-1, ಬೆಳಗಾವಿ-2, ಚಿಕ್ಕಬಳ್ಳಾಪುರ-3, ಚಿಕ್ಕಮಗಳೂರು-3 ಹಾಕಿ: ಕೊಡಗು-1, ಧಾರವಾಡ-2 ಕಬಡ್ಡಿ: ತುಮಕೂರು-1, ಶಿವಮೊಗ್ಗ-2, ಉತ್ತರ ಕನ್ನಡ-3, ವಿಜಯಪುರ-3 ಕೊಕ್ಕೊ: ಬೆಳಗಾವಿ-1, ಮೈಸೂರು-2, ಬಾಗಲಕೋಟೆ-3, ಹಾವೇರಿ-3 ನೆಟ್‌ಬಾಲ್: ಚಾಮರಾಜನಗರ-1, ಹಾಸನ-2, ಬೆಂಗಳೂರು ನಗರ-3, ಮೈಸೂರು-3 ಈಜು: ಸಮರ್ಥ್ ಬಿ.ಎಸ್. ಗೌಡ ಮತ್ತು ಶರಣ್ ಎಸ್ (ತಲಾ 33 ಅಂಕ) ಟೇಬಲ್ ಟೆನಿಸ್: ಬೆಂಗಳೂರು ನಗರ-1, ದಕ್ಷಿಣ ಕನ್ನಡ-2 ವಾಲಿಬಾಲ್: ವಿಜಯಪುರ-1, ವಿದ್ಯಾನಗರ-2 ವೇಟ್‌ಲಿಫ್ಟಿಂಗ್: ದಕ್ಷಿಣ ಕನ್ನಡ-1, ಬೆಂಗಳೂರು ನಗರ-2

ಬಾಲಕಿಯರು: ಅಥ್ಲೆಟಿಕ್ಸ್: ಗೌರಿ ಪೂಜಾರಿ (804 ಅಂಕಗಳು–ವಿಜೇತರು; ಬೆಳಗಾವಿ) ಬ್ಯಾಸ್ಕೆಟ್‌ಬಾಲ್: ಮೈಸೂರು-1, ಬೀಗಲ್ಸ್ ಬಿ.ಸಿ-2, ಯಂಗ್ ಒರಿಯನ್ಸ್-3 ಫುಟ್‌ಬಾಲ್: ಬೆಳಗಾವಿ-1, ಉತ್ತರಕನ್ನಡ-2 **ಹ್ಯಾಂಡ್‌ಬಾಲ್:** ಚಿತ್ರದುರ್ಗ-1, ಹಾಸನ-2, ಬೆಳಗಾವಿ-3, ತುಮಕೂರು-3 ಹಾಕಿ: ಹಾಸನ-1, ಧಾರವಾಡ-2 ಕಬಡ್ಡಿ: ಹಾವೇರಿ-1, ಬೆಂಗಳೂರು ಗ್ರಾಮಾಂತರ-2, ಬೆಂಗಳೂರು ನಗರ-3, ಮಂಡ್ಯ-3 ಕೊಕ್ಕೊ: ಗದಗ-1, ಮೈಸೂರು-2, ಕೋಲಾರ-3, ಧಾರವಾಡ-3 ನೆಟ್‌ಬಾಲ್: ಹಾಸನ-1, ಚಾಮರಾಜನಗರ-2, ಬೆಂಗಳೂರು ನಗರ-3, ಮೈಸೂರು-3 ಈಜು: ನೈಶಾ (31 ಅಂಕ) ಟೇಬಲ್ ಟೆನಿಸ್: ಮೈಸೂರು-1, ಬೆಂಗಳೂರು ನಗರ-2 ವೇಟ್ ಲಿಫ್ಟಿಂಗ್: ಬೆಳಗಾವಿ-1, ದಕ್ಷಿಣ ಕನ್ನಡ-2 ವಾಲಿಬಾಲ್: ಕೊಪ್ಪಳ-1, ಹಾಸನ-2

ಸಮಗ್ರ ವಿಭಾಗ

ಜಿಮ್ನಾಸ್ಟಿಕ್ಸ್: ಬೆಂಗಳೂರು ಅರ್ಬನ್-1, ಧಾರವಾಡ-2 ತುಮಕೂರು-3 **ಬಾಕ್ಸಿಂಗ್:** ಬೆಂಗಳೂರು ಅರ್ಬನ್ -1, ಉತ್ತರಕನ್ನಡ-2 ಟೇಕ್ವಾಂಡೊ: ಬೆಂಗಳೂರು ನಗರ-1, ಬೆಳಗಾವಿ-2, ರಾಮನಗರ-3

ಕ್ರಾಸ್ ಕಂಟ್ರಿ ಮಂಗಳೂರು ವಿ.ವಿ ‘ಹ್ಯಾಟ್ರಿಕ್’ ಸಾಧನೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಅಮೋಘ ಸಾಮರ್ಥ್ಯ ಪ್ರದರ್ಶಿಸಿದ ಮಂಗಳೂರು ವಿಶ್ವವಿದ್ಯಾಲಯ ತಂಡ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳೆಯರ ಕ್ರಾಸ್ ಕಂಟ್ರಿಯಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಈ ಮೂಲಕ ಹ್ಯಾಟ್ರಿಕ್ ಸಾಧನೆಗೆ ಪಾತ್ರರಾದರು.

ಭಾರತೀಯ ವಿಶ್ವವಿದ್ಯಾಲಯಗಳ ಸಂಘ ಮತ್ತು ಮಂಗಳೂರು ವಿಶ್ವವಿದ್ಯಾಲಯ ಸಹಯೋಗದಲ್ಲಿ ಆಳ್ವಾಸ್ ಕಾಲೇಜು ಬುಧವಾರ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನಲ್ಲಿ ಮಂಗಳೂರು ವಿವಿಯನ್ನು ಪ್ರತಿನಿಧಿಸಿದ ಆಳ್ವಾಸ್ ಕಾಲೇಜು ವಿದ್ಯಾರ್ಥಿನಿಯರು ಒಟ್ಟು 33 ಪಾಯಿಂಟ್ ಕಲೆಹಾಕಿದರು.

ಉಪ್ಪಿನಂಗಡಿಯಲ್ಲಿ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲೂ ಮಂಗಳೂರು ವಿವಿ ಚಾಂಪಿಯನ್ ಆಗಿತ್ತು. ಮಹಿಳೆಯರ ವಿಭಾಗದಲ್ಲಿ ರೋಹ್ತಕ್‌ನ ಎಂಡಿ ವಿವಿಯ ಅಂಕಿತಾ ಚಿನ್ನ ಗೆದ್ದರು. ಮೊದಲ ಮೂರು ಸ್ಥಾನ ಗಳಿಸಿದ ತಂಡಗಳಿಗೆ ಆಳ್ವಾಸ್ ಶಿಕ್ಷಣ ಸಂಸ್ಥೆಯಿಂದ ಕ್ರಮವಾಗಿ ₹25 ಸಾವಿರ, ₹15 ಸಾವಿರ ಮತ್ತು ₹10 ಸಾವಿರ ನಗದು ಬಹುಮಾನ ನೀಡಲಾಯಿತು.

ವೈಯಕ್ತಿಕ ಫಲಿತಾಂಶಗಳು: ಅಂಕಿತಾ (ಎಂ.ಡಿ ವಿವಿ, ರೋಹ್ತಕ್)–1. ಕಾಲ: 37 ನಿ 40 ಸೆ, ಬಸಂತಿ ಕುಮಾರಿ (ಮಂಗಳೂರು ವಿವಿ)–2. ಕಾಲ: 37:52, ಸೋನಿಯಾ (ಮಂಗಳೂರು ವಿವಿ)–3. ಕಾಲ: 37:55, ಕೆ.ಎಂ.ಯಶ್ ಸಚ್ಚು (ಸಿಎಸ್‌ಜೆಎಂ ಕಾನ್ಪುರ)–4. ಕಾಲ: 38:6, ಸೃಷ್ಟಿ ರೆಡೇಕರ್ (ಶಿವಾಜಿ ವಿವಿ ಕೊಲ್ಹಾಪುರ)–5. ಕಾಲ: 38:16

ಟಿ20 ರ‍್ಯಾಂಕಿಂಗ್ ಹಾರ್ದಿಕ್‌ಗೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತದ ಹಾರ್ದಿಕ್ ಪಾಂಡ್ಯ ಐಸಿಸಿ ಟಿ20 ರ‍್ಯಾಂಕಿಂಗ್‌ನ ಆಲ್‌ರೌಂಡರ್‌ಗಳ ವಿಭಾಗದಲ್ಲಿ ಮತ್ತೊಮ್ಮೆ ಅಗ್ರಸ್ಥಾನಕ್ಕೇರಿದ್ದಾರೆ. ಬ್ಯಾಟರ್‌ಗಳ ವಿಭಾಗದಲ್ಲಿ ತಿಲಕ್ ವರ್ಮಾ ಮೂರನೇ ಸ್ಥಾನಕ್ಕೇರಿದ್ದಾರೆ.

ಆತಿಥೇಯರಿಗೆ ಫೈನಲ್‌ನಲ್ಲಿ ಚೀನಾ ವಿರುದ್ಧ 1–0 ಗೆಲುವು, ಮಿಂಚಿದ ದೀಪಿಕಾ

ಟ್ರೋಫಿ ಉಳಿಸಿಕೊಂಡ ಭಾರತ

ಚೀನಾ ಮೇಲೆ 1–0 ಗೋಲಿನಿಂದ ಜಯಗಳಿಸಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ ತಂಡದ ಆಟಗಾರ್ತಿಯರು ಟ್ರೋಫಿಯೊಡನೆ ಸಂಭ್ರಮಿಸಿದರು ಪಿಟಿಐ ಚಿತ್ರ

ರಾಜಗೀರ್ (ಬಿಹಾರ), (ಪಿಟಿಐ): ಯುವ ಆಟಗಾರ್ತಿ ದೀಪಿಕಾ ಮತ್ತೊಮ್ಮೆ ಮಿಂಚಿದರು. ಅವರು ಆಕರ್ಷಕ 'ರಿವರ್ಸ್ ಹಿಟ್' ಮೂಲಕ ಗಳಿಸಿದ ಗೋಲಿನಿಂದ ಭಾರತ 1-0 ಯಿಂದ ಒಲಿಂಪಿಕ್ ಬೆಳ್ಳಿ ವಿಜೇತ ಚೀನಾ ತಂಡವನ್ನು ಸೋಲಿಸಿ ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಂಡಿತು.

ಫೈನಲ್ ಪಂದ್ಯದ 31ನೇ ನಿಮಿಷ ಪೆನಾಲ್ಟಿ ಕಾರ್ನರ್ ಮೂಲಕ ದೀಪಿಕಾ ನಿರ್ಣಾಯಕ ಗೋಲನ್ನು ಗಳಿಸಿದರು. ಟೂರ್ನಿಯಲ್ಲಿ 11ನೇ ಗೋಲು ಗಳಿಸುವ ಮೂಲಕ ಅತ್ಯಧಿಕ ಸ್ಕೋರರ್ ಗೌರವಕ್ಕೂ ಈ ಆಟಗಾರ್ತಿ ಪಾತ್ರರಾದರು. ಲೀಗ್ ಹಂತದಲ್ಲೂ ಭಾರತ 3-0 ಯಿಂದ ಚೀನಾ ಮೇಲೆ ಜಯಗಳಿಸಿತ್ತು.

ಭಾರತಕ್ಕೆ ಇದು ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ (ಎಸಿಟಿ) ಮೂರನೇ ಪ್ರಶಸ್ತಿ. ಈ ಹಿಂದೆ 2016ರಲ್ಲಿ ಮತ್ತು 2023ರಲ್ಲಿ ಚಾಂಪಿಯನ್ ಆಗಿತ್ತು. ಚೀನಾ ಮೂರನೇ ಬಾರಿ ರನ್ನರ್ ಅಪ್ ಆಯಿತು.

ಭಾರತ ಮತ್ತು ಚೀನಾ ತಂಡಗಳ ನಡುವೆ ಫೈನಲ್ ಹೋರಾಟದಿಂದ ಕೂಡಿತ್ತು. ಎರಡೂ ತಂಡಗಳು ಆಕ್ರಮಣ, ಪ್ರತಿ ಆಕ್ರಮಣಕ್ಕೆ ಇಳಿದವು. ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಉಭಯ ತಂಡಗಳ 'ಬ್ಯಾಕ್‌ಲೈನ್' ಬಲಿಷ್ಠವಾಗಿತ್ತು. ಭಾರತದ ಕಡೆ 17 ವರ್ಷ ವಯಸ್ಸಿನ ಸುನೆಲಿಟಾ ಟೊಪ್ಪೊ

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಚುರುಕಿನ ಡ್ರಿಬ್ಲಿಂಗ್ ಕೌಶಲದಿಂದ ರಕ್ಷಣೆ ವಿಭಾಗದಲ್ಲಿ ಗಮನಸೆಳೆದರು.

ಎರಡನೇ ಕ್ವಾರ್ಟರ್‌ನಲ್ಲಿ (18ನೇ ನಿಮಿಷ) ಚೀನಾಕ್ಕೆ ದೊರೆತ ಪೆನಾಲ್ಟಿ ಕಾರ್ನರ್‌ನಲ್ಲಿ ಜಿನ್ಜುವಾಂಗ್ ತಾನ್ ಅವರ ಉತ್ತಮ ಪ್ರಯತ್ನವನ್ನು ಭಾರತದ ಎರಡನೇ ಗೋಲ್‌ಕೀಪರ್ ಬಿಚುದೇವಿ ಕರಿಬಮ್ ಅವರು ಅಮೋಘ ಡೈವಿಂಗ್ ಮೂಲಕ ತಡೆದಿದ್ದರು. ಭಾರತ ಮುಂದಿನ ಎರಡು ನಿಮಿಷಗಳಲ್ಲಿ ನಾಲ್ಕು ಪೆನಾಲ್ಟಿ ಕಾರ್ನರ್‌ಗಳನ್ನು ಪಡೆಯಿತು. ಇದರಲ್ಲಿ ದೀಪಿಕಾ ಹೆಚ್ಚಿನ ಅವಕಾಶ ಪಡೆದರೂ ಅವೆಲ್ಲ ವ್ಯರ್ಥವಾದವು.

ಮಧ್ಯಂತರದ ಅವಧಿ ಹೀಗೆ ಗೋಲಿಲ್ಲದೇ ಕಳೆಯಿತು.

ಆದರೆ ವಿರಾಮದ ನಂತರ ಭಾರತ ತಂಡಕ್ಕೆ ದೊರೆತ ಐದನೇ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ದೀಪಿಕಾ ತಪ್ಪು ಮಾಡಲಿಲ್ಲ. ಭಾರತಕ್ಕೆ ಈ ಗೋಲು ಉತ್ಸಾಹ ಮೂಡಿಸಿತು. 42ನೇ ನಿಮಿಷ ದೀಪಿಕಾ ಮುನ್ನಡೆ ಹೆಚ್ಚಿಸುವ ಸುವರ್ಣಾವಕಾಶ ಪಡೆದಿದ್ದರು. ತಮ್ಮನ್ನು ಉದ್ದೇಶಪೂರ್ವಕವಾಗಿ ಬೀಳಿಸಿದ್ದಕ್ಕೆ ಅವರಿಗೆ 'ಪೆನಾಲ್ಟಿ' ದೊರೆತಿತ್ತು. ಆದರೆ ಅವರ ಯತ್ನವನ್ನು ಚೀನಾ ಗೋಲ್‌ಕೀಪರ್ ಲಿ ಟಿಂಗ್ ತಡೆದರು.

ಕೆಲ ನಿಮಿಷಗಳ ನಂತರ ಆರನೇ ಪೆನಾಲ್ಟಿ ಕಾರ್ನರ್‌ನಲ್ಲಿ ಸುಶೀಲಾ ಚಾನು ಗೋಲು ಯತ್ನಕ್ಕೂ ಟಿಂಗ್ ಗೋಡೆಯಾದರು. ಇದಾದ ನಂತರ ಸ್ಕೋರ್ ಸಮಗೊಳಿಸಲು ಚೀನಾ ಶತಪ್ರಯತ್ನ ನಡೆಸಿದರೂ, ಭಾರತದ ರಕ್ಷಣೆ ಅದಕ್ಕೆ ಅವಕಾಶ ಕೊಡಲಿಲ್ಲ.

ಜಪಾನ್‌ಗೆ 3ನೇ ಸ್ಥಾನ: ಮೂರನೇ ಸ್ಥಾನ ನಿರ್ಧಾರಕ್ಕೆ ನಡೆದ ಪಂದ್ಯದಲ್ಲಿ ಜಪಾನ್ 4–1 ರಿಂದ ಮಲೇಷ್ಯಾ ತಂಡವನ್ನು ಸೋಲಿಸಿತು.

ತಲಾ ₹10 ಲಕ್ಷ ಬಹುಮಾನ

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ವಿಜೇತ ಭಾರತದ ತಂಡದ ಪ್ರತಿಯೊಬ್ಬ ಆಟಗಾರ್ತಿಗೆ ತಲಾ ₹10 ಲಕ್ಷ ನಗದು ಬಹುಮಾನ ನೀಡಲು ಬಿಹಾರ ಸರ್ಕಾರ ನಿರ್ಧರಿಸಿದೆ. ಮುಖ್ಯ ಕೋಚ್ ಹರೇಂದ್ರ ಸಿಂಗ್ ಅವರಿಗೆ ₹10 ಲಕ್ಷ ಬಹುಮಾನ ಮತ್ತು ನೆರವು ಸಿಬ್ಬಂದಿಗೆ ತಲಾ ₹5 ಲಕ್ಷ ನೀಡಲಾಗುವುದು.

ನಡಾಲ್ ಭಾವೋದ್ವೇಗ

ಡೇವಿಸ್ ಕಪ್: ನೆದರ್ಲೆಂಡ್ಸ್ ಎದುರು ಸೋತ ಸ್ಪೇನ್ ತಂಡ

ಡೇವಿಸ್ ಕಪ್ ಕ್ವಾರ್ಟರ್‌ಫೈನಲ್ ಪಂದ್ಯದ ನಂತರ ಪ್ರೇಕ್ಷಕರತ್ತ ಕೈಬೀಸಿದ ನಡಾಲ್

ಮಲಗಾ (ಸ್ಪೇನ್), (ಎಪಿ): ವೃತ್ತಿಪರರಾಗಿ ಕೊನೆಯ ಪಂದ್ಯ ಆಡಿದ ಟೆನಿಸ್ ದಿಗ್ಗಜ ರಫೆಲ್ ನಡಾಲ್ 4-6, 4-6ರಲ್ಲಿ ವಿಶ್ವ ಕ್ರಮಾಂಕದಲ್ಲಿ 80ನೇ ಸ್ಥಾನದಲ್ಲಿರುವ ಬೊಟಿಕ್ ವಾನ್ ಡಿ ಝಂಡ್‌ಶುಲ್ಪ್ ಅವರಿಗೆ ಸೋತರು. ಡೇವಿಸ್ ಕಪ್ ಕ್ವಾರ್ಟರ್‌ಫೈನಲ್‌ನಲ್ಲಿ ನೆದರ್ಲೆಂಡ್ಸ್ ತಂಡ ಮಂಗಳವಾರ 2–1 ರಿಂದ ಆತಿಥೇಯ ಸ್ಪೇನ್ ತಂಡವನ್ನು ಸೋಲಿಸಿತು.

'ಕ್ಲೇ ಅಂಕಣದ ಸಾಮ್ರಾಟ' ಎನಿಸಿದ ನಡಾಲ್ ಎರಡು ದಶಕಗಳ ವೃತ್ತಿಜೀವನಕ್ಕೆ ಈ ಪಂದ್ಯದ ಮೂಲಕ ಭಾವನಾತ್ಮಕ ವಿದಾಯ ಹೇಳಿದರು. ತಮ್ಮ ವರ್ಣರಂಜಿತ ಟೆನಿಸ್ ಜೀವನದಲ್ಲಿ 22 ಗ್ರ್ಯಾಂಡ್‌ಸ್ಲಾಮ್ ಸಹಿತ ಹಲವು ಪ್ರಮುಖ ಪ್ರಶಸ್ತಿಗಳನ್ನು ನಡಾಲ್ ಗೆದ್ದಿದ್ದಾರೆ. ಇದರಲ್ಲಿ 14 ರೋಲಂಡ್ ಗ್ಯಾರೋಸ್‌ನ ಆವೆ ಅಂಕಣದಲ್ಲಿ ಗೆದ್ದ ಫ್ರೆಂಚ್ ಓಪನ್ ಪ್ರಶಸ್ತಿಗಳು ಸೇರಿವೆ.

ಡೇವಿಸ್ ಕಪ್‌ನ ಮೊದಲ ಸಿಂಗಲ್ಸ್‌ನಲ್ಲಿ ನಡಾಲ್ ಸೋಲುವುದು ಖಚಿತವಾದಂತೆ 'ರಫಾ, ರಫಾ ರಫಾ...' ಎಂಬ ಘೋಷಣೆಗಳು ಜೋರಾದವು. ಸೆಂಟರ್‌ಕೋರ್ಟ್‌ನಲ್ಲಿ ಅವರಿಗೆ ವಿದಾಯದ ಸಂದರ್ಭದಲ್ಲಿ ವಿಶೇಷ ಸಮಾರಂಭ ಹಮ್ಮಿಕೊಳ್ಳಲಾಯಿತು. ತಮ್ಮ ಯಶೋಗಾಥೆ ಕುರಿತ ವಿಡಿಯೊ ಪ್ರದರ್ಶಿಸುವಾಗ ನಡಾಲ್ ಅವರಿಗೆ ಭಾವನೆಗಳನ್ನು ತಡೆಯಲಾಗಲಿಲ್ಲ. ಕಣ್ಣೀರಧಾರೆ ಕಾಣಿಸಿತು.

'ನನಗೆ ಟೆನಿಸ್ ಆಡಿ ದಣಿವಾಗಿಲ್ಲ. ಆದರೆ ಇನ್ನಷ್ಟು ಆಡಲು ದೇಹ ಕೇಳುತ್ತಿಲ್ಲ. ವಾಸ್ತವವನ್ನು ಸ್ವೀಕರಿಸಬೇಕಾಗಿದೆ. ನನ್ನ ನೆಚ್ಚಿನ ಹವ್ಯಾಸದಿಂದ ಬದುಕು ರೂಪಿಸಲು ಸಾಧ್ಯವಾಗಿರುವುದು ನನಗೆ ಅತೀವ ಸಂತೃಪ್ತಿ ನೀಡಿದೆ. ಇಷ್ಟು ದೀರ್ಘ ಕಾಲ ಆಡುತ್ತೇನೆ ಎಂದು ಅಂದುಕೊಂಡಿರಲೇ ಇಲ್ಲ. ನಾನು ಬದುಕಿಗೆ ಮತ್ತು ಸದಾ ಬೆನ್ನಿಗೆ ನಿಂತ ಅಭಿಮಾನಿಗಳಿಗೆ ಕೃತಜ್ಞ' ಎಂದು 38 ವರ್ಷ ವಯಸ್ಸಿನ ತಾರಾ ಆಟಗಾರ ಪ್ರತಿಕ್ರಿಯಿಸಿದರು.

ಸಮಾರಂಭದ ತಕ್ಷಣ ನಡಾಲ್, ಸ್ಪೇನ್‌ನ ಇತರ ಆಟಗಾರರನ್ನು ಅಲಂಗಿಸಿ ಅಂಕಣದಿಂದ ನಿರ್ಗಮಿಸಿದರು. ಅದೇ ವೇಳೆ ಪ್ರೇಕ್ಷಕರ ಗ್ಯಾಲರಿಯತ್ತ ಕೊನೆಯ ಬಾರಿ ಎರಡೂ ಕೈಗಳನ್ನು ಬೀಸಿ ಕೃತಜ್ಞತೆ ಸಲ್ಲಿಸಿದರು.

ಎರಡನೇ ಸಿಂಗಲ್ಸ್‌ನಲ್ಲಿ ಕಾರ್ಲೊಸ್ ಅಲ್ಕರಾಜ್ 7-6 (0), 6-3 ರಿಂದ 40ನೇ ಕ್ರಮಾಂಕದ ನೆದರ್ಲೆಂಡ್ಸ್ ಆಟಗಾರ ಟಲ್ಲಾನ್ ಗ್ರೀಕ್‌ಸ್ಪೂರ್ ಅವರನ್ನು ಮಣಿಸಿದರು. ಆದರೆ ನಿರ್ಣಾಯಕ ಡಬಲ್ಸ್‌ನಲ್ಲಿ ಅಲ್ಕರಾಜ್–ಮಾರ್ಸೆಲ್ ಗ್ರಾನೊಲರ್ಸ್ ಜೋಡಿ 6-7 (4), 6-7 (3) ರಲ್ಲಿ ವಾನ್ ಡಿ ಝಂಡ್‌ಶುಲ್ಪ್– ವೆಸ್ಲಿ ಕೂಲಾಫ್ ಜೋಡಿಗೆ ಮಣಿಯಿತು. 35 ವರ್ಷದ ವೆಸ್ಲಿ ಕೂಲಾಫ್ ಕೂಡ ತಮ್ಮ ವೃತ್ತಿಬದುಕಿನ ಕೊನೆಯ ಟೂರ್ನಿ ಆಡುತ್ತಿದ್ದಾರೆ.

ತಮ್ಮ ಪಂದ್ಯ ಸೋತ ನಂತರ ಅವರು ತಂಡದ ಇತರ ಆಟಗಾರರನ್ನು ಹುರಿದುಂಬಿಸಿದರು. ಕಿರಿಯ ಆಟಗಾರರು ಪಾಯಿಂಟ್ಸ್ ಗಳಿಸುವಾಗ ಸಂಭ್ರಮಿಸಿದರು.

ಗಮನ ಸೆಳೆದ ಬೂಮ್ರಾ–ಕೊಹ್ಲಿ ಅಭ್ಯಾಸ

ಪ್ರಜಾವಾಣಿ ವಾರ್ತೆ

ಭಾರತ ತಂಡದ ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ ಸೇರಿದಂತೆ ಆಟಗಾರರು ಮತ್ತು ನೆರವು ಸಿಬ್ಬಂದಿ ಎಎಫ್‌ಪಿ ಚಿತ್ರ

ಪರ್ತ್: ಭಾರತ ಕ್ರಿಕೆಟ್ ತಂಡದ ಆಟಗಾರರ ನೆಟ್ಸ್ ಅಭ್ಯಾಸವನ್ನು ವೀಕ್ಷಿಸಲು ಮಾಧ್ಯಮಗಳಿಗೆ ಅವಕಾಶ ನೀಡಲಾಗಿತ್ತು. ಇದು ಸ್ಥಳೀಯ ಮಾಧ್ಯಮಗಳಲ್ಲಿ ಅಚ್ಚರಿಗೆ ಕಾರಣವಾಯಿತು. ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಟೆಸ್ಟ್ ಆರಂಭವಾಗಲು ಎರಡು ದಿನಗಳಿರುವಾಗ ಭಾರತದ ಆಟಗಾರರ ತಾಲೀಮು ಗಮನ ಸೆಳೆಯುವಂತಿತ್ತು.

ಗಾಯಗೊಂಡಿರುವ ಶುಭಮನ್ ಗಿಲ್ ಅವರು ಬುಧವಾರ ನಡೆದ ನೆಟ್ಸ್‌ನಲ್ಲಿ ಸಕ್ರಿಯವಾಗಿರಲಿಲ್ಲ. ಕನ್ನಡಿಗ ಪ್ರಸಿದ್ಧ ಕೃಷ್ಣ ಉತ್ತಮ ವೇಗದ ಎಸೆತಗಳನ್ನು ಪ್ರಯೋಗಿಸುತ್ತಿದ್ದರು. ಪರಿಣಾಮಕಾರಿ ಬೌನ್ಸರ್‌ಗಳನ್ನೂ ಅವರು ಹಾಕಿದರು. ಅವರ ಎಸೆತಗಳನ್ನು ಕೆ.ಎಲ್. ರಾಹುಲ್, ಯಶಸ್ವಿ ಜೈಸ್ವಾಲ್, ಧ್ರುವ ಜುರೇಲ್ ಮತ್ತು ದೇವದತ್ತ ಪಡಿಕ್ಕಲ್ ಅವರು ಎದುರಿಸಿದರು. ಇದರೊಂದಿಗೆ ಪಡಿಕ್ಕಲ್ ಅವರು ಭಾರತದ ಬಳಗದಲ್ಲಿ ಸೇರ್ಪಡೆಗೊಂಡಿರುವುದು ಖಚಿತವಾಯಿತು.

ಆದರೆ ಈ ನೆಟ್ಸ್‌ನಲ್ಲಿ ಪ್ರಮುಖವಾಗಿ ಕಣ್ಮನ ಸೆಳೆದಿದ್ದು ನಾಯಕ ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಅವರ ನಡುವಣ ಹಣಾಹಣಿ. ವಿಶ್ವದ ಅತ್ಯಂತ ಪರಿಣಾಮಕಾರಿ ಮತ್ತು ಬ್ಯಾಟರ್‌ಗಳಿಗೆ ದುಃಸ್ವಪ್ನವಾಗಿರುವ ವೇಗಿ ಮತ್ತು ಶ್ರೇಷ್ಠ ಬ್ಯಾಟರ್ ನಡುವಿನ ಪೈಪೋಟಿ ಅದು.

ನೆಟ್ಸ್‌ಗೆ ಬರುವ ಮುನ್ನ ಕೆಲವು ಬ್ಯಾಟ್‌ಗಳನ್ನು ಪರೀಕ್ಷಿಸಿಕೊಂಡು ಬಂದಿದ್ದ ಕೊಹ್ಲಿ ಅವರ ಆಟವನ್ನು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ತದೇಕಚಿತ್ತದಿಂದ ವೀಕ್ಷಿಸಿದರು. ಅವರೊಂದಿಗೆ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಮತ್ತು ಸದಸ್ಯ ಸುಬ್ರತೊ ಬ್ಯಾನರ್ಜಿ ಕೂಡ ಇದ್ದರು. ಅಜಿತ್ ಮತ್ತು ಸುಬ್ರತೊ ಅವರು ಬೂಮ್ರಾ ಜೊತೆಗೆ ಸಮಾಲೋಚನೆ ನಡೆಸಿದರು.

ಗುಜರಾತ್– ಡೆಲ್ಲಿ ಪಂದ್ಯ ರೋಚಕ ಟೈ

ನೊಯ್ಡಾ (ಪಿಟಿಐ): ತೀವ್ರ ಕುತೂಹಲ ಕೆರಳಿಸಿದ ಗುಜರಾತ್ ಜೈಂಟ್ಸ್ ಮತ್ತು ದಬಾಂಗ್ ಡೆಲ್ಲಿ ನಡುವಣ ಪ್ರೊ ಕಬಡ್ಡಿ ಲೀಗ್ ಪಂದ್ಯ 39-39 ರಲ್ಲಿ ಬುಧವಾರ ರೋಚಕ ಟೈನೊಂದಿಗೆ ಅಂತ್ಯ ಕಂಡಿತು. ಉಭಯ ತಂಡಗಳು ತಲಾ ಮೂರು ಅಂಕ ಪಡೆದವು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಈ ಪಂದ್ಯದ ಕೊನೆಯ ನಿಮಿಷ ಅಶು ಮಲಿಕ್ ಡೆಲ್ಲಿ ತಂಡಕ್ಕೆ ಬೋನಸ್ ಅಂಕ ತಂದರಾದರೂ ಜಿತೇಂದರ್ ಯಾದವ್ ಅವರ ಟ್ಯಾಕಲ್‌ನಲ್ಲಿ ಬಂದಿಯಾದರು. ಜೈಂಟ್ಸ್ ಪರ ಪ್ರತೀಕ್ ದಹಿಯಾ 20 ಅಂಕಗಳನ್ನು ಕಲೆಹಾಕಿದರು.

ದಬಾಂಗ್ ಡೆಲ್ಲಿ ತಂಡದ ಪರ ಅಶು ಮಲಿಕ್ (11 ಅಂಕ) ಸೂಪರ್ ಟೆನ್ ಸಾಹಸ ಮಾಡಿದರು.

ದಿನದ ಎರಡನೇ ಪಂದ್ಯದಲ್ಲಿ ತೆಲುಗು ಟೈಟನ್ಸ್ 31-29 ಪಾಯಿಂಟ್‌ಗಳಿಂದ ಯು–ಮುಂಬಾ ತಂಡವನ್ನು ಮಣಿಸಿತು.

ಟೆನಿಸ್: ಪ್ರಜ್ವಲ್, ಸುಲ್ತಾನೋವ್ ಪ್ರಿಕ್ವಾರ್ಟರ್‌ಗೆ

ಕಲಬುರಗಿ: ಭಾರತದ ಪ್ರಜ್ವಲ್ ದೇವ್, ಕರಣ್ ಸಿಂಗ್, ಉಜ್ಬೇಕಿಸ್ತಾನದ ಖುಮೋಯುನ್ ಸುಲ್ತಾನೋವ್, ರಷ್ಯಾದ ಬಾಗ್ದಾನ್ ಬಾಬ್‌ರೋವ್ ಅವರು ಇಲ್ಲಿ ನಡೆಯುತ್ತಿರುವ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಆದರೆ ಮೂರನೇ ಶ್ರೇಯಾಂಕದ ಇಗೊರ್ ಅಗಾಫೋನೊವ್ ಗಾಯಗೊಂಡು ಟೂರ್ನಿಯಿಂದ ಹೊರಬಿದ್ದರು.

ಬುಧವಾರ ಮೊದಲ ಸುತ್ತಿನ ಪಂದ್ಯದಲ್ಲಿ ಕನ್ನಡಿಗ ಎಸ್.ಡಿ. ಪ್ರಜ್ವಲ್ ದೇವ್ ಅವರು 6-2, 6-3 ರಿಂದ ಜಪಾನಿನ ಕಜುಕಿ ನಿಶಿವಾಕಿ ಅವರನ್ನು ಪರಾಭವಗೊಳಿಸಿದರು.

ನಾಲ್ಕನೇ ಶ್ರೇಯಾಂಕದ ಕರಣ್ ಸಿಂಗ್ 7-6, 6-0 ಯಿಂದ ಆದಿತ್ಯ ಬಾಲಶೇಖರ ವಿರುದ್ಧ ಸುಲಭ ಜಯ ಸಾಧಿಸಿದರು.

ಅಗ್ರ ಶೇಯಾಂಕದ ಸುಲ್ತಾನೋವ್ ಅವರು 7-6, 6-1ರಿಂದ ಭಾರತದ ವಿಷ್ಣುವರ್ಧನ್ ವಿರುದ್ಧ ಗೆಲುವು ಪಡೆದರೆ, ಎರಡನೇ ಶ್ರೇಯಾಂಕಿತ ಬಾಗ್ದಾನ್ ಬಾಬ್‌ರೋವ್ 6-2, 6-0ಯಿಂದ ಭಾರತದ ಮನಸ್ ಧಾಮ್ನೆ ವಿರುದ್ಧ ನೇರ ಸೆಟ್‌ಗಳ ಜಯ ಸಾಧಿಸಿದರು.

ಭಾರತದ ಸಿದ್ಧಾರ್ಥ್ ರಾವತ್ ಅವರು 6-2, 2-0ಯಿಂದ ಮೂರನೇ ಶ್ರೇಯಾಂಕದ ರಷ್ಯಾದ ಇಗೋರ್ ಅಗಾಫೋನೊವ್ ವಿರುದ್ಧ ಮುನ್ನಡೆಯಲ್ಲಿದ್ದರು. ಈ ವೇಳೆ ಅಗಾಫೋನೊವ್ ಅವರು ಗಾಯಗೊಂಡು ಪಂದ್ಯದಿಂದ ನಿವೃತ್ತರಾಗಬೇಕಾಯಿತು.

ಇತರ ಪಂದ್ಯಗಳಲ್ಲಿ ಅಮೆರಿಕದ ನಿಕ್ ಚಾಪೆಲ್ 5-7, 6-3, 6-2ರಿಂದ ಪ್ರಣವ್ ಕಾರ್ತಿಕ್ ಅವರನ್ನು, ಇಂಡೋನೇಷ್ಯಾದ ಅಂಥೋನಿ ಸುಸಾಂತೊ 6-1, 6-7, 7-6 ರಿಂದ ಭಾರತದ ಪ್ರಿಯಾಂಶು ಚೌಧರಿ ವಿರುದ್ಧ ಗೆಲುವು ಸಾಧಿಸಿದರು.

ಎರಡನೇ ಸುತ್ತಿಗೆ ಲಕ್ಷ್ಯ, ಸಿಂಧು

ಶೆನ್‌ಝೆನ್ (ಚೀನಾ), (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಭಿನ್ನ ರೀತಿಯ ಗೆಲುವುಗಳೊಂದಿಗೆ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್ ಎರಡನೇ ಸುತ್ತಿಗೆ ತಲುಪಿದರು.

29 ವರ್ಷ ವಯಸ್ಸಿನ ಸಿಂಧು 21-17, 21-19 ರಿಂದ ತಮಗಿಂತ ಮೇಲಿನ ಕ್ರಮಾಂಕದ ಬುಸಾನನ್ ಒಂಗ್ಬಾಮ್‌ರುಂಗ್‌ಫಾನ್ ಅವರನ್ನು ಸೋಲಿಸಿದರು. ಸಿಂಧು ಅವರಿಗೆ ಇದು ಥಾಯ್ಲೆಂಡ್ ಆಟಗಾರ್ತಿಯ ವಿರುದ್ಧ 21 ಪಂದ್ಯಗಳಲ್ಲಿ 20ನೇ ಗೆಲುವು.

ಲಕ್ಷ್ಯ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ 21-14 13-21, 21-13 ರಿಂದ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಹಿಮ್ಮೆಟ್ಟಿಸಿದರು. ಆ ಮೂಲಕ ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕಕ್ಕೆ ನಡೆದ ಪಂದ್ಯದಲ್ಲಿ ಅನುಭವಿಸಿದ ಸೋಲಿಗೆ ಸೇಡು ತೀರಿಸಿಕೊಂಡರು.

ಯುವ ಆಟಗಾರ್ತಿ ಮಾಳವಿಕಾ ಬನ್ಸೋಡ್ 20-22, 23-21, 21-16 ರಿಂದ ಡೆನ್ಮಾರ್ಕ್‌ನ ಲಿನಿ ಜಾರ್ಸ್‌ಫೆಲ್ಡ್ ಅವರನ್ನು ಸೋಲಿಸಿದರು.

ಕೇರಳದಲ್ಲಿ ಆಡಲಿರುವ ಅರ್ಜೆಂಟೀನಾ ತಂಡ

ತಿರುವನಂತಪುರಂ (ಪಿಟಿಐ): ದಿಗ್ಗಜ ಲಯೊನೆಲ್ ಮೆಸ್ಸಿ ಸೇರಿದಂತೆ ಅರ್ಜೆಂಟೀನಾ ತಂಡವು, ಮುಂದಿನ ವರ್ಷಕೇರಳದಲ್ಲಿ ಅಂತರರಾಷ್ಟ್ರೀಯ ಪಂದ್ಯವೊಂದನ್ನು ಆಡಲಿದೆ ಎಂದು ಕೇರಳದ ಕ್ರೀಡಾ ಸಚಿವ ವಿ.ಅಬ್ದುರಹಿಮಾನ್ ತಿಳಿಸಿದ್ದಾರೆ.

ಕೇರಳದ ರಾಜ್ಯ ಸರ್ಕಾರದ ಸಂಪೂರ್ಣ ಉಸ್ತುವಾರಿಯಲ್ಲೇ ಈ ಪಂದ್ಯ ನಡೆಯಲಿದೆ. ಈ ದೊಡ್ಡ ಫುಟ್‌ಬಾಲ್ ಪಂದ್ಯಾವಳಿಗೆ ರಾಜ್ಯದ ವರ್ತಕ ಸಮೂಹ ಹಣಕಾಸಿನ ನೆರವು ನೀಡಲಿದೆ ಎಂದು ಅವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. ಈ ಚಾರಿತ್ರಿಕ ಪಂದ್ಯದ ಆತಿಥ್ಯ ವಹಿಸಲು ಕೇರಳ ಯಶಸ್ವಿಯಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

CONTACT YOUR NEAREST NEXA DEALERS: NORTH BANGALORE: NEXA NAGASANDRA (KALYANI MOTORS PH: 9590990011), NEXA YELAHANKA (MANDOVI MOTORS PVT. LTD. PH: 9886003030), NEXA HEBBAL ORR (VARUN MOTORS PVT. LTD. PH: 9513838777), CENTRAL BANGALORE: NEXA MUSEUM ROAD (PRATHAM MOTORS PH: 9880006006), NEXA PALACE (MANDOVI MOTORS PH: 9886003030), SOUTH BANGALORE: NEXA KANAKAPURA ROAD (SURAKSHAA CAR CARE PVT LTD PH: 9449865622), NEXA ELECTRONIC CITY (SURAKSHAA CAR CARE PVT. LTD. PH: 080-25732229, 8884442229), NEXA JP NAGAR (KALYANI MOTORS PH: 9590990011), NEXA SARJAPUR ROAD (PRATHAM MOTORS PH: 9008455550), NEXA KORAMANGALA (KATARIA AUTOMOBILES PVT. LTD. PH: 9513363262), WEST BANGALORE: NEXA NAGARBHAVI (BIMAL AUTO AGENCY PH: 08030693069), NEXA RAJAJINAGAR (VARUN MOTORS PVT. LTD. PH: 8884000042), NEXA RR NAGAR (KALYANI MOTORS PH: 9590990011), EAST BANGALORE: NEXA ORR MARATHALLI (BIMAL AUTO AGENCY PH: 08030693069), NEXA BANASWADI (KALYANI MOTORS PH: 9590990011), NEXA WHITEFIELD (VARUN MOTORS PVT. LTD. PH: 9620827474), TUMKUR: NEXA SIRA ROAD (SAKETH AUTOMOBILES PH: 9900500051).

Contact us at 1800-200-[6392] 1800-102-[NEXA]
www.nexaexperience.com
NOW YOU CAN ALSO BOOK ONLINE

Scan to know more. SMART FINANCE — AN ONLINE END-TO-END CAR FINANCE SOLUTION
- Multiple financiers
- Digital Document Upload
- Live Loan status
- Complete transparency (associated fees & charges)

*Terms and conditions apply. Offer valid for select models/variants and in select states only. Accessories and features shown may not be part of standard equipment and may vary from variant to variant. Images used are for illustration purpose only. Appearance of black shade on glass is due to lighting effect. Maruti Suzuki reserves the right to withdraw the offers at any point in time without any advance notice.